ರಾಯಚೂರು ಜಿಲ್ಲಾ ಸಿಂಧನೂರು ತಾ॥ ರೌಡಕುಂದಿ ಸಂಸ್ಥಾನ್ ಹಿರೇಮಠ ದಲ್ಲಿ ದಿನಾಂಕ ೯ ೪ ೫೪ ರಂದು ಸದರಿ ಮಠಾಧ್ಯಕ್ಷರೂ ' ಭಾರತೀಯ ಸಿದ್ಧಾಂತ ' ಪತ್ರಿಕೆಯ ಸಂಪಾದಕರೂ, ಪರಮ ತಪೋನಿಧಿಗಳೂ ಆದ ಶ್ರೀ॥ ಷ॥ ಬ್ರ॥ ಜಗದ್ಗುರು ಪಂ॥ ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳ ಸಂಕಲ್ಪವೆಂಬ ವಿಕಾರಿನಾಮ ಸಂವತ್ಸರದ ಮಂಟಪ ಪೂಜೋತ್ಸವವೂ ಶ್ರೀಮಠದ ಪೂರ್ವಾಚಾರ್ಯರಿಗೆ ಗದ್ದುಗೆ ಮಠದ ಗೋಪುರಕ್ಕೆ ಕಲಶ ಪ್ರತಿಷ್ಠೆಯೂ, ವೀರಶೈವ ಧರ್ಮಪರಿಷತ್ತು ಮುಂತಾದ ಕಾರ್ಯಗಳು ಜಭೂತಪೂರ್ವವಾಗಿ ನೆರವೇರಿದವು ಈ ಧರ್ಮಯಜ್ಞದಲ್ಲಿ ಸರಿಂದ ಜಡಗಳು ಭಾಗವಹಿಸಿದ್ದರು. ಅನೇಕ ಪ್ರಮುಖ ಪಟ್ಟಣಗಳ ಶಿಷ್ಯರೂ, ಸದ್ಭಕ್ತರೂ, ಮೆರವಣಿಗೆಗಳಿಗೆ, ಗ್ರಾಮಾಧಿಕಾರಿಗಳೂ, ಶ್ರೀಮಂತರೂ, ವ್ಯಾಪಾರಿಗಳೂ, ಕೈಗಾರಿಕರೂ, ಭಾವಜಕಾರರೂ, ವಿದ್ಯಾಸಂಪಾದಕರೂ, ವೀರಶೈವೇತರ ವಾದ್ಯಗಳ ಮೇಳವನ್ನೂ ಆಗಮಿಸಿದ್ದರಿಂದ ಉತ್ಸವಕ್ಕೆ ವಿಶೇಷ ಕೋಭೆಯುಂಟಾಗಿದ್ದಿತು ಮೊದಲೇ ಪ್ರಕಟಿಸಿದಂತೆ ದಿನಾಂಕ ೯ ೪ ೫೪ ನೇ ಶುಕ್ರವಾರ ಪ್ರಾತಃಕಾಲ ಬ್ರಾಹ್ಮಮುಹೂರ್ತದಲ್ಲಿ ಸ್ಥಲ-ಪರಶ್ಶಲಗಳ ಮಾಹೇಶ್ವರರುಗಳಿಗೂ, ಸದ್ಭಕ್ತರಿಗೂ ಶಿವಾನುಭೂತಿಯನ್ನು ಮಾಡಲಾಯಿತು. ತದನಂತರ ಶ್ರೀಮಠದ ಮೂಲಕರ್ತೃಗದ್ದುಗೆ ಮತ್ತು ಗೋಪುರಕ್ಕೆ ಸುಮಾರು ಹತ್ತು ಗಂಟೆಗೆ ವೇಳೆ ಗಣ್ಯಾಗ್ರಾಣಿಗಳಾದ ಶ್ರೀಮದಾಚಾರ್ಯವರು ಭಕ್ತಿಪೂರ್ವಕವಾಗಿ ಅರ್ಪಿಸಿದ ಕಲಶವು ಹನ್ನೊಂದುಜನ ಸ್ವಾಮಿಗಳ ಹಸ್ತದಿಂದ ಪ್ರತಿಷ್ಠೆಯು, ಏಕಾದಶಮುಖಪೂಜೆಯೂ ವೈಭವಪೂರ್ವಕವಾಗಿ ಜರುಗಿತು ರೌಡಕುಂದಿ ಪೂಜ್ಯ ಪಾ॥ ಪಂಚಪಕ್ಷಗೌಡ ಮತ್ತು ವೀರಮ್ಮನವರು ಹನ್ನೊಂದುಜನ ಸ್ವಾಮಿಗಳಿಗೂ, ಉಪಸ್ಥಿತಿಗೆ ಆಗಮಿಸಿದ ಸಮಸ್ತ ಗಣ್ಯಾಧೀಶ್ವರರಿಗೂ ಪೂರಿದಕ್ಷಿಣಾದಿಗಳನ್ನು ಅರ್ಪಿಸಿ ಕೃತಾರ್ಥರಾದರು ಪೂಜೋತ್ಸವದ ಕಾರ್ಯಾದಿಗಳಿಗೆ ಸಹಾಯಕಾಲ ಶ್ರೀ ಜಗದ್ಗುರು ಪಂ॥ ಶ್ರೀ ಷ॥ ಬ್ರ॥ ವಿರೂಪಾಕ್ಷಶಿವಾಚಾರ್ಯಸ್ವಾಮಿಗಳ ಶಿಷ್ಯರಾದ

ಭಗವಂತನನು ಭಕ್ತಾಭಿಮಾನಿ

ಲೇ.—ಶ್ರೀ ಅಕುಳವಿ ಶಿರೋಮಣಿ ಸಂಗಾನರಶಿವಾಚಾರ್ಯ ಸ್ವಾಮಿಗಳವರು ಮುಂಬ
ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ ಬೈಲಹಂಗಲ

ತನ್ನೆಯ ಪ್ರೇಮಿಗೆ ಪರಶಿವನು ಒಮ್ಮೆ ಮೆಚ್ಚಿದ ನೆಂದರೆ ಮುಗಿಯಿತು ! ಅವನ ದಾಸನುದಾಸನಾಗುವನು ಈ ಬಗೆಗೆ ' ಬಾಣನ ಬಾಗಿಲವಕಾಯ್ದ ' ಮುಂತಾದ ಉದಾಹರಣಗಳು ಹೇರಳವಾಗಿ ದೊರೆಯುತ್ತವೆ

ಕೋಳಿಕೂಗದ ಮುನ್ನ ಏಳುವದು ನಿತ್ಯ ದ ॥
ಯಾಳು ದೇವರನು ನೆನೆದರೆ ಅಳನಾಳಯ್ಯ !

ಇದು ಸರ್ವಜ್ಞನ ಅನುಭವದ ಅಮರವಾಣಿ ! ಬಾಳನ ತಿರುಳು ! ಹುರುಳು ! ನಿಜವಾಗಿ ಶಿವನ ಅನುಭವವು ಶಿವಭಕ್ತರಿಗೆ, ಶಿವಪ್ರೇಮಿಗಳಿಗೆ ಹೊರತು ಉಳಿದವರಿಗೆ ಅಳವಡದು ಸಜಾತೀಯವಸ್ತುಗಳಲ್ಲಿ ಪಾರಮ್ಪರಿಕ ನಿಕಟ ಸಂಬಂಧವಿರುವದು ಸರಿಯಷ್ಟೇ ! ಸೂರ್ಯಕಾಂತಶಿಲೆಯಲ್ಲಿ ಸೂರ್ಯಕಿರಣಗಳು, ಚಂದ್ರಕಾಂತಶಿಲೆಯಲ್ಲಿ ಚಂದ್ರನ ಕಿರಣಗಳು ತೋರಿಬರುತ್ತಿರುವದು ಅನುಭವದ ಮಾತಲ್ಲವೆ ! ಯಾವಾತನು ತನ್ನನ್ನು ನಿರತಿಶಯಪ್ರೇಮದಿಂದ ಅನನ್ಯಭಾವದಿಂದ ಭಜಿಸುತ್ತಾನೆಯೋ ಅವನ ಬಗ್ಗೆ ತನ್ನವನೆಂಬ ಅಭಿಮಾನವನ್ನು ವಹಿಸಿದನನಾಗಿ ಶಿವನು ಅವನಲ್ಲಿ ನಿಜಸ್ವರೂಪವನ್ನ ಭಿನ್ನಕ್ತಗೊಳಿಸುವನು ಹೀಗೆ ಶಿವಭಕ್ತರಿಗೆ ಪಾತ್ರರಾದ ಪವಿತ್ರಹೃದಯರ ಅನುಭವವೆ ಮಾರ್ಗದರ್ಶಕವಾಗಿದೆ ಪರಶಿವನಿಗಾಗಿ ನಾವು ತಳಮಳಗೊಂಡರೆ ನಮಗೋಸುಗ ಪರಮೇಶ್ವರನು ಕಳವಳಪಡುವನು, ಕಾಪಾಡುವನು. ಕಲ್ಲೊಳಗೆ ಪುಟ್ಟಿ ಕೂಗುವ ಕಪ್ಪಗಣ್ಣಿಗೆ ಬೆಟ್ಟದ ಮರಬಳ್ಳಿಗಳಿಗೆ ಪಿರಾತ್ರಿತರಿಗೆ ಆಹಾರವಿತ್ತು ಹೆತ್ತತಾಯಿಗಿಂತ ಅತ್ಯಧಿಕನಾಗಿ ಜೋಪಾನ ಮಾಡುತ್ತಿರುವ ಜಗತ್ಪಿತಯು ತನಗೆ ಪ್ರಾಣಸ್ವರೂಪರಾದ ಪ್ರೇಮಿಗಳನ್ನು ಮರೆಯುತ್ತಾನೆಯೆ? ಸಂತತವು ತಪ್ಪದೆ ಮನಮುಟ್ಟಿ ನೆನೆಯುವವರಿಗೆ ಇಲ್ಲದುದನ್ನು ತಂದುಕೊಡುವ, ಇದ್ದುದನ್ನು ಸಂರಕ್ಷಿಸುವ ಭಾರವು ತನ್ನದೇ ಎಂದು ಎದೆತಟ್ಟಿ ನಿರೂಪಿಸಿರುವನು ಭಕ್ತರಿಗೆ ಏನೊಂದು ಕೊರತೆಯಾವರೂ ಸ್ಥೈರಿಸನು ! ಭಕ್ತಬಾಂಧವ, ದಯಾಮಯನಾದ ಭಗವಂತನಿಗೆ ಇದು ಭೂಷಣವೇ ಸರಿ !

ಶ್ರೀ ಲಕ್ಷ್ಮೀಕವಿ ಜೈಮಿನಿ ಭಾರತದಲ್ಲಿ ಚಿತ್ರಿಸಿರುವ ಸನ್ನಿವೇಶವನ್ನು ಇಲ್ಲಿ ಗಮನಿಸಿ !!

ಆದರಿಂದ ಕಾಳಗವೆ ತನಗೆ ಕರ್ತವ್ಯ ಮೀ ।
ಪದದೊಳಾಲಿಂಗನಮುಚಿತಮಲ್ಲ ! ನೃದ್ಧನಹ—
ನದರಿಂದೆ ಚೇಕಾಪಡೀತಂಗೆ ವಂದಿಸುವೆನೆಂದೆ ತನ್ನ
ಕಿಂಕರರಿಗೆ ।

ಮುದದೊಳೆರಿಗಿದಡೆ ಮೇಣನವರನಪ್ಪಿದಡೆ ತ—
ಪ್ಪದು ಮಾನವರ್ಗೆ ಕಪಿಲಾಗೋಸಹಸ್ರದಾ—
ನದ ಪುಣ್ಯಮೆನ್ನ ಭಕ್ತರನಾದರಿಪುದಧರ್ಮವೇ !
ಪಾರ್ಥ ಜೇಂದನು ॥

ಮಹಾರಾಜ ಧರ್ಮಜನ ಯಜ್ಞಾದ ಕುದುರೆಯನ್ನು ಕಟ್ಟಿ ಕಾಳಗಕ್ಕೆ ಕರೆದಿರುವ ಚಂದ್ರಹಾಸನಿಗೆ ಸಮರದಲ್ಲಿ ಸತ್ಕಾರವೇ ? ಕೃಷ್ಣಾ ! ಯುದ್ಧರಂಗದಲ್ಲಿ ಬಂದು ಎದುರುನಿಂತ ಬಳಿಕ ಯಾರಾದರಾಗಲಿ ಕ್ಷಾತ್ರನೀತಿಯಂತೆ ವರ್ತಿಸಬೇಕೆಂದು ಈ ಹಿಂದೆ ನೀನೇ ಬೋಧಿಸಿಲ್ಲವೇ ದೇವಾ ! ಅದರೆ ನನಗಿಂತ ಹಿರಿಯನಾಗಿದ್ದಾನೆ ಎಂಬುದರಿಂದ ವಂದಿಸುವೆನೆಂದು ಪಾರ್ಥನು ಪಡಿನುಡಿಯು ತ್ತಿನೆ ನನ್ನ ಕೃಪಾಭಾಜನರು ಸಾಮಾನ್ಯವಾದವರೆಂದು ಭಾವಿಸಿದೆಯಾ ? ಅರ್ಜುನಾ ! ಅವರಿಗೆ ಆನಂದದಿಂದ ವಂದಿಸಿದ್ದಾದರೆ, ಆಲಿಂಗಿಸಿದ್ದಾದರೆ ಸಾವಿರಾರು ಸಲ್ಲಕ್ಷಣಗಳಾದ ಗೋವುಗಳನ್ನು ದಾನಸ್ವೀಕಾರದ ಫಲವು ಸಿಕ್ಕುವುದು. ನನ್ನ ಭಕ್ತರನ್ನು ಅವಮಾನಿಸಿದೆ ಇರುವದು ಧರ್ಮವಾಗದು ಎಂದು ಶ್ರೀಕೃಷ್ಣನು ಉಪದೇಶಿಸುವನಲ್ಲದೆ ತನಗೂ ತನ್ನವರಿಗೂ ಯಾವ ಸಂಬಂಧವಿದೆ ಎಂಬುದನ್ನು ಮನಮುಟ್ಟುವಹಾಗೆ ತಿಳಿಸಿ ಅರ್ಜುನನ ಮೇರು ತನಕ್ಕೆ ಜರಿದು ಭೀಗುಟ್ಟುವನು. ಕೇಳುವನು ! ಇದೋ ಲಾಲಿಸಿ ಆ ವಾಣಿಯನ್ನು !

ತನ್ನ ಶರಣರ ಜೀವನವೆ ತನಗೆ ಜೀವನಂ !
ತನ್ನ ಕರುಣ ಬೇರೆ ತಿಳಿಯೆ ಹಾಂ ಬೇರಲ್ಲ
ತನ್ನ ಶರಣರ ಹೃದಯಕಮಲದೊಳ್ ಪ್ರತ್ಯಕ್ಷನಾಗಿ
ತಾನಿರುತಿರ್ಪೆನು !
ನಿನ್ನ ತೆರದಲಿ ನುರುಳರಾರುಂಟು ' ಲೋಕದೊಳ್ !
ನಿನ್ನೆ ತೆರದಿಂದೀತನೆನಗೆ ಬೇಕಾದವಂ ।
ನಿನ್ನ ತೆರನೇನೆಂದು ಜರಿದು ಕೌಂತೇಯನಂ ಕೇಳ್ದ
ನಸುರಾರಿ ನಗುತ ॥

ಅಂತ್ಯಕಾಲದಲ್ಲಿ ಮನುಷ್ಯನು ಯಾವ ಯಾವುದನ್ನು ಸ್ಮರಿಸಿ ದೇಹವನ್ನು ತ್ಯಜಿಸುವನೋ ಆಯಾ ಭಾವವನ್ನೇ ಖಂಡಿತವಾಗಿ ಹೊಂದುವನೆಂಬ ಶಾಸ್ತ್ರಗಳು ' ತನು ವಿಯೋಗದೊಳೇನ ನೆನೆವಂತಹನಾಗಿ । ತನಗಲ್ಲಿನಿಜದೆ ಚ್ಚರಿದಬೇಕು ' ಇಂತೆಂದು ಉದ್ಘೋಷಿಸುತ್ತಿವೆ.

ತನುನಿಯೋಗದೊಳೊಮ್ಮೆ ನೆನೆಯ ನೆನೆಯು ದಿರ ।
ಲನುರಾಗ ದಿಂದೆನ್ನ ಭಕ್ತರ್ಗೆ ಘನಮುಕ್ತಿಯನು ತಾನೆ
ನೆನೆದೀವೆನೆಂಬ ಮಾ । ನಿನಿರನ್ನೆ ಸತ್ಯನೊಳ್ ಪುಸಿ
ಯುಂಟೇ । ಪ॥ ಜೋ

ಅಂತಹ ಸರೀಕ್ಷಣದ ಬಿಕ್ಕಟ್ಟಿನ ಕಾಲದಲ್ಲಿ ಭಕ್ತನು ತನ್ನನ್ನು ಸ್ಮರಿಸಲಿ, ಸ್ಮರಿಸದಿರಲಿ ತಾನು ಮಾತ್ರ ಮರೆಯದೆ ಅವರಿಗೆ ಘನಮುಕ್ತಿಯನ್ನು ಅನುಗ್ರಹಿಸುತ್ತೇನೆ ಎಂದು ಭಕ್ತವತ್ಸಲನಾದ ಮಹಾದೇವನು ಅಪ್ಪಣೆ ಕೊಡಿಸಿದ್ದಾನೆ

ಇಷ್ಟೇ ಅಲ್ಲ ನನ್ನವರು ನನಗಿಂತಲೂ ಉತ್ತಮರು ಹೆಚ್ಚಿನವರೆಂದು ಸಾರಿದ್ದಾನೆ ಹರಿಸಿದ್ದಾನೆ !! ಆಹಾ !! ಇದಲ್ಲವೆ ಶಿವನ ಭಕ್ತಾಭಿಮಾನ !!! ದಯೆ ಗೈಯ್ದೆ ಶಿವಂ ಸಕಲರ್ಗೆ !!

ದುಃಖಪಾರ್ಶ್ವ

ಗದಗ-ಬೆಟಗೇರಿ ಮುನ್ಸಿಪಲ್ ಕೌನ್ಸಿಲರೂ ಪ್ರಸಿದ್ಧ ವ್ಯಾಪಾರಿಗಳೂ ಆದ ವೇ। ಲಿಂಗಯ್ಯನವರ ಅಣ್ಣಂದಿರಾದ ವೇ॥ ಸೋಮಯ್ಯನವರು ತಾ|| ೩೩ ಳಿಗೆ ನೇದಿನ ಶಿವೈಕ್ಯರಾದರೆಂದು ತಿಳಿಸಲು ವಿಷಾದವೆನಿಸುತ್ತದೆ ಇವರು ವೈದಿಕ ಪಂಡಿತರೂ, ಹರ-ಗುರು ಭಕ್ತಿಯುತರೂ ಬಡವರಬಂಧುಗಳೂ ಆಗಿದ್ದು ಸಕಲ ಜನಪ್ರಿಯರಾಗಿದ್ದರು. ಇಂಥ ಸದ್ಗುಣಿಗಳನ್ನು ಜಗಲಿದ ಅವರ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಶ್ರೀ ಜ॥ ಪಂಚಾಚಾರ್ಯರನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ದುಃಖಿಭಾಗಿ

ಸ್ವೀಕಾರ

ಗದಗ ಬೆಟಗೇರಿ ಮು|| ಕೌನ್ಸಿಲರ್ ವೇ॥ ಲಿಂಗಯ್ಯನವರು ಶಿಲ್ಪಿಮರ ಇವರ ಸಹೋದರ ವೇ|| ಸೋಮಯ್ಯನವರು ತಾ|| ೩೩-೪-೩೪ ದಿವಸ ಶಿವೈಕ್ಯರಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಗಳು ಶ್ರೀ ಬಸವನಗೌಡ ದೊಡ್ಡನಗೌಡ ರಾಮನಗೌಡರ ಕೋಡಿಹಾಳ ಇವರ ದ್ವಾರಾ ತಲ್ಪಿರುತ್ತದೆ.

ಬೆಳಗಾಂವ ಟವನ್ ಹಾಸಬಾಗದಲ್ಲಿರುವ ಸಂಬರಗಿ ಮಠದ ಶ್ರೀ ಗುರುಪಾದಯ್ಯಸಿದ್ಧಯ್ಯನವರ ಪುತ್ರ ಚಿ॥ ಶಿವಕುಮಾರನಿಗೆ ಕಳೆದ ಫಾಲ್ಗುಣ ಬ॥ ೩ ಭಾನುವಾರ ದಿವಸ ನಡೆಸಿದ ಅಯ್ಯಾಚಾರ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ] ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಪ॥ ಬ್ರ॥ ದಿಗ್ಗಾವಿಹಿರೇಮಠ ರುದ್ರಮುನಿಶಿವಾಚಾರ್ಯಸ್ವಾಮಿಗಳವರ ಸನ್ನಿಧಿಗೆ, ಮನಿಯಳ್ಳಿ ಚಿ॥ರಾ॥ ಶಿದ್ದಪ್ಪನ ಲಗ್ನ ವೈ॥ ಶು॥ ೧೨ ಕ್ಕೆ ನೇಮಕವಾಡಿದೆ. ತಾವು ಎಲ್ಲಿರುವದು ತಿಳಿಯಲಿಲ್ಲಾ. ಇದನ್ನು ನೋಡಿದ ಕೂಡಲೇ ಹಂಪಸಾಗರಕ್ಕೆ ಬರಬೇಕು.

ಹತ್ತಿರುದ್ರಪ್ಪ ಹಂಪಸಾಗರ.

ಮೈಸೂರು ಸಂಸ್ಥಾನಕ್ಕೆ ಕೇಂದ್ರ ಸರ್ಕಾರದ ಸಹಾಯ

ಇಂಡಿಯಾ ಸರ್ಕಾರವು ಪಂಚವಾರ್ಷಿಕ ಯೋಜನೆಯ ಪ್ರಕಾರ ೫೧-೫೪ರಲ್ಲಿ ಮೈಸೂರು ಸರ್ಕಾರಕ್ಕೆ ೧೦.೩ ಕೋಟಿ ರೂಪಾಯಿಗಳ ಸಹಾಯವನ್ನು ಮಂಜೂರು ಮಾಡಿದೆ

ಇವುಗಳಲ್ಲಿ ೮ ೭ ಕೋಟಿಯಷ್ಟು ರೂಗಳು ಸಾಲದ ರೂಪದಲ್ಲಿಯೂ ೧ ೬ ಕೋಟಿ ರೂಗಳು ಸಹಾಯ ಧನ ರೂಪದಲ್ಲಿಯೂ ಇರುವುದು—ಎಂದು ಲೋಕ ಸಭೆಯಲ್ಲಿ ಶ್ರೀ ಎಸ್ ರಾಜಯ್ಯ ನವರ ಪ್ರಶ್ನೆಗೆ ಶ್ರೀ ಜೈಸುಖ ಲಾಲ್ ಹಾಥಿಯವರು ಕೊಟ್ಟ ಉತ್ತರದಲ್ಲಿ ತಿಳಿಸಿದರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಭತ್ತು ಅಷ್ಟತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೯೯	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಶ್ರೀಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೯೯	೦—೨—೦
" " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಸಕಲೈಶ್ವರ್ಯಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಸಪ್ತ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗತಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯಾ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಶಿಕ್ಷಣತೆಗೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಬೆಲೆ ...	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಬೆಲೆ ...	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರಿಂದ ವಿರಾಜಿಸುತ್ತಿರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ...	೦—೩—೬

ಮ್ಯಾನೇಜರ್—ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತೌ ಪಂಚಾಸ್ಯಪೀಠಾಧಿಪೌ । ಪಂಚಕ್ಲೇಶವಿನಾಶಕೌ ಪರತರಶ್ರೀಪಂಚಲಿಂಗೋದ್ಭವೌ ॥
ಪಂಚಾಚಾರನಿಯಾಮಕೌ ಪರಿಲಸತ್ಪಂಚಾಕ್ಷರೀಬೋಧಕೌ । ಪಂಚಾಚಾರ್ಯಜಗದ್ಗುರೂತ್ತಮವರೌ ಪಾಲಿಪ್ಪುದೀಲೋಕಮಂ ॥

ಸಂಪಾದಕರು — ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ. ಪಿ. ಖರ್ಚು ಸೇರಿ ೩ ರೂ ೮ ಆ.

ಸಂಪುಟ ೩೮] ಸೋಮವಾರ ತಾ॥ ೧೦ ನೇ ಮೇ ೧೯೩೫ಳ [ಸಂಚಿಕೆ ೧

ಶ್ರೀ ಕಾಶೀನಾಥಪಂಚಕಂ

ಕರ್ಣಾಟೇ ಗುರವಂಶಪದ್ಮತರಣೇಃ ಶ್ರೀಸಿದ್ಧಮಾಪೇಶ್ವರಾತ್ ।
ಪ್ರಾದುರ್ಭೂಯ ಮಹೀತಲೇ ಪ್ರವಿತತಃ ಪದ್ಧರ್ಮಸಂರಕ್ಷಕಃ ॥
ದುರ್ವಾದೋದ್ಧತ ಮುತ್ತನಾರಣಗಣಪ್ರಧ್ವಂಸಪಂಚಾನನಃ ।
ಕಾಶೀನಾಥಬುಧಃ ಸದಾ ವಿಜಯತಾಮಾಚಾರ್ಯವಂಶಾರುಣಃ ॥೧॥

ವಿದ್ಯಾಬುದ್ಧಿವಿನೇಕಧೈರ್ಯವಿನಯೌದಾರ್ಯಾದಿಭಿಃ ಸದ್ಗುಣೈಃ
ವಿಖ್ಯಾತಃ ಪೃಥಿವೀತಲೇವಿರತಿವಾನ್ ಶಾಸ್ತ್ರಾರ್ಥಸಂವರ್ತ್ತಮಾನ್ ।
ಕಾಶ್ಯಾಂ ಪಂಜಜಗದ್ಗುರೂತ್ತನು ಮಹಾಸನ್ಮೋಲಣೇ ಖ್ಯಾತಿಮಾನ್ ।
ಕಾಶೀನಾಥಬುಧಃ ಸದಾ ವಿಜಯತಾಮಾಚಾರ್ಯವಂಶಾರುಣಃ ॥೨॥

ಪಂಚಾಚಾರ್ಯ ಯಥಾರ್ಥತತ್ತ್ವಕಲನೇ ಪ್ರತ್ಯಕ್ಷನಾಚಷ್ಟೇ ।
ಪಂಚಾಚಾರ್ಯಃ ಗುರೂತ್ತಮಾಂಘ್ರಿಭಜತಾಂ ಪ್ರತ್ಯಕ್ಷಚಿಂತಾಮಣಿಃ ॥
ಪಂಚಾಚಾರ್ಯಪವಿತ್ರಪಾದಶತಪತ್ರೋತ್ಥುಂಗಭೃಂಗೋಪಮಃ ।
ಕಾಶೀನಾಥಬುಧಃ ಸದಾ ವಿಜಯತಾಮಾಚಾರ್ಯವಂಶಾರುಣಃ ॥೩॥

ಕೇದಾರೋಜ್ಜಯಿನೀಮಹಾಗಿರಿವರ ಶ್ರೀಕಾಶಿರಂಭಾಪುರೀ ।
ಖ್ಯಾತ ಶ್ರೀಗುರುಪೀಠಪಂಚಕಮಹಾಸೇವಾಸರಾವಿದ್ಯಯಾ ॥
ಧನ್ಯೋಸ್ಮೀತಿ ವಿಭಾವಯನ್ ಪರಶಿವಧ್ಯಾನೇನ ಹೃತ್ತೋಷಯನ್ ।
ಕಾಶೀನಾಥಬುಧಃ ಸದಾ ವಿಜಯತಾಮಾಚಾರ್ಯವಂಶಾರುಣಃ ॥೪॥

ಮಾಯಾಮೋಹವಿದಾರಣೈಕ ಚತುರೋಪಾಹಾಟವೀಪಾವಕೋ ।
ನಿತ್ಯಾನಂದಪದೇಸ್ಥಿತೋ ನಿಜಮಹಾಸಂವಿತ್ಪ್ರಕಾಶೇ ಪರೇ ॥
ಸಂವಿತ್ಸೂರ್ಯಸುಕಾಂತಿಕಾಶಿತತನುಃ ಕಾರುಣ್ಯರಶ್ಮಾಕರಃ ।
ಕಾಶೀನಾಥಬುಧಃ ಸದಾ ವಿಜಯತಾಮಾಚಾರ್ಯವಂಶಾರುಣಃ ॥೫॥

ಸತ್ಪುಮ್ಯವಹಾರ

[ಬಾಕ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪ್ರಕಾಶಕರು ಜವಾಬ್ದಾರರಲ್ಲ ಎಂಬ ವಿಷಯವನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಶ್ರೀ ಶಿವಭಜನೆ ಮಹೋತ್ಸವ

ಬೀದರ ಡಿ॥ ಜಹೀರಾಬಾದ ತಾಲೂಕಾ ನಿರ್ಣಯ ಗ್ರಾಮದಲ್ಲಿ ಇಲ್ಲಿಯ ಕನ್ನಡ ಪ್ರಾಥಮಿಕಶಾಲೆಯ ಮುಖ್ಯೋಪಾಧ್ಯಾಯಕರಾದ ನೀಲಕಂಠರಾವ ಮಹಾಗಾಂವ ಮತ್ತು ಶಿವರುದ್ರಿರಾವ ಪೋಲಿಸಗೌಡರು ಸಾತೊಲಿ ಈ ಉಭಯರು ದಿನಾಂಕ ೩೦-೪-೩೪ ಶುಕ್ರವಾರ ದಿನಸ ರಾತ್ರಿ ಕನ್ನಡ ಪಾಠಶಾಲೆಯಲ್ಲಿ ಶ್ರೀ ಶಿವಭಜನೆ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಇಲ್ಲಿಯ ಕನ್ನಡ ಪ್ರಾಥಮಿಕಶಾಲೆಯ ಮುಖ್ಯೋಪಾಧ್ಯಾಯಕರಾದ ಶ್ರೀ ನರಸಿಂಹರಾವಜಿಯವರು ಮತ್ತು ಶ್ರೀ ಮಲ್ಲಿಕಾರ್ಜುನ ಭಜನಾಸಂಘದವರು ಶ್ರೀ ಹನುಮಾನ ಭಜನಾಸಂಘದವರು ಆಗಮಿಸಿ ಶ್ರೀ ಶಿವಭಜನೆಯನ್ನು ಮನೋಹರವಾಗಿ ಮಾಡಿ ನೆರೆದವರ ಮನಸ್ಸಿಗೆ ಆನಂದವನ್ನುಂಟುಮಾಡಿದರು. ಮಹಾಮಂಗಳಾರತಿಯಾಗಿ ಸರ್ವರಿಗೂ ಪ್ರಸಾದ ಹಂಚಲ್ಪಟ್ಟಿತು. ನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು.

ಈ ಮಹೋತ್ಸವದಲ್ಲಿ ಭಾಗವಹಿಸಿದವರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಸಿದ್ಧನಕೇರಿಮಠದ ರೇವಣಾರಾಧ್ಯ ಅಧ್ಯಾಪಕ

ನುರಬದ ಶ್ರೀಗಳವರ ಧರ್ಮೋಪದೇಶ

ಕಾನೂಗಲ್ಲ (ತಾ॥ ಹುಬ್ಬಳ್ಳಿ)

ಶ್ರೀ ಆಶುಕವಿಶಿರೋಮಣಿ ಗಂಗಾಧರಶಿವಾಚಾರ್ಯಸ್ವಾಮಿಗಳು ಕೊರಬ ಇವರು ತಾ॥ ೨-೫-೩೪ ನೇ ದಿವಸ ನಮ್ಮ ಗ್ರಾಮದ ಪ್ರಮುಖರ ಪ್ರಾರ್ಥನೆಯ ಮೇರೆಗೆ ದಯಮಾಡಿಸಿ ಮರದಲ್ಲಿ ಪ್ರವಚನ ನಡೆಸಿದರು. ಈ ಕಾರ್ಯಕ್ರಮಕ್ಕೆ ಪುರಸ್ಕರ್ತಮುಖರೂ, ಶಾಲಾ ಗುರುಗಳೂ ಸಕಲ ಮರ್ಯಾದೆಗಳಿಂದ ಆಗಮಿಸಿದ್ದರು. ಭಕ್ತಿಯೇ ಮುಕ್ತಿಗೆ ಮೂಲ ಎಂಬ ವಿಷಯವನ್ನು ಎಲ್ಲರ ಹೃದಯ ಸ್ಪರ್ಶಿಸುವಂತೆ ತಮ್ಮ ಜೋಳಿಪಾಣಿಯಿಂದ ಬೋಧಿಸಿದರು. ಈ ಕಾರ್ಯಕ್ರಮವು ಜನತೆಗೆ ಬಹಳ ಹರ್ಷವನ್ನುಂಟುಮಾಡಿತು ಮರುದಿನ ವಿಶ್ರಾಂತಿಸೇವಾಶ್ರಮ, ಬೈಲಹೊಂಗಲಕ್ಕೆ ದಯಮಾಡಿಸಿದರು.

ಮುರಿಗೆಯ್ಯ ಹಿರೇಮಠ ಕುಸುಗಲ್ಲ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಯವತ್ತಿ ನೈಶಾಖ ಶು॥ ಪಂಚಮಿಗೆ ೨೭ ವರ್ಷಗಳು ತುಂಬಿ ೨೮ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೮ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು.

—ವ್ಯಾ.

ಸ್ವೀಕಾರ

ಬೀದರ ಜಿಲ್ಲಾ ಜಹೀರಾಬಾದು ತಾಲ್ಲೂ ನಿರ್ಣಯ ಗ್ರಾಮದ ಕನ್ನಡ ಪ್ರಾಥಮಿಕಶಾಲೆಯಲ್ಲಿ ದಿನಾಂಕ ೩೦-೪-೩೪ ಶುಕ್ರವಾರ ನಡೆಸಲಾದ ಶ್ರೀ ಶಿವಭಜನ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೫ ರೂಪಾಯಿಯು ಶ್ರೀ ರೇವಣಾರಾಧ್ಯಮಠ ಸಿದ್ಧನಕೇರಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪಂಚಾಚಾರ್ಯಪ್ರಭಾ

೧೯೫೪ ನೆಯ ಮೇ ತಾ॥ ೧೦ ನೇ ಸೋಮವಾರ

ನೂತನ ವರ್ಷಾರಂಭ

ಇವೇ ಜಯನಾಮ ಸಂವತ್ಸರದ ವೈಶಾಖ ಶು ॥೪ ಮಿತಿಗೆ " ಪಂಚಾಚಾರ್ಯಪ್ರಭಾ " ಪತ್ರಿಕೆಯು ಸ್ವಾಪಿತವಾಗಿ ೩೭ ವರ್ಷಗಳು ಮುಗಿದು ೩೮ ನೇ ವರ್ಷವು ಪ್ರಾಪ್ತವಾಗಿದೆ. ಗುರುವರ್ಗದ ಯಕ್ಕೋ ಭಿವೃದ್ಧಿಗಾಗಿ ವಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಯತ್ನವಿಶೇಷದಿಂದ ಪ್ರಕಾಶಕ್ಕೆ ಬಂದ ಈ ವಾರ ಪತ್ರಿಕೆಯು ಅವರ ಧ್ಯೇಯವನ್ನೇ ಮುಂದುವರಿಸುತ್ತ, ನ್ಯಾಯ-ನೀತಿ-ಧರ್ಮಪರವಾದ ಲೇಖನಗಳನ್ನು ಪ್ರಚಾರಪಡಿಸುತ್ತಿರುವುದು ಈ ಮೂಲಕ ಹೊರಟ ಗುರುತತ್ವಾಮೃತ ಸುಸ್ನೇಹವನ್ನು ಸರ್ವ ಸನಾತನ ಧರ್ಮಾಭಿಮಾನಿಗಳು ಸೇವಿಸಿ ಸನ್ಮಾನರಾಗಲು ಅವರು ಪ್ರಕಟಿಸಿದ ಗ್ರಂಥಗಳೂ ಉಸ ನ್ಯಾಸಗಳೂ ವೀರಶೈವನಮೂಪ ಸ್ವರೂಪನನ್ನು ಬಿತ್ತರಿಸುತ್ತಿವೆ. ಇಂಗ್ಲೀಷ ಕನ್ನಡ ಆಂಧ್ರ ಮಹಾರಾಷ್ಟ್ರ-ಸಂಸ್ಕೃತಾದಿಗಳಲ್ಲಿನ್ನ ಅವರ ಗ್ರಂಥಗಳು ತೋಳ್ಬಲವಾಗಿವೆ ಇಂತಿ ವೀರ ಶೈವಮತದ ತತ್ವಗಳನ್ನ, ವಿಸಾ ಲೀಲೆಗಳನ್ನು ಗರ್ಭೀಕರಿಸಿ ರಕ್ಷಿಸಿದಂತೆ ಪರಿಶೋಭಿಸಿಹುದರಿಂದ ಈ ಪತ್ರಿಕೆಯು ಮುಂಬೈ-ಬಾದ್ರಾಸ ಸ್ಯಪೂರಿ ಸ ಹಾ ರಾಷ್ಟ್ರ ರಾಜ್ಯಂತಗಳಲ್ಲಿ ಸಂಚರಿಸಿ ವಿಸತತ್ವಗಳನ್ನು ಬಕ್ತಕೋಟಿಗೆ ಬೆಳಿಸಿಸ್ತಾರ ಸೂಳಕ ಇಂಥಹ ನಾಸ್ತಿಕ ಕಾಲವಲ್ಲಾಯಿ ಕೂಡ ತಸ್ತಿಕ ರನ್ನು ಉಳಿಸುತ್ತಿರುವುದು ವಿನಾಂಗವೆ ಶುಭ ಚಿನ್ಹಸೇ ಸರಿ.

ಈಗ ಪ್ರಪಂಚವೆಲ್ಲಾ ನಾಯವವಮುಸುಕಿ ನಲ್ಲಿದೆ, ನಾನಾಕರವ ವಿಪತ್ತುಗಳನ್ನು ಹೊಂದಿದೆ. ಮುಂದೆ ಸುಗಮವಾವ ಮಾರ್ಗವನ್ನು ಕಾಣದೆ ಅಲೆಯುತ್ತಿದೆ. "ಸಂಕಟಿಬಂದಾಗ ವೆಂಕಟರವಿಣ" ಎಂಬ ಗಾದೆಯಂತೆ ಎಲ್ಲರೂ ದರ್ಬಾರವನ್ನು ಆಚರಿಸಬೇಕೆಂದು ಮನಸ್ಸಿನಲ್ಲಿ ಒಡಮೂಡಿದ್ದರೂ ಯಾವ ರೂಪದಲ್ಲಿ ಹೇಗೆ ಹೇಗೆ ಆಚರಿಸಬೇಕೆಂಬು ದನ್ನು ಜೋಧಿಸುವ ಪತ್ರಿಕೆಗಳು ವಿರಳ ಕರ್ಣಾಟಕದಲ್ಲಿ ಇಂಥ ಧರ್ಮಜೋಧಕವಾದ ಪತ್ರಿಕೆ ಯೆಂದರೆ " ಪಂಚಾಚಾರ್ಯಪ್ರಭಾ " ಒಂದೇ ಎಂದು ಕೈಮಿತ್ತಿ ಹೇಳಬಹುದು. ಈ ಜಯನಾಮ ಸಂವತ್ಸರದಲ್ಲಿ ಭೂಮಿಯು ಫಲವತ್ತಾಗಿ ಜನರು ನಿರೋಗಿಗಳಾಗಿ ದೇಶಮಧ್ಯದಲ್ಲಿ ಸ್ನೇಸುವು ಲಭಿಸುವಂತೆ ಅನುಗ್ರಹಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುವ ಈ ಸತ್ಪತ್ರಿಕೆಗೆ ಚಂದಾದಾರರಾಗಿರು ವವರು ತಮ್ಮ ಇಷ್ಟಮಿತ್ರರಿಗ್ಗೂ ಬಂಧು ಬಾಂಧವರಿಗೂ ಜೋಧಿಸಿ ಹೆಚ್ಚಿಗ್ಗೆ ಚಂದಾದಾರರನ್ನು ನೂಡುವದಲ್ಲದೆ ಶುಭ ಶೋಭನಾದಿಕಾರ್ಯಗಳಲ್ಲಿ ಪೋಷಣಪ್ರವ್ಯ ಮೊದಲಾದ ಸಹಾಯವನ್ನಿತ್ತು ಜಗದಾಚಾರ್ಯರ ಕೀರ್ತಿಯು ಚತುರ್ದಿಕ್ಕುಗಳ ಲ್ಲಿಯೂ ಹೆಚ್ಚಾಗಿ ಹರಡುವಂತೆ ಮಾಡಿ ಸಂತಿತರ ಆತ್ಮಕ್ಕೆ ತೃಪ್ತಿಯನ್ನು ಉಂಟುಮಾಡಿವ ಪುಣ್ಯಕ್ಕೆ ಪಾತ್ರರಾಗಲೆಂದು ಪ್ರಾರ್ಥಿಸುತ್ತೇವೆ.

ಪಂಚಾಚಾರ್ಯಪ್ರಭೆಗೆ ವಿಜಯವಾಗಲಿ

— —

ಲೇ —ಪಂಡಿತ ಕೈಲಾಸಲಿಂಗಶಿವಾಚಾರ್ಯರು
ಶ್ರೀ ಕೇದಾರಸಿಂಹಾಸನಾಸೀನರು

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಸ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೆ ಯುಗೆ ॥
(ಗೀತಾ ೪ ೪)

ಹೇ ಅರ್ಜುನ, ಯಾವ ಕಾಲದಲ್ಲಿ ಧರ್ಮಗ್ಲಾನಿಯು ಅಧರ್ಮಕ್ಕೆ ಅಭ್ಯುತ್ಥಾನವು ಸಂಭವಿಸು ವದೋ ಆಯಾ ಸಂದರ್ಭದಲ್ಲಿ ನಾನು ಅವತಾರವನ್ನು ಗ್ರಹಣಮಾಡುತ್ತೇನೆ ಮತ್ತು ಸಾಧುಗಳ ರಕ್ಷಣಕ್ಕೋಸ್ಕರ ದುರಾತ್ಮರ ನಾಶಕ್ಕೋಸ್ಕರ ಹಾಗೂ ಧರ್ಮ ಸಂಸ್ಥಾಪನೆಗೋಸ್ಕರ ಪ್ರತಿಯುಗದಲ್ಲಿಯೂ ಅವತರಿಸು ವೆನು

ಈ ಗೀತಾವಾಕ್ಯಾನುಸಾರವಾಗಿ ಮಹಾತ್ಮರ ಅವತಾರವಾಗುವಂತೆ ಪರಮ ಸನಾತನ ಶಿವಧರ್ಮಸಂರಕ್ಷಣಕ್ಕೋಸ್ಕರ ಅನಕರಿಸಿದ ಪರಮರ್ಷಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಅನ್ಯಸಹಸ್ರವಿದ ಕರ್ಣಾಟಕ ರಂಜಪಾನಿಯಾದ ಬೈಸೂರು ನಗರದಲ್ಲಿ ಈ ಪಂಚಾ ಚಾರ್ಯ ಪ್ರಭೆಯು ಪ್ರಾದುರ್ಭವಿಸಿ ಇದೇ ಜಯ ನಾಮ ಸಂವತ್ಸರ ವೆಶಾಖ ಶು॥ ೪ ಮಿತಿಗೆ ೩೭ ವರ್ಷ ಗಳು ಮುಗಿದು ೩೮ ನೇ ವರ್ಷವು ಪ್ರಾಪ್ತವಾದ ಸಮಯ ದಲ್ಲಿ ಸ ಸ್ಪಾಪಕರಾದ ಶ್ರೀ ಕಾಶೀನಾಥಶಾಸ್ತ್ರಿಗಳ ಮುಗಿಲ ನಿಶ್ವವನ್ನು ಸ ಸ್ಪಾಪಿಸಿ ನಿವರಿಸುತ್ತೇನೆ

ಶ್ರೀ ಕಾಶೀನಾಥಶಾಸ್ತ್ರಿಗಳು ನಮ್ಮಿಬ್ಬಾ ಕರ್ಣಾಟಕ ದೇಶದ ಮಧ ದ್ಯರುವಾ ಧಾರವಾಡ ಜಿಲ್ಲಾ ನವಲ ಗುಂದ ತಾಲೂಕಿನ ನಾರಗುಂದ ಎಂಬ ಗ್ರಾಮದಲ್ಲಿ ಪವಿತ್ರ ವೀರಶೈವ ಕ ತದ ಮಾಹೇಶ್ವರ ಕುಲದಲ್ಲಿ ಶ್ರೀ ಸಿದ್ಧಯ್ಯನವರ ಸುಪುತ್ರರಾಗಿ ಶಾಹುವ ಪಿಸಿದರು ಬಾಸ್ತಿ ಗಳು ಮಾಮ್ಮಲ್ಲೋಚಿತ ವೈದಿಕರೂ ಶ್ರೀಗಳನ್ನು ಸಡಿದು ಕನ್ನಡಾಪೆಯ್ದ ಉತ್ತೀರ್ಣರಾಗಿ ಮೇಸ ಬಾಪಯಾದ ಸಂಸ್ಕೃ ತದಲ್ಲಿ ಸಂಚಿಪಿನ್ಯಾಕರಣ ಸಾಹಿತ್ಯ ಸಂಖಿಪ್ತಯೋಗ ನ್ಯಾಯ ಪುರಾಣ ಕಾವ್ಯ ಮಿಮಾಂಸಾಂದಿ ಸಕಲ ವಿದ್ಯೆಗಳಲ್ಲಿ ಪ್ರವೀಣರಾದರು. ಶ್ರೀ ಕಾಶೀಜಗದ್ಗುರು ವಿಶ್ವಾರಾಧ್ಯಮಹಾವೀರವಾದ ಡಂಗಮುಂಚೀ ಮೆರೆದಲ್ಲಿಯೇ ನಿವಾಸನಾಡಿ ಸಕಲ ಶಾಸ್ತ್ರ ಪಾಂಡಿತ್ಯನನ್ನು ಸಂಪಾದಿಸಿಕೊಂಡು ಶಿವಜ್ಞಾ ನವನ್ನೂ ಸಹ ಅಧ್ಯಯಪಮಾಡಿದ ಮೇಲೆ ಶಾಸ್ತ್ರಿಗಳು ' ಧರ್ಮರಕ್ಷಣೆಯು ಧರ್ಮಾಚಾರ್ಯರಿಂದಲೇ ಆಗ ಬೇಕಾದುದು ನ್ಯಾಯಸಂಗತವಾಗಿದೆ' ಎಂದು ಆಲೋಚಿಸಹತ್ತಿದರು

ಶ್ರೀ ಶಿವಾಚ್ಛೆಯ ಮೇರೆಗೆ ಗಣಾಧೀಶ್ವರರಾದ ಶ್ರೀ ರೇಣುಕ-ಮರುಳಸಿದ್ಧ-ಏಕೋರಾಮಸಿದ್ಧ ಪಂಡಿತಾ ರಾಧ್ಯ ಮತ್ತು ವಿಶ್ವಾರಾಧ್ಯರೆಂಬ ಪಂಚಾಚಾರ್ಯರೂ ಈ ವೀರಶೈವಧರ್ಮಸ್ಥಾಪನೆಗೋಸ್ಕರ ಭೂಮಂಡಲದಲ್ಲಿ ನೋಮೇಕ್ಯರಾದಿ ಮಹಾಲಿಂಗಮುಖಗಳಿಂದಾವಿರ್ಭವಿಸಿದ ಇತಿಹಾಸವು ಸುಪ್ರಸಿದ್ಧವಾಗಿದೆ ಶಿವಾಗಮಗಳೂ ಸಿದ್ಧಾಂತಶಿಖಾಮಣಿಯೂ ಶ್ರೀ ಪಂಚಾಚಾರ್ಯರ ಲಿಂಗೋದ್ಭವ ಚರಿತ್ರೆಯನ್ನು ಬೋಧಿಸುತ್ತವೆ ಶ್ರೀ ಬಾದರಾಯಣಾಚಾರ್ಯರಾದ ಶ್ರೀಪತಿಪಂಡಿತಾರಾಧ್ಯ ಭಗವತ್ಪಾದರು ಶ್ರೀಶರಭಾಷ್ಯದ ಪ್ರಾರಂಭದಲ್ಲಿ ಪಂಚಾ ಚಾರ್ಯರನ್ನು ಸ್ತುತಿಸಿರುತ್ತಾರೆ ಹೀಗೆ ಆಲೋಚಿಸು ಕ್ರಿಯಾವಾಗ ಶ್ರೀ ಕಾಶೀನಾಥಶಾಸ್ತ್ರಿಗಳು ಶ್ರೀ ಕಾಶೀಕ್ಷೇತ್ರ ದಲ್ಲಿ ಶಿವಾಚ್ಛೆಯು ಮೇರೆಗೆ ಸಡೆದ ೧೯೧೯ ನೇ ಇಸವಿಯ ಪಂಚಾಚಾರ್ಯ ಮಹಾಸಮ್ಮೇಲನದಲ್ಲಿ ಸೆಕ್ರಟೆರಿಯಾಗಿ ನೇಮಕಗಂದರು ಈ ಸಮ್ಮೇಲನಕ್ಕೆ ಪಂಚಪೀಠಾಧಿಪ ತಿಗಳು ಆಗಮಿಸಿದ್ದರು. ಈ ಮಹಾಸಭೆಯು ಕನ್ನಡ ಮಹಾರಾಷ್ಟ್ರ ತೆಲಗು (ಪಂಧ್ರ) ಉತ್ಕಲಧಾರಡ ಹಿಮಾಲಯಪ್ರಾಂತಗಳಲ್ಲಿರುವ ಸಕಲವೀರಶೈವರನ್ನು ಜಾಗೃತಗೊಳಿಸಿತು. ಆ ಕಾಲದಲ್ಲಿ ಶ್ರೀ ಕಾಶೀನಾಥ ಶಾಸ್ತ್ರಿಗಳು ಕನ್ನಡಪತ್ರಿಕೆಗಳ ಬಂಡು ಗುರುವರ್ಗದ ನಿಜ ಶಕ್ತ್ಯವನ್ನು ಪ್ರಜಾಗರೂಕಪಡಿಸಿದರು. ಅಭ್ಯುದಯದಲ್ಲಿಯೇ ಬೀರೂರಲ್ಲಿ ವೀರಶೈವ ಮಹಾಸಭೆಯು ಪ್ರಾರಂಭ ವಾಯಿತು. ಶ್ರೀಮಾನ್ ಪತ್ರಿ ವೀರಪ್ಪಯ್ಯನವರು, ಶ್ರೀಮಾನ್ ರಾಜಪ್ಪಶೆಟ್ಟರು ಮೊದಲಾದ ಬೀರೂರ ಪ್ರಮುಖರು ಮಹಾಭೆಗೆ ಶ್ರೀ ಪಂಚಾಚಾರ್ಯರನ್ನು ಆಮಂತ್ರಿಸುವ ಆಲೋಚನೆಯನ್ನು ಮಾಡಿ ಹಂಚಿನ ಹಾನಗಲ್ಲಿಶ್ರೀಗಳಿಗೆ ಆಮಂತ್ರಣಕೊಟ್ಟರು ಶ್ರೀಗಂಧಾ ಪುರೀ ಜಗದ್ಗುರು ಪಂಚಾಕ್ಷರದೇವಾಚಾರ್ಯರೂ ಮತ್ತು ಶ್ರೀ ಉಜ್ಜಯಿನೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರೂ, ಶ್ರೀ ಕೇದಾರ ವಿಶ್ವಲಿಂಗಶಿವಾಚಾರ್ಯರೂ ಬೀರೂರಿಗೆ ಬಿಜಯಂಗೈಸಿದರು ಎಲ್ಲಿ ನೋಡಿದರೂ ಪಂಚಾಚಾರ್ಯ ಪಕ್ಷದ ಶ್ರೀಕಾಶೀನಾಥಶಾಸ್ತ್ರಿಗಳ ಮೇಲೆಯೇ ಪ್ರತಿಸ್ಪರ್ಧಿ ಗಳ ಹೋರಾಟನ್ನಿತ್ತು ಪ್ರತಿಸ್ಪರ್ಧಿಗಳು ಮಹಾಸಭೆ ಯಲ್ಲಿಯೂ ಸಹ ಗದ್ದಲವನ್ನೆಬ್ಬಿಸಿದರು ತಥಾಪಿ ಶ್ರೀ ವೀರಾಧೀಶ್ವರರ ಕ್ಷಮಾ, ದಯಾ, ಶಾಂತಿ ಸದ್ಬುಣಗಳಿಂದ ಪ್ರೇರಿಕರಾದ ವೀರಶೈವ ಸಾಮಾಜಜನತೆಯು ಪಂಚ ಸಿಂಹಾಸನಾಧೀಶ್ವರರಲ್ಲಿ ವಿಶೇಷ ಭಕ್ತಿಶ್ರದ್ಧೆಗಳನ್ನು ವಹಿಸಿದರು ಕಾಶೀನಾಥಶಾಸ್ತ್ರಿಗಳು ಸತ್ಯವಾದಿಗಳು ಸದಾಚಾರಪರರು, ಪರಮಾಸ್ತಿಕರು, ಪರಮವೈದಿಕ ಧರ್ಮನಿಷ್ಠರು, ಶಿವಲಿಂಗಪೂಜಕರು, ಶಿವಲಿಂಗಧರರು, ವೀರಶೈವಮತೀಯ ಮಾಣಿಕ್ಯರು, ಶಿವಮಾಸಾತ್ಮ್ಯ ಸ್ಥಾಪಕರು, ಶಿವಲಿಂಗಮಾಹಾತ್ಮ್ಯದೋಧನಕರ್ತೃರು, ಶಿವಯೋಗರಹಸ್ಯಜ್ಞರು ಶಿವಾದ್ವೈತಮತಕರ್ತವ್ಯರು, ಶಿವಾಗಮಸಾಂಡಿತ್ಯಭೂಷಿತರು, ಶಿವಾಗಮಸಂಖಾದಕರು, ಅಪ್ರತಿಹತಾನಂತಶಿವಾಗಮಪ್ರಕಾಶಕರು, ಅಪ್ರತಿ ಹತಶಿವಾನಂತ ಶೈವೋಪನಿಷತ್ಪ್ರಕಾಶಕರು, ಸಿದ್ಧಾಂತಶಿಖಾ ವ ಲೆಂಬಾವ ಪ್ರಕಾಶಕರು, ನಂದಿಕೇಶ್ವರಕಾರಿಕಾ ಟೆಪ್ಪಣಿ ಕಾರರು ಬೃಹತ್‌ಶಿವಾದ್ವೈತಮಂಜರಿ ವಾಖ್ಯಾನಸಂಪಾ ದಕರು ನಗಮಾಗಮೋಪನಿಷದಿತಿಹಾಸಪುರಾಣಾ ವೀರಶೈವೆತಿದ್ಧಾಂತಂಜಿತ ವೀರಶೈವರತ್ನ ಪ್ರಟಂಧಪ್ರಕಾಶ ಕರು ನೂತನಶಿವಾದ್ವೈತಭಿಧಾಪ್ರಕಾಶಕರು, ಶ್ರೀ ಶಿವಪೂಜಾವಿಧಿಪ್ರಕಾಶಕರು, ಸೃನಿರಿಚಿತ ಪಂಚಾ ಚಾರ್ಯನಾಮಾವಲಿಪ್ರಕಾಶಕರು, ಶ್ರೀಪಟಿಪಂಡಿತಾರಾಧ್ಯ (ತ್ರಿಕರಭಾಷ್ಯ) ಕಾಲನಿರ್ಣಾಯಕರು, ಸಿದ್ಧಾಂತಸಾರಾ ವಲಿಪ್ರವ್ಯಕ್ಯನೇಕ ಗ್ರಂಥಪ್ರಣಾಕರರು ಇವರು ಶ್ರೀ ಪಂಚಾಚಾರ್ಯ ವಿದ್ಯಾಸ್ಮೃದ್ರಣಾಲಯವನ್ನು ಸ್ಥಾಪಿಸಿ ಈ ಪ್ರಥಾಪತ್ರಿಕೆಯನ್ನೂ ನೋಲ್ಯಾಣಿಸಿದ ಮತ್ತಗ್ರಂಥ ಗಳನ್ನೂ ಸಹ ಮುದ್ರಿಸಿ ಪ್ರಸಿದ್ಧಮಾಡಿದರು ಕನ್ನಡ, ಮರಾಠಿ, ತೆಲಗು, ಇಂಗ್ಲೀಷ್ ಬಾಸೆಗಳಲ್ಲಿ ವೀರಶೈವ ರತ್ನವನ್ನು ಆನುವಾದಿಸಿ ಸರ್ವಭಾಷೆಗಳಲ್ಲಿಯೂ ವೀರ ರೈನ ಧರ್ಮಪ್ರಚಾರವನ್ನು ಮಾಡಿದ್ದಷ್ಟಲ್ಲದೆ ವೀರಶೈವ ತಕ್ಕನನ್ನು ಇಂಗ್ಲೀಷಿನಲ್ಲಿ ಪ್ರಕಟಿಸಿ ಪ್ರಚಾರಪಡಿಸಿದರು.

ಶಾಸ್ತ್ರಿಗಳ ಅನುಕರಣಮಾಡಿದವರಲ್ಲಿ ಆಗ್ರಗಣ್ಯರಾದ ಶ್ರೀ ಚಿತ್ರಿ ಮಸಾಧೀಶ ವೇದತೀರ್ಥ ಕಾವ್ಯತೀರ್ಥ-ದರ್ಶನತೀರ್ಥ ಪಂ॥ ವೀರಭದ್ರಶರ್ಮರು ಸಿಕಂದರಾ ಬಾದದಲ್ಲಿ ವೀರಶೈವ ಗುರುಕುಲವನ್ನು ಸ್ಥಾಪಿಸಿ ವೈದಿಕ ವಿದ್ಯಾದಾನಮಾಡಿದರು ಮತ್ತು ವಿಭಿತ ಪತ್ರಿಕೆಯ ದ್ವಾರಾ ಪಂಚಾಚಾರ್ಯಪ್ರಭಾ ಪತ್ರಿಕೆಯು ಸಿದ್ಧಾಂತ ವನ್ನು ಶ್ರಲಿಂಗದೇವದಲ್ಲಿ ಪ್ರಕಾಶಮಾಡಿದರು. ವೀರ ಭದ್ರಶರ್ಮರು ಕಾಶೀ ವೀರಾಧೀಶ್ವರಾದಿ ಜಂಗಮ ವಾಡೀ ಮರದಲ್ಲಿ ಬೃಹದ್ಗ್ರಂಥಭಾಂಡಾರ (ಜ್ಞಾನ ಮಂದಿರ)ವನ್ನು ಸ್ಥಿರಗೊಳಿಸಿದರು ವೀರಭದ್ರಶರ್ಮರಿಗೆ ಕಾಶೀವಿದ್ವಾರಾಧ್ಯವೀರಭೈಕ್ಷ ಶ್ರೀರಂಭಾಪುರೀ ಜಗದ್ಗುರು ಶಿವಾನಂದರಾಜೇಂದ್ರವಿದ್ಯಾಭಾಸ್ಕರಭಗವತ್ಪಾದರು ಪಟ್ಟಾ ಭಿಷೇಕವನ್ನು ಮಾಡಿ ಶ್ರೀಜಗದ್ಗುರು ವೀರಭದ್ರಶಿವಾ ಚಾರ್ಯರೆಂದು ಸಂಕೇತಿಸಿದರು. ಈ ವೀರಭದ್ರಜಗದ್ಗುರು ಗಳು ಶ್ರೀ ಕಾಶೀಪೀಠದ ಸೇವೆಯನ್ನು ಮಾಡುತ್ತಿರೆ ಅಲ್ಪಾವಧಿಯಲ್ಲಿಯೇ ಶಿವೈಕ್ಯರಾದರು ಶ್ರೀ ಕಾಶೀನಾಥ ಶಾಸ್ತ್ರಿಗಳು ಕಾಶೀಕ್ಷೇತ್ರದಲ್ಲಿ ವಿದ್ಯಾಭ್ಯಾಸನಮಾಡಿ ಬಂದ ವರು ಪುನರಪಿ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯರ ಕಾಲದಲ್ಲಿ ಕಾಶಿಗೆ ಹೋಗಿ ಶ್ರೀಜಗದ್ಗುರು ವಿಶ್ವಾರಾಧ್ಯ ಮಹಾವೀರದ ಗದ್ದುಗೆಗೆ ಚಿತ್ರ ಶಿಲಾವಿರ್ಮಾಣವನ್ನು ಮಾಡಿಸಿ ಗುರುಭಕ್ತಿಯನ್ನು ಸಮರ್ಪಿಸಿದರು ಕಾಶೀ ನಾಥಶಾಸ್ತ್ರಿಗಳು ಶ್ರೀರೇಣುಜಗದ್ಗುರು ಭಗವತ್ಪಾದರಲ್ಲಿ ಅನಿತರಸಾಧಾರಣ ಭಕ್ತಿಯುಳ್ಳವರಾಗಿದ್ದರು. ಕಮಗೇಣಾ ದರು ಒಕ್ಕಲಿಂದಾಗ್ಗೆ ಶ್ರೀರೇಣುಕರ ಲಿಂಗೋದ್ಭವ ಮೂರ್ತಿಯ ಸುಪ್ರತಿಷ್ಠದಲ್ಲಿ ನಿತ್ಯ ಏಕಾಗ್ರಚಿತ್ತದಿಂದ ಧ್ಯಾನಿಸಿ ಅರ್ಚಿಸಿಯೇ ಪಾಠಾಗುತ್ತಿದ್ದರು.

ಕಾಶೀನಾಥಶಾಸ್ತ್ರಿಗಳು ಏಕೋರಾಮ ಜಗದ್ಗುರು ಪೀಠದಲ್ಲಿಯೂ ಭಕ್ತಿಯುಳ್ಳವರಾಗಿದ್ದರು. ೧೯೨೫ ರಲ್ಲಿ ಶ್ರೀಜಗದ್ಗುರು ವೀರೇಂದ್ರ ಪೀಠಾಧ್ಯಕ್ಷ ಶ್ರೀಲಶಿವ ಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ತಿಪ್ಪೆಸ್ವಾಮಿ ಮೇಲೆ ನನಗೆ ಶ್ರೀ ಪೀಠದ ಉತ್ತರಾಧಿಕಾರದ ಸಲುವಾಗಿ ಪ್ರೋತ್ಸಾಹಿಸಿ ' ಜಂಗಮೋಸ್ಮಾಯಾ ' ಈ ವಾಕ್ಯದ ಅರ್ಥವನ್ನು ಸಪ್ರಮಾಣವಾಗಿ ತೋರಿಸಿ ಕೊಟ್ಟರು ಮತ್ತು ಕಮಿಷನ್‌ದ್ವಾರಾ ಜಯೋಲಿಕೋ ರ್ಟ್‌ನಲ್ಲಿ ಕೇದಾರಪೀಠಾಧಿಕಾರಕ್ಕೆ ಜನ್ಮಸಿದ್ಧ ಜಂಗಮ ವಂಶದ ಬ್ರಹ್ಮಚಾರಿಗೇ ಉತ್ತರಾಧಿಕಾರವೆಂಬ ಶ್ರೀ ವೀರಲಿಂಗದವರೇ ಸಹ ಜಂಗಮ ವಂಶದ ಬ್ರಹ್ಮಚಾರಿಗಳೆಂದೂ ಶ್ರೀ ಶೈಲಾಸೀನಶಿವಾ ಚಾರ್ಯರಿಗೆ ೧೯೩೨ ರಲ್ಲಿ ಶ್ರೀಜಗದ್ಗುರು ವೀರಲಿಂಗಲಿಂಗ ಶಿವಾಚಾರ್ಯರು ಪಟ್ಟಾಧಿಕಾರವನ್ನು ಕೊಟ್ಟು ತಮ್ಮ ಉತ್ತರಾಧಿಕಾರಿಗಳಾಗಿ ನಿಯಮಿಸಿದ್ದಾರೆಂದೂ ಇತ್ಯಾದಿ ಸ್ವತಃ ಸಾಕ್ಷಿಯುಕ್ತ ಹೇಳಿದರು. ಮತ್ತು ಇದೇ ಸಂದರ್ಭದಲ್ಲಿ ಗದಿಗ-ಬೆಟಗೇರಿ ಶ್ರೀ ಹಿರೇಮಠ ಪಾಟೀಲ ನೀಲಪ್ಪಗೌಡರ ಸಾಕ್ಷಿಯೂ ಪಡೆಯತು ತಕ್ಕ ಪ್ರಯುಕ್ತ ಸೈನೀತಾಲ ತಿಪ್ಪಸ್ವಾಮಿ ಜಡ್ಜ್‌ಕೋರ್ಟ್‌ನಲ್ಲಿ ಶ್ರೀ ಕೈಲಾಸ ಲಿಂಗ ಜಂಗಮ ಗೋಸ್ವಾಮಿಗಳಿಗೆ ವಿಜಯವು ಲಭಿಸಿತು. ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳು ತುರವನೂರಲ್ಲಿ ಲಿಂಗೈಕ್ಯರಾದ ಕೂಡಲೇ ಕಾಶೀನಾಥಶಾಸ್ತ್ರಿಗಳು ಅಲ್ಲಿಗೆ ಹೋಗಿ ಶ್ರೀ ರಂಭಾಪುರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾ ಚಾರ್ಯ ಭಗವತ್ಪಾದರಿಂದ ಉಜ್ಜಯಿನಿ ಜಗದ್ಗುರುಗಳ ಸಮಾಧಿಯನ್ನು ಉಜ್ಜಯಿನೀಮಠದಲ್ಲಿ ಮಾಡಿಸಿ ಬಹಳ ಚೆಚುರಿಕೆಯಿಂದ ಈಗಿನ ಶ್ರೀಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯರಿಗೆ ಪಟ್ಟಾಧಿಕಾರವನ್ನು ಮಾಡಿಸಿದರು

ಕಾಶೀನಾಥಶಾಸ್ತ್ರಿಗಳು ಮೈಸೂರಲ್ಲಿದೇ ನೆಲಸಿದ್ದರು. ಅಲ್ಲಿಂದಲೇ ಧರ್ಮಪ್ರಚಾರವನ್ನು ಲೇಖನಗಳ ದ್ವಾರಾ ಮಾಡುತ್ತಿದ್ದರು ಕೆಲವು ಕಡೆಗೆ ಹೋಗಿ ಉಪನ್ಯಾಸ ಗಳನ್ನು ಸಹ ಮಾಡುತ್ತಿದ್ದರು ಇವರ ಲೇಖನಶೈಲಿಯು ಅಸ್ಖಲಿತವಾಗಿತ್ತು ಪ್ರತಿಪಾಠಕ್ಕೆಯು ಲೋಕಾತಿ ಶಯವಾಗಿತ್ತು ಅದರಿಂದ ಪಂಚಾಚಾರ್ಯಪ್ರಭೆಯು ವಿಶ್ವವ್ಯತೆಯಾಯಿತು ವೀರಶೈವಧರ್ಮಾನುಷ್ಠಿತಗಳಾದ ಅಸಂಖ್ಯಾತ ಶಿವಭಕ್ತರು ಧರ್ಮನಿಷ್ಠರಾದರು. ಪಟ್ಟು ಜರಾಧಿಕಾರಿಗಳು ಶಿವಪೂಜಾನುಷ್ಠಾನತತ್ಪರರಾದರು. ವಿದ್ಯಾವಂತರಾದರು, ಶಿಷ್ಯೋದ್ದೇಶಪರಿತರಾದರು, ಪ್ರವಚನಕರ್ತೃಗಳಾದರು, ಶಿವಯೋಗಶಾಸ್ತ್ರರಹಸ್ಯಜ್ಞ ರಾದರು, ಶಿಷ್ಯಮಂಡಳಿಗೆ ಶಿವದೀಕ್ಷಾಪ್ರದಾನಮಾಡಿ ದರು, ಅನೇಕ ಪಟ್ಟಜರಾಧಿಕಾರಿಗಳ ಮೇರೆಲ್ಲಿ ಪಾಠ ಶಾಲೆಗಳು, ಗುರುಕುಲಗಳು ಸ್ಥಾಪಿತವಾದವು, ಪಟ್ಟಜರಾ ಧಿಕಾರಿಗಳ ಆದೇಶದ ಅಶ್ರಮಗಳು ಸ್ಥಾಪಿತ ಲ್ಪಟ್ಟವು ಬಳ್ಳಾರಿ ಮೈಸೂರು ಧಾರವಾಡ ಹುಬ್ಬಳ್ಳಿ ಗದಗ ಬಾಡಿ ಸೋಲಾಪೂರ ನಗರಗಳಲ್ಲಿ ಉಜ್ಜಯಿನೀ ಸಂಭಾಪುರೀ ಕೇದಾರ ಜಗದ್ಗುರುಗಳ ಮಹೋತ್ಸವಗಳು ಜರಗಿದವು. ಎಲ್ಲಾಕಡೆಗೂ ಜಗದ್ಗುರುಗಳ ಜಯಭೇರಿ ಗಳು ಬಾರಿಸಲ್ಪಟ್ಟವು ಪಂಚಾಚಾರ್ಯರ ವಿಜಯಧ್ವಜ ಗಳು ಹಾರಾಡಿದುವು. ಶ್ರೀಜಗದ್ಗುರು ಪಂಚಾಚಾರ್ಯಭಗ ವತ್ಪಾದರ ಮತ್ತು ವೀರಶೈವಸಿದ್ಧಾಂತದ ಮಾಹಾ ತ್ಮ್ಯವು ವಿಶ್ವವ್ಯಾಪ್ತವಾಯಿತು ಈ ರೀತಿಯಾಗಿ ನಡೆದಿ ರುವ ಮಾಣಿಕ್ಯಗಳಿಗೆ ಶ್ರೀ ಕಾಶೀನಾಥಶಾಸ್ತ್ರಿಗಳ ಸತತ ಪ್ರಯತ್ನವೂ ಕಾರಣವಾಗಿರುವ ದೆಂದು ಹೇಳುವಲ್ಲಿ ಅತಿಶಯೋಕ್ತಿಯೆನಿಸಲಾರದು.

ವೀರಶೈವಧರ್ಮವು ಅಯಾಕಾಲದಲ್ಲಿ ಅನಂತ ವಿಭೂತಿಗಳಿಂದ ಸಂರಕ್ಷಿತವಾಗುತ್ತಲೇ ಬಂದಿದೆ. ತಥಾಪಿ ಬ್ರಿಟಿಷರ ಶಾಸನಸಮಯದಲ್ಲಿ ಮಹಾರಾಣಿ ವಿಕ್ಟೋರಿ ಯಾ ದೇವಿಯವರ ಘೋಷಣೆಯ ಮೇರೆಗೆ ಸರ್ವಧರ್ಮಗಳ ಅಭ್ಯುದಯಕ್ಕೆ ಅವಕಾಶವು ಲಭಿಸಿ ತೆಂದು ತೋಲುವದಕ್ಕೆ ಹಹು ವೆನಿಸುತ್ತದೆ ಅದಕ್ಕು ಮೊದಲು ಮುಸಲ್ಮಾನರ ಕಾಲದಲ್ಲಿ ಶ್ರೀ ವಿಶ್ವೇಶ್ವರಾದಿ ಮಹಾದೇವಾಲಯಗಳು ಮದಾಂಧೇವಮೂರ್ತಿಗಳಂತೆ ಸಹ ಸ್ರಶಃ ಭ್ರಷ್ಟವಾದಾಗ ಶ್ರೀ ಅಹಲ್ಯಾಬಾಯಿ ಮಹಾದೇವಿ ಯವರು (ಇಂದೂರು ಮಹಾರಾಣಿಯವರು) ಬಹಳ ಮಟ್ಟಿಗೆ ಶಿವಾಲಯಗಳನ್ನು ಪುನರುದ್ಧಾರಗೊಳಿಸಿದರು. ಹಿಂದೆ ಮೈಸೂರು ಸೆಕ್ರಸ್ ಫಡಿಚ್ಚಾಗ್ಗೆ ಶ್ರೀಮಾರ್ ಅಸ್ಕಾಕ ಮಹಾವಿದ್ಯಾರ್ ಪಿ.ಆರ್. ಕಲಿಸಸಶಾಸ್ತ್ರಿಗಳು ಮತ್ತು ಶ್ರೀಸೂರ್ ಪಿ. ಮಹಾದೇವಯ್ಯನವರು ಬಿ ಎ, ಎಲ್‌ಎಲ್ ಬಿ., ಈ ಮಹೋದಯರು ಮೈಸೂರ ರಾಜ್ಯದಲ್ಲಿಯೂ ಸಹ ವೀರಶೈವ ಮಠದ ಪ್ರಾಶಸ್ತ್ಯ ವನ್ನು ಪ್ರತಿಪಾದಿಸಿ ಶ್ರೀ ಪಂಚಾಚಾರ್ಯರೇ ವೀರಶೈವ ಧರ್ಮಸ್ಥಾಪಕರೆಂಬ ವೀರಶೈವ ಮಠವು ಸಮಾನ ವೈದಿಕಮತಗಳಲ್ಲಿರುವ ವರ್ಣಾಶ್ರಮಬದ್ಧವಾದ ಒಂದು ಮುಖ್ಯ ಧರ್ಮವೆಂಬಲೂ ವೈವಸ್ಥಿಗೊಳಿಸಿದರು. ಶ್ರೀ ಕಾಶೀನಾಥಶಾಸ್ತ್ರಿಗಳು ತಮ್ಮ ಬುದ್ಧಿಪ್ರತಿಭೆ ಯಿಂದಲೂ ನಿಷ್ಠಾಮಸೇವೆಯಿಂದಲೂ ಮತ್ತು ಸತ್ಯ ಸನಾತನಾದಿ ಮಂಗಲಗುಣಾವಲಿಯಿಂದಲೂ ವಿಶ್ವಾ ರ್ಹಕ್ಷಣ ಶಕ್ತಿಯಿಂದಲೂ ಕತ್ಯಚಥಾಪಿಯಲ್ಲಿ ಶ್ರೀ ವಿಜ ಗುಣಾದಾಸ್ಯ ಮಹಾಶಿವಯೋಗಿಗಳಂತೆ ಶಿವಧರ್ಮ ಗ್ರಂಥಗಳನ್ನು ತಮ್ಮ ಪಂಚಾಚಾರ್ಯ ವಿದ್ಯುಮ್ಮಧ್ಯಕಾಲ ಯದಲ್ಲಿಯೇ ಮುದ್ರಿಸಿ ಪ್ರಚಾರಮಾಡಿ ಪೂರ್ವೋಕ್ತ ವಿಭೂತಿಗಳಲ್ಲಿ ಶ್ರೀಮಠಲ್ಲಿ ಸೇರಿ ಕೇಶೀಕಾಯರಾಗಿರು ತ್ತಾರೆಂದು ಸಂತೋಷಪಡಬೇಕಾಗಿದೆ ಶ್ರೀ ಕಾಶೀನಾಥ ಶಾಸ್ತ್ರಿಗಳು ಒಂದಾನೊಂದು ಕಾಲದಲ್ಲಿ ವಿವಲೋಜಗಳಿಂದ ಭೂಮಂಡಲದಲ್ಲಿಯೇ ಸುವ್ಯಸ್ಥಿಗರಿಸಿದರು. ಉತ್ತರ ಭಾರತದಲ್ಲಿರುವ ಗೋರಖಪುರದ ಹಿಂದೀ ಮಾಸ ಪತ್ರಿಕೆಯಾದ ಕಲ್ಯಾಣದ ವಿಶೇಷಾಂಕವಾದ ಶಿವಾಂಕ ದಲ್ಲಿಯೂ ಮತ್ತು ಸಂಕಾಂಕದಲ್ಲಿಯೂ ಯೋಗಾಂಕ ದಲ್ಲಿಯೂ ಸಹ ವಿಶ್ವಾತ್ಮಕ ಶಿವಧರ್ಮಪ್ರಕಾಶಕ ಮಹಾಪ್ರಬಂಧಗಳನ್ನು ಬರೆದಿರುತ್ತಾರೆ. " ವಿಶೇ ಷೋನೇ ಲಿಂಗಪೂಜಾ " ಈ ಹೆಸರಿನ ಶಿವಾಂಕದ ಲೇಖನವನ್ನು ಮುಂಬಯಿ ಪೂನಾ ವೃತ್ತಪತ್ರಿಕೆಗಳು ತಮಗೂ ಸಹ ಸ್ವತಂತ್ರವಾಗಿ ಕಳಿಸುವಷ್ಟಿಗೆ ತಾ॥ ೨೨ ೨೩ ೨೪ ದಿನಪತ್ರಿಕೆಯಲ್ಲಿ ಶ್ರೀ ಕೃಷ್ಣಕುಮಾರ ರಾವತರು ಕಾಶೀನಾಥಶಾಸ್ತ್ರಿಗಳ ಲೇಖನವನ್ನು ಅಮವರ್ತಿಸಿರುತ್ತಾರೆ ಈ ರೀತಿಯಾಗಿ ಲೇಖನಗಳಿಂದಮ್ಮೆ, ವಿಶ್ವದಲ್ಲೆಲ್ಲ ಶಿವಭಕ್ತಿಯನ್ನು ಪಂಚಾಚಾರ್ಯರ ಪ್ರಭೆಯನ್ನು ಕಾಶೀನಾಥಶಾಸ್ತ್ರಿಗಳು ವಿಸ್ತರಿಸಿದರು ಮತ್ತು ಶಿವಾದ್ವೈತವನ್ನು ಪ್ರಚಾರಮಾಡಿದರು ಮತ್ತು ಸತ್ಯ ವಾದ ಕ್ರಿಮಿಯು ಸತ್ಯವಾದ ಬ್ರಮರಜಿಂತನೆ ಯಿಂದ ಸತ್ಯಭ್ರಮರವಾಗುವಂತೆಯೂ ಸತ್ಯವಾದ ಜಲವು ಸತ್ಯವಾದ ಮೌತ್ಯಿಕವಾಗುವ ತೆರದಿ ಸತ್ಯ ವಾದ ಜೀವರಿಗೆ ಶಿವಧ್ಯಾನದಿಂದ ಸತ್ಯಶಿವತತ್ವಪ್ರಾಪ್ತರೂ ಪನೋಕ್ಷವಾಸ್ತಿಯಾಗುವೆಂದು ಬೋಧಿಸಿದರು ಮತ್ತು ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ, ಶರಣ, ವಕ್ಯ ಈ ಷಡ್ವಿಧಶಿವಶರಣರಲ್ಲಿರುವ ಶ್ರದ್ಧಾ ನೈಷ್ಠಿಕಾ ಅವಧಾನ ಅನುಭವ ಆನಂದ ಸಮರಸ ನಾಮಕ ಷಡ್ವಿಧ ಭಕ್ತಿಗಳಿಗೆ ಸರ್ವಜ್ಞತ್ವ ನಿತ್ಯತೃಪ್ತತ್ವ ಅನಾದಿಬೋಧಿತಾ ಅಲುಪ್ತಶಕ್ತಿಮತ್ತಾ ಆಕಂಠಶಕ್ತಿಮತ್ತ್ವನಾಮಕ ಮಾಹೇ ಶ್ವರ ಷಡ್ವಿಧಕೈವಿಕಾಪರೂಪ ಕೈವಲ್ಯಲಾಭವಾಗುವ ದೆಂಬ ಘೋಷಿಸಿದರು ಕಾಶೀನಾಥಶಾಸ್ತ್ರಿಗಳು ಸನ್ಯಾ ಸಾಶ್ರಮವಿಮರ್ಶಗ್ರಂಥವನ್ನು ಬರೆದರು ಮತ್ತು ಸಮಸ್ಯಾಸಾಶ್ರಮವಿಮರ್ಶಕಶಕ್ತ್ಯಸ್ಥಿರೀಕರಣಗ್ರಂಥವನ್ನು ಪ್ರಕಾಶಿಸಿದರು ಇವು ಬಹುವಿವಿಧಪ್ರಕಾರ ದರ್ಶನಗ್ರಂಥವನ್ನೂ, ಬಸವದ್ವಾಂತವಿವಾಕರ ಗ್ರಂಥ ವನ್ನೂ ಪ್ರಚಾರಮಾಡಿದರು

ಪಂಡಿತರು ಭಾರತದ ಪ್ರತಿಸ್ಥಾಮಗಳಲ್ಲಿರುವ ಪಂಚಾಚಾರ್ಯ ಸಾಂಪ್ರದಾಯಿಕ ಗುರುವರ್ಗದವರನ್ನು ಮತ್ತು ತದನುಯಾಯಿ ಸನಾತನ ವೀರಶೈವ ಮಹಾ ಜನಸ್ತೋಮವನ್ನು ಜಾಗೃತಗೊಳಿಸಿದರು. ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯಭಗವತ್ಪಾದರು ಕಾಶೀನಾಥಶಾಸ್ತ್ರಿಗಳಿಗೆ ವೀರಮಾಹೇಶ್ವರರಾಜಾರ್ಯ ಪಟ್ಟವರ್ಯಾದಾ ಶ್ರೀ ವೀರಭದ್ರಗಣೇಶ್ವರರೆಂಬ ಸಂಜ್ಞೆಯನ್ನು ಕರುಣಿಸಿದ್ದರು ಜಗದ್ಗುರು ಮಹಾಸ್ವಾಮಿಗಳೀ ಹೀಗೆ ಹೇಳಿದ ಬಳಿಕ ನಾನಾದೇಶಗಳಲ್ಲಿ ನಾನಾವರ್ಗ ಗಳಲ್ಲಿರುವ ಅಶ್ಕಿಳರು ಶಾಸ್ತ್ರಿಗಳನ್ನು ಅವತಾರಿ ನಿ.ಹಾತ್ಮ ರೆಂದು ವರ್ಣಿಸಿರುವದು ಸಹಜವಾಗಿರುವದು. ಕಾಶೀ ನಾಥಶಾಸ್ತ್ರಿಗಳು ಪರಮಯೋಗಿಗಳು ಸಿದ್ಧರು ಮತ್ತು ಶಿವಾದ್ವೈತಸಿದ್ಧಾಂತಿಸಿಂಹರು ಶಿವಭಕ್ತಾಗ್ರಗಣ್ಯರು. ಇವರು ಪರಮಶಿವಭಕ್ತರಾಗಿರುವದರಿಂದಲೇ ಪಡಿನೆಲು ಪುರಾಣಗಳನ್ನು ಮತ್ತು ವಿಶಾಖಷಷ್ಠ ತಾಮ್ರಶಾಸನ ಗಳನ್ನು ಪರಿಧಿಸಿ ಶಿವಭಕ್ತಿಸುಧಾಸಾರವನ್ನು ಸಂಗ್ರ ಹಿಸಿ ಸರ್ವಥಾ ಶಿವಭಕ್ತರಿಗೆ ಶಿವಭಕ್ತಿಸುಧಾಪಾನವೆಷ್ಟು ಮಾಡಿಸುತ್ತಿದ್ದರು. ಶಾಸ್ತ್ರಿಗಳು ಪಂಚಾಚಾರ್ಯ ಪ್ರಭೆಯಲ್ಲಿ ಕೊನೆಗೆ ಭವಿಷ್ಯಪುರಾಣಗ್ರಂಥಾಧಾರದಿಂತೆ ಮಲ್ಕೇಶ್ವರ ಮಹಾತೀಂಗದ ಚರಿತ್ರವನ್ನು ಪ್ರಕಾಶಮಾಡಿ ಕನ್ನಡಿಗರಿಗೆ ಪೋಷ್ಯ ಅಭಿಮಾನಭಾವ ಸಾವಿರಾರು ಗ್ರಾಮಗಳಿಗೆ ಪ್ರತಿಗಳನ್ನು ಕಳುಹಿಸಿದರು ಮತ್ತು ಇಂಡೋಚೀನಾ ಕಾಂಬೋಡಿಯಾ ಅಪಾರ್ ಜಾವಾ ಸುಮಾತ್ರಾ ದೇಶಗಳಲ್ಲಿ ಪೂರ್ವಕಾಲದಲ್ಲಿ ಹರಡಿದ್ದ ಶಿವಭಕ್ತಿಯನ್ನು ಉದ್ಧೀಪನಿ ಅನೇಕ ಲೇಖನಗಳಿಂದ ಶಿವಭಕ್ತಿಯನ್ನು ಪ್ರಚಾರಮಾಡಿದರು. ಶಾಸ್ತ್ರಿಗಳು ಇನ್ನು ಮೇಲೆ ನೇಪಾಳಮಪುರಾಣೇತಿಹಾಸ ತಿಲಾಶಾಸ್ತ್ರ ತಾಮ್ರಶಾಸನಗಳಲ್ಲಿರುವ ಶಿವನ ಸಮಗ್ರ ಚರಿತ್ರವನ್ನು ಸಚಿತ್ರವಾಗಿ ಸಂಪಾದಿಸಿ ಒಂದು ಬೃಹದ್ಗ್ರಂಥವನ್ನು ಪ್ರಕಾಶಮಾಡಬೇಕೆಂಬ ಶಿವಸಂಕಲ್ಪವೊಡನೆ ಶಿವೈಕ್ಯ ರಾದರು.

ಮತ್ತಿಮ್ಮೆ ಕಾಶೀನಾಥಶಾಸ್ತ್ರಿಗಳು ಹೈದರಾಬಾದ್ ಸ್ಟೇಟ್‌ನಲ್ಲಿ ಶ್ರೀ ಕೇದಾರಪೀಠಾಧೀಶ್ವರರಾದ ಶ್ರೀಜಗ ದ್ಗುರು ಶೀಲಶಂಕಲಿಂಗಶಿವಾಚಾರ್ಯಭಗವತ್ಪಾದರನ್ನು ಸಂದರ್ಶನಮಾಡಿಕೊಂಡು ಬರುವ ಮಾರ್ಗದಲ್ಲಿ ಕೆಲ ವರು ಪ್ರತಿಸ್ಪರ್ಧಿಗಳು ಶಾಸ್ತ್ರಿಗಳನ್ನು ಶಾಸ್ತ್ರಾರ್ಥಕ್ಕೆ ಆಹ್ವಾನಿಸಿ ಓರ್ವ ಶ್ರೀಮಂತ ಭವನವನ್ನು ಕರೆದು ಕೊಂಡುಹೋದರು ಪರಂತು ಶ್ರೀ ರೇಣುಕಭಗವ ತ್ಪಾದರ ಕೃಪಾಬಲದಿಂದ ಪ್ರತಿಸ್ಪರ್ಧಿಗಳು ಶಾಸ್ತ್ರಿಗಳ ಮುಂದೆ ಬರಲು ಅಸಮರ್ಥರಾಗಿ ಪರಾಜಯವನ್ನು ಹೊಂದಿದರು ಶಾಸ್ತ್ರಿಗಳು ಕಾತಿಯಿಂದ ಬಂಮ ಗದಗ ಟೌನಿನಲ್ಲಿ ರಾವಸಾಹೇಬ ಕೈ॥ ಶ್ರೀಚನವೆತಿ ವೀರಪ್ಪನವರ ಮನೆಯಲ್ಲಿದ್ದಾಗ್ಗೆ ಹಾನಗಲ್ಲ ವಿರಕ್ತಮಠಕ್ಕೆ ಶ್ರೀಗಳು ಶಾಸ್ತ್ರಿಗಳನ್ನು ಶಾಸ್ತ್ರಾರ್ಥಕ್ಕೋಸ್ಕರ ಕರೆಯಿಸಿದರು. ಶಾಸ್ತ್ರಿಗಳು ಶ್ರೀಗಳ ಹತ್ತರ ಉಜ್ಜಾಸನವನ್ನು ಕೂತು ಕೊಂಡು ಸಿಂಹಗರ್ಜನೆಯಿಂದಲೇ ವೀರಶೈವಮತಕ್ಕೆ ಶ್ರೀ ಪಂಚಾಚಾರ್ಯರೇ ಜಗದ್ಗುರುಗಳಾಗಿದ್ದಾರೆಂಮ ಸೋಪಿಸಿದರು. ಆಗ ಗದಗ-ಬೆಟಗೇರಿ ಹಿರೇಮಠ ಪಾಟೀಲ ಶ್ರೀಮಾನ್ ನೀಲಪ್ಪಗೌಡರೇ ಮೊದಲಾದ ಪುರಪ್ರಮುಖರು ಶಾಸ್ತ್ರಿಗಳ ವಾದಸರಣಿಗೆ ಚಕಿತರಾಗಿ ಶಾಸ್ತ್ರಿಗಳ ಪ್ರವಚನವನ್ನು ಮಾಡಿಸಿ ಪರಮಾನಂದ ಭರಿತರಾದರು ಮತ್ತು ಗದಗ-ಬೆಟಗೇರಿಯವ್ವರುವ ವೀರಶೈವ ಮಹಾಜನಸ್ತೋಮವು ಜಗದ್ಗುರು ಪಂಚಾ ಚಾರ್ಯ ಭಕ್ತಿಪರಾಯಣರಾಗಿ ಅನೇಕಶಾರೆ ಶ್ರೀ ವೀರಾಧೀಶ್ವರರನ್ನು ಪುರಪ್ರವೇಶಮಾಡಿಸಿ ಸಕಲ ರಾಜಗೌರವಗಳಿಂದ ಕಾಣಿಕಾದಿಗಳನ್ನು ಸಮರ್ಪಿ ಸಿದರು ಆಲ್ಲಿ ಪಂಚಾಚಾರ್ಯ ಸೇವಾಸಂಘವು ಸ್ಥಾಪಿತ ವಾಯಿತು.

ಶ್ರೀ ಶಾಸ್ತ್ರಿಗಳ ಲೇಖನಗಳನ್ನು ಒಂದುಸಾರೆ ಗಂಭೀರ ವಾಗಿ ಸಿಂಹಾವಲೋಕನವನ್ನು ಮಾಡಿದ್ದಾದರೆ ಈ ೨೦ ನೆಯ ಶತಮಾನದಲ್ಲಿ ಶಾಸ್ತ್ರಿಗಳು ವೀರಶೈವ ಧರ್ಮ ವನ್ನು ವೀರಶೈವ ಮತಸ್ಥಾಪಕ ಪಂಚಮೀರಗಳನ್ನು ವೀರಶೈವ ಗುರುವರ್ಗವನ್ನು ಯಾವ ವಿಧವಾಗಿ ಉತ್ಕೀರ್ಣಿಸಿ ವಿಶ್ವವಿಖ್ಯಾತವನ್ನಾಗಿ ಮಾಡಿದರೆಂಮ ಪೇಳುವದಕ್ಕೋಸ್ಕರವಾಗಿಯೇ " ಧರ್ಮಸಂಸ್ಥಾಪ ನಾರ್ಥಾಯ ಸಂಭವಾಮಿ ಯುಗೇಯುಗೇ " ಈ ಸ್ಮೃತಿಯೇ ಕೃಷ್ಣಿಧಾರೋಹಣವಾಡುತ್ತಿರುವದೆ ರಿಂದ ಸಾಕ್ಷಾತ್ ಪರಮನಸ (ಮಲ್ಲಿಕಾರ್ಜುನ) ಸ್ವಾಮಿಯೋ ಅಥವಾ ನಂದೀಶ್ವರನೋ ವೀರಭದ್ರನೋ ಎಂದು ಹೇಳುವಂತೆ ಪರಮವಿಭೂತಿಗಳಾಗಿರುತ್ತಾರೆ ಶ್ರೀ ಕಾಶೀನಾಥಶಾಸ್ತ್ರಿಗಳು ಆಜಾರಾಮರ ಕೇತ್ಯಯತ ರಾಗಿ ಸರ್ವದಾ ವಿಶ್ವವಿಖ್ಯಾತ ವಿಭೂತಿಗಳ ಪಂಕ್ತಿ ಯಲ್ಲಿ ವಿರಾಜಿಸುತ್ತಿರುವ್ಯಾರೆ 'ಕಾಶೀನಾಥಶಾಸ್ತ್ರಿಗಳು ಸ್ಥಾಪಿಸಿದ ಪಂಚಾಚಾರ್ಯ ಪ್ರಭೆಯು ಚಿರಕಾಲದ ವರೆಗೂ ಸ್ಥಿರವಾಗಿ ನಡಿಯಲಿ ಸದ್ಭಕ ಸಿಂಹಾಸ ನಾಧೀಶ್ವರರೂ ಪಟ್ಟಜಂಗಧಿಕಾರಿಗಳೂ ಮತಾಧೀಶ್ವರರೂ ಮತ್ತು ಸುನುತ್ತ ಭಕ್ತಮಾಹೇಶ್ವರರೂ ಪಂಚಾಚಾರ್ಯ ಪ್ರಭೆಯ ಮೇಲೆ ಪೂರ್ಣ ಪ್ರೇಮವನ್ನಿಟ್ಟುವರೆಂಬ ಆಶಿಸ್ಸೀವೆ.

ವರ್ತಮಾನಸಂಗ್ರಹ

ಭಾರತವು ಅಖಂಡ ರಾಷ್ಟ್ರ

ದೇಶವನ್ನು ರಾಜಕೀಯ ದೃಷ್ಟಿಯಿಂದ ವಿಭಾಗಿಸ ಬೇಕೆಂಬ ವಾದದಲ್ಲಿ ನನಗೆ ನಂಬಿಕೆ ಇಲ್ಲ ಭಾರತ ದಂತಹ ರಾಷ್ಟ್ರ ಅಖಂಡವಾಗಿಯೇ ಉಳಿಯಬೇಕು. ಭಾರತವನ್ನು ನಿಭಜಿಸಲು ಯತ್ನಿಸಿದವರು ಭಾರತದ ಶತ್ರುಗಳೆಂದು ನಾನು ಭಾವಿಸುತ್ತೇನೆ ವಾಸ್ತವವಾಗಿ ಪಾಕಿಸ್ತಾನವೆಂಬುದಕ್ಕೆ ಅರ್ಥವೇ ಇಲ್ಲ ಭಾವನೆಗಳ ಕಲಸುಮೇಲೋಗರ ಮಾಡುವ ಪ್ರಯತ್ನವಿದು ಈ ಉಪಖಂಡದಲ್ಲಿರುವ ಮುಸ್ಲಿಮರನ್ನು ಪ್ರಚೋದಿಸಲು ಇಂತಹ ವಾದವನ್ನು ಕೆಲವರು ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಪಾಕಿಸ್ತಾನಿಗಳಿಗೆ ನೆರೆರಾಜ್ಯ ಗಳು ಜಾಗೂ ಬಾರತವನ್ನು ಬೇರೆಯಾಗಿ ತಪ್ಪರ್ಥ ಬರುವಂಥ ದೃಷ್ಟಿಯಿಂದ ಒಣ್ಣಿಸಲೂ ಯತ್ನಿಸುತ್ತಿದ್ದಾರೆ ಅದರ ನನಗೆ ಈ ವಾದದಲ್ಲಿ ನಂಬಿಕೆ ಯಿಲ್ಲ

ಭಾರತವು ಎಂದಿಗೂ ಬಾಳ್ವೆಯಿಲ್ಲದೆ. ನಾವು ಅದಕ್ಕೆ ಎಷ್ಟು ಸೈನಿಗಳಾಗಿಬೇಕೆಂಬುದನ್ನು ಜನರು ನಮ್ಮ ದೇಶದಲ್ಲಿ ನಾವು ಕೈಗೊಳ್ಳಬೇಕಾಗಿರುವ ಆರ್ಥಿಕ ಕಾರ್ಯಗಳನ್ನು ಪೂರೈಸಲು ಆದರೆ ವಿಸ್ತಾರವಾದ ಆಹಾರ ಶಕ್ತಿಯನ್ನು ನಮ್ಮನ್ನು ಬೇಕಾಗಿಸಿಲ್ಲಾವು. ಬಾರತೀಯ ರಂದ ನನಗೆ ಗೌರವ, ಪ್ರಾಂತೀಯ ಸಕ್ಷಗಳ ಜಿವನೆಯ್ದು ನಿರ್ನ ತತ್ವವನ್ನು ನಾನು ಕರಾ ಮಾಗ ಸಲ್ಲಾಗರವಿದ ಎಂಬುದಾಗಿ ಸ್ಪರ್ವ ಪಾಕಿಸ್ತಾನದ ಸ್ಥಾಪಕ ಮಿ ಎ ಕೆ ಸಜಲಲ್ ಹಕ್ ಅವರು ಕಳೆದಾದ ವರಷ ಜೋಸ್ ಅಕ್ಕಾಜೆಯಿಯವರು ನೇತಾಜಿ ಭವನದಲ್ಲಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಮಾತನಾಡಿದ ವೇಳೆಯಲ್ಲಿ

ಕಾಶ್ಮೀರ ಭಾರತದ ಬಂದುಭಾಗ

ಕಾಶ್ಮೀರದ ವಿಷಯಸಚಿವರಾದ ಭಕ್ಷಿಗುಲಾಮಹಮ್ಮದ್ಧರು ಬಾರಿ ಸಾರ್ವಜನಿಕ ಸಬೆಯಲ್ಲಿ ಮಾತನಾಡುತ್ತ ವಿಶದಿಸಿಸಿಕವಾಗಿ ಕಾಶ್ಮೀರ ಬಾರತದ ಒಂದು ಭಾಗವಾಗಿಯೇ ಇದೆ, ಮುಂದೆಯೂ ಬಾಗೇ ಇರುತ್ತದೆ ಕಾಶ್ಮೀರದ ರಾಜ್ಯಾಂಗರಚನಾ ಸಭೆಯು ಕಾಶ್ಮೀರವು ಭಾರತಕ್ಕೆ ಸೇರಬೇಕೆಂಬ ದಾಗಿ ನಿರ್ಧಾರವನ್ನೆ ಕೈಗೊಂಡಿದೆ ಕಾಶ್ಮೀರ ರಾಜ್ಯಾಂಗ ಸಭೆಯು ಈ ನಿರ್ಧಾರವನ್ನು ಪಾಕಿಸ್ತಾನ ಇಷ್ಟನೇ ವಿದೇಶಗಳು ಒಪ್ಪುವುದೇ ಬಡುವುದು ನಮಗಂತು ಆಶ್ಚರ್ಯಕರ ಪಾಕಿಸ್ತಾನದಲ್ಲಿರುವ ಕಾಶ್ಮೀರ ಭಾಗದ ಜನತೆಯ ಪ್ರತಿನಿಧಿಗಳೂ ಕಾಶ್ಮೀರ ರಾಜ್ಯಾಂಗ ಸಭೆಗೆ ಒಂದು ಅಧಿನೇಶನದಲ್ಲಿ ಭಾಗವಹಿಸಿದರು, ಈ ಭಾರತಕ್ಕೆ ಸೇರಬೇಕೆಂಬ ನಿರ್ಣಯಕ್ಕೆ ಪೂರ್ಣ ಬೆಂಬಲ ದೊರೆಯುವುದು ಮುಸ್ಲಿಂ ಲೀಗಿನ ಎರಡು ಜನಾಂಗಗಳ ವಾದವನ್ನು ಮೊದಲಿನಿಂದಲೂ ಕಾಶ್ಮೀರವು ಪ್ರತಿಭಟಿಸುತ್ತ ಬಂದಿದ ಗಾಂಧೀಜಿಯವರ ಫಿನ ಆದರ್ಶದಲ್ಲಿ ನಂಬಿಕೆಯನ್ನಿಟ್ಟು ಅವರ ಮಾರ್ಗ ದಲ್ಲೇ ಇದುವರೆಗೂ ಮುಂದುವರಿಯುತ್ತ ಬಂದಿದ ಎಂತಹುದೇ ಪರಿಸ್ಥಿತಿ ಬರಲಿ ಭಾರತವು ಕಾಶ್ಮೀರಕ್ಕೆ ಬೆಂಒಲ ನೀಡುವುದೆಂದು ನಂಬಿದ್ದೇನೆ—ಎಂದರು.

ಅಮೆರಿಕನ್ ಮಿಲಿಟರಿ ಸಹಾಯದಿಂದ ಪಾಕಿಸ್ತಾನಕ್ಕೆ ಹಾನಿ

ಪಾಕಿಸ್ತಾನವು ಅಮೆರಿಕಕ್ಕೆ ಮಿಲಿಟರಿ ಸಹಾಯ ಪಡೆಯುವುದರಿಂದ ಪಾಕಿಸ್ತಾಫಿನ ಪರಮಾಧಿಕಾರಕ್ಕೇ ಚ್ಯುತಿಯುಂಟಾಗುವುದಲ್ಲದೆ ಪಾಕಿಸ್ತಾನವು ಸ್ವತಂತ್ರ ವಾಗಿ ನರ್ತಿಸಲು ಸಾಧ್ಯವಿಲ್ಲದಂತಾಗುತ್ತದು—ಎಂದು ದೆಹಲಿಯಲ್ಲಿ ನೆರೆದಿದ್ದ ನ್ಯಾಯವಾದಿ ಕಾನ್ಫರೆನ್ಸ್‌ನ ಪಾಕಿಸ್ತಾನಿಗಳು ಎಚ್ಚರಿಕೆ ಇತ್ತಿದೆ ಸಭಾಧ್ಯಕ್ಷತೆಯನ್ನು ಖೌಧುರಿ ಹೈದರ್ ಹುಸೇನ್‌ರವರು ವಹಿಸಿದ್ದರು. ಅಮೆರಿಕ-ಪಾಕಿಸ್ತಾನಿಗಳ ಮಿಲಿಟರಿ ಕಾಲಿನಿಂದ ಎಲ್ಲಾ ರಾಷ್ಟ್ರಗಳ ಭದ್ರತೆಗೆ ಧಕ್ಕೆಯೊದಗುವ ಪರಿಸ್ಥಿತಿಯೊದಗಿ ದೆಯೆಂದೂ ಪ್ರಪಂಚ ಶಾಂತಿಗೆ ಭಂಗ ಬರುವಂತಿದೆ ಯೆಂದೂ ಸಮ್ಮೇಳನವು ನಿರ್ಣಯನಾಡಿತು. ಸಂಗ ನೆಹ್ರೂರವರು ಈ ಬಗ್ಗೆ ತಾಳಿರುವ ನಿಲುವನ್ನು ಸದು ದಿಸುವ ನಿರ್ಣಯ ಮಾಡಲಾಯಿತು

ಗೋವಾಕ್ಕೆ ಶಸ್ತ್ರಾಸ್ತ್ರ

ಗೋವಾಕ್ಕೆ ಅಧಿಕ ಸಂಖ್ಯೆಯಲ್ಲಿ ಶಸ್ತ್ರಾಸ್ತ್ರಗಳು ಹರಿಗಿನಲ್ಲಿ ಬಂದಿವೆ. ೭೦ ಮಂದಿ ಅಧಿಕಾರಿಗಳೂ ಬಂದಿ ದ್ದಾರೆ ಹಡಗಿನಲ್ಲಿ ಬಂದ ವಸ್ತುಗಳನ್ನು ರಾತ್ರಿ ಸನು ಯದಲ್ಲಿ ಲಾರಿಗಳವ ಸಲಕ ಸಾಗಿಸಲಾಯಿತೆಂದೂ ಪೋರ್ಚುಗೀಸ್ ಪ್ರಧಾನಿ ಡಾ॥ ಸಾಲಜಾರ್‌ರವರ ನೀತಿ ಯನ್ನು ಪೋರ್ಚುಗೀಸ್ ಮತ್ತು ಮಿಲಿಟರಿ ಅಧಿಕಾರಿಗಳಿಗೆ ತಿಳಿಸಿಲು ಪೋರ್ಚುಗೀಸ್ ಬಾರತದ ಗವರ್ನರ್ ಜನರಲ್ ಬ್ರಿಗೇಡಿಯರ್ ಪಾಲೋಬೆರ್ನಾರ್ಡ್‌ಗೈಡ್ಸ್‌ರವರು ಸಮ್ಮೇಳನವನ್ನು ಕರೆದಿದ್ದಾರೆಂದು ತಿಳಿದುಬಂದಿದೆ

ಗರ್ಭಿಣಿಯರ ಮೇಲೆ ಆಟಂಬಾಂಬ್ ರೇಡಿಯೇಷನ್ ಪ್ರಭಾವ

ಅಮೆರಿಕದ ವಾಶ್ಚಂಗ್ಟನ್ನು ನಾಗಸಾಕಿ ಪಟ್ಟಣದ ಮೇಲೆ ಆಟಂಬಾಂಬನ್ನು ಕಾರಿದ ಮೇಲೆ ಅಲ್ಲಿದ್ದ ೫೮ ಮಂದಿ ಗರ್ಭಿಣಿಯರನ್ನೂ, ಅವರು ಹೆತ್ತ ಮಕ್ಕಳ ಬಾಯಿ ಲೆಯ ಚರಿತ್ರೆಯನ್ನೂ ಪರೀಕ್ಷಿಸಿದರು

ಸುನಾರು ಮೂವತ್ತು ಮಂದಿ ಗರ್ಭಿಣಿಯರಿಗೆ ತೀವ್ರವಾದ ಘಾಯಗಳಾಗಿದ್ದವು ನಾಲ್ಕು ಗರ್ಭಿಣಿ ಯರಿಗೆ ಇನ್ನೂ ಸುಳ್ಳ ಪ್ರಸವವೇ ಆಗಿಲ್ಲ ಮೂರು ಮಕ್ಕಳು ಗಳು ಹುಟ್ಟಿದ ಒಂದು ತಿಂಗಳ ನಂತರ ರವೆ, ಸತ್ತಿರುವವು ಜೀವಂತವಾಗಿರುವ ಹದಿನಾರು ಸುಳ್ಳಳ ಪೈಕಿ ನಾಲ್ಕು ಮಕ್ಕಳಿಗೆ ಬುದ್ಧಿಭ್ರಮಣೆ ಉಂಟಾಗಿದೆ ಎಂದು ತಿಳಿಸಿದ್ದಾರೆ

ವಿಚಿತ್ರ ಜಿಂಜೆಗಳು

ಮಣಿಪುರದ ಅಡವಿಗಳಲ್ಲಿ "ಜ್ಯೋಮಾಟ್ಟರ್" ಎಂಬ ವಿಚಿತ್ರ ಜಾತಿಯ ಜಿಂಕೆಗಳನ್ನು ಕಂಡುಹಿಡಿದಿರು ವುದಾಗಿ ಇನ್ಸ್ಪಾರೆಸ್ಟ್ ಸಿಪಿಯರ್ ಕನ್ಸರ್ವೇಟರ್ ಶ್ರೀ ಪಿ ಡಿ ನೈಪಿಯವರು ತಿಳಿಸಿದರು ಈ ಜಿಂಕೆಗಳ ಜಾತಿ ನಶಿಸಿಹೋಗಿತ್ತೆಂದು ಭಾವಿಸಲಾಗಿತ್ತು ವಿಜ್ಞಾ ಬಂದಿದೆಲ್ಲಿಂದ ಇವುಗಳು ಈ ಜಾತಿಯ ಜಿಂಕೆಗಳು ಕಿ ಕ್ಕಿಂತ ಹೆಚ್ಚಾಗಿಲ್ಲವೆಂದು ಹೇಳಲಾಗಿದೆ.

ಸಾಬೂನು ತಯಾರಿಕೆಗೆ ಬೇವಿನ ಎಣ್ಣೆ

ಸಾಬೂನು ತಯಾರಿಕೆಗೆ ಬೇವಿನ ಎಣ್ಣೆಯಿಂದ ಹೆಚ್ಚಿನ ಪ್ರಯೋಜನ ಉಂಟು ಸಾಬೂನಿನ ತಯಾರಿ ಕೆಗೆ ಈಗ ಉಪಯೋಗಿಸಲಾಗುತ್ತಿರುವ ವಿವಿಧ ತೈಲಗಳ ಒದಲು ಬೇವಿನ ಎಣ್ಣೆಯನ್ನು ಉಪಯೋಗಿಬಹುದೆಂದೂ ಆಧರಿಂದ ಬಂಧ್ಯಪ್ರಾಣ್ಯಿದಲ್ಲಿ ಬೇವಿನ ಎಣ್ಣೆಯ ಕೈಗಾ ರಿಕೆಯು ಅಭಿವೃದ್ಧಿಗೆ ಇಲ್ಲಿಯ ಅವಕಾಶವಿದೆಯೆಂದು ಶ್ರೀ ಏ ಎಸ್ ಕಪಾಡಿಯಾರವರು ತಿಳಿಸಿದರು.

ಮೈಸೂರಿನಲ್ಲಿ ಪ್ರತಿ ವರ್ಷವೂ ನಡೆಸಲಾಗುತ್ತಿದ್ದ ಕುದುರೆ ರೇಸ್‌ಬಂದ್ಯಗಳನ್ನು ಈ ವರ್ಷ ಮೇ ೨೩ ರಿಂದ ಬೆಂಗಳೂರಿನಲ್ಲೇ ನಡೆಸಲು ಮೈಸೂರು ರೇಸ್ ಕ್ಲಬ್ ನಿರ್ಧರಿಸಿದೆ ಹೋದವರ್ಷ ರೇಸ್ ಬಂದ್ಯಗಳು ಮೈಸೂರಿನಲ್ಲೇ ನಡೆದಿತ್ತು

ಇಂದೋ ಚೀನಕ್ಕೆ ಫ್ರೆಂಚ್ ಪ್ಯಾರಾಷೂಟ್ ಯೋಧರನ್ನು ಕರೆದೊಯ್ಯುವ ಅಮೆರಿಕ ಗ್ಲೋಬ್ ಮಾಸ್ಟರ್ ವಿಮಾನಗಳಿಗೆ ಕರಾಚಿಯಲ್ಲಿ ಇಳಿಯಲು ಅವಕಾಶಕಲ್ಪಿಸಲಾಗಿದೆಯೆಂದು ಅಧಿಕೃತವಾಗಿ ತಿಳಿದು ಬಂದಿದೆ

ಸೋಸಲಿಸ್ಟ್ ಪಕ್ಷದ ನಾಯಕರಾದ ಶ್ರೀ ಮುತ್ತು ನೆಂಕಟಪ್ಪರೆಡ್ಡಿಯವರನ್ನು ನಾಯಕತ್ವದಲ್ಲಿ ೫೫೦೦ ಮಂದಿ ಸ್ವಯಂಸೇವಕರು ಕುಪಿಚಂಪೇಟೆ, ಚಿಟ್ಟೂರಿಪೇಟೆ ಎಂಬ ಮೂರು ಹಳ್ಳಿಗಳಲ್ಲಿ ಫ್ರೆಂಚ್ ಭಾರತದ ಆಡಳಿತದ ವಿರುದ್ಧ ಪ್ರತಿಭಟನೆ ಮಾಡಿದ್ದಾರೆಂದು ತಿಳಿದುಬಂದಿದೆ.

ಸುದ್ದಿ ಸಂಗ್ರಹ

ಫ್ರೆಂಚ್ ಭಾರತದ ಮಾಹೆ ಪ್ರದೇಶದ ನಲುತಾರಾ ಎಂಬಲ್ಲಿ ಭಯೋತ್ಪಾದಕ ಚಟುವಟಿಕೆಯೊಂದನ್ನು ಆರಂ ಭಿಸಲಾಗಿದೆಯೆಂದು ಹಲವು ವರದಿಗಳು ತಿಳಿಸು ತ್ತವೆ ಮಾಹೆ ಕಮ್ಯುನಿಸ್ಟಿನ ಹತ್ತುಮಂದಿ ಕೌನ್ಸಿಲರು ಗಳಲ್ಲಿ ಏಳುಮಂದಿ ಫ್ರೆಂಚ್‌ಭಾರತಸ್ವಾತ್ಯೈಗಳು ಜನ ಗಣತಿಯಲ್ಲಿದ್ದಾರೆಯೇ ಭಾರತದಲ್ಲಿ ಏಳ್ಗೆಯೇಬೇಕೆಂಬ ವಿಲಿನೀಕರ ನಿರ್ಣಯಕ್ಕೆ ಸಹಿಹಾಕಿದರೆ ಪರಿಣಾಮವಾಗಿ ಈ ಭಯೋತ್ಪಾದನೆ ಮೊದಲಾಗಿದೆಯೆಂದೂ ಫ್ರೆಂಚ್ ಭಾರತೀಯ ಸೇನೆ ಮತ್ತು ಪೋಲಿಸರ ನೆರವು ಪಡೆದ 'ಗೂಂಡಾ'ಗಳು ಮನೆಗಳ ಮೇಲೆ ಧಾಳಿ ನಾಡಿ, ನಿವಾಸಿಗಳನ್ನು ಬೆದರಿಸುತ್ತಿದ್ದಾರೆಂದೂ ಮಾಹೆಯ ಕೌನ್ಸಿಲರೂ, ಉಪಮೇಯರ್‌ರವರೂ ಆದ ಶ್ರೀ ಪಿ ಎಸ್ ಕುನ್ಹಿತ್ತನ್ನರವರು ಳೆದಿದ ಭಾಷಣವಾರ ದಸ್ತಗಿರಿ ಮಾಡಲ್ಪಟ್ಟರೆಂದೂ ನಿರ್ಣಯಕ್ಕೆ ಸಹಿಹಾಕಿದ ಇನ್ನುಳಿದ ಅರುಮಂದಿ ಕೌನ್ಸಿಲರುಗಳು ನಲುತಾರಾವನ್ನು ಬಿಟ್ಟು ಭಾರತದ ಒಕ್ಕೂಟದಲ್ಲಿ ಅಶ್ರಯ ಪಡೆಯುತ್ತಿರುವರೆಂದು ಹೇಳಲಾಗಿದೆ

ಹುಟ್ಟಳ್ಳಿಗೆ ಎರ್ಪಡಿಸಬೇಕೆಂದಿರುವ ಹೆಲಿಕಾಪ್ಟರ್ ವಿಮಾನ ಅಂಚೆಸಂಚಾರ ವ್ಯವಸ್ಥೆಯನ್ನು ದಾವಣ ಗೆರೆಗೂ ಮುಂದುವರಿಸಲಾಗುವುದೆಂದು ತಿಳಿದುಬಂದಿದೆ. ಮೈಸೂರು ಸರ್ಕಾರವು ದಾವಣಗೆರೆ ನಗರದ ಹೊರಾ ವರಣದಲ್ಲಿ ಒಂದು ಚಿಕ್ಕವಿಮಾನನಿಲ್ದಾಣವನ್ನು ನಿರ್ಮಿ ಸಿರುತ್ತಾರೆ ಇದನ್ನು ಸಾಮಾನ್ಯಸರ್ವಿಸ್ ವಿಮಾನಗಳ ಉಪಯೋಗಕ್ಕೂ ಬರುವಂತೆ ಬಡಾವಣೆ ಮಾಡಲಾಗು ವುದು.

ಮೈಸೂರು ಸಂಸ್ಥಾನದ ಮುಖ್ಯ ಕೈಗಾರಿಕಾ ಕೇಂದ್ರ ವಾದ ದಾವಣಗೆರೆಯು ಬಾರತದ ಕರಕುಶಗಗಳೊಡನೆ ಸಂಪರ್ಕ ಹೊಂದುವಂತೆ ಮಾಡುವುದೇ ಇದರ ಉದ್ದೇಶ ದಾವಣಗೆರೆ-ಚಿಕ್ಕಬುರ್ಗ ರಸ್ತೆಯಲ್ಲಿ ೬೦ ಎಕರೆ ಪ್ರದೇಶ ದಲ್ಲಿ ನಿರ್ಮಿಸಲ್ಪಟ್ಟಿರುವ ಈ ಹೊಸ ವಿಮಾನನಿಲ್ದಾಣ ಕ್ಕೆ ಸರ್ಕಾರವು ೧೩,೦೦೦ ರೂಪಾಯಿಗಳನ್ನು ನೆಲ್ಪಿ ಮಾಡಿದೆ

ಸಿದ್ಧಾಂತಶಿರೋಮಣಿ

(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಶೈವಶಿಖ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿರೋಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಲ್ಲಿದ್ದ ಶ್ರೀ ವಿನಯೋಗಿವಿಶಾಖಾಚಾರ್ಯರಿಂಬ ಆಚಾರ್ಯ ರಿಂದ ರಚಿಸಲ್ಪಟ್ಟಬ್ಬು ದೇವಕಾಗಿಭಾಷೆಯಲ್ಲಿದ್ದಿತು ಆದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗಭಿತವಾದ ಆ ಕ್ಲಿಷ್ಟ ಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟು ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವೈಭವವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದ ರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಕಂಡಿತರ ಸಲೋ ದರವಾದ ವೇಗ ಬ್ಬಿ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತಪ್ಪಿಸಿ ಒದಿ ಧನ್ಯರಾಗಬೇಕು. ಬೆಲೆ ರೂ. 2-8-0

ವ್ಯವಸ್ಥೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

Edited Printed and Published by Brahmanathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತನಿಸರ್ ಪಂಚಾಸ್ಯಶೀಕಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಜಾಗಮೂರು ಬೃಹಸ್ಪತಿಶಾಧ್ಯಕ್ಷಶಾದ ವೇಷಿ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ಚಾಪಿಗೆ ವಂದಾ ೩ ರೂ.] ಸಂಪಾದಕರು—ಜಾಗನೂರು ಬೃಹಸ್ಪತಿಶಾಧ್ಯಕ್ಷರಾದ ಶ್ರೀ ಮಹಾದೇವಯ್ಯಸವರು [ವಿ. ಪಿ. ಖರ್ಚು ಸೇರಿ ೩ ರೂ ೮ ಆ.

ಸಂಪುಟ ೩೮] ಸೋಮವಾರ ತಾ॥ ೧೭ ನೇ ಮೇ ೧೯೩೪ [ಸಂಚಿಕೆ ೨

ಬೆಂಗಳೂರು ಚಿಕ್ಕಪೇಟೆ ಮಹಂತಿನಮಠದಲ್ಲಿ

ದೇವದರೆಟ್ಟಿರು ಶ್ರೀಜವಾನ್ ರುದ್ರಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ

ಸಭೆಯು ಸೇರಿ ಈ ಕೆಳಗೆ ಕಂಡ ರೆಜಾವು

ಪಾಸುಮಾಡಲಾಯಿತು

ಶ್ರೀ ಕೇದಾರೀಪೀಠದ ವಿಚಾರವಾಗಿ ಶ್ರೀ ಕಾಶೀ ಜಗದ್ಗುರುಗಳು ಮತ್ತು ಕೆಲವರು ಸೇರಿ ಒಂದು ಹೊಸ ದಾವೆಯನ್ನು ವೀರಶೈವ ಮತದ ಜಂಗಮರ ಹೆಸರಿನಲ್ಲಿ ಸಿವಿಲ್ ಕೋರ್ಟಿನಲ್ಲಿ ದಾಖಲ್‌ಮಾಡುವದಕಾಗಿದ್ದಾರೆಂಬ ವರ್ತಮಾನವು ದೇಶಮಧ್ಯದಲ್ಲಿ ಹರಡುತ್ತಲಿದೆ. ಇದನ್ನು ಏಧರಿಸುವುದಕ್ಕಾಗಿ ಅಖಂಡಾಚಾರ್ಯರ ಸಮ್ಮೇಳನವೂ ಸಹ ಬಾರ್ಡೋಲಿಯಲ್ಲಿ ಇದೇ ತಿಂಗಳು ಹನ್ನೊಂದನೆಯ ತಾರೀಖಿನಲ್ಲಿ ವಡೆಯುವುದೆಂಬ ವರ್ತಮಾನವೂ ಇಂದಿದೆ. ಶ್ರೀ ಕಾಶೀ ಪೀಠದ ಮ್ಯಾನೇಜರ್ ರವರು ದಿವಾನ್‌ಬಹದ್ದೂರ್ ರೆಟ್ಟಿರ್ಡ್ ಜೀಫ್ ಜಜ್ಜಿಸ್, ಶ್ರೀ ಪಿ ಮಹದೇವಯ್ಯನವರಿಗೆ ಈ ವಿಚಾರವಾಗಿ ಕಳುಹಿಸಿರುವ ದಾವೆಯ ನಕಲನ್ನು ನಾವು ಪರೀಕ್ಷಿಸಿ ಕಾನೂನಿನಲ್ಲಿ ಸಮರ್ಥರಾಗಿರುವ ಲಾಯರುಗಳ ಅಭಿಪ್ರಾಯಗಳನ್ನು ತೆಗೆಸುಕೊಂಡಿದ್ದೇವೆ ಸಾವರವು ಒಂಭೈನೂರ ಹನ್ನೊಂದನೆಯ ಇಸವಿಯ ಸ್ಕೀಮಿನಲ್ಲಿ (Scheme) ದಕ್ಷಿಣದ ಜಂಗಮರ ಹಕ್ಕಿಗೆ ಕೊಟ್ಟಿರುವ ರಕ್ಷಣೆಯು ವೀರಶೈವ ಜನಾಂಗದ ಪರವಾಗಿಯೇ ಹೊರತು ಒಬ್ಬ ವ್ಯಕ್ತಿಯ ಪರವಾದಂಥಾದ್ದಲ್ಲ ಅಂಥ ಜಂಗಮರ ಪ್ರತಿನಿಧಿಯಾಗಿ ಮತ್ತು ಸ್ಕೀಮಿನ ೬ ಜಿಪ್ತಿಗೆ ಅಮಾನವಾಗಿ ಎಲೆಕ್ಷನ್‌ನಲ್ಲಿ ಜಯಾಪಿಸಲ್ಪಟ್ಟ ಶ್ರೀ ಕೈಲಾಸಲಿಂಗರು ಸಿವಿಲ್ ಕೋರ್ಟಿನಲ್ಲಿ ಈ ಮೊದಲೇ ದಾವಾ ಹೂಡಿ ಡಿಸ್ಮಿಸ್ಸ್ ಆಜ್ಞರ ಕೋರ್ಟಿನಲ್ಲಿ ಈ ವಿಚಾರವಾಗಿ ಸೃಜ್ಯ ಆಜ್ಞೆಯೊಂದಿದ್ದಾರೆ. ಈ ನ್ಯಾಯ ಬದ್ಧವಾದ ತೀರ್ಮಾನವನ್ನು ಶ್ರೀ ಕಾಶೀ ಜಗದ್ಗುರುಗಳಾದಿಯಾಗಿ ಸರ್ವರಿಗೂ ತಿಳಿದಿರುವ ವಿಷಯವಾಗಿದೆ. ಮತ್ತು ಈಗ ಹೂಡಲೇಕೆಂದಿರುವ ದಾವೆಯಲ್ಲಿಯೂ ಸಹ ಸ್ಪಷ್ಟವಾಗಿ ಸಮುಜಾಯಿಂದಿರುವ ಹಾಕಿರುವ ಅಭೀಲಿಖಿತ ತೀರ್ಮಾನವನ್ನು ವೀರಶೈವ ಸಮಾಜವು ನಿರೀಕ್ಷಿಸಲೇಕಾಗಿದೆ. ಅಂಥ ತೀರ್ಮಾನ ವಾಗುವುದರೊಳಗಾಗಿ ಅವೇ ವಿಚಾರವಾಗಿ ಅವೇ ಪರಿಷತ್ತಾಕ್ಕಾಗಿ ಮತ್ತೊಂದು ದಾವೆಯನ್ನು ಸಮಾಜದ ಹೆಸರಿನಲ್ಲಿ ಈಗ ಹೂಡುವುದು ಆವಾವಶ್ಯಕ ಮತ್ತು ಆಸಮಂಜಸವೆಂದು ಈಸಭೆಯು ಅಭಿಪ್ರಾಯಪಡುತ್ತದೆ. ಮತ್ತು ದಾವೆಯ ಫಲಲನ್ನು ಕೂಲಂಕಷವಾಗಿ ಪರಿಶೀಲಿಸಿರುವ ಪಿ. ಮಹದೇವಯ್ಯನವರು ಈ ದಾವೆಯು ಅಶ್ಯಮ, ಅನ್ಯಾಯ, ಅಧರ್ಮ ಮತ್ತು ಅನಾವಶ್ಯಕ ನೆಂದು ಹೇಳುತ್ತಾರೆ. ಇಂಥ ದಾವೆಯಿಂದ ಸಮಾಜವು ಛಿದ್ರವಾಗಿ ಬಹಳ ಅಪಥಗಳಿಗೆ ಗುರಿಯಾಗುವುದೆಂದು ತಿಳಿಸುತ್ತಾರೆ. ಈ ದಾವೆಯಲ್ಲಿ ಅನೇಕ ಲೋಪದೋಷ ಗಳಿರುವದಾಗಿಯೂ ಕಾನೂನಿನ ಪ್ರಕಾರ ಅಂಥ ದಾವೆಯು ಜಯವಾಗುವದು ಬಹಳ ಅಸಂಭವವೆಂತಲೂ ಹೇಳುತ್ತಾರೆ ತಮ್ಮ ಈ ಅಭಿಪ್ರಾಯವನ್ನು ಕಾಶಿಗೆ ಕಳುಹಿಸಿದ್ದಾರೆಂದು ತಿಳಿದುಬಂದಿದೆ. ಈ ಸಭೆಯು ಅಭಿಪ್ರಾಯದಲ್ಲಿ ಇದು ಮಹತ್ವವಾದ ವಿಚಾರ, ಆಖರ ದಲ್ಲಿ ಈ ರೂಪಿನಲ್ಲಿ ಕೋರ್ಟಿನ ಮುಂದೆ ಇಡುವಂಥಾದ್ದಲ್ಲ. ಸಮಾಜದ ಹಿತದೃಷ್ಟಿಯಲ್ಲಿ ಇದು ಖಂಡಿತ ವಾಗಿಯೂ ವಿರೋಧವಾಗಿದೆ ಶ್ರೀ ಕಾಶೀ ಜಗದ್ಗುರು ಗಳು ಇದನ್ನು ಮುಂದುವರಿಸದೆ ಕೂಡಲೇ ನಿಲ್ಲಿಸ ಬೇಕೆಂದು ವಿನಯವಾಗಿ ಈ ಸಭೆಯು ಪ್ರಾರ್ಥಿಸುತ್ತದೆ

ಈ ಸಭೆಯ ಮೇಲ್ಕಂಡ ಠರಾವನ್ನು ಶ್ರೀ ಕಾಶೀ ಜಗದ್ಗುರುಗಳವರಿಗೂ ಶ್ರೀ ರಂಭಾಪುರಿ ಜಗದ್ಗುರು ಗಳವರಿಗೂ ಶ್ರೀ ಉಜ್ಜಯನೀ ಜಗದ್ಗುರುಗಳವರಿಗೂ ಶ್ರೀಕೇದಾರ ಜಗದ್ಗುರುಗಳವರಿಗೂ ಅಧ್ಯಕ್ಷರು ಕಳುಹಿಸಿ ಬೇಕೆಂದು ಈ ಸಭೆಯು ನಿರ್ಧರಿಸುತ್ತದೆ ಮತ್ತು ಎಲ್ಲ ಪತ್ರಿಕೆಗಳಿಗೂ ಕಳುಹಿಸಿ ಪ್ರಚಾರಮಾಡಲು ತೀರ್ಮಾನಿಸಿದೆ.

ಬೆಂಗಳೂರು ರಿಟ್ಟೈರ್ಡ್ ಚೀಫ್ ಜಸ್ಟೀಸ್ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ

ಶ್ರೀ ಪಿ ಮಹದೇವಯ್ಯ, ಬಿ ಎ, ಬಿ ಎಲ್ ರವರು

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯಸಿಂಹಾಸನ ಜಂಗಮವಾಡೀ ಸಮಸ್ತ ಮೇನೇಜರ್ ಶ್ರೀ ರಾಮಚಂದ್ರಶಾಸ್ತ್ರಿಗಳಿಗೆ ಬರೆದ ಪತ್ರ

ಸ್ವಸ್ತಿಶ್ರೀ,

ನಿಮ್ಮ ೧೩-೪-೧೯೩೪ ನೇ ತಾರೀಖಿನ ರಿಜಿಸ್ಟರ್ ಪತ್ರವು ಮತ್ತು ಶ್ರೀ ಕೇದಾರೀಪೀಠದ ವಿಷಯದಲ್ಲಿ ದಾಖಲ್ಮಾಡಬೇಕೆಂದಿರುವ ದಾವೇದ ನಕಲೂ ಸಹ ತಲಪಿಸಿದ್ದಾಗಿದೆ. ಶ್ರೀ ರಂಭಾಪುರೀ ಜಗದ್ಗುರುಗಳ ಅಪ್ಪಣೆಯಂತೆ ಸದರಿ ದಾವೆಯ ನಕಲನ್ನು ನಮ್ಮ ಒಪ್ಪಿಗೆಗಾಗಿ ಕಳುಹಿಸಿರುವಂತೆ ಕಾಗದದಲ್ಲಿ ಹೇಳಿರುತ್ತೀರಿ. ಆದರೆ ಸದರಿ ಜಗದ್ಗುರುಗಳಿಂದ ಈ ವಿಚಾರವಾಗಿ ನಮಗೆ ಯಾವ ಪತ್ರವೂ ಬಂದಿರುವುದಿಲ್ಲ. ಈ ದಾವೆಯು ವೀರಶೈವ ಜನಾಂಗದ ಹಿತಕ್ಕೆ ಬಹಳ ಅಪಾಯಕರವಾಗಿದೆ. ಇದಕ್ಕೆ ನಮ್ಮ ಒಪ್ಪಿಗೆಯನ್ನು ಎಂದಿಗೂ ಕೊಡುವುದಿಲ್ಲ.

ಶ್ರೀ ಕೈಲಾಸಲಿಂಗರು ನ್ಯಾಯಸಮ್ಮತವಾಗಿ ಆರಂಭಿಸಿರುವ ವ್ಯಾಜ್ಯದ ಅಪೀಲು ತೀರ್ಮಾನವನ್ನು ಇಂಥಾ ವುದೇ ಮಾನವ ಪ್ರಾಣಿಯಾಗಿರುತ್ತದೆ. ಇದನ್ನು ಯಾರೂ ಅಲಕ್ಷಿಸುವ ಹಾಗಿಲ್ಲ, ಮತ್ತು ಇದು ನಿಮ್ಮ ದಾವೆಯಲ್ಲಿಯೇ ಒಪ್ಪಲ್ಪಟ್ಟಿದೆ ಶ್ರೀ ಕೈಲಾಸಲಿಂಗರ ವ್ಯಾಜ್ಯದ ಅಪೀಲು ತೀರ್ಮಾನವು ವೀರಶೈವ ಜನಾಂಗದ ಹಿತಕ್ಕೆ ವಿರೋಧವಾಗಿ ಪರಿಣಮಿಸಿದರೇನೇ, ಜನಾಂಗದ ಪರವಾದ ದಾವೆಯನ್ನು ಹೂಡುವ ಅವಶ್ಯಕತೆಯ ಪ್ರಶ್ನೆಯು ಉಭವಿಸುವುದು. ಅಂತಹ ದಾವೆಯನ್ನು ಈಗಲೇ ಆಖರಾಗಿ ಕೋರ್ಟಿನಲ್ಲಿ ದಾಖಲ್ಮಾಡುವ ಅವಶ್ಯಕತೆ ಇದುವುದಿಲ್ಲ ಮತ್ತು ವಿಮಿಟೇಷನ್ ಬಾಧ್ಯತೆ ಇರುವುದಿಲ್ಲ.

ನಿಮ್ಮ ಅಪೇಕ್ಷೆಯಂತೆ ದಾವೆಯ ಫಲಲನ್ನು ಎಳ್ಳು ರೀಕೆಯಿಂದ ಪರೀಕ್ಷಿಸಿರುತ್ತೇನೆ ನನ್ನ ಅಭಿಪ್ರಾಯದಲ್ಲಿ ದಾವೆಯ ರಚನೆಯೇ ವಕ್ರಸ್ವರೂಪವಾಗಿರುತ್ತದೆಂದು ಹೇಳಲು ವ್ಯಸನಪಡುತ್ತೇನೆ ಇದರಿಂದ ಬುದ್ಧಿಭ್ರಮ ಣೆಯು ಹೊರಹೊಮ್ಮುತ್ತಿರಿದೆ ಅಖಂಡಾಚಾರ್ಯಾ ಅಂಗೀಕೃತವಾಗಿ ಬಂದಿರುವ ವೀರಶೈವಮತದ ಸ್ವಂಂಪ್ರ ದಾಯಗಳೇ ಇದರಲ್ಲಿ ತಲೆಕೆಳಕುಮಾಡಲ್ಪಟ್ಟಿವೆ ಸಶ್ರ ಮಾಣಗಳಿಗೂ, ಸುಪ್ರಸಿದ್ಧ ಪಂಡಿತರ ಕೋಧಪೆಯ ನಿರ್ಧಾರಗಳಿಗೂ ವಿರುದ್ಧವಾದ ಅಪಸ್ಮಾರಗಳೂ ಇವೆ. ಇದು ಬಹಳ ಅಪಹಾಸ್ಯವಾಗಿರುತ್ತದೆ. ಇದಲ್ಲದೆ ಕಾನೂನು ಮತ್ತು ವಿದ್ವಮಾನ್ಯಗಳ ದೃಷ್ಟಿಯಿಂದ ಪ್ರಬಲವಾದ ಲೋಪದೋಷಗಳೂ ದಾವೆಯಲ್ಲಿರುತ್ತವೆ. ಅವುಗಳ ದೆಸೆಯಿಂದ ದಾವೆಯೇ ವಜಾ ಆಗುವ ಸಂಭವ ಬಹಳವಾಗಿರುತ್ತದೆ. ಆದರೆ ಅವುಗಳನ್ನು ತಪ್ಪಿಲಾಗಿ ಪರಿಶೀಲಿಸುವುದು ಈಗ ಅನಾವಶ್ಯಕ. ಅಲಹಾಬಾದ್ ಹೈಕೋರ್ಟಿನಲ್ಲಿರುವ ಶ್ರೀ ಕೈಲಾಸಲಿಂಗರ ಅಪೀಲಿನ ಅಪೆರುತೀರ್ಮಾನ ವೀರಶೈವ ಜನಾಂಗದ ಹಿತಕ್ಕೆ ವಿರೋಧವಾಗಿ ತೀರ್ಮಾನವಾದ ಪಕ್ಷದಲ್ಲಿ, ಆಗ ಲೋಪ ದೋಷಗಳನ್ನೆಲ್ಲಾ ತಪ್ಪಿಲಾಗಿ ಪರೀಕ್ಷಿಸಿ ಮಾಡುವ ಪ್ರಶ್ನೆಯು ಉದ್ಭವಿಸುವುದು ಈ ವಿಚಾರವನ್ನು ಮೇಲೆಯೇ ತಿಳಿಸುತ್ತೇನೆ

ಈಗ ಈ ದಾವೆಯನ್ನು ಈ ರೂಪದಲ್ಲಿ ಹೂಡಿದ್ದೇ ಆದರೆ ವೀರಶೈವ ಸಮಾಜಕ್ಕೆ ದೊಡ್ಡ ಅನರ್ಥವೇ ಆದೀತು ಇದನ್ನು ಜೆನ್ನಾಗಿ ಗಮನಿಸಕಕ್ಕದ್ದು.

ಪ್ರಕಾಶಕ

ಬೆಂಗಳೂರು ಮಹಾಚಾರ್ಯ ಶಕ್ತಪ್ರಕಾಶಕ
ತಾ॥ ೨೯-೪-೧೯೩೪ ವಿ. ರು. ಹೊಸಮಕ, ಧಾರವಾಡ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ನೈರಾಶ ಕ್ಕು ಕಂಚಮಿಗೆ ೩೭ ವರ್ಷಗಳು ತುಂಬಿ ೩೮ ನೆಯ ವರ್ಷವು ಪ್ರಾರಂಭ ವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿ ರುವ ಸಜ್ಜನರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾ ದಾರರಿಗೂ ೮ ಆಣೆ ಹೆಚ್ಚಿಗೆ ಬೀಳುವುದು. ದಿಮುಕರಿಂದ ಚಂದಾದಾರರೆಲ್ಲರೂ ಕೂಡಲೇ ೩ ರೂಪಾಯಿಗಳನ್ನು ಮನಿಆರ್ಡರ್ ಮಾಡಾ ಕಳುಹಿಸಬೇಕು. ಯಾವ ಗ್ರಾಮದಲ್ಲಿ ಏಕೇ ಚಂದಾದಾರರುವರೋ ಆ ಗ್ರಾಮ ದಲ್ಲಿರುವ ಅಭಿಮಾನಿಗಳು ಚಂದಾದಾರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇಸಾರಿ ಮನಿಆರ್ಡರ್ ಮಾಡಿಸ ಬೇಕು. ಹೀಗೆ ಮಾಡುವುದರಿಂದ ಸರ್ವರಿಗೂ ಒಳ ರಾಗುತ್ತದೆ. ಮನಿಆರ್ಡರ್ ಮಾಡದೆ ಚಂದಾ ದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನೆಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು.

—ಮ್ಯಾ-

ಪಂಚಾಚಾರ್ಯಪ್ರಭಾ

೧೯೩೫ ನೆಯ ಮೇ ತಾ|| ೧೭ ನೇ ಸೋಮವಾರ

ಭಸ್ಮ ಮಹಿಮೆ

(ಶ್ರೀಶಿವರಹಸ್ಯ ದಕ್ಷಯಾಂಶ ಪೂರ್ವಾರ್ಧೇ)

ಪರಮೇಶ್ವರನ ಸಮ್ಮೋಜಾತಮುಖದಿಂದ ಕೃಷ್ಣವರ್ಣವು ಕಪಿಲವರ್ಣವೆಂದು ನಾಮಕವಾದ ಗೋರೂಪದಿಂದ ಜನಿಸಿತು ವಾಮದೇವ ಮುಖದಿಂದ ಜಲವು ಶಪ್ಪುವರ್ಣದ ಭದ್ರಾನಾಮಕವಾದ ಗೋರೂಪದಿಂದ ಜನಿಸಿತು ಅಘೋರಮುಖದಿಂದ ಅಗ್ನಿಯು ರಕ್ತವರ್ಣದ ಸುರಭಿನಾಮಕವಾದ ಗೋರೂಪದಿಂದ ಪ್ರಕಾಶಿತವಾಯಿತು ತತ್ಪುರುಷಮುಖದಿಂದ ವಾಯುವು ಬಿಳಿಯ ಬಣ್ಣದ ಸುಶೀಲನಾಮಕ ಗೋರೂಪದಿಂದ ಹುಟ್ಟಿತು ಈಶಾನಮುಖದಿಂದ ಆಕಾಶವು ಚಿತ್ರವರ್ಣದ ಸುಮನಾ ಎಂಬ ಗೋರೂಪದಿಂದ ಕಾಣಿಸಿತು ಈ ಪ್ರಕಾರ ಪರಮಾತ್ಮನ ಪಂಚಮುಖಗಳಿಂದ ಸೃಷ್ಟಿದ ಪಂಚಭೂತಾತ್ಮಕಗಳಾದ ಗೋವ್ಯಗಳು ಗೋಮಯದಿಂದ ವಿಭೂತಿ, ಭಸಿತ ಭಸ್ಮ ಕ್ಷಾರ ರಕ್ಷಾ ಎಂಬ ಇದು ವಿಧವಾದ ಭಸ್ಮಗಳು ಜನಿಸಿದವು ಹೀಗೆ ಪಂಚಮೂರ್ತಿಸ್ವರೂಪವಾದ್ದರಿಂದ ಭಸ್ಮಕ್ಕೆ ಭೂತಿ (ವಿಭೂತಿ) ಯಂಬುದು ಕಾರಣ ನಾಶಕವಾದ್ದರಿಂದ ಭಸ್ಮವೆಂದೂ ಸ್ವೀಕರಿಸಿಕೊಳ್ಳುವಾಗ ಕಷ್ಟವಿಪಾರಕವಾಗಿರುವುದರಿಂದ ಭಸಿತವೆಂದೂ, ರಕ್ಷಿಸುವುದರಿಂದ ರಕ್ಷಾ ಎಂದೂ ಈ ಐದು ನಾಮಗಳು ಭಸ್ಮಕ್ಕೆ ತತ್ಸಂಧರ್ಕಗಳಾಗಿವೆ ಅಗ್ನಿಯು ಅವರ್ಣ ಬೇರೆ ಬೇರೆ ಯಜ್ಞಾಗಳಲ್ಲಿ ಬೇರೆ ಬೇರೆ ಅರ್ಥಾತ್ಮಕವಾಗಿ ನಾಮಾಂತರಗಳನ್ನು ಪಡೆಯುವ ಪ್ರಭುತ್ವವು ಇದ್ದ ಹಾಗೂ ಬಹುರೂಪದಿಂದ ಪ್ರಕಾಶಿಸುತ್ತದೆ ನಿರ್ಗುಣವಾದ ಪರಶಿವನಿಗೆ ಅಗ್ನಿ ಸೂರ್ಯ ಎಂಬ ಎರಡು ಶರೀರಗಳು ಲೋಕಪ್ರಿಯಾಗಿ ಉತ್ಪನ್ನವಾಗಿವೆ ಆದರಲ್ಲಿ ಅಗ್ನಿ ದೇಹವು ರಕ್ತವರ್ಣವು ಆಗಿ ಸೂರ್ಯನಾದ ತೇಜಸ್ಸಿಗೆ ಆಶ್ರಯವಾಗಿದ್ದಿದೆ ಎಂದರೆ ಅದರ ಸೂಚನೆ ರೂಪವು ಇವ ತಮಿಯಾದಿದ್ದ ಕತ್ತಲೆಯಿಪ್ಪುವಾದಮ್ಮಿ ಶಾಸ್ತ್ರಜ್ಞಾನವಿದ ಸದಮಲಿ ಕಾಣಿಕ್ಕಮ್ಮು ಎಂದರೆಲ್ಲ ತಮಸ್ಸಾದ ತೇಜಸ್ಸು ನಿದ್ರೆ ಕಲೆಗಳು ಎಂದಿನಿಂದ ಪ್ರಪಂಚದಲ್ಲಿ ಕಂಡ ಜಿವ ಬಿಳಿಯ ಮತ್ತು ಸೂಕ್ಷ್ಮವಾದ ಸಕಲ ಶರೀರಗಳೂ ಶಿವನ ರಸ ಮತ್ತು ತೇಜೋರೂಪವಾದ ಶರೀರದಿಂದ ವ್ಯತ್ಪತ್ತಿಯಾಗಿವೆ ಆದರಿಯಂಗ ತೇಜಸ ಶರೀರವು ಸೂರ್ಯ, ಅಗ್ನಿ ರೂಪದಲ್ಲಿ ತೋರಿಮಿಂಚು ಸಿಡಿಲುಗಳಂತೆ ಪ್ರಕಾಶಕ್ಕೆ ಭಯವನ್ನುಂಟು ಮಾಡುವುದು ರಸವು ಮಧುರಾದಿ ಗುಣಗಳಿಂದ ಪ್ರಪಂಚವನ್ನು ರಕ್ಷಿಸುವುದು ಒಟ್ಟಿನಲ್ಲಿ ಈ ಜಗತ್ತು ಈಶ್ವರನ ತೇಜಸ್ಸು ಮತ್ತು ರಸರೂಪಗಳಿಂದ ಆವರಿಸಲ್ಪಟ್ಟಿರುವುದು

ಅಗ್ನಿಯಿಂದ ಅಮೃತವೂ ಅಮೃತದಿಂದ ಅಗ್ನಿಯೂ ಉತ್ಪನ್ನವಾಗಿರುವುದು ಆದ್ದರಿಂದ ಈ ಅಗ್ನಿಸೋಮ ದೇವತೆಗಳಿಗೆ ಸರ್ವ ಯಜ್ಞದಲ್ಲಿಯೂ ಹವಿರ್ಭಾಗವಿರುವುದು. ಹವಿಸ್ಸಿನಿಂದಲೇ ಪ್ರಜಂತಕ್ಕೆ ಸಸ್ಯಸಂಪತ್ತು, ವೃಷ್ಟಿಲಾಭವೂ ದೊರಕುವುದು ದೇವತೆಗಳೂ ಹವಿಸ್ಸಿನಿಂದಲೇ ತೃಪ್ತರಾಗುವರು ಇದರಿಂದ ಈ ಪ್ರಪಂಚವು ಅಗ್ನಿಸೋಮಾತ್ಮಕವೆಂಬುದು ಸಿದ್ಧವಾಯಿತು.

ಶಿವನ ತೇಜೋವಿಶೇಷವು ಊರ್ಧ್ವಭಾಗಕ್ಕೆ, ಅಗ್ನಿ ದೇಹವು ಅಧೋಭಾಗಕ್ಕೆ ವ್ಯಾಪಿಸಿರುವುದು ಈ ದ್ವಿವಿಧ ಶಕ್ತಿಯು ಅಗ್ನಿಸೋಮದೇಹದಿಂದ ಜಗತ್ತೇ ವ್ಯಾಪ್ತವಾಗಿದೆ. ಅಗ್ನಿಯು ಮೇಲ್ಭಾಗದಲ್ಲಿ ಜ್ವಲಿಸುತ್ತಿರುವುದು ಅಗಲೇ ಅಧಃಶಕ್ತಿರೂಪವಾದ ಸೋಮವು ಸ್ವರ್ಗವಾದೊಡನೆಯೇ ಅದರಲ್ಲಿ ಅಮೃತವೆಂಬುದಾಗಿ ಲೋಕಕ್ಷೇಮವುದೆಂದು ಅಡ್ಡಿಂದ ಕಾಲಾಗ್ನಿಯು ಮೇಲು ಲೋಕವನ್ನೆಲ್ಲಾ ದಹಿಸುವಾಗ ಸೋಮದೇವತೆಯು ಅಧೋಲೋಕಗಳನ್ನೆಲ್ಲಾ ಮುಳುಗಿಸಿಬಿಡುವುದು

ಆದಾರಶಕ್ತಿಯಿಪಿದ ಶಿವಶಕ್ತಿಯಿಂದಲೇ ಕಾಲಾಗ್ನಿಯು ಊರ್ಧ್ವಲೋಕಗಳನ್ನು ಅವರಿಸುವುದು. ಅಜೀವ ಶಕ್ತಿಯಿಂದಲೇ ಸೋಮವು ಅಧೋಲೋಕಗಳನ್ನೆಲ್ಲ ಮುಚ್ಚುವುದು ಅಂತು ಶಿವನ ಆಧಾರದಿಂದ ಶಕ್ತಿಯೂ ಶಕ್ತ್ಯಾಧಾರದಿಂದ ಶಿವನೂ ಜಗತ್ತನ್ನೆಲ್ಲಾ ವ್ಯಾಪಿಸಿರುವರು ಆದ್ದರಿಂದ ಶಿವ-ಶಕ್ತಿಯರಿಂದ ಅಕ್ಯಮಸಲ್ಪಡದಿರುವ ಜಗತ್ತೇ ಇಲ್ಲ ಈ ಜಗತ್ತು ಎಷ್ಟೋಸಾರಿ ಆಗ್ನಿಯಿಂದ ದಗ್ಧವಾಗಿ ಹೋಗಿದೆ ಆ ದಗ್ಧಭಸ್ಮಗೇ ಅಗ್ನಿ ವೀರ್ಯವೆಂಬ ಹೆಸರಿನಿಂದ ಭಸ್ಮವೆನಿಸಿದೆ ಈ ಅಗ್ನಿ ವೀರ್ಯಕ್ಕೆ ಸೋಮನಿಂದ ಶಾಂತಿ ದೊರಕದಿದ್ದರೆ ಶಕ್ತಿಯನ್ನು ಕೊಡಲಾರದು ಅಲ್ಲದೆ ಸೋಮಸಂಬಂಧವಿಲ್ಲದ ಅಗ್ನಿಯೂ ಶಕ್ತಿಯುತವಾಗಲಾರದು ಇದನ್ನು ತಿಳಿದು ಅಗ್ನಿನೀರ್ಯವೆನಿಸಿದ ಭಸ್ಮಕ್ಕೆ ಶಕ್ತಿಯನ್ನು ಸ್ಥಿರಪಡಿಸಿಕೊಳ್ಳಬೇಕು

ಅಗ್ನಿಸ್ತೋಮ ಸಂಪಾದಿತವಾದ ಭಸ್ಮವಿಧಿಯು ವೇದಗಳಿಗೂ ತಿಳಿಯದೆ ವಿಷಯ ಮತ್ತು ಅದು ಅತಿ ರಹಸ್ಯವಾಗಿರುವುದೆಂದು ಪರಶಿವನೇ ತಿಳಿಸಿರುವನು ಯಾವನು ಶಕ್ತಿಸೋಮಾತ್ಮಕವಾದ ಭಸ್ಮಧಾರಣೆಯಿಂದ ಶುದ್ಧನಾಗಿ ಶಿವಾಗ್ನಿಯಲ್ಲಿ ತನ್ನ ದೇಹವನ್ನು ಅಂತರ್ಹುತ ಗೊಳಿಸುವನೋ ಅವನು ನಾಶರಹಿತವಾದ ದೇವತ್ವವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ ಯಾವ ಭಸ್ಮಧಾರಿಯು ಶಂಕರನಲ್ಲಿ ಸ್ಥಿರಮನಸ್ಸುಳ್ಳವನಾಗಿರುವನೋ ಅವನು ಜ್ಞಾನಿಯೆನಿಸಿ ಜಗತ್ತು ಅಗ್ನಿಸೋಮಾತ್ಮಕವಾದುದೆಂಬುದನ್ನು ತಿಳಿಯುವನಲ್ಲದೆ ಶಿವನಲ್ಲಿಯೇ ಹುಟ್ಟಿ ಕೊನೆಗೆ ಶಿವನಲ್ಲಿಯೇ ಲಯವಾಗುವುದೆಂಬುದನ್ನು ಅರಿಯುವನು ಈ ಭಸ್ಮವಿಂದ ಲೇಪಿತವಾದ ಅಂಗವುಳ್ಳ ಶಾಂಭವರು ಪುಣ್ಯಾವಿಶೇಷದಿಂದ ಪ್ರಕಾಶಿಸುವ ಆತ್ಮೇ ಅಲ್ಲದೆ ಶ್ವೇತಾದ್ರಿಯಿಂದ ಜನಿಸಿದ ಚಂದ್ರ, ಅಧಿವೇಷ, ವೇಗಾಗ್ನಿ ಮೊದಲಾದ ಪವಿತ್ರ ಪಸ್ಯುಗಳಿಂದ ಜಲಂಕೃತನಾದ ತಿರಲಿಂಗವನ್ನು ಆಚರಿಸುವವರಾಗಿ ವಿಶಿಷ್ಟ ಚಾದ ತೇಜಸ್ಸಿನಿಂದ ವಿರಾಜಿಸುವರು ಯಾರು ಈ ಪವಿತ್ರವಾದ ವಿಭೂತಿಯಿಂದ ಪ್ರಿಪುಂಡ್ರಧಾರಣೆಮಾಡಿಕೊಂಡು ಶಿವಾರ್ಚನೆಮಾಡುವರೋ ತವರು ಸಾನಿಧರಿಗಾಗುವರಲ್ಲದೆ ಅಂಬರ ಸಂಚಕ ವೃಳ್ಳವರೂ ಸರಿಸಾಟ್ಟಿ ಸೊಳ್ಳುವರು ಪುಣ್ಯಭೂಮಿಯಲ್ಲಿ ವಾಸಿಸುತ್ತ ಶ್ರಿ ಶಿತ್ರತಿಜಾದಿಕವಾದ ಭಸ್ಮತ್ರಿಪುಂಡ್ರವನ್ನು ಧರಿಸುತ್ತ ಶ್ರ ಕೌಪನ್ನು ದಾನಿಸ ವನರು ಸಂಸಾರ ಸಾಗರನನ್ನು ದಾಟಿ ಹರಶಿವಸಾನ್ನಿಧ್ಯವನ್ನು ಹೊಂದುವರು ಭಸ್ಮವು ಮೊರಾರಿಯಾದ ಶಂಕರನ ನಾಲ ನೇತ್ರಕ್ಕೆ ಲಲಂಕಾರಪಾಯವಾಗಿರುವುದು ಎಂಬಂತೆ ಯನ್ನು ಸಮ್ಮೂಲಗೊಳಿಸುವುದು ಚಿತ್ರರುದ್ರಾಕ್ಷಿಗಳಿಸಿ ಜನಕ್ಕೂಂಕರ ಸ್ಮರಣೆಯನ್ನು ಸ್ಥಿರ ಕೊಡುವುದು ಮತ್ತು ಜ್ಞಾನಾದಾಯಕವಾಗಿರುವುದು ಬ್ರಹ್ಮನೂ ಸಹ ಈ ಭಸ್ಮವನ್ನು ತ್ರಿಪುಂಡ್ರರೇಖೆಯ ಲ್ಲಿ ಧರಿಸಿಕೊಂಡಿರುವನು ಆದ್ದರಿಂದ ಜಾತಿಭೇದವಿಲ್ಲದೆ ಎಲ್ಲರೂ ಈ ಭಸ್ಮವನ್ನು ಧರಿಸಬಹುದು ದ್ವಿಜರಂತೂ ಧರಿಸಲೇಬೇಕೆಂದು ವೇದಶಾಸನವಿದೆ ಒಟ್ಟಿನಲ್ಲಿ ಭಸ್ಮವೆಂಬುದು ವಿಹಿತದಲ್ಲಿ ಸುಖ ಕೀರ್ತಿ ಮೊದಲಾದುವುಗಳನ್ನು ಕೊಟ್ಟು ಶಿವೋಶ್ವರಜ್ಞಾನವನ್ನುಂಟುಮಾಡಿ ಕೊನೆಗೆ ಶಿವಸಾನ್ನಿಧ್ಯವನ್ನು ಒದಗಿಸಿಬಿಡುವುದು

ಭಸ್ಮತ್ರಿಪುಂಡ್ರವನ್ನು ಬ್ರಹ್ಮ ವಿಷ್ಣು ಶಿವಾತ್ಮಕವೆಂದು ಭಾವಿಸಬೇಕು ದೇಹದಲ್ಲಿ ಒಟ್ಟು ಮೂವತ್ತೆರಡು ಅಥವಾ ಹದಿನಾರು ಅಥವಾ ಎಂಟು ಅಥವಾ ಐದು ಸ್ಥಾನಗಳಲ್ಲಿ ಧರಿಸಬೇಕು ಯಾವ ಬ್ರಾಹ್ಮಣನು ಭಸ್ಮತ್ರಿಪುಂಡ್ರವನ್ನಿಡುವನೋ ಅವನು ಸಕಲ ವಿದ್ಯೆಯುಳ್ಳ ಗುರುಮುಖದಿಂದ ಪಡೆದಂತಾಗುವನು. ವರ್ಣಾಶ್ರಮ ಧರ್ಮಹೀನನಾಗಿದ್ದರೂ ಧರ್ಮಲೋಪನಾಡಿದ್ದರೂ ಭಸ್ಮಧಾರಣೆಮಹಿಮೆಯಿಂದ ಅವಶ್ಯಗೆ ಮುಕ್ತಿಯು ಲಭಿಸುವುದು ಭಸ್ಮವಿಲ್ಲದೆ ಮಾಡಿದ ಯಾವ ಕಾರ್ಯವೂ ಮುಕ್ತಿಪ್ರದವಾಗಲಾರದು ರುದ್ರಾಗ್ನಿಯ ವಿರ್ಯವೇ ಈ ಭಸ್ಮವಾದುದರಿಂದ ಭಸ್ಮಧಾರಿಯು ಸರ್ವಲೋಕ ಗಳಲ್ಲಿಯೂ ಶೂರವಿಘಿಸುವನು ಸರ್ವಶಾಸ್ತ್ರಗಳೂ ಭಸ್ಮ ವಾಗುವವು ಯಾರು ತಮ್ಮ ಮುಖ ಶಿರಸ್ಸು ತೋಳು, ಭುಜ, ಉದರ ಮುಂತಾದ ಭಾಗಗಳಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸುವರೋ ಅವರು ಯಮಸದನವನ್ನು ನೋಡಲಾರರು ಅಲ್ಲದೆ ಪರಶಿವನ ಕೃಪೆಯಿಂದ ಶಿವ ಸಾಯುಜ್ಯವನ್ನು ಹೊಂದುವರು ಕುಭೃಂ ಪವಿತ್ರವೂ ಆದ ಭಸ್ಮವನ್ನು ಧರಿಸಿದವನು ಪ್ರತಿ ಜನ್ಮದಲ್ಲಿಯೂ ವಿಶ್ವಶ್ರೀಶಾಲಿಯಾಗುವನು. ವಿಧಿಪೂರ್ವಕವಾಗಿ ಶಿವನನ್ನು ಪೂಜಿಸಿದವನು ಭಾಗ್ಯಪೂರ್ಣನಾಗುವನು. ಎಷ್ಟೇ ವೇದವೇದಾಂತಗಳಲ್ಲಿ ನಿಷ್ಣಾತನಾಗಿದ್ದರೂ ಭಸ್ಮತ್ರಿಪುಂಡ್ರವಿರಹಿತನಾಗಿದ್ದರೆ ಅಂಥವನು ತಪ್ಪ ಪಂಕವಕ್ಕೇ ನಾಶಗೊಳಿಸುವನು ಅವನಿಗೆ ಎಂಥ ನರಕವಾಸವು ತಪ್ಪಿದ್ದಲ್ಲ ಪಶು, ಪಕ್ಷಿ, ಪುತ್ರಾದಿಗಳಲ್ಲಿ ಅತಿಯಾಗಿ ಬಿಟ್ಟು ಸ್ನಾನ ಭಸ್ಮಧಾರಣೆ ಶಿವಪೂಜೆಗಳಲ್ಲಿ ತುದಿಸ್ಸುಳ್ಳೆ ವನು ಮುಕ್ತಿಸಾಮ್ರಾಜ್ಯವನ್ನು ದೊರಕಿಸಿಕೊಳ್ಳುವನು ಎಂದು ಕುಮಾರಸ್ವಾಮಿಯು ಜೈಗೀಷವ್ಯಮಹರ್ಷಿಗೆ ಭಸ್ಮಮಹಿಮೆಯನ್ನು ಬೋಧಿಸಿರುವನು.

ಪತ್ರವ್ಯವಹಾರ

[ಬಾಹ್ಯದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಜಗದ್ಗುರು ಜಯಂತಿ ಮಹೋತ್ಸವಗಳು

ಚಿತ್ರದುರ್ಗ

ಚಿತ್ರದುರ್ಗದ ಕೆಳಕೋಟೆಯಲ್ಲಿ ಬುಧವಾರ ತಾ|| ೫-೫-೩೫ ದಿವಸದಲ್ಲಿ ಶ್ರೀ ಜಿ| ದಾರುಕಾಚಾರ್ಯರ ಮತ್ತು ಶ್ರೀ ಬಸವೇಶ್ವರರ ಜಯಂತಿ ವಿಜೃಂಭಣೆಯಿಂದ ನಡೆಯಿತು. ಈರೀತಿ ವೀರಶೈವಮತಸ್ಥಾಪಕಾಚಾರ್ಯರ ಮತ್ತು ವೀರಶೈವ ಧರ್ಮೋದ್ಧಾರಕ ಶ್ರೀ ಬಸವೇಶ್ವರರ ಜಯಂತಿಯ ಹೊಣೆಗಿ ಭಕ್ತಿ ಎಂಬ ತೈಲವೆರೆದು ಪ್ರಕಾಶಮಾಡಿದ ಬಸವಣ್ಣ ನವರ ಉತ್ಸವವನ್ನು ನಡೆಸುವುದು ಪ್ರತಿಯೊಬ್ಬ ಧಾರ್ಮಿಕನ ಕರ್ತವ್ಯ ಈ ಉತ್ಸವಕ್ಕೆ ಭಾಗಿಗಳಾದ ಮಾನಿಸಿಲ್ ಕೌನ್ಸಿಲರ್ ಶ್ರೀ ಕೆ ಎಸ್ ಮುರಿಗೆಪ್ಪನವರೂ, ಶ್ರೀ ಪಟೇಲ್ ಚಿಂದ್ರಶೇಖರಪ್ಪ ಮತ್ತು ಶ್ರೀ ರುದ್ರಪ್ಪನವರೂ ವಿಶೇಷ ಆಸಕ್ತಿಯಿಂದ ಕಾರ್ಯ ನೆರವೇರಿಸಿದರು ಶ್ರೀ ಉಜ್ಜಯನೀ ಮಹಾಧ್ಯಕ್ಷರಾದ ಶ್ರೀ ಷ|| ಬ್ರ|| ಶಿವ ಪ್ರಕಾಶಶಾಮಿಗಳವರು 'ಯುಗಸ್ತವಕರ್ಕ ಬಸವಣ್ಣ' ಎಂಬ ವಿಷಯವಾಗಿ ಭಾಷಣಮಾಡಿದರು ಈ ಸಾರಿ ಇಲ್ಲಿ ಶ್ರೀ ದಾರುಕಾಚಾರ್ಯರ ಜಯಂತ್ಯುತ್ಸವನನ್ನೂ ನೆರವೇರಿಸಿದ್ದು ಮೂಲಕರ್ತೃಗಳನ್ನು ಮರೆಯದಂತಾಗಿದೆ ಎಂದು ಹೇಳಿದ್ದಲ್ಲದೆ ಮಂತ್ರಾಧಿಕಾರಿಗಳು ಶಾಸ್ತ್ರನೇತ್ರ ರಾಗಿ ಪದಾಚಾರಿಗಳಾಗಿ ಧರ್ಮಪ್ರಚಾರಮಾಡಬೇಕೆಂದು ತಿಳಿಸಿದರು

ಚಂದ್ರಶೇಖರಯ್ಯ

ಗಂಗಾವತಿ

ಶ್ರೀ ಮದ್ವೀರಶೈವ ಪಂಚಾಚಾರ್ಯ ಧರ್ಮಾರ್ಥ ಶ್ರೀವಿದ್ಯಾ ಪಾಠಶಾಲಾಧ್ಯಪ್ಪರಾದ ಶ್ರೀ ಷ|| ಬ್ರ|| ರುದ್ರ ಮುನಿಸ್ವಾಮಿಗಳು ಬೂದಗುಪ್ಪ ತಾಲ್ಲೂಕಾಜ್ಯಮತಿ ಇವರ ನೇತೃತ್ವದಲ್ಲಿ ಇಡೀ ವೈಶಾಖ ಶು|| ೩ ಬುಧವಾರ ಬ್ರಾಹ್ಮೀಮುಹೂರ್ತದಲ್ಲಿ ರಂಭಾಸ್ತಂಭಗಳಂದ ಅಲಂಕೃತವಾದ ಉನ್ನತ ತಾಸವದಲ್ಲಿ ಶ್ರೀ ಜಿ| ವೀರೇಗಾಮಾರಾಧ್ಯರ ವಿಗ್ರಹವನ್ನಿಟ್ಟು ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಸುಮಂಗಲಿಯರಿಂದ ಆರತಿ ಅದಮೇಲೆ ಸಕಲ ಭಕ್ತಮಾಹೇಶ್ವರರು ಕೂಡಿ ಪಲ್ಲಕ್ಕಿಯಲ್ಲಿ ವಿಗ್ರಹವನ್ನಿಟ್ಟು ೧೧ ಘಂಟೆಯಿಂದ ಮೆರವಣಿಗೆಯಿಟ್ಟಿದ ಹೊರಟು ಅಲ್ಲಲ್ಲಿ ಕಾಯಿಕರ್ಪೂರಗಳಿಂದಲೂ ಮತ್ತು ಪಂಚಾಚಾರ್ಯ ಭಜನಾಸಂಘದಿಂದಲೂ ಬ್ಯಾಂಡು ಮೊದಲಾದ ವಾದ್ಯಗಳಿಂದ ಕೂಡಿ ಸ್ಥಾಪಿ ಬಸವೇಶ್ವರ ದೇವಾಲಯಕ್ಕೆ ಹೋಗಿ ತಿರುಗಿ ಬಂದಷಂತರ ಭೂರಿಗಣಾರಾಧನೆ ಜರುಗಿತು ೬ ಘಂಟೆಯಿಂದ ಸಭೆನೇರಿ ಜಗದ್ಗುರುಗಳು ಪರಮಾತ್ಮನ ಆಜ್ಞೆಯಂತೆ ಭೂಲೋಕ ದಲ್ಲಿ ಅವತರಿಸಿ ಶಕ್ತಿವಿಶಿಷ್ಟಾದ್ವೈತಮತವನ್ನು ಸ್ಥಾಪಿಸಿದ ವಿಷಯವನ್ನು ಕುರಿತು ಭಾಷಣಗಳಾದ ಮೇಲೆ ಮಹಾಜಾರ್ಯರಿಗೆ ರಾಷ್ಟ್ರೀಕರಣ ಮಾಡಿ ಜಯ ಘೋಷಮಾಡಿನೆ ಕಾರ್ಯಕ್ರಮವು ಮುಕ್ತಾಯಗೊಂಡಿತು ಆದರಂತೆಯೇ ವೈಶಾಖ ಶು|| ೫ ಶುಕ್ರವಾರ ದಾರುಕಾಚಾರ್ಯರ ಜಯಂತಿಯು ಆಚರಿಸಲ್ಪಟ್ಟಿತು.

ಒಬ್ಬ ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಮಹುಳಸಿದ್ಧೇಶ್ವರ ರಥೋತ್ಸವ ಉಜ್ಜಯನಿ

ಬಳ್ಳಾರಿ ಜಿಲ್ಲಾ, ಉಜ್ಜಯನೀ ಸದ್ಧರ್ಮಸಿಂಹಾಸನಾಧಿಷ್ಠಿತ ಮಹಾಪೀಠದ ಶ್ರೀ ಮರುಳಸಿದ್ಧೇಶ್ವರರ ರಥೋತ್ಸವವು ಶಾ ೭-೪-೩೫ ನೇ ಶುಕ್ರವಾರ ವೈಭವದಿಂದ ಜರಿಯಿತು. ಸಾಕಷ್ಟಾಲ ಬಿನ್ನಿಸ್ಯ ಶ್ರೀ ಪರಮಾಚಾರ್ಯವರ್ಯಾಗಳಾದ ಶ್ರೀ ಜ|| ಸಿದ್ಧಲಿಂಗತಿರಾಚಾರ್ಯ ಮಜಾಸ್ವಾಮಿಗಳವರ ಸೂಚನೆ ಗಮ್ಮಗೆಯ ಪ್ರಕಾರ್ಯಾಪೀಠಾಧ್ಯಕ್ಷರಾದ ಶ್ರೀ ಸಿದ್ಧೇಶ್ವರತಿರಾಚಾರ್ಯಸ್ವಾಮಿಗಳವರಿಂದ ನೆರವೇರಿತು. ಅನಂತರ ಶ್ರೀಸ್ವಾಮಿಯವರ ಅಧ್ಯಕ್ಷತೆಯಲ್ಲಿ ಚಿತ್ರದುರ್ಗದ ಉಜ್ಜಯಿನೀ ಮಹಾಪೀಠದ ಶ್ರೀ ಶಿವಪ್ರಕಾಶಸ್ವಾಮಿಗಳವರು ಇಂದಿನ ಆಧುನಿಕ ಜಗತ್ತಿನಲ್ಲಿ ಧರ್ಮಪೀಠಗಳ ಕರ್ತವ್ಯ ಮತ್ತು ಪಾರಿತ್ಯಗಳ ಬಗ್ಗೆ ಭಾಷಣಮಾಡಿದರು. ಶ್ರೀಸಿದ್ಧಲಿಂಗಜಗದ್ಗುರುಗಳ ಆದರ್ಶ ಜೀವನದ ಬಗ್ಗೆ ವಿವರಿಸಿದ್ದಲ್ಲದೆ ಶ್ರೀ ಮುಸ್ಸೂರು ಹುಳ್ಳಾಗಲಿಂಗ ದೇಶಿಕೇಂದ್ರರು ಅನೇಕ ವರ್ಷಗಳಿಂದ ಕಳ್ಳಿಸುತ್ತ ಬಂದ ಈ ಉತ್ಸವವನ್ನು ಗುರುಗಳು ಶ್ರದ್ಧೆಯಿಂದ ಪೂರ್ಣಗೊಳಿಸಿದುದು ಅಭಿನಂದನೀಯವೆಂದು ತಿಳಿಸಿದರು. ಪೀಠದ ಶ್ರೇಯಸ್ಸಿಗೆ ಶುಭಚಿಹ್ನೆಯಾದ ಈ ಕಾರ್ಯವು ಉತ್ತರೋತ್ತರ ಪೀಠದ ಅಭಿವೃದ್ಧಿಗೆ ಕಾರಣವಾಗಲಿ, ಕರ್ಮಯೋಗಿ ಸಿದ್ಧರಾಮರಂತೆ ಆತ್ಮ-ಜ್ಞಾನ ದಾಸೋಹದಿಂದ ಸೇವೆಸಲ್ಲಿಸುವ ಶ್ರೀ ಮುಸ್ಸೂರು ಹುಳ್ಳಾಗಲಿಂಗ ದೇಶಿಕರಿಗೆ ಸರ್ವಭಕ್ತರು ಧನಸಹಾಯದಿಂದ ಪ್ರೋತ್ಸಾಹಿಸಬೆಯಲ್ಲಿ ಪೀಠಕ್ಕೆ ಶ್ರೇಯಸ್ಸನ್ನು ಉಂಟು ಮಾಡಲೆಂದು ಮತ್ತು ವಿದ್ವಾಂಸರಾದ ಉಪಾಚಾರ್ಯರು ಪೀಠದ ಸೇವೆಯಲ್ಲಿ ನಿರತರಾಗಲೆಂದು ಕೋರಿದರು. ಎರಡನೇ ದಿವಸ ಅನೇಕ ವಿದ್ವಾಂಸರಿಂದ ಧಾರ್ಮಿಕ ಭಾಷಣಗಳಾದವು ಅನ್ನ ದಾಸೋಹ ವ್ಯವಸ್ಥೆಯು ಚೆನ್ನಾಗಿ ನಿರವೇರಿತು.

ಸಿ ಚಂದ್ರಶೇಖರಯ್ಯ

ಶ್ರೀನುಡ್ಡಿಭೂತಿಪುರಮಠದ ಪಟ್ಟಾಧಿಕಾರ ಮಹೋತ್ಸವಾಹ್ವಾನಪತ್ರಿಕಾ

ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಖಾನಾ ಕಾಖಾಮರವಾದ ಬೆಂಗಳೂರು ತಾಲೂಕು ಶ್ರೀಮನ್ನಿಡುಭೂತಿಪುರಮಠದ ಪಟ್ಟಾಧಿಕಾರವನ್ನು ಶ್ರೀ ರಂಭಾಪುರೀ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ನೇತೃತ್ವದಲ್ಲಿ ವಿಜಾಪುರ ಜಲ್ಲೆಯ ವರ್ತಮಾನಿ ಗ್ರಾಮದ ಹಿರೇಮಠದ ವೇ|| ಶಿವಯ್ಯನವರ ಸುಪುತ್ರ ವೇ|| ಚನ್ನಬಸವಾರ್ಯರಿಗೆ ಕೊಡುವ ಬಗ್ಗೆ ಶಾ|| ಶ|| ೧೪೭೬ ಜಯ ನಾಮಸಂವತ್ಸರದ ವೈಶಾ ಖ|| ೭ ಸೋಮವಾರ (೨೪-೪-೩೫) ದಿವಸ ಸಿಂಹಲಗ್ನದಲ್ಲಿ ಬ್ರಹ್ಮೇಶದೇಶ ಮತ್ತು ಮಾದ್ರಾಪ್ರದಾನದಿ ಕಾರ್ಯಗಳು ವಿಧೂಪುರ ಮಠದಲ್ಲಿ ಜರಿಸಲ್ಪಟ್ಟು ಪಟ್ಟಾಧಿಕಾರವು ಕೊಡಲ್ಪಡುವುದು.

ಪಟ್ಟಾಧಿಕಾರದ ಅಂಗವಾಗಿ, ಇದೇ ಲಗ್ನದಲ್ಲಿ ವೀರಶೈವ ಮಟುಗಳಿಗೆ ತಿವಿರಿಣ್ಣಾ ಸಂಸ್ಕಾರವೂ, ರಾತ್ರಿ ಶ್ರೀ ವೀರೇಶ್ವರಸ್ವಾಮಿಯ ಉತ್ಸವವೂ, ಅರಿತಿ, ಅಗ್ನಿಕುಂಡ ಸೇವೆಯೂ ಸಹ ಜರಿಸಲ್ಪಡುವುವು

ಈ ಮಹಾ ಗುರುದೇವತಾ ಕಾರ್ಯಕ್ಕೆ ಸರ್ವರೂ ಆಗಮಿಸಿ ಶ್ರೀ ವೀರೇಶ್ವರ ಮತ್ತು ಶ್ರೀ ರಂಭಾಪುರೀ ಜಗದ್ಗುರುಗಳವರ ದರ್ಶನಾಶೀರ್ವಾದಗಳಕ್ಕೂ ಪಡೆದು ಕೃತಾರ್ಥರಾಗಬೇಕೆಂದು ಕೋರಲಾಗಿದೆ

ದೀಕ್ಷಾಸಂಸ್ಕಾರ ಹೊಂದಲು ಬರತಕ್ಕ ಮಟುಗಳು ನಾಲ್ಕು ದಿನ ಮುಂಚೆವಾಗಿ ಪ್ರತ್ಯಮುಬೇಕು ಬೆಂಗಳೂರು ಸಿಟಿ ಚಿಕ್ಕಪೇಟೆ ಮತ್ತುಂಡಿಮಠದ ಮೇನೇಜರವರಿಗೆ ತಿಳಿಸತಕ್ಕದ್ದು. ಮಟುಗಳು ತಮಗೆ ಬೇಕಾದ ಅರಿಶಿಷ ಅಡ್ಡಿದ ೨ ಪಂಚೆ, ೧ ವಸ್ತ್ರ, ಯಥಾಶಕ್ತಿ ದಕ್ಷಿಣೆ ಸಹ ತರತಕ್ಕದ್ದು.

ವಿಶೇಷ ಸೂಚನೆ.—ಶ್ರೀಮದ್ಭಿಭೂತಿಪುರಮಠವು ಬೆಂಗಳೂರಿಂದ ೬ ಮೈಲಿ ದೂರದಲ್ಲಿರುವ ವಿಮೋ ಸ್ಟೇಷ್ ಫ್ಯಾಕ್ಟರಿಯ ಬಳಿ ಇದೆ. ಬೆಂಗಳೂರಿಂದ ವಿಮೋಸ್ಟೇಷ್ ಫ್ಯಾಕ್ಟರಿಗೆ ಸರಿಸ್ ಬಸ್ಸುಗಳ ಸೌಕರ್ಯವಿದೆ.

ಬಳಸೆಯ ಶರಣಸಮ್ಮೇಳನ ಬಿಜಾಪುರ

ಉಭಯ ಪೂಜ್ಯರ ಕೋಶಗಳಿಟ್ಟು ಹಿರೇಮಠದ ಹಿರಿ ಸ್ಥಿರ ಪಟ್ಟಾಧ್ಯಕ್ಷರಾದ ವೈಕ್ಯಳಾಕ್ಷ ಶ್ರೀ||ಷಷ್ಠಬ್ರಹ್ಮ ಸಮಾಜದ ತಿವಾಜಾರ್ಯರು ಮಾತಿದ ಆರಂಭಭಾಷಣ.

ಮಾನ್ಯ ಅಧ್ಯಕ್ಷರೆ ಶರಣಶರಣಿಯರೆ—ಶ್ರೀ ಜಗದೇಶ್ವರನ ಜಪ್ಯದಿವಸವಾದ ಇಂದಿನ ಶುಭ ದಿವಸವೆಂದರೆ ಅತ್ಯಲು ಸೃಷ್ಟಿಯೂ ಈ ಶುಭಘಳ್ಳಿವೇಳದಲ್ಲಿ ಇತಿಹಾಸ ಪ್ರಸಿದ್ಧವಾದ ಈ ಬಿಜಾಪುರದಲ್ಲಿ ಜರುಗಿರುವ ಏಳನೆಯ ಶರಣಸಮ್ಮೇಳವಷ್ಟು ಸ್ಥಾರಂಭೋತ್ಸವವನ್ನು ನೆರವೇರಿಸುವ ಭಾಗ್ಯ ಪ್ರಾಪ್ತವಾದುದಕ್ಕೆ ಮತಿಮಾಪಂದ ವೆಫಿಸಿದೆ.

ಬಿಜಾಪುರವು ಪ್ರಸಿದ್ಧ ಸುಪ್ಪೇಕ್ಷ ತನ್ನ ಆಚಾರ ಕ್ರಿಯಾ ಯೋಗಕ್ಷೆಯಿಂದ ಪರಿತಿವಪಷ್ಟು ಕಂಡ ಶರಣರಾದ ಶ್ರೀ ತಿವಲಿಂಗಕ್ಷಪ್ಪನವರಿಗೆ ಜಷ್ಟವಿಕ್ಕ ಗ್ರಾಮಯಿದಾಗಿದೆ. ಶ್ರೀ ಭಕ್ತಮಹದ ತಿವಯೋಗಿಗಳಷ್ಟು ಪ್ರೇಮಮಿಂದ ಅಗಮಿಸುವಂತೆ ಕಾರ್ಯಸ್ಫೈದ ಗ್ರಾಮ. ಬಿಜಾಪುರವು ಪವಿತ್ರ ಸುಕ್ಷೇತ್ರವೆನ್ನಲು ಶ್ರೀಶೈಲ' ಮಲ್ಲಿಕಾರ್ಜುನ ದೇವಸ್ಥಾನವು ಫಿಮ್ಮಲ್ಲೇ ಇರುವ ದೊಂದು ಮಹತ್ಕಷ್ಟಯ್ಯ ಅಲ್ಲದೆ ಇಲ್ಲಿ ಅಷಾರತೀಲರು ಭಕ್ತಿವಂತರು ಕ್ರಿಯಾಸಕ್ತರು ಉದಮಿಸಿ ತಮ್ಮ ಲಿಂಗ ನಿಷ್ಠೆಯಿಂದ ಕಳ್ಬುಗಿರ ಶರಣರನ್ನು ಅಗಮನ ಮಾಡಿ ಕೊಂಡು ದರ್ಶನಲಾಭ ಪಡೆದುದೇ ಸಾಕ್ಷಿ

ಬಂಧುಗಳೆ, ಇಂದು ಮಾನವನು ದಾಸವೆನಾಗಿದ್ದಾನೆ ಎಲ್ಲಿ ನೋಡಿದರು ಅನಾಚಾರ ಅತ್ಯಾಚಾರ ಸ್ವಾರ್ಥ ಅಧಿಕಾರ ಲಾಲಸೆಯ ಕರ್ಜಕರೋರ ಕೃತ್ಯಗಳು ತಾಂಡವವೈತ್ಯ ಪಡಿಸಿವೆ ಇಂದು ಜಗತ್ತು ನವನಾಗರಿಕತೆಯ ಥಳಕುಬಳಕಿನಿಗೆ ಮೆಚ್ಚಿ ತನ್ನ ಛಿನತೆ ಗಾಂಭೀರ್ಯ ಸ್ಥಾಚೇನಕೆಯೆನ್ನಲ್ಲ ಮರೆತು ಅಜ್ಞಾನ ಅಂಧಕಾರಮಯ ವಾಗಿದೆ ಕ್ರಾಂತಿಯ ನಂತರ ಶಾಂತಿ ಅನ್ಯಾಯದ ನಂತರ ನ್ಯಾಯ ನೈಜೋರುಬಂತೆ ಇಂದು ಎಲ್ಲೆಲ್ಲಿಯೂ ಶರಣರ ಆಗಮನದ ಕುರುಹುಗಳು ಕಾಣಾಶಕ್ತಿವ್ಯ ನುಡಿ ಜನತೆಯ ಉಜ್ವಲ ಭವಿಷ್ಯದ ಶುಭಸೂಚನೆಯಂದೇ ನನ್ನ ಭಾವನೆ

ಸಬಿಕ ಮಹಷೀಯರೆ, ಇಂದು ಜಗತ್ತಿನಲ್ಲಿ ಶಾಂತಿ ಸಾಗಿ ಹಾಹಾಕಾರವೆದ್ದಿದೆ ಜನ ನೆಮ್ಮದಿಯಿಂದ ಬಾಳಬೇಕಾಗಿದೆ ನೆಮ್ಮ ಪೂರ್ವಜರ ಮಾರ್ಗವನ್ನು ಅನುಸರಿಸಿ ನಡಿಯದೆ ನಮ್ಮ ಬಾಳಿನಲ್ಲಿ ಅನ್ಯಾಯ ಅನಾಚಾರಗಳು ಪ್ರವೇಶಮಾಡಿದ್ದೇ ಇದಕ್ಕೆ ಕಾರಣ ವಾಗಿದೆಯೆಂಬ ಅಭಿಪ್ರಾಯ ಎಷ್ಟುಯಿಲ್ಲಾ ಅದರೆ ನೆಮ್ಮ ನಡತೆಯನ್ನು ನಾವು ತಿದ್ದಿಕೊಂಡು ಸದಿಚ್ಛಾ ಪೂರಿತರಾಗಿ ಶರಣಾ ತತ್ವಕ್ಕೆ ಮರಿಹೋದಾಗಲೆ ನೆಮಗೆ ಅನಾಂತಿ ಅನ್ಯಾಯದ ವಜ್ರಮುಷ್ಟಿಯಿಂದ ಬಿಡುಗಡೆ ಯಾಗುವದು ಖಂಡಿತವೆನೆಂದು ತಿಳಿಯತಕ್ಕದ್ದು ನಾಡಿನ ಹಿಂದಿನ ಹಿರಿಮೆಯನ್ನು ಮತ್ತೆತ್ತಿಮ್ಮೆ ಮೊರೆಸಿಕೊಡುವುದಕ್ಕೆ ಶರಣಸಮ್ಮೇಳನ ಕರೆಯಿತ್ತಿದೆ ನಾವುಗಳೆಲ್ಲರು ಭಗವಂತನ ಮಕ್ಕಳು. ಊಟು ಉಳಿದೆ ತಾಯಿಯು ಮಗುವಿಗೆ ಹಾಲುಕೊಡುವುದಿಲ್ಲ ಅದರಂತೆ ನಾವು ಭಕ್ತಿಭಾವಶೆಗಳಿಂದ ಶರಣರ ತತ್ವಕ್ಕನುಸಾರವಾಗಿ ಜೀವನವನ್ನು ಪೂಜಿಸಿದ್ದಾದರೆ ನೆಮ್ಮ ಕಷ್ಟಗಳು ದೂರಾಗು ವವು ಸಮ್ಮೇಳನದ ಅಧ್ಯಕ್ಷರಾಗಿ ಆಗಮಿಸಿದ ಶ್ರೀ ಬಿ ಎಸ್. ಎಂ ಹಂದ್ರಾಳೇಶ್ವರಶಾಸ್ತ್ರಿಗಳು ವಯೋ ವೃದ್ಧರೂ ಜ್ಞಾನವೃದ್ಧರೂ ಶಾಸ್ತ್ರ ಅಶೀತಪಥದ ಸುಖಕ್ಕಾಗಿ ಶ್ರಮಿಸಿದವರೂ ಶರಣಸಮ್ಮೇಳನಗಳ ಸಂಘಟಕರು, ಇಂಥವರು ಅಧ್ಯಕ್ಷರಾಗಿ ದೊರೆತದ್ದು ನಮ್ಮೆಲ್ಲರ ಮಹದ್ಭಾಗ್ಯವೆಂದೇ ತಿಳಿಯಬೇಕಾಗಿದೆ. ಇನ್ನು ನಮ್ಮೆಲ್ಲರ ಮುಂದೆ ಆಪಾರವಾದ ಕಾರ್ಯಕ್ರಮಗಳಿವೆ. ಕಾಗಿ ತಮ್ಮ ಹೆಜ್ಜು ವೇಳೆಯನ್ನು ತೆಗೆದು ಕೊಳ್ಳದೆ ಏಳನೆಯ ಶರಣಸಮ್ಮೇಳವಷ್ಟು ಶ್ರೀ ಶಂಕರರು ಳ್ಳದೆಯೋ ಬಿಭುವಷ್ಟು ಅಶುಗ್ರಹಿಸಲೆಂದು ಪ್ರಾರ್ಥಿ ಸುತ್ತ ಏಳನೆಯ ಶರಣಸಮ್ಮೇಳವಷ್ಟು ಪ್ರಾರಂಭವಾಗ ಲೆಂದು ಸಾರಿ ಫಮ್ಮನ್ನೆ ಉದ್ಯುಟಿಕರಣ್ಣಾಗಿ ನಿಯಮಿ ಸಿದ ಸ್ವಾಗತಸಮಿತಿಗೆ ಅಶೀರ್ವದಿಸಿ ಈ ನೆಪ್ಪೆ ಚಿಳ್ಳೆ ಪ್ರಾರಂಭ ಭಾಷಣವನ್ನು ವಿರಾಮಗೊಳಿಸುತ್ತೇನೆ.

ಶರಣಾರಿಗೆ ಜಯವಾಗಲಿ

ಶ್ರೀ ಹಿ. ಎ. ಪಟೇಲ ಜೀವರಿಗಿ ಇವರಿಗೆ ಉತ್ತರ

ಶ್ರೀವು ತಾ ೨೬ ಎಪ್ರಿಲ್ ೧೯೩೫ ನೆಯ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಗುರುವರ್ಗದ ಉಪಾಧ್ಯಕ್ಷರು ಉತ್ತರಿಸಬಲ್ಲರೇ ಎಂಬ ತಿರೀರೇಷನೆಯಿಂದ ಪ್ರಜಾಪತಿಸಿರುವುದನ್ನು ನೋಡಿದ ಕೂಡಲೆ ನಮ್ಮ ಗುರುವರ್ಗದ ಉಪಾಚಾರ್ಯರು, ಪವಿತ್ರ ಸಂಸ್ಥಾನ ವೀರಕ್ಷೇತ್ರ ಧರ್ಮಗುರುಗಳಾಗಿದ್ದು, ಧರ್ಮಜಾಗೃತಿಯನ್ನು ಮಾಡಿದೆ, ಜಡ ಜಡ ಅಮಾತ್ಯಾಗಳಷ್ಟು ದೇಶದೆ, ಭಕ್ತವೃಂದ ತಿಶ್ಚಯಮುಖಾಯದ ಮನೆಗಳಲ್ಲಿ ಆನಂದಮಂಯಂತು ಕಾಣಿಕೆಯನ್ನು ಕೈಕೊಂಡು ಸ್ವೇಚ್ಛಾವಿಹಾರಗಳಾಗಿರುವ ಉಪಾಚಾರ್ಯರಿಗೆ ಎಚ್ಚರಿಕುತ್ತಿರಬೆಂದು ಪ್ರಾರ್ಥಿಸಿದ್ದೆವು, ಸಂಪುಣ್ಣ ೬೨ ನೋಡಲಾಗಿ ತನ್ನೊಡನೆ ಪ್ರತ್ಯಕ್ಷವಿದೆ ಎಂದು ತಿಳಿದುಕೊಂಡು ಜ್ಞಾನಾಗ ಫಿಜಿಸ್ತಿತಿಯನ್ನು ತಿಳುಹಬೇಕಾಯಿತು

ಮಾಳಕವೆಯಲ್ಲಿ ಅಖಿಲ ಭಾರತೀಯ ವೀರಶೈವ ಗುರುವರ್ಗದ ಅಧಿವೇಶನವು ಪಂಡಿತ ವೇ|| ಶ್ರೀ ಜಗದೀಶಶಾಸ್ತ್ರಿಗಳ ಅಧ್ಯಕ್ಷತೆಯಿಂದ ನಡೆದಾಗ ಅಲ್ಲಿ ನೆರೆದಿದ್ದ ಉಪಾಚಾರ್ಯರ ವತಿಯಿಂದ (೩೫) ರೂಪಾಯಿಗಳು ಸಂಗಡವಾಗಿ ಶ್ರೀ ಷ|| ಬ್ರ|| ಹುಟಿಗಿ ವೀರಭದ್ರಸ್ವಾಮಿಗಳ ಸ್ವಾಧೀನದಲ್ಲಿ ಕೊಟ್ಟು ಗುರುವರ್ಗ ದರ್ಪಣವೆಂಬ ಗ್ರಂಥವನ್ನು ಹೊರತಿಸಬೇಕೆಂದು ನವಗೆ ಸಂಪಾದಕ ಪದವಿಯನ್ನು ಕೊಟ್ಟರು ಆ ಅಧಿವೇಶನದಲ್ಲಿ ೬೮ ಜನ ಉಪಾಚಾರ್ಯರಿದ್ದರು ಅವರಿಗೆ ಮೇಲಿದ ಮೇಲೆ ಟಪಾಲು ಮೂಲಕ ವಿಚಾರಿಸಲಾಗಿ ವರ್ಷದ್ದಿಗೆ ೨೪ ಜನ ಶ್ರೀಗಳ ಮತದ ಟಿಪ್ಪಣಿಗಳು ಮಾತ್ರ ಬಂದ ವಲ್ಲದೆ ಹೆಚ್ಚಿನ ಇತಿಹಾಸಗಳು ಬರಬಿಲ್ಲ ಇತಿಹಾಸಗಳು ಅಲ್ಪ ಹೆಣ್ಣೂ ಅಶ್ಲೀಲವಾಗಿ ಗ್ರಂಥಪ್ರಕಾಶವು ನಿಂತಿತು. ಕೆಲವು ಕಾಲದ ಮೇಲೆ ಹುಟಿಗಿ ಶ್ರೀಗಳು ಹಣವನ್ನು ನೆನ್ನ ಸ್ವಾಧೀನದಲ್ಲಿ ಕೊಟ್ಟರು ಮುಂದೆ ಎರಡು ವರ್ಷಗಳ ನೋಲೆ ಹಡಗಲಿ ಪುರಾಣೀಕಮಠದ ವಿರೂಪಾಕ್ಷ ಶಾಸ್ತ್ರಿಗಳು ನಾವು "ಗುರುವರ್ಗದರ್ಪಣ ಗ್ರಂಥವನ್ನು ಹೊರಡಿಸುವೆವು ನಿಮ್ಮಲ್ಲಿರುವ ಮಾಳಕವರೆಯ ಹಣವನ್ನು ಳಕುಬಲೇಕೆಂಮ" ೪ ೬ ಪತ್ರಿಕೆಗಳನ್ನು ಲಿಖಿಸಿದರು ನಾವು ನಾಲ್ವಾರ ಪಂಡಿತರು ಮತ್ತು ಹುಟಿಗಿ ಶ್ರೀಗಳ ಅಪ್ಪಣೆಯಾದರೆ ಕೊಡುವೆನೆಂದು ಉತ್ತರ ಕೊಟ್ಟೆವು ಕಡೆಗೆ ಅಧ್ಯಕ್ಷ ಪಂಡಿತ ನಾಲ್ವಾರಶಾಸ್ತ್ರಿಗಳು ಹುಟಿಗಿ ಶ್ರೀಗಳೂ ನೆಪ್ಪಿಲ್ಲಿರುವ ಹಣವನ್ನು ಪುರಾಣೀಕಮಠದ ವಿರೂಪಾಕ್ಷಶಾಸ್ತ್ರಿಗಳಿಗೆ ಮುಟ್ಟಿಸು ವಂತೆ ಪತ್ರಮುಖಾಂತರ ತಿಳಿಸಿದರು. ಅದರಂತೆ ನಾನು (೩೪) ಮಳಗಳ ಟಪ್ಪಣಿಯನ್ನು ಮುಂಚೆ ಳಳುಬಿ ೨೩೬ ರೂಪಾಯಿಗಳನ್ನು ಮಣಿಯೂರ್ಡರ ವ್ಯಾಂಗ ಪಂ|| ವಿರೂಪಾಕ್ಷಶಾಸ್ತ್ರಿಗಳಿಗೆ ಮಟ್ಟಿಸಿ, ನಾಲ್ವಾರ ಪಂಡಿತರಿಗೂ ಹುಟಿಗಿ ಶ್ರೀಗಳಿಗೂ ಟಪಾಲು ಮೂಲಕ ತಿಳುಹಿಸಿದೆನು. ಜೀವರಿಗೆ ಪಾಟೀಲರೂ, ಪ್ರಭಾತಕ್ಕೆ ಕೆಯಾವಾಡಕರು ಗುರುವರ್ಗ ಮಹಾಕಯರು ನಪ್ಪಲ್ಲೇಕಾದರೂ ದೋಷಗಳು ಕಂಡುಬಂದಲ್ಲಿ ತಿಳುಹಬೇಕೆಂದು ಕೂಡುವ.

ಳಲ್ಲಾಬುರಿ ಜನಪ್ರಾಧಿರೀ ಹಿರೇಮಠದ
ಶ್ರೀ|| ಷ|| ಬ್ರ|| ಶಾಂತವೀರತಿವಾಚಾರ್ಯರು.

ಪಂಜಾಬು ರಾಜಧಾನಿಯ ನಿರ್ಮಾಣಕ್ಕಾಗಿ ಕೇಂದ್ರದ ಸಾಲ

ಪಂಜಾಬಿನ ಎಂಬಲ್ಲಿ ರಾಜಧಾನಿಯ ನಿರ್ಮಾಣಕ್ಕಾಗಿ ಪಂಜಾಬು ಸರ್ಕಾರಕ್ಕೆ ೭೫ ಲಕ್ಷರೂಪಾಯಿಗಳನ್ನು ಸಾಲ ವಾಗಿ ಕೊಡಲಾಗಿದೆಯೆಂದು ಮೋಡಿಸರ್ಕಾರಿ ತಂಡ ಕಾಸಿನ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಿ ಆರ್. ಭಗತ್‌ರವರು ತಿಳಿಸಿರುವರು. ೧೯೩೪-೩೫ ರಲ್ಲಿ ಕೊಡಬೇಕಾದ ಹಣವು ಇನ್ನೂ ವಿರ್ಜಾಯಿಸಲ್ಪಟ್ಟಿಲ್ಲ ಪಂಜಾಬು ಸರ್ಕಾರವು ೧೯೩೪-೩೫ ರಲ್ಲಿ ರಾಜಧಾನಿಯ ಯೋಜನೆಗಾಗಿ ೧೬೮ ಲಕ್ಷರೂಪಾಯಿಗಳನ್ನು ಕೇಳಿದೆ ಈ ವಿಷಯವು ಇನ್ನೂ ಪರ್ಯಾಲೋಚನೆಯಲ್ಲಿರುವೆ ಎಂದು ಶ್ರೀ ಭಗತ್‌ರವರು ತಿಳಿಸಿದ್ದಾರೆ.

ವರ್ತಮಾನಸಂಗ್ರಹ

ಬೊಂಬಾಯಿ ಮಹಾರಾಷ್ಟ್ರಕ್ಕೆ ಸೇರಲಿ

ಮಧ್ಯಪ್ರದೇಶದ ಎಂಟು ಮರಾಠಿ ಮಾತನಾಡುವ ಜಿಲ್ಲೆಗಳು, ಹೈದರಾಬಾದಿನ ಮೂರು ಜಿಲ್ಲೆಗಳು ಮತ್ತು ಬೊಂಬಾಯಿ ಪ್ರಾಂತದ ಖಾಂಡೇಶ ಜಿಲ್ಲೆಯನ್ನು ಸೇರಿಸಿ ಮಹಾ ವಿದರ್ಭದೇಶವನ್ನು ರಚಿಸಬೇಕೆಂದು ಮುಂಬೈ ನಲ್ಲಿ ಮಹಾ ವಿದರ್ಭದ ಕಾಂಗ್ರೆಸ್ಸಿನ ಪ್ರಾಗ ಮಧ್ಯಪ್ರದೇಶದ ಆರ್ಥಿಕ ಸಚಿವರಾದ ಶ್ರೀ ಬ್ರಜಲಾಲ್ ಬಿಯಾನಿಯವರು ಮಾತನಾಡುತ್ತಾ ತಿಳಿಸಿದರು ಅವರು ಮುಂದುವರೆದು ಬೊಂಬಾಯಿ ನಗರವನ್ನು ಮಹಾರಾಷ್ಟ್ರ ಪ್ರಾಂತಕ್ಕೆ ಸೇರಿಸಬೇಕೆಂದು ತಿಳಿಸಿದರು.

ಹೈದರಾಬಾದ್ ಸಂಸ್ಥಾನದ ವಿಭಜನೆ

ಆಗಕ್ಕೆನೆಂದು ಆಂಧ್ರಮಹಾಸಭೆಯ ಕೆರೆ

ಹೈದರಾಬಾದ್ ಸಂಸ್ಥಾನದ ಆಂಧ್ರಮಹಾಸಭೆಯು ಪ್ರಾಂತಗಳ ಪುನರ್ವಿಂಗಡಣಾ ಸಮಿತಿಗೆ ವಿಜ್ಞಾಪನಾ ಪತ್ರವೊಂದನ್ನು ಸಲ್ಲಿಸಿರಿ. ಹೈದರಾಬಾದ್ ಸಂಸ್ಥಾನವನ್ನು ಕೂಡಲೇ ವಿಭಜಿಸಬೇಕೆಂದೂ, ವಿಶಾಲಾಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳನ್ನು ರಚಿಸಬೇಕೆಂದೂ ಆಂಧ್ರಮಹಾಸಭೆ ಕೋರುತ್ತದೆ ಮುಂದಿನ ತಿಂಗಳು ಇಲ್ಲಿ ನಡೆಯುವ ವಿಶಾಲಾಂಧ್ರ ಸಮ್ಮೇಳನಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ ಆಹ್ವಾನಿಸಲಾಗುವುದು.

ರಾಜಾಸ್ಥಾನದಲ್ಲಿ ನೀರಾವರಿ ತೆರಿಗೆಗಳ ಏರಿಕೆ

ರಾಜಾಸ್ಥಾನದಲ್ಲಿ ನೀರಾವರಿ ತೆರಿಗೆಗಳನ್ನು ಸರ್ಕಾರವು ಏರಿಸಿರುವುದರಿಂದ ಜನರಲ್ಲಿ ಕಳವಳವೇರ್ಪಟ್ಟಿದೆ ಇತ್ತೀಚೆಗೆ ಚಳುವಳಿ ಕೂಡ ನಡೆಯಿತು ಕರನಿರಾಕರಣ ಚಳುವಳಿಯ ಬೆದರಿಕೆಯ ಅನೇಕಕಡೆ ಕಂದಾಯ ವಸೂಲು ಮಾಡುವುದೇ ಕಷ್ಟವಾಗಿತ್ತು, ಈಗ ಪರಿಸ್ಥಿತಿ ಸುಧಾರಿಸುತ್ತಿದೆಯೆಂದು ಹೇಳಲಾಗಿದೆ.

ತುಂಗಭದ್ರಾ ಅಣೆಕಟ್ಟೆಗೆ ನೀರು

ಈ ವರ್ಷ ತುಂಗಭದ್ರಾ ಅಣೆಕಟ್ಟಿನಿಂದ ಮೈಸೂರು ಮತ್ತು ಆಂಧ್ರಗಳಲ್ಲಿ ಕಿಸಿಕ್ಯ ೫೦,೦೦೦ ಎಕರೆ ಭೂಮಿಗೆ ನೀರು ಬಿಡಲಾಗುವುದು ಎಂದು ಸೂಪರಿಂಟೆಂಡಿಂಗ್ ಇಂಜನೀಯರ್ ರಾವ್ ಸಾಹೆಬ್ ಕೆ.ಎಲ್.ರಾವ್ ಇವರು ಎಂದು ಸಂದರ್ಶಕರಲ್ಲಿ ಹೇಳಿದರು. "ಬಹಳ ವರ್ಷಗಳ ಕಾಲದ ಬೇಡಿಕೆಯಾಗಿದ್ದ ಜಲಸೇ ಚಾನಿಗೆ ಒಂದಿಷ್ಟು ಬದ್ಧಾಜ್ಞೆಯೊಂದಿಗೆ ರಲ್ಲಿಯೇ ಒಂದುಲಕ್ಷ ಎಕರೆಗಳಿಗೆ ನೀರು ಬಿಡಬಹುದು ಎಂದರು. ತುಂಗಭದ್ರಾ ಆಣೆಕಟ್ಟಿನ ಪಿ ಡಬ್ಲ್ಯು ಡಿ ವರ್ಕ್ಸ್ ಸಾಹಿಬ್ರರ್ತಿಯ ತಯಾರಿಕಟ್ಟುಗಳ ಆಡಿ ಎತ್ತರದ ಚಾಡಿಲಿನ್ನು ಅಣೆಕಟ್ಟಿಗೆ ಇತ್ತೀಚೆಗೆ ಜಲಸಿಸ್ಯರಾಗಿ ಜೋಡಿಸಲಾಗಿದೆ ಈ ಒಗೆಯ ಚಾಡಿಲು ಭಾರತದಲ್ಲಿ ತಯಾರಾಗಿರುವುದು ಇದೇ ಮೊದಲು ಉಳಿದ ಚಾಡಿಲುಗಳನ್ನೂ ಈ ವರ್ಷಾವಧಿಯೊಳಗೆ ತಯಾರಿಸಲಾಗುತ್ತಿದೆ ಇತರ ಅಣೆಕಟ್ಟಿನ ಯೋಜನೆಗಳಿಗಾಗಿ ಬೇಕಾಗುವ ಇಂಥ ಚಾಡಿಲುಗಳನ್ನೂ ನಮ್ಮ ವರ್ಕ್ಸಾಪಿನಲ್ಲಿ ಒದಗಿಸಿಲ್ಲದು ಮದ್ರಾಸು ವಿಭಾಗದ ಅಣೆಕಟ್ಟಿನ ಮೇಲಿನ ರಸ್ತೆಯು ಪೂರ್ಣವಾಗಿದೆ" ಎಂದು ಹೇಳಿದರು

ರೂ. ೫೦೦ ರ ಮೇಲೆ ಕಂದಾಯ ಕೊಡುವವರಿಗೆ ಸರ್‌ಚಾರ್ಜ್

ಮದ್ರಾಸ್ ಪ್ರಾಂತ್ಯದಲ್ಲಿ ಎಲ್ಲಯಾದರೂ ಸರಿಯೆ, ೫೦೦ ರೂಗಳ ಮೇಲೆ ಭೂಗಂದಾಯ ಕಟ್ಟುವವರು ಸರ್‌ಚಾರ್ಜನ್ನು ತೆರಬೇಕಾಗುತ್ತದೆ ಈ ಬಗ್ಗೆ ಮಸೂದೆಯೊಂದು ಮದ್ರಾಸ್ ವಿಧಾನಸಭೆಯಲ್ಲಿ ಅಂಗೀಕೃತವಾಯಿತು

ಶ್ರೀ ಹಂಪಿ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಧರ್ಮದರ್ಶನ

ಶ್ರೀ ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಪೀಠಾಧೀಶ್ವರ ಶ್ರೀಮಚ್ಛಂಕರಾಭಿನವ ಪರಮಪೂಜ್ಯಶ್ರೀಮಜ್ಜಗದ್ಗುರು ಸಚ್ಚಿದಾನಂದಭಾರತೀ ಮಹಾಸ್ವಾಮಿಗಳವರ ಜಯಂತಿ ಸಂ|| ವೈ|| ಶು|| ಅಕ್ಷತೃತೀಯ ಬುಧವಾರ ೫೫-೫೫-೫೪ ರಿಂದ ಇನ್ನು ಮುಂದೆ ಸಾರ್ವಜನಿಕ ಭಕ್ತಾದಿಗಳಿಗೆ ಶ್ರೀ ಹಂಪಿ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಬೆಳಿಗ್ಗೆ ೭ ಘಂಟೆಯಿಂದ ೮ ಘಂಟೆಯವರೆಗೆ ಪ್ರತಿದಿನವೂ ಫಲಪೂಜೆ, ಜಾತ್ರೆ ದಿವಸಗಳಲ್ಲಿ ಕಲವು ದಿನಗಳು ಮಾತ್ರ ಬಿಟ್ಟು ವಿರೂಪಾಕ್ಷೇಶ್ವರಸ್ವಾಮಿಯನ್ನು ನೋಡಲು ಉಚಿತ ಧರ್ಮದರ್ಶನ ವಿರ್ವಾಡು ಮಾಡಲು ಅನುಜ್ಞೆಯನ್ನಿತ್ತಿರುವುದಾಗಿ ಸ್ವಾಮಿಗಳವರ ಪರವಾಗಿ ದಿವಾಕರರು ತಿಳಿಸಿರುವುದರಿಂದ ಹಂಪೆಗೆ ಶ್ರೀ ವಿರೂಪಾಕ್ಷೇಶ್ವರನ ದರ್ಶನಕ್ಕೆ ಬರುವ ಭಕ್ತಾದಿಗಳು ಈ ಧರ್ಮದರ್ಶನದ ಲಾಭವನ್ನು ಪಡೆಯಬೇಕಾಗಿ ವಿನಂತಿ

೨೧ ರೂಪಾಯಿ ವರದಕ್ಷಿಣೆ

ಮದುವೆಯಕಾಲಕ್ಕೆ ಬೇಡುವ ವರದಕ್ಷಿಣೆಯು ೩೧ ರೂ ಗೆ ಮೀರತಕ್ಕದ್ದಲ್ಲವೆಂದು ಮುಂಬೈನ ಪ್ರಸಿದ್ಧ ಮಾರವಾಡಿ ಜನರು ಸಭೆಸೇರಿ ನಿರ್ಣಯ ಕೈಕೊಂಡಿದ್ದಾರೆ ಸಾಧ್ಯವಾದರೆ ವರದಕ್ಷಿಣೆ ಪದ್ಧತಿಯನ್ನೇ ನಿಲ್ಲಿಸಬೇಕೆಂದೂ ಈ ಸಭೆಯು ತೀರ್ಮಾನಿಸಿತು

'ಸಿ' ಮತ್ತು 'ಡಿ' ಸಂಸ್ಥಾನಗಳವರಿಗೆ ಮೆಡಿಕಲ್ ಕಾಲೇಜು ಸೀಟುಗಳು

ದೆಹಲಿ, ಅಜ್ಮೀರ್ ಹಿಮಾಚಲಪ್ರದೇಶ, ಬಿಲಾಸ್‌ಪುರ, ಮಣಿಪುರ ಕಚ್, ಭೂಪಾಲ್, ತ್ರಿಪುರ, ವಿಂಧ್ಯ ಪ್ರದೇಶ ಮತ್ತು ಅಂಡಮಾನ್ ನಿಕೋಬಾರ್—ಈ 'ಸಿ' ಮತ್ತು 'ಡಿ' ಸಂಸ್ಥಾನಗಳ ವಿದ್ಯಾರ್ಥಿಗಳಾಗಿ ಕೆಳಗೆ ಕಂಡ ಮೆಡಿಕಲ್ ಕಾಲೇಜ್‌ಗಳಲ್ಲಿ ೫೫ ಸ್ಥಾನಗಳನ್ನು ಮೀಸಲಾಗಿಡುವಂತೆ ಇಂಡಿಯಾ ಸರ್ಕಾರದವರು ವೈದ್ಯ ಸೇವಾಧಿಕಾರಿಯವರು ಸಿ ಮತ್ತು ಡಿ ಸಂಸ್ಥಾನಗಳಲ್ಲಿರುವ ಕೇಂದ್ರ ಸರ್ಕಾರದ ನೌಕರರ ಮಕ್ಕಳಿಗೂ ಈ ಸೀಟುಗಳು ಸ್ಥಾನಗಳಲ್ಲಿ ಅವಕಾಶವುಂಟು

ಮೆಡಿಕಲ್ ಕಾಲೇಜುಗಳ ಹೆಸರು

೧ ಮೆಡಿಕಲ್ ಕಾಲೇಜ್ ಅಮೃತಸರ, (೨) ೩ ಮೆಡಿಕಲ್ ಕಾಲೇಜ್ ಆಗ್ರಾ, (೫) ೩ ಸವಾಯ್ ಮಾನ್‌ಸಿಂಗ್ ಮೆಮೋರಿಯಲ್ ಮೆಡಿಕಲ್ ಕಾಲೇಜ್ ಜಯಪುರ (೩) ೪ ನುಹಾತ್ಮಾನಾಂ ಮೆಮೋರಿಯಲ್ ಮೆಡಿಕಲ್ ಕಾಲೇಜ್ ಇಂದೂರು, (೪) ೫ ಗಜರಾಜಾ ಮೆಡಿಕಲ್ ಕಾಲೇಜ್ ಗ್ವಾಲಿಯರ್, (೩) ೬ ಮೆಡಿಕಲ್ ಕಾಲೇಜುಗಳು ಮದರಾಸ್, (೩) ೭. ಮೆಡಿಕಲ್ ಕಾಲೇಜ್ ದಿಬ್ರೂಘರ್, (೧) ಒಟ್ಟು ೫೫

ಮದರಾಸು ಸರ್ಕಾರದವರು ತಮ್ಮ ಯಾವುದಾದರೂ ಒಂದು ಮೆಡಿಕಲ್ ಕಾಲೇಜಿನಲ್ಲಿ ಕೊಡುಗಸಿಂದ ಬರುವ ವಿದ್ಯಾರ್ಥಿಗಳಿಗೆ ಮತ್ತೊಂದು ಸ್ಥಾನವನ್ನು ಮೀಸಲಾಗಿಡುವುದಕ್ಕೆ ಒಪ್ಪಿಕೊಂಡಿರುವರು ಕೊಡಗಿನಲ್ಲದ್ದರಿಂದ ಛೀಫ್ ಕಮೀಸನರು ತಮ್ಮ ಸಂಸ್ಥಾನದಿಂದ ಆರ್ಹರಾದ ವಿದ್ಯಾರ್ಥಿಯನ್ನು ಆರಿಸಿ ಕಳುಹಿಸುವರು ಮೇಲ್ಕಂಡ ೫೫ ಸ್ಥಾನಗಳಿಗೆ ಆರ್ಹರಾದ ವಿದ್ಯಾರ್ಥಿಯನ್ನು ಆರಿಸುವುದಕ್ಕಾಗಿ ಇಂಡಿಯಾ ಸರ್ಕಾರದವರು ಕೇಂದ್ರ ಆರಿಕೆಸಮಿತಿಯನ್ನು ನೇಮಿಸಲು ನಿರ್ಧರಿಸಿರವರ.

ಇಂಪೆರ್ ಮೀಡಿಯೆಲ್ ಆಫೀಸ ಅದಕ್ಕೆ ಸಮನಾದ ಪರೀಕ್ಷೆಗಳಲ್ಲಿ ಕೊನೆಯಪಕ್ಷ ಶೇ ೫೦ ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದು. ವಿದ್ಯಾರ್ಥಿಯು ತಂದೆ ಅಥವಾ ಪೋಷಕರು ಸಾಸಿಸುವ ಸಂಸ್ಥಾನಗಳಲ್ಲಿರುವ ವೈದ್ಯಾಧಿಕಾರಿಗಳ ಮೂಲಕ ಈ ಅರ್ಜಿಗಳನ್ನು ನವದೆಹಲಿಯಲ್ಲಿರುವ ಡೈರೆಕ್ಟರ್ ಜನರಲ್ ಆಫ್ ಹೆಲ್ತ್ ಸರ್ವಿಸಿಗೆ ಕಳುಹಿಸಿಕೊಡಬೇಕು. ನವದೆಹಲಿಯ ಡೈರೆಕ್ಟರ್ ಜನರಲ್ ರವರಿಂದ ಈ ಸಂಬಂಧದ ಅರ್ಜಿಫಾರಂಗಳನ್ನು ಪಡೆಯಬಹುದು.

ಮೇ ತಿಂಗಳ ಎರಡನೆಯ ವಾರದಲ್ಲಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗುವ ಕ್ಷೇತ್ರಗಳಲ್ಲಿ ಅರ್ಜಿಗಳು ೧೫ನೇ ಮೇ ತಿಂಗಳ ೨೦ ನೇ ತಾರೀಖಿನೊಳಗಾಗಿ ಸಿ ಮತ್ತು ಡಿ ಸಂಸ್ಥಾನಗಳಲ್ಲಿರುವ ವೈದ್ಯಾಧಿಕಾರಿಗಳಿಗೆ ತಲುಪಿಸಬೇಕು ಇನ್ನುಳಿದ ಕ್ಷೇತ್ರಗಳಲ್ಲಿ ಬರುವ ಅರ್ಜಿಗಳನ್ನು ೧೫ನೇ ಜೂನ್ ೧೦ ನೇ ತಾರೀಖಿನವರೆಗೂ ವೈದ್ಯಾಧಿಕಾರಿಗಳು ಸ್ವೀಕರಿಸುವರು.

ವಿಧಾನಸಭೆಯ ಸ್ಪೀಕರ್

ಶ್ರೀ ಹೆಚ್. ಸಿದ್ದಯ್ಯನವರ ನಿಧನ

ಮೈಸೂರು ಸಂಸ್ಥಾನದ ಹಿರಿಯ ರಾಜಕಾರಣಿಗಳಲ್ಲಿ ಪ್ರಮುಖರಾದ ಶ್ರೀ ಹೆಚ್. ಸಿದ್ದಯ್ಯನವರು ಇಂದೇ ಮೇ ೧೪ ನೇ ತಾ|| ಶುಕ್ರವಾರ ಬೆಳಿಗ್ಗೆ ೧೦-೫೫ ಕ್ಕೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರೆಂಬ ವಾರ್ತೆಯನ್ನು ತಿಳಿಸಲು ವಿಷಾದಿಸುತ್ತೇವೆ

ಇವರು ತಿಪಟೂರ್ಗ ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ೧೯೦೧ ನೇ ಇಸವಿಯಲ್ಲಿ ಜನ್ಮವಿತ್ತು ವಿದ್ಯಾವಂತರಾಗಿ ವಕೀಲಿ ವೃತ್ತಿಯಲ್ಲಿ ಹೆಸರುವಾಸಿಯಾಗಿದ್ದರು. ಮುಂದೆ ಸ್ವಾತಂತ್ರ್ಯಸಮರದಲ್ಲಿ ಭಾಗವಹಿಸಿ ಕಾರಾಗೃಹವಾಸ ಸೇರಿದರು. ಜವಾಬ್ದಾರಿ ಸರ್ಕಾರದ ಸ್ಥಾಪನೆಯಾದ ನಂತರ ರಿವಿನ್ಯೂಮಂತ್ರಿಗಳಾಗಿ ಕೆಲಸನಮಾಡಿದರು. ಶಾಂತಿ ಔದಾರ್ಯಾದಿ ಸಕಲ ಸದ್ಗುಣಗಳು ಇವರಲ್ಲಿ ಮನೆಮಾಡಿದ್ದವು ಇವರ ಮನೆ ಯಾವಾಗಲೂ ದಾಸೋಹದ ಮರವಾಗಿರುತ್ತಿತ್ತು. ಇವರಲ್ಲಿದ್ದ ನ್ಯಾಯ ಬುದ್ಧಿ ಬಡವರಮೇಲಿನ ಕರುಣಾಭಾವನೆಗಳು ಇವರನ್ನು ಜನಪ್ರಿಯರನ್ನಾಗ ಮಾಡಿದ್ದವು. ಅಂಕ್ಯಸಮಯಕ್ಕೆ ಇವರಿಗೆ ೫೩ ವರ್ಷ ವಯಸ್ಸಾಗಿದ್ದಿತು. ಇವರ ಅಗಲುವಿಕೆಯಿಂದ ಮೈಸೂರು ಸಂಸ್ಥಾನದೆಲ್ಲಾ ದುಃಖದಲ್ಲಿ ಮುಳುಗಿದೆ ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನುಂಟು ಮಾಡಲೆಂದು ಬೇಡುತ್ತೇವೆ.

ಸಂ —

ಸಿದ್ಧಾಂತಶಿಖಾಮಣಿ

(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಶೈವಶ್ರೀ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ತಿವಯೋಗಿಶಿವಾಚಾರ್ಯರಿಂದ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವಾಗಂಗಭಾಷೆಯಲ್ಲಿದ್ದಿತು ಅದಕ್ಕೆ ಆಚೇರಿಯ ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬಹಿರಂಗಪಟ್ಟಿಲ್ಲವೆಂಬುದಕ್ಕೆ ಮಹಗಡದ ಶ್ರೀ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಪೆಟ್ಟಿಬ್ಯಾಗಿರುವ ಈ ಗ್ರಂಥದಲ್ಲಿ ಸಂದರ್ಭಾಮಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ವೀರಾಮೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ|| ಬ್ಲೂ|| ಮಹಾದೇವಯ್ಯನವರಿಂದ ಮದ್ರಾಸಿನಲ್ಲಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. 2-8-0

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brahmanathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಸ್ಪಾದೀಲೋಕಮಂ ॥

ಸಂಸ್ಥಾಪಕರು—ನಾಗಸೂರು ಬೃಹನ್ಮಠಾಧ್ಯಕ್ಷರಾದ ವೇ॥ ಸಂ॥ ಶ್ರೀ ಶಾಶೀಣಾಥಶಾಸ್ತ್ರಿಗಳವರು.

ಚಾರಿಸಿಗೆ ಚಂದಾ ೩ ರೂ.] ಸಂಪಾದಕರು—ನಾಗಸೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯಸ್ವಪರು [ವಿ. ಪಿ ಖರ್ಚು ಸೇರಿ ೩ ರೂ ೮ ಆ.

ಸಂಪುಟ ೩೮] ಸೋಮವಾರ ತಾ॥ ೨೪ ನೇ ಮೇ ೧೯೩೪ [ಸಂಚಿಕೆ ೩

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಕಡುವ ಲೇಖನಗಳಿಗೆ ಪತ್ರಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ವಿವಾಹ ಮಹೋತ್ಸವ ಬ್ರಹ್ಮಸಂದ್ರ

ತಿಪಟೂನಾ ಜಲ್ಲಾ ಹಾರನಹಳ್ಳಿಯಲ್ಲಿರುವ ಶ್ರೀ ಜಗದ್ಗುರು ಪೀಠಾಸ್ಥಾನದ ಅಸ್ಥಾನ ವಿದ್ವಾನ್ ತುಮಕೂರು ಗಂಟೇದೇವರ ಮಠದ ವೇ॥ ಗುಬ್ಬಿ ಶಿವಕಥಾಪ್ರ-ತಿಪಾದಕರಾಸ್ತ್ರಿಗಳವರ ಜ್ಯೇಷ್ಠ ಪುತ್ರ ಚಿ॥ ಸೌ॥ ಸಾರ್ವತಮ್ಮ ಎಂಬ ಕನ್ಯಾರತ್ನವನ್ನು ತುಮಕೂರು ಜಿಲ್ಲಾ ಬ್ರಹ್ಮಸಂದ್ರ ಮಠದ ವೇ॥ ಬಸವಾರಾಧ್ಯರವರ ಜ್ಯೇಷ್ಠ ಪುತ್ರ ಚಿ॥ ರಾ॥ ಬಸವರಾಜಸ್ವಾಮಿ ಎಂಬ ವರನಿಗೆ ಕೊಟ್ಟು ಇಷೇ ಜಯನಾಮ ಸಂವತ್ಸರದ ವೈಶಾಖ ತಿ॥ ೫ (ತಾ॥ ೭-೫-೩೪) ಶುಕ್ರವಾರ ವರನ ಸ್ವಗೃಹದಲ್ಲಿ ವಿವಾಹ ಮಹೋತ್ಸವವು ವಿದ್ಯುಕ್ತವಾಗಿ ವಿಶೇಷ ವೈಭವದಿಂದ ನೆರವೇರಲ್ಪಟ್ಟಿತು. ತಕ್ಷಕುಯುದಲ್ಲಿ ನೂತನ ದಂಪತಿಗಳ ಶ್ರೇಯೋಭವೃದ್ಧಿಸೂಚಕವಾದ ಶ್ರೀ ರಂಭಾಪುರೀ ಜಗದ್ಗುರು ಮಹಾಸ್ಥಾನಧಿಪತಿಯರು ಮತ್ತು ಶ್ರೀ ಮಳಲಿ ಕುಂಬೇವು ಮಹಾಧಿಪತಿಗಳಾದ ಗುರು ಜಡಪಟ್ಟಾಧ್ಯಕ್ಷರವರು ಫಲಮಂತ್ರಾಕ್ಷತೆಗಳೊಡನೆ ದಯಪಾಲಿಸಿದ ಅತೀರ್ವಾಶೀನ ಪತ್ರವನ್ನು ತುಮಕೂರು ಗೌ॥ ಹೈಸ್ಕೂಲು ಕನ್ನಡ ಸಂಶೀಕರಾದ ವೇ॥ ಬಿ ವೀರಾರಾಧ್ಯರವರು ಓದಿ ಹೇಳಿದ ತರುವಾಯ ಶ್ರೀ ಜಿ ಪಂಚಾಚಾರ್ಯರ ಜಯಜಯಕಾರವಾಗಿ ವಧೂವರರ ಕಡೆಯಿಂದ ೨ ರೂ.ಗಳು ಪ್ರಭಾವೋತ್ಸಾಹರ್ಥವಾಗಿ ಸಮರ್ಪಿಸಲ್ಪಟ್ಟವು. ಈ ಮಂಗಲ ಕಾರ್ಯದ ಸಂತೋಷಕ್ಕಾಗಿ ಸ್ಥಳೀಯ ಯಕ್ಷಗಾನ ನಾಟಕ ಕಂಪನಿಯವರಿದಾದ ಶ್ರೀ ಚಿಕ್ಕವೀರಯ್ಯನವರ ನೇತೃತ್ವದಲ್ಲಿ ನವರಸಭರಿತವಾದ ಧರ್ಮಗುಪ್ತ ಎಂಬ ಯಕ್ಷಗಾನ ನಾಟಕಾಭಿನಯನ ಪ್ರದರ್ಶನವೂ, ಆನೇಕ ವಿದ್ವತ್ಸಭೆಗಳಿಂದ ಕೇರ್ತಿಪ್ರ, ಸಂಗೀತ, ಭಾಷಣಗಳೂ ಸರಸವಾಗಿ ಪ್ರಚಲಿಸುತ್ತಿವೆ. ಶಾಲ್ಯು ದಿವಸಗಳವರೆಗೂ ಆಹೂತರಾಗಿದ್ದ ಅಧಿಕಸಂಖ್ಯೆಯ ಬಂಧು ಮಿತ್ರರಿಗೆ, ಪೌನು-ವಿಶ್ವಾಸಗಳಿಂದ ಅದರಿ ಸತ್ಕರಿಸಿದ ಶ್ರೀಮತ್ಸಂದ್ರ ಮಠದ ವೇ॥ ಬಸವಾರಾಧ್ಯ, ವೀರಾರಾಧ್ಯ, ಪಂಚುಂಡಾರಾಧ್ಯ, ಹಾಲಪ್ಪರು ಮತ್ತಿತರ ಶಿವರುದ್ರಾರಾಧ್ಯ ಇವರುಗಳ ಕಾರ್ಯದಕ್ಷತೆಯೂ, ವಿಚಕ್ಷಣತೆಯೂ ಪ್ರಾಶಂಸೆಗೆಯವಾದವುಗಳು. ಈ ಶುಭಕಾರ್ಯದ ಸಂಬಂಧವಾಗಿ ಹಾರನಹಳ್ಳಿಯಲ್ಲಿ ವೇ॥ ಶಿವರುದ್ರಶಾಸ್ತ್ರಿಗಳವರ ಗೃಹದಲ್ಲಿ (ತಾ॥ ೧೩-೫-೩೪) ನೇ ಗುರುವಾರ ಅಕ್ಷತಾ ಕಾರ್ಯವು ಬಹು ವಿಜೃಂಭಣೆಯಿಂದ ನೆರವೇರಲ್ಪಟ್ಟಿತು. ಈ ಸ್ವಸ್ತಿ ಶ್ರೀಮದ್ವಿಜಯ ಅಭಿನವ ಸುಯೋಗವೇ ಎಂಬಂತೆ ಅಕ್ಷತ್ಯಕಾಗಿ ಚಿತ್ತೈಸಿದ ಶ್ರೀ ಮೆರವಣಿಗೆ ಜಡೆ ಬೃಹತ್ಪಾಠ್ಯಧ್ಯಕ್ಷರಾದ ಬಾಲಬ್ರಹ್ಮಸ್ಥ ಶ್ರೀ ಶ್ರೀ ಗಂಗಾಧರತಿವಾಚಾರ್ಯ ಮಹಾಸ್ವಾಮಿಗಳವರು ಕುಮಾರಮಠಾಧಿಪತಿಗಳಾದ ವೇ॥ ಶಿವರುದ್ರಶಾಸ್ತ್ರಿಗಳವರ ಗೃಹಕ್ಕೆ ಬಿಜಯಂಗೈಸಿ ನೂತನ ವಧೂವರರನ್ನು ಆಶೀರ್ವದಿಸಿ ಎರಡು ದಿವಸಗಳು ಭೂಜಾನುಷ್ಠಾನಗಳನ್ನು ನಡೆಯಿಸಿ ಶಾಸ್ತ್ರಿಗಳವರ ಸೇವಾಸಕ್ತಾಗಳನ್ನು ಸ್ವೀಕರಿಸಿ ಅನಂದ ಭರಿತರಾದರು. ಈ ವಿವಾಹ ಮಹೋತ್ಸವದ ಕಾರ್ಯ ಕಲಾಪಗಳು ಅದ್ಯಂತವಾದವರೆಗೂ ಏರ್ಪಿಸ್ಥಿವಾಗಿ ಸಾಂಗ ಗೊಂಡಪ್ರಯುಕ್ತ ಶ್ರೀ ಜಿ ಪಂಚಾಚಾರ್ಯರಿಗೂ ಅನನ್ಯ ಭಕ್ತಿಭಾವದಿಂದ ಸರ್ವರೂ ಪ್ರಾರ್ಥಿಸಿದರು. ತಾ॥ ೧೪-೫-೩೪ ನೇ ಶ.ಕ್ರವಾರ ರಾತ್ರಿ ೯ ಘಂಟೆಯಿಂದ ವೇದಿಯಲ್ಲಿರುವ ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಾರ್ವಜನಿಕಸಭೆಯಲ್ಲಿ ಶ್ರೀ ಗಂಗಾಧರತಿವಾಚಾರ್ಯ ಮಹಾಸ್ವಾಮಿಗಳವರು ಅಮೋಘವಾದ ಧರ್ಮೋಪದೇಶ ನೆಪ್ಪು ಮಾಡಿ ಸಮಸ್ತ ಜನರಲ್ಲೂ ಧರ್ಮಠನ್ನಾ ಗಿಸಿದರು ಈ ಗುರುವರ್ಯರ ಅಪೂರ್ವ ಸಂದರ್ಶನವನ್ನು ನಮ್ಮೆಲ್ಲರ ಭಾಗ್ಯೋದಯವೇ ಸರಿ

ವೇರಗಶೆಟ್ಟಿರ ಬಸಪ್ಪಶಾಸ್ತ್ರಿ,
ಹಾರನಹಳ್ಳಿ (ತಿವಮೊಗ್ಗಾ ಜಲ್ಲಾ)

ವಿವಾಹ ಮಹೋತ್ಸವ ಸಮಾರಂಭ ಸೋಗಿ

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲೂಕು ಸೋಗಿ ಗ್ರಾಮದಲ್ಲಿರುವ ಶ್ರೀಯುತ ಪಟ್ಟೇದ ವಿದ್ವಾ ಮಲ್ಲಪ್ಪನವರ ಸುಪುತ್ರರಾದ ಕೊಟ್ರಪ್ಪ ಮತ್ತು ವೀರಪ್ಪ ಇವರ ಪೈಕಿ ೨ ನೇ ವೀರಪ್ಪನವರ ಜ್ಯೇಷ್ಠ ಪುತ್ರ ಚಿ॥ ಆತಪ್ಪನೆಂಬ ವರಶ್ರೀಷ್ಮನಿಗೆ ಹಿರೇಹಡಗಲಿ ಗ್ರಾಮದ ಶ್ರೀಮಾನ್ ಎಸ್. ಎಂ. ಮಲ್ಲಪ್ಪನವರ ಸುಪುತ್ರಿ ಚಿ॥ ಕುಂ॥ ಸೌ॥ ದೇವಿರಮ್ಮನೆಂಬ ಕನ್ಯಾಮಣಿಯನ್ನೂ ಮತ್ತು ಬಿದರಹಳ್ಳಿ ಗ್ರಾಮದ ದುಂಡಿ ಬಸಿಟ್ಟಪ್ಪ ಪ್ರವರ ಸುಪುತ್ರ ಚಿ॥ ಈಶಪ್ಪನಿಗೆ ಸದರಿ ೧ ನೇ ಕೊಟ್ರಪ್ಪನವರ ಸುಪುತ್ರಿ ಚಿ॥ ಸೌ॥ ಗೌರವ್ವನೆಂಬ ಕನ್ಯಾಮಣಿಯನ್ನೂ ನಿಶ್ಚಯಿಸಿದ ಪ್ರಕಾರ ಸದರಿ ಕೊಟ್ರಪ್ಪ-ವೀರಪ್ಪ ಇವರು ತಮ್ಮ ಭವ್ಯವಾದ ಮಂದಿರದಲ್ಲಿ ಇಷೇ ಶಾ ತಿಥಿ ೧೪೭೭ ನೇ ಆಯಷ್ಮಾಮ ಸಂಗೆಡದ ವೈ॥ ಶು॥ ೧೩ ಶುಕ್ರವಾರ ಶುಭಮುಹೂರ್ತದಲ್ಲಿ ಸೋಗಿ ಪುರವರ್ಗ ಆಷ್ಟಮಠಾಧಿಪತಿಗಳ ಪಟ್ಟಾಧ್ಯಕ್ಷರಾದ ಶ್ರೀ ಜಿ ಶ್ರೀ ಸಿದ್ಧವೀರಿತಿವಾಚಾರ್ಯಸ್ವಾಮಿಗಳವರ ಗುರುತ್ವದಲ್ಲಿಯೂ, ಸೋ॥ ಹಿ॥ ಮಃ॥ ಮಲ್ಲಯ್ಯನವರ ಹಾಗೂ ಚಿ ಎಂ ಗುರು ವೀರಯ್ಯನವರ ಪೌರೋಹಿತ್ಯದಿಂದಲೂ ಮಾಂಗಲ್ಯ ಧಾರಣಾ ಕಾರ್ಯಕ್ರಮಗಳು ಸಶ್ರಮವಾಗಿ ಜರುಗಿದವು.

ಈ ಸಮಾರಂಭಕ್ಕೆ ಹರೀಹಡಗಲಿ ಶುಂಠಿಕಮಠದ ಶ್ರೀ ವಿರೂಪಾಕ್ಷಶಾಸ್ತ್ರಿಗಳೂ ಜೆಜ್ಜಿ. ಎಂ. ಗುರುಪಾದ ಶಾಸ್ತ್ರಿಗಳೂ, ಕೀಡರಗಣ್ಣಿ ವೇ॥ ಅಮರಸಿಂಹಸ್ವಾಮಿಗಳೂ, ಹೊಸಪೇಟೆ ವೇದೀಶಾಲ ಶ್ರೀ ಎಸ್. ಎಂ. ಕೊಟ್ರಪ್ಪ ಬಸಯ್ಯ ಎಂ.ಎ, ಎಲ್‌ಎಲ್ ಬಿ. ಯವರೂ, ಹಿರೇಹಡಗಲಿ ಪಾಟೀಲ ಚಿಕ್ಕವೀರಗೌಡರೂ, ಎಚ್. ಎಂ. ಪಂಚಾಕ್ಷರಯ್ಯನವರೂ, ಕಲ್ಲುಬಿ ಕೊಟ್ರಪ್ಪ(ಸಂ ಮೋಗಿ ಪ್ರೆಸಿಡೆಂಟರು) ಎಂ. ಪಿ. ಎಂ. ಸಿದ್ಧಲಿಂಗಗೌಡರೂ, ಚಿ॥ ಕೆಚ್ಚಕೊಟ್ರಪ್ಪನವರೂ, ಬಿದರಹಳ್ಳಿ ಗ್ರಾಮದ ಯಜಮಾಲೆ ಗುರುಬಸಪ್ಪನವರೂ, ಹಿರೇಕೊಳಚಿ ಶ್ರೀನಿವಾಸ ಮಹಾಂತಪ್ಪನವರೂ, ಹೊಳಲುಗ್ರಾಮದ ಶೆಟ್ರು ಚೆನ್ನೀರಪ್ಪ ಮತ್ತು ಬಂಡೆಪ್ಪ ಕೊಟ್ಟೂರು ಜಟ್ಟಿಕೆ ಗುರುಬಾದಪ್ಪ ಹೂವಿನಹಡಗಲಿ ಎಚ್ ಎಂ ವೀರಯ್ಯನವರು ಮುಂತಾದ ಪ್ರಮುಖರೂ ಹಾಗೂ ಮಿತ್ರಮಂಡಳಿಯ ವರೂ ಒಕುಜನಸಂದಣಿಯೂ ನೆರೆದಿದ್ದರು.

ಪ್ರತಿದಿವಸ ಭೂರಿಅನ್ನ ಸಂತರ್ಪಣೆಯೂ, ವಿಚಿತ್ರ ವಾದ್ಯಗಳೂ, ಸಮಸ್ತ ಮಂಗಳಕಾರ್ಯಗಳೂ ಸಾವಧಾನ ವಾಗಿ ಜರುಗುತ್ತ ಶ್ರೀ ಜಿ॥ ಪಂಚಾಚಾರ್ಯ ಜಯಘೋಷ ದಿಂದ ಮುಕ್ತಾಯಗೊಂಡವು.

ಶ್ರೀಕ್ಷೇತ್ರದರ್ಶಿ

ಶ್ರೀ ಜಗದ್ಗುರು ವಿಶ್ವೇರಾಮಾರಾಧ್ಯರ ಜಯಂತಿ ಮಹೋತ್ಸವ, ನಂದೂರು.

ಗುಲಬರ್ಗಾ ಜಲ್ಲಾ ನಂದೂರ ಹೊಪಳಳ್ಳಿ ಹಿರೇ ಮಠದಲ್ಲಿ ಅಕ್ಷಯತೃತೀಯ ದಿವಸ ಜಗದ್ಗುರು ವಿಶ್ವೇರಾ ಮಾರಾಧ್ಯರ ಫೊಟೋಕ್ಕೆ ಪೂಜೆಹೋಮಹವನಾದಿಂದ ಪೂಜೆಸಿ ೨೧ಎತ್ತುಗಳನ್ನು ಹೂಡಿದ ರಥದಲ್ಲಿ ಇಟ್ಟು ಬಹುವಿಜೃಂಭಣೆಯಿಂದ ಮೆರವಣಿಗೆಯಾಗಿ ಮಠಕ್ಕೆ ತಲ್ಪಿದ ತರುವಾಯ ಡಾ॥ ರೇವಣಸಿದ್ಧಪ್ಪನವರ ನಂದೂರ ಮಠ ಇವರ ಭಾಷಣಾನಂತರ ಮಹಾಮಂಗಳಾರತಿ ಯಾಗಿ ಸಭೆಯು ಮುಕ್ತಾಯವಾಯಿತು. ಅಜುಬಾಜು ಜಿಲ್ಲರು ನೆರೆದಿದ್ದರು ಮಹಾಮಂಗಳಾರತಿಯಾಗಿ ಪ್ರಸಾದವಿನಿಯೋಗಾನಂತರ ನೆರೆದಿದ್ದವರು ಅತಿವಾದ ಪಡೆದು ತೆರಳಿದರು

ಮಠಕಾರ್ಯಾರ್ಥಾಗಿ

ಹೋರಿಯು ತಪ್ಪಿಸಿಕೊಂಡಿರುವುದು

ಧಾರವಾಡ ಜಿಲ್ಲೆಗದ ಪಟ್ಟಣದ ಮುಳುಸುಂದರಿಕ್ಕೆ ಯಲ್ಲಿರುವ ಶ್ರೀ॥ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಕಟ್ಟಿದ ಹೋರಿಯೊಂದು ಶಾಗಿ೧೭ ೫-೫೪ನೇ ಸೋಮವಾರ ಸಾಯಂಕಾಲದಲ್ಲಿ ಸೂಯುವಾಗಿನಿಂ ಅವರ ಚಕರಿ ಬಳಿಯಮಾಸಲ್ಲಾ ಶೆಟ್ಟರಗೇಡು ಬಳಿಹಬ್ಬೆ ಯಮೇಲೆ ಲಿಂಗಾಮುದ್ರೆ ಅಚಿ. ಬಾರಿ ಅವಯವಗಳು ಸಾಬೀತ ಅವೆ ಈ ಚಕರಿಯು ಹೋರಿಯಪ್ಪ ಯಾರಾದರು ಪತ್ತೆಹಚ್ಚಿ ತಂದುಕೊಟ್ಟು ಶ್ರೀ ರೇಣುಕಾ ಚಾರ್ಯರಲ್ಲಿಗೆ ಪಾತ್ರರಾಗಲೆಂದು ಆಶಿಸುತ್ತೇವೆ ಅವರ ಖರ್ಚುಸಹ ಕೊಡುತ್ತೇವೆ ಒಂದುವೇಳೆ ತಂದು ಕೊಡುವವರಿಗಿದ್ದ ಪತ್ರದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರ ಬರಿಯು ವಿಷಯವನ್ನು ತಿಳಿಸಲೆಂದುಕೋರುವ,

ಶ್ರೀ ಚಿಕ್ಕಮಲ್ಲಿಕಾರ್ಜುನ ಸ್ವಾಮಿಗಳು
ಕಿಕ್ಕೆರಿಯಲ್ಲಿ ಜಾಗಾದಿಮಠ, ಪೋಸ್ಟ ಸಗರ.

ಲಿಂಗಧಾರಣೆ

ಗುರು· ಸಚ್ಚಿಷ್ಯನೇ ಆಲಿಸು, ಲಿಂಗಧಾರಣೆಯು ಅತಿ ಪ್ರಾಚೀನವಾದುದು ಪರಮೇಶ್ವರನು ಸರ್ವವಿಯನ್ನು ಕುರಿತು—ದೇವಿ! ನನ್ನೀ ಇಷ್ಟಲಿಂಗವನ್ನು ಬ್ರಹ್ಮ ವಿಷ್ಣು ಇಂದ್ರಾದಿ ದೇವತೆಗಳು ಮತ್ತಿತರಿಗಳಲ್ಲಿ ಧರಿಸಿ ಲಿಂಗ ಮಧ್ಯಸ್ಥನಾದ ನನ್ನನ್ನು ಪೂಜಿಸಿ ತನ್ನು ತಮ್ಮು ಪದವಿಗಳನ್ನು ಪಡೆದುಕೊಂಡರು ಅದರಂತೆ ಲಕ್ಷ್ಮೀ ಸರಸ್ವತೀ ಮೊದಲಾದ ದೇವಿಶ್ರೇಷ್ಠರು ಸಹ ಲಿಂಗಗಳನ್ನು ಪರಮಾದರದಿಂದ ಧರಿಸಿ ಆದರಲ್ಲಿಯೇ ಲೀನಭಾವನನ್ನು ಹೊಂದಿ ಪರಮಸುಖವಿಗಳಾದರು ಎಂದು ಹೇಳಿರುವುದರಿಂದ ಆದಿಕಾಲದಿಂದಲೂ ಲಿಂಗಧಾರಣೆಯು ಪ್ರಚಾರದಲ್ಲಿದೆ ಎಂಬುದು ಸ್ಪಷ್ಟವಾಗಿದೆ

ಶಿವ್ಯ ಗುರುದೇವಾ! ಪರಮೇಶರನು ದೇವತೆಗಳು ಲಿಂಗವನ್ನು ಮಸ್ತಕಾರ್ಪಣಗಳಿಂ ಧರಿಸಿದರೆಂಬುದು ಒಣ್ಣಿಸಿರುವುದಾಗಿ ತಿಳಿಸಿದಿರಿ ಮತ್ತಾವ ಪದದಿಂದ ಇನ್ನಾವಾವ ಅಂಗಗಳಲ್ಲಿ ಧರಿಸಿಬೇಕೆಂಬುದನ್ನು ನೀವೇ ಸುವಿದು

ಗು ತಿಷ್ಯೋತ್ತಮಾ! ಲಿಂಗ

' ಮೌರ್ಧ್ನಿ ಕಂಠೇ ಭುಜೇ ಕರ್ಣೇ ಹೃನ್ನಾಭ್ಯೋಶ್ಚ ನಾಭಿ ಮಂಡಲೇ।
ಏತೇಷಾನಿ ।ಕದೇಶೇ ತು ಧಾರಯೇಚ್ಛಿವಲಿಂಗಕಂ॥
—ಸಾರವೆ ೯ ಂಗಮ ಪಟಲ ೧೦

' ಶಿಖಾಯಾಂ ಬಾಹುಮೂರೇವಾ ಕಂಠದೇಶೇ ಹೃದಂ ಬುಜೇ
ಕ್ರಿಯಾಸಾರ ಉಪದೇಶ ೪೦

ಮೌರ್ಧ್ನಿ, ಶಿಖಾ, ಕೆ ರಿ, ಭುಜ ಹಸ್ತ, ಹೃದಯ ಸ್ಥಲ ಮತ್ತು ನಾಭಿಮಂಡಲ ಇವುಗಳಲ್ಲಿ ಯಾವುದಾವ ದೊಂದು ಸ್ಥಾನದಲ್ಲಿ ಶಿವಲಿಂಗವನ್ನು ಧರಿಸತಕ್ಕದ್ದು

ಶಿ ಆರಾಧ್ಯಾ! ತಂಪು ಶುಭಾಹನಿಸಿದ ಆಗಮೋಕ್ತಿಯಲಿ ಮೂರ್ಧ್ನಿ, ಎಂತಲೂ ಕ್ರಿಯಾಸಾರದ ತವೇ ಎಡೆಯಲ್ಲಿ ಶಿಖಾಯಾಂ ಎಂತಲೂ ವಿವರಿಸುವುದರಿಂದ ಎರ ತನ್ನೂ ಒಂದೇ ಮಸ್ತಕಸ್ಥಾನವನ್ನಾಗಿ ಐ ವಿಸದರಾಗಿದೇ? ತಾವು ಮೂರ್ಧ್ನಿ ಮತ್ತು ಶಿಖಾ ಎಂಬುವಾಗಿ ಸ್ಥಾನಭೇದಗಳನ್ನು ನಿವೇದಿಸಿದಾತಾಯಿತು ಲಜ್ಜತೆಯಿಂದ ಪ್ರಶ್ನಿಸಿದ್ದೀನೆ ಬಿಂಧಿರ್ಥವನ್ನು ಬೋಧಿಸು

ಗು ಪೂಜ್ಯಾ! ಸವ್ಯಕ್ತ ಯಾರ್ಥ) ಜ್ಞಾನವನ್ನು ಹೆಂಂದಲು ಪರಿಕಕ್ಷೃಪ್ಪಯಿಯಾದ ನಿನ್ನಲ್ಲಿ ಅಜ್ಞತೆಯ ನ್ನೆನಿಸಲುಂಟೇ! ಚಿತ್ತವಿಸು ಮೂರ್ಧ್ನಿ ಮತ್ತೆ ಶಿಖಾ ಉಭಯ ಪ್ರದೇಶಗಳು ಮಸ್ತಕದಲ್ಲಿಯೇ ಇದ್ದರೂ ಸ್ಥಾನ ಭೇದವುಂಟು. ಮಸ್ತಕ ನ ಸಾತಳಿಯ ಮುಂಭಾಗ (ಮುಂದಲೆ)ನ್ನು ಮೂರ್ಧ್ನಿ ಪ್ರದೇಶವೆಂತಲೂ, ಹಿಂಭಾಗ (ಜುಟ್ಟು ಇರುವ ಸ್ಥಾನ)ನ್ನು ಶಿಖಾ ಪ್ರದೇಶ ವೆಂತಲೂ ಕರೆಯುವರು

ಶಿ ಗುರುವರ್ಯಾ! ಲಿಂಗವನ್ನು ಆವ ಉದ್ದಿಶ್ಯ ದಿಂದ ಭಿನ್ನಾಂಗಗಳಲ್ಲಿ ಧರಿಸುವುದು ಎಂಬುದನ್ನು ವಿವರಿಸು

ಗು ಶಿಷ್ಯೋತ್ತಮ! ಆಲಿಸು

ಮೋಕ್ಷಾರ್ಥಿನಃ ಶಿಖಾದೇಶೇ ಬಾಹುಮಧ್ಯೇ ತು ಧರ್ಮಿಣಃ।
ಕಾಮಾರ್ಥಿನಃ ಕಟೀದೇಶೇ ಕಂಠೇ ಸರ್ವಾರ್ಥಿನಃ ಪ್ರಿಯೇ॥
ಪಾರಮೇಶ್ವತಾಗಮ ಪ ೫ ಆ. ೯।೧೦

ಪರಮೇಶ್ವರನು ಪಾರ್ವತಿಯನ್ನು ಕುರಿತು ಪ್ರಿಯೇ! ಮೋಕ್ಷವ ಬಯಸುವವನು ಶಿಖಾ ಪ್ರದೇಶದಲ್ಲಿ, ಧರ್ಮವ ಬಯಸುವವನು ಭುಜದಲ್ಲಿ ರತಿ (ಧರ್ಮವಿರುದ್ಧ) ಸುಖವ ಬಯಸುವವನು ಟೊಂಕದಲ್ಲಿ, ದ್ರವ್ಯಾದಿ ಸಮಸ್ತ ವಿಷಯಗಳ ಬಯಸುವವನು ಕಂಠದಲ್ಲಿ, ಲಿಂಗವನ್ನು ಧರಿಸತಕ್ಕದ್ದು ಎಂದು ಚತುರ್ವಿಧ ಪುರುಷಾರ್ಥಗಳನ್ನು ಲಕ್ಷಿಸಿ ವಿಷಯಗಳನ್ನು ಲಿಂಗ ಮುಖವಾಗುವಂತೆ ಹೇಳಿರುವುದಾಗಿದೆ.

ಆದರೆ, ಕುತೂಲಮಕ ಶಿಷ್ಯನೇ! ವೀರಶೈವರು ಧರ್ಮಕ್ಕೆ ವಿರೋಧ ಬಾರದಂತೆ ಸ್ವಪ್ರಯೋಜ್ಯ ಶಾಸ್ತ್ರೋಚಿತ ಕಾಲ ಮರ್ಯಾದೆಯನುಲಕ್ಷಿಸಿ ಶಿವಭಕ್ತಿಸಂಪನ್ನ ಸಂತಾಪೇಕ್ಷೆಯಿಂದ ರಮಿಸುವರೇ ವಿನಾ ಕಾಮಕೀರ್ತಿಯಿಂದಲ್ಲವೆಂದು ರಿಂದ ಕಾಮಾದಿಗಳಲ್ಲ ಅದುಕಾರಣ ಕಟಿ ಪ್ರದೇಶವು ವೀರಶೈವ ವಿಹಿತವಲ್ಲೆಂದು, ಧರ್ಮಸ್ಥಾಪನಕ್ಕಾಗಿ ಲಿಂಗೋದ್ಭವರಾಗಿ ಬಂದ ಶ್ರೀ ರೇಣುಕ ಗುರುವರ್ಯರು—

' ನಾಭೇರಧಸ್ತಾಲಿಂಗಸ್ಯ ಧಾರಣಂ ಪಾಪಕಾರಣಂ ।'
(ಸಿದ್ಧಾಂತ ಶಿಖಾಮಣಿ ಕಿ ೬೫)

ನಂಭಿಯಿಂದ ಕೆಳಭಾಗನಲ್ಲಿ ಲಿಂಗವನ್ನು ಕಟ್ಟುವುದಾಗಲಿ ನೇತ್ರಾದುವಂತೆ ಮಾಡುವುದಾ ಲಿ ಸಾಪಕರ್ಮವೆನಿಸುವುದು ಎಂದು ಅಪ್ಪಣೆಕೊಡಿಸಿದ್ದಾರೆ ಬೀರಿ ಬೀರಿ ಅಂಗಗಳಲ್ಲಿ ಲಿಂಗವನ್ನು ಧಾರಣೆ ಮಾಡುವುದನ್ನು ಕುರಿತು ಶ್ರೀ ರೇಣುಕಾಚಾರ್ಯರು—

ಮುದದಿಂ ಲಿ ಗನಿಸಿಂಗು ಕಟ್ಟಿ ಕರ ಹತ್ತಾ
ಜಿನ್ನಾಮಳ್ಳೆಕೊಳ್ತ್ರನಾಂ ಗಳಿಯಾಯಾ
ಕ್ರಮದಿಂದ ಕಾಂಸ್ಯಾಪಿಸಿ ಸಂನ್ಯಾಸ್ತಿಗನಾಲಿಂಗ
ನಂ ॥ ಇದಿರಿನ ಧ ಪಿಯಂ ನಭು ಜನಿ
ಯ ಭೋದೈವಾದಿ ನಾನಾಸ್ತ್ರಮಂ । ವಿದಿಂ
ಬಿಟ್ಟೊಡೆಯಾವಗಂ ದರಿಪ್ರಭೆ ಶ್ರೀ ಸಿದ್ಧಲಿಂಗೇ
ಶ್ವರಾ ॥ —ಸಿದ್ಧಲಿಂಗೇಶ್ವರಶತಕ

ಲಿಂಗವನ್ನು ಬಲಲ್ಲಿ ಧನಿಸವರನು ಒಯ್ಕೆಯನ್ನು, ಹಸ್ತದಲ್ಲಿ ಧರಿಸವನನು ಧನಸಂಸ್ಕಾರಿಸನನ್ನು, ಎದೆಯ ಮೇಲೆ ಧರಿಸುವವನು ಸ್ಥೈರ್ಯವನ್ನು, ನಾಲಗೆಯ ಮೇಲೆ ಧರಿಸುವವನು ವಿವರಂಬ ಧಿ ಲಭದ ತನ್ನ ನ ಡಿಯನ್ನು, ತಿಭಕ್ತಿ ಸ್ಫಾರ್ತ್ಯವ್ಯಿದವರಲ್ಲಿ ಊಟ ನನ್ನು ಮಸ್ತಕದ ದಿಂಡಿ ನಾಡಿದವನು ಶಿವಲಿಂಗದ ಜೋರ ಆನ ತಾಳುದ್ದಿ ಗೆ ಗೆ ತಲೆಬಾಗುವುದನ್ನು ಬಿಡುತ್ತಿದ್ದ ಎಂದು ಅಪ್ಪಣೆ ಯಾಡಿಸಿದ್ದಾರೆ ಇವೆಲ್ಲೆಲ್ಲ ಛಲಬೇಕ ಗ್ಯಾದ ಒಬಬೇಕು ತಿಳಿಯಿ ಶೇ!

ಶಿ ಆದ ಪಾಯತು ಕೇಳಿ ತಿಳಿಯಲಿಕ್ಕಿಸಿದಂತೆ ಮನಸು ಚಂಚಲವಾಗುತ್ತಲಿದೆ ಕಾರಣ ನನಿಗೀಗ ಕಂಠದಲ್ಲಿ ತಿವಸಾದಿಗದ ನೇತ್ರ ಮಂಡೆಯನಿಸಿದರೂ ಸದಾ ಹೃದಯವನ್ನು ಸ್ಪರ್ಶಿಸಿವಂತೆ ಧರಿಸಿರುವುದು ಉಚಿತವೇ? ನನಗುಚಿತವನ್ನು ಬೋಧಿಸಿ ಮನಸ ಸಮಾಧಾನವನ್ನು ಲಯಪಾಲಿಸ

ನಂಭಿಯಿಂದ ಮೇಲಕ್ಕೆ ಕಂಠದಿಂದ ಕೆಳಕ್ಕೆ ವ್ಯಾಪಿಸಿರುವ ಮರ್ತ್ಯಾಕಾಶವನ್ನು ಹೃದಯಾಕಾಶವೆಂತಲೂ ದೆರ್ಯಾಕಾಶವೆ ಕೆಲೂ ಸಂಬೋಧಿಸಿವುದರು ಅದು ಇಪ್ಪತ್ತ ಅಂಗುಲ ಪ್ರಮಾಣವಾಗಿದ ಅವುಗಳಲ್ಲಿ ಕೆಳಗೆ ಒಂಭತ್ತು ಮೇಲೋಭಾಗದ ತಂಗುಲಗಳ ಮಧ್ಯದಲ್ಲಿ ಉಳಿಯುವ ಎರಡಂಗುಲ ಸ್ಥಾನದಲ್ಲಿ ಸೂಕ್ಷ್ಮವೂ ಮೃದುವೂ ಆಗಿರುವ ಅಪ್ಪಟಕಗಳಿಂದ ಕೂಡಿ ಕೆಳ ಮುಖವಾಗಿರುವ ಒಂದು ಕಮಲವುಂಟು ಆ ಕಮಲವೇ ಜೀವ ಹಾಗೂ ಈಶ್ವರನ ವನತಿ ಸ್ಥಾನವಾಗಿದೆ ಅದನ್ನೇ ಹೃದಯಸ್ಥಾನವೆಂದು ಆತ್ಮನ ಸ್ಥಾನವೆಂದು, ಶಿವಸದನವೆಂದು, ಪೂರ್ಣ ಜೂ ಪೂರ್ಣಗಿರಿ ಎಂದು, ಮಹಾಚಕ್ರವೆಂದು, ಕೈತ್ಯಾಗಮು ಕರಣ ಜನ ಸ್ತೋಮವು ಪಾಡಿದೆ ಅದು ಲಿಂಗಾಂಗ ಸಾಮರಸ್ಯದ ಪರಮ ರಹಸ್ಯಸ್ಥಾನವಾಗಿದ ಇಂತಹ ಸತ್ಯಂಗಲಕರ ಅಳ್ಯುದಯ ಸಾಶ್ರೀಯಸದಾಯಕ ಸ್ಥಾನವನ್ನು ತಪ್ಪಲಿಂಗ ಧಾರಣೆಗೆ ಆರಿಸಿಕೊಂಡ ನೀನೇ ಧನ್ಯ

ಶೀರೆ ಸ್ಥಾನಗಳ ಗೊಡವೆಗೆ ಬೀಳದೆ ಸಮಸ್ತ ಸ್ತ್ರೀ ಪುರುಷರೂ ತಮ್ಮಿಷ್ಟಲಿಂಗವನ್ನು ಇದೇ ಸ್ಥಾನದಲ್ಲಿ ಧರಿಸುವುದು ವಿಹಿತವು.

(ಧಾರತೀಯಸಿದ್ಧಾಂತ)

ಒಂದೇ ದಿನದಲ್ಲಿ ಎರಡು ಸಹಸ್ರ ಲಗ್ನಗಳು

ಒಂದೇದಿನ ಕೆಳ್ಳಕತ್ತಾದಲ್ಲಿ ಜೇಗುಸರಾಯ್ ಸುಬ್ಬಿಶಿಜನ್‌ನಲ್ಲಿ ಎರಡು ಸಹಸ್ರ ಲಗ್ನಗಳಾದ ಸುದ್ದಿಯೊಂದು ಬಂದಿದೆ. ಅಂದು ಮಾಘಮಂದಿರುಗಳು ಅಳಯಂದಿರಗಳಿಗೆ ತೆತ್ತ ಕನ್ಯಾಶುಲ್ಕದ ಒಟ್ಟು ಹಣ ೧೫ ಲಕ್ಷ ರೂಗಳೆಂದೂ ತಿಳಿದುಬಂದಿದೆ.

ಶ್ರೀ ಚಿಕ್ಕಮುಣ್ಣೂರು ಮಹಾಸ್ವಾಮಿಗಳವರ ಧರ್ಮೋಪದೇಶ ಹಿರೇಕೊಪ್ಪ

ಧರ್ಮದೋಧ ತಿರೋಮಣಿಗಳಾದ ಶ್ರೀ ರೇಣಾಸಿದ್ಧಶಿವಾಚಾರ್ಯಸ್ವಾಮಿಗಳು ಬೆಳ್ಳಗುಣ್ಣೂರು ಈ ಪೂಜ್ಯಶಿವಯೋಗಿಗಳವರು ಸಿಟ್ಟಂದಿಸಮಕ್ಷತೆಂಗಾ ಧಾರವಾಡ ಜಿಲ್ಲಾ ಗದಗ ತಾಲೂಕ ಪೈಕಿ ಹಿರೇಕೊಪ್ಪಕ್ಕೆ ದಯಂಮಾಡಿಸಿದರು ಮಾರುತಿ ದೇವಸ್ಥಾನದಲ್ಲಿ ಶಾ॥ ೧೫ ೫೫ ನೇ ದಿವಸ ಇರ ಆಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಸಮಸ್ತ ಧರ್ಮದವರಿಗೆ ತಿಳಿಯುವಂತೆ ಸ್ವಾಮಿಗಳವರು ತಮ್ಮ ಅಮೃತವಾಣಿಯಿಂದ ವ್ಯಾಪ್ತಾನ ಮಾಡಿದ ಸಾರಾಂಶವೆನೆಂದರೆ,

ಈ ಕಲಿಯುಗದಲ್ಲಿ ಳಿಯಯುವದೀಪಕ್ಕೆ ಮಧುರ ವಾದ ಹನ್ನೆಂದು ಭಾವಿಸಿ ಪತಂಗವು ದೀಪದಲ್ಲಿ ಬಿದ್ದು ಸಾಯುವಂತೆ ಜನರು ಇಂದ್ರಿಯಗಳ ಮೋಹಕ್ಕೆ ಬಿದ್ದು ಜನನ-ಮರಣಗಳೆಂಬ ಭವಸಾಗರದಲ್ಲಿ ಮುಳುಗುವರು ಈ ಭವಸಾಗರದಿಂದ ದಾಟಿಸುವದಕ್ಕೆ ಗುರುವು ತಾನೇ ಅವಿಭಗ್ನನಾಗಿರುವನು ಆದ್ದರಿಂದ ಜ್ಞಾನರೂಪಿಯೂ ದಯಾಸಾಯನೂ ಆದ ಗುರುವಿನ ಸಹಾಯದಿಂದ ಮೋಕ್ಷಮಾರ್ಗವನ್ನು ಹುಡುಕಬೇಕು ಗುರುವಿನಿಂದ ಜ್ಞಾನವನ್ನು ಪಡೆದು ವಾಲ್ಮೀಕಿ, ಪುರಂದರದಾಸ, ನಿಜಗುಣಶಿವಯೋಗಿ ಮೊದಲಾದ ಮಹಾವಿಭೂತಿಗಳು ಮನೆಯಾರು ಹೆಂಡರು-ಸುಕ್ಕಳು ಮುಂತಾದವರನ್ನು ಧಿಕ್ಕರಿಸಿ ದೂರವಾಡಿ ಭೂಸ್ಪರ್ಶವನ್ನೇ ಮಾಡುವ ಇಚ್ಛೆಯಿಂದ ಉಳುವಿ ಗೋಕರ್ಣ-ಕಪ್ಪಡಿಸಂಗಮವಾಳ ಶ್ರೀಶೈಲ.ಹಂಪ ಕಾಶೀಕ್ಷೇತ್ರ ಕಂಬಳಿಲಿಂಗನಬಿಟ್ಟಿ ಮೊದಲಾದ ಪುಣ್ಯ ಕ್ಷೇತ್ರಯಾತ್ರೆಗಳನ್ನು ಮುಗಿಸಿಕೊಂಡು ಜ್ಞಾನಸಂಸಾರಿಕರಾಗಿ ಮುಮುಕ್ಷುಗಳಾದರು

ಎನ್ನೋ ಮಾನವರು ಪುಕುಂಟೆಯಸಾರದಲ್ಲಿದ್ದು ಸಾರಮಾರ್ಥವನ್ನು ಸಾಧಿಸಿ ಈ ಭವಸಾಗರವನ್ನು ದಾಟಿ ಮುಕ್ತರಾಗಿಹೋದಬ್ಬು ಸಮಸ್ತರಿಗೆ ವೇದವಾಣಿವ ಭಕ್ತಿಯುತರು ಒಂದೇ ಮನಸ್ಸಿನಿಂದ ನದಿಯೊಳಗೆ ನದೆದುಹೋಗಬಹುದು ಅವಾರವಾದ ಸಮುದ್ರವನ್ನ್ ಕೂಡ ಸುಲಭವಾಗಿ ದಾಟಬಹುದು ಹರಮುನಿದರೆ ಗುರುಕಾಯುವನೆಂದು ಶಾಸ್ತ್ರವೂ ಕೂಡ ಒಲವಾಗಿ ಸೇಳುವಂತೆ ಸರ್ವಶ್ರೇಷ್ಠನಾದ ಗುರುವು ಯಾವಾಗೂ ಭಕ್ತರನ್ನು ಕೈಹಿಡಿದು ಮೇಲಕ್ಕೆ ಎತ್ತಿ ಕಾಪಾಡುವನು ಈ ದೇಪವಾದೂ ಸ್ಥಿರವಾದುದಲ್ಲ ಈ ದೇಹವು ಆರೆಯನ್ನು ಮರೆಯಿರಿ ಈ ದೇಹವು ನಮಗೆ ಎಲ್ಲಿಯತನಕ ಬೇಕಾಗುವುದಂದರೆ ಶಾಲೆಯು ಹುಡುಗರಿಗೆ ಸಾರಗಳು ಬರುವತನಕ ದೀಪವು ಬೇಕಾಗುವಂತೆ ನಮಗೆ ಬ್ರಹ್ಮಜ್ಞಾನವಾಗುವವರೆಗೆ ದೇಹವು ಬೇಕಾಗುವುದು ಸಾರಗಳು ಬಂದಕೂಡಲೆ ಹುಡುಗರು ದೀಪವನ್ನು ಕಳೆದಂತೆ ನಮಗೆ ಬ್ರಹ್ಮಜ್ಞಾನ ಬಂದಕೂಡಲೇ ನಾವು ಈ ದೇಹವನ್ನು ದೀಸದಂತೆ ಒಗೆದು ದೇಹದಿಂದ ಹೊರಬಿದ್ದು ಮುಕ್ತರಾಗುವೆವು ಇದನ್ನು ಬಿಟ್ಟು ಗರ್ವದಿಂದ ಮೆರೆದು ಏಶ್ವರ್ಯದ ಮೋಹದೊಳಗೆ ಸಿಕ್ಕಿ ಪುಣ್ಯಕಾರ್ಯಗಳನ್ನು ಸಾಳೆ ಸೂಡಿದಂಯಾಕು, ನಾಡಿದ್ದು ಮಾಡಿದರಾಯತೆಂದು ಆಲಸ್ಯ ಮಾಡಿಬಿಡಬಾರದು ಯಾಕೆಂದರೆ ನಾಳೆ ಅನ್ನುವುದಕ್ಕೆ ಈ ದೇಹವು ಕಾತ್ರತವಲ್ಲ ಗಾಳಿಯೊಳಗಿನ ದೀಸದಂತೆ ಆಶ್ಚರ್ಯಾಗಿರುವುದು ನಾವು ಗಳಿಸಿದ ಏಶ್ವರ್ಯವಾದೂ ಪುಣ್ಯಾತಿರಿದಕೂಡಲೆ ತೊಲುಗುವದು, ಶಕ್ತಿ-ಸಾಹಸ-ಬುದ್ಧಿಕೌಶಲ್ಯ ಇರುವಕಾಲಕ್ಕೆ ಧರ್ಮವನ್ನು ಮಾಡಿ ಕೀರ್ತಿಯುತರಾಗಬೇಕು

ಇನೇ ಮುಂತಾದ ವಿಷಯಗಳನ್ನು ತಮ್ಮ ಅಮೃತ ವಾಣಿಯಿಂದ ಬೋಧಮಾಡಿದಾನಂತರವೇ ಸಮಸ್ತರು ತಲೆದೂಗಿ ಆರತಾದನಮಾಡುತ್ತ ಜಯಜಯಕಾರದೊಡನೆ ಸಭೆಯು ಸಮಾಪ್ತವಾಯಿತು ಮಹಾತಯರೇ ಚಿಕ್ಕಮುಣ್ಣೂರು ಜ್ಞಾನತಿನಯೋಗಿಗಳವರು ಎಲ್ಲಾ ಕಡೆಗೆ ಸಂಚರಿಸಿ ಸಮಸ್ತಧರ್ಮದವರಿಗೆ ಬೋಧಮಾಡಿ ಸದಾಚಾರ ಜ್ಞಾನಮಾರ್ಗಕ್ಕೆ ಹಚ್ಚುವದು ಸ್ತುತ್ಯವಾದದ್ದು. ಈ ಧೀರ್ಘಾಪಾದರಿಗೆ ಸಕಲ ಧರ್ಮದವರು ಸಹಾಯಮಾಡಿ ಕೃತಾರ್ಥರಾಗಬೇಕೆಂದು ತಿಳಿಸುವ,

ಮಲ್ಲಿಷ್ಣಾ ಲಿಂಗಪ್ಪ ಅಸೂಟಿ
ಸಾ॥ ಹಿರೇಕೊಪ್ಪ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಇಪ್ಪತ್ತೆಟ್ಟಿ ವೈಶಾಖ ಶು॥ ಪಂಚಮಿಗೆ ೨೭ ವರ್ಷಗಳು ತುಂಬಿ ೨೮ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೮ ಆಣೆ ಹೆಚ್ಚಿಗೆ ಬೀಳುವುದು ದಿಮದಿಂದ ಚಂದಾದಾರೆಲ್ಲರೂ ಕೂಡಲೇ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ಪೆಂಬರಹ್ನೆ ಮಾತ್ರ ದಯಮಾಡಿಸಿ ಮನಿಯಾರ್ಡರ್ ಮಾಡಿಸಬೇಕು.

—ಮ್ಯಾ.

ಶಿವಲಿಂಗಸ್ವಾಪನೆ, ಡುಲಿದೇವರಬನ

ಶಿವನೊಗ್ಗ ಡಿ॥ ಸಾಗರ ತಾ॥ ಅವಿನಹಳ್ಳಿ ಹೋಬಳಿ ಕೋಳೂರು ಪಾಟೇಲ ವೀರಪ್ಪಗೌಡರು ನಿರ್ಮಿಸಿದ ಹುಲಿದೇವರಬನ ಎಂಬ ಹೊಸ ಗ್ರಾಮದಲ್ಲಿ ಮನೋಹರವಾದ ದೇವಮಂದಿರನ್ನು ಕಟ್ಟಿಸಿ ಅಲ್ಲಿ ಇದೇ ಶ್ರೀ ಜಯಾಖ್ಯ ಸಂವತ್ಸರದ ವೈಶಾಖ ಶುದ್ಧ ೩ (ತಾ॥ ೬ ೬ ೧೯೫೪) ಬುಧವಾರ ದಿವಸ ಶ್ರೀ ಸಂ॥ ಬ್ರಂಗಿ ಚಾರಪುಟ್ಟಧ್ವಜ್ಞ ಗಿಳಲುಗೂಡಿ ಶ್ರೀಗಳವರ ದಿವ್ಯಹಸ್ತದಿಂದ ಶಿವಲಿಂಗ, ನಂದಿ ಗಣಪತಿ ಮತ್ತು ಪಾರ್ವತಿ ಮಿನ್ಮಹಗಳ ಪ್ರತಿಷ್ಠಾಕಾರ್ಯವು ಸಾಂಗವಾಗಿ ನೆರವೇರಿತು. ಮತ್ತು ಭಾರಂಗಿಹೋಬಳಿ ಶ್ರೀ ವಿರೂಜಿನ ಮಂದಿರ ಶ್ರೀ ಕೂಷ್ಮಿಮರದ ಶ್ರೀ " " ಗಳವರ ದಿವ್ಯ ಹಸ್ತದಿಂದ ತಾ॥ ೬ ೫೬ ನೇ ಗುರುವಾರ ಮತ್ತು ತಾ॥ ೬ ೫೭ ನೇ ಶುಕ್ರವಾರ ಶ್ರೀ ನೂತನ ಶಿವಲಿಂಗಕ್ಕೆ ಶ್ರೀ ಮಹಾರುದ್ರಾಭಿಷೇಕವನ್ನು ನಾಡಿಸಲಾಯಿತು. ಶಿವಲಿಂಗದ ಸಕಲ ಕಾರ್ಯಪೂ ಬಹು ಸಾಂಗವಾಗಿ ನೆರವೇರಿತು ಈ ಶುಭಸಮಯದಲ್ಲಿ ತಾವರು ಬಲಕರಿಗೆ ಚಾಲನವನ್ನೂ ಮತ್ತು ಒಬ್ಬ ಜಂಗಮ ವಟುವಿಗೆ ಶಿವದೀಕ್ಷೆ, ಸಂಸ್ಕಾರವನ್ನೂ ಮತ್ತು ಒಂದು ಲಗ್ನವನ್ನು ಸಹ ನಾಡಿಸಲಾಯ್ತು. ಪಾಟೀಲ ವೀರಪ್ಪಗೌಡರು ಕಟ್ಟಿಸಿದ ಈ ದೇವಸ್ಥಾನಕ್ಕೆ ರಾಮೇಶ್ವರದೇವಸ್ಥಾನವೆಂದು ನಾಮಕರಣ ಮಾಡಿದ್ದಾರೆ ಹಿರೇಭಾಸ್ಕರಿ ಡ್ಯಾಂ ಜಲಾಶಯ ಕಟ್ಟಿಸಿ ಅದ ನೀರಲ್ಲಿ ಗೌಡರು ಪೂರ್ವದ ಊರನ್ನು ಜಲಾಶಯಕ್ಕೆ ಬಿಟ್ಟುಕೊಟ್ಟು ಈ ಹೊಸ ಗ್ರಾಮಕ್ಕೆ ಬಂದು ನೆಲಿಸಿದರು ಗೌಡರು ರಸ್ತೆಪಕ್ಕದಲ್ಲಿದ್ದ ಗಿಡ ಮರಗಳನ್ನು ಕಡಿಸಿ ಒಂದು ಪ್ರವೇಟ್ ಸ್ಕೂಲು ಬಿಲ್ಡಿಂಗ್ ಕಟ್ಟಿಸಿ ಅದು ಬಾಜು ಗ್ರಾಮಗಳ ಬಾಲಕರಿಗೆ ವಿದ್ಯಾದಾನ ಮಾಡಿಸಿದರು. ಇವರ ಪ್ರಯತ್ನದಿಂದ ಸರಕಾರಿ ಸ್ಕೂಲು ಬಂದು ನೂರು ವರ್ಷವಾಯ್ತು ವಿದ್ಯದಲ್ಲಿ ಹಿಂದುಳಿದ ಮಲೆನಾಡಿಗೆ ಇವರು ಮಾರ್ಗದರ್ಶಕರಾಗಿರುತ್ತಾರೆ ಹಿಂದಿನ ಕಾಡುಪ್ರದೇಶವು ಇಂದು ಹಳ್ಳಿಯಾಗಿರುತ್ತದು. ಇಂಥ ಒಂದು ಸಣ್ಣ ಹೊಸ ಹಳ್ಳಿಗೆ ದೇವಾಲಯದ ಕೊರತೆ ಆಗಿತ್ತು ಅದೂ ಸಹ ಶಿವಳ್ಳಿಯೆಂದ ಮಾಡಿಸಿದ್ದಾಯಿತು ಮತ್ತೆ ದೇವ ಸ್ಥಾನಗಳನ್ನು ಅಭೇಧಗತಿಗಿಳಿಸುತ್ತಿದ್ದಂಥ ಕಲಿಕಾಲದಲ್ಲಿ ಶ್ರೀ ಗೌಡರು ವೃದ್ಧಿಪಡಿಸುತ್ತಿರುವುದು ಹೆಮ್ಮೆಯ ವಿಷಯ ಶ್ರೀ ಗೌಡರು ಉದಾರ ಮನಸ್ಸು ಮಾಡಿದಂತೆ ಎಲ್ಲಾ ಶ್ರೀಮಂತರು ಮನಸ್ಸುಮಾಡಿ ಬಡವರಿಗೆ ಸಹಾಯಮಾಡಿದರೆ ನಮ್ಮ ದೇಶದ ಬಡವರು ಭಾಗ್ಯಶಾಲಿಗಳಾಗುವರೆಂದು ಹೇಳಲು ಹೆಮ್ಮೆಯುವುದು ಪ್ರತಿಯೊಬ್ಬ ಶ್ರೀಮಂತರು ದೇವರು ತಮಗೆಕೊಟ್ಟ ಧನವನ್ನು ಬಡವರ ಶಕ್ಯಳ್ಳೆ ವಿನಿಯೋಗಿಸಿದರೆ ಶ್ರೀಮಂತರೂ ಭಾಗ್ಯಶಾಲಿಗಳೇ ಸರಿ. ಶ್ರೀ ಗೌಡರಿಗೂ ಅವರ ಪತ್ನಿ ಪುತ್ರರಿಗೂ ಶ್ರೀ ಪಾರ್ವತೀ ಪರಮೇಶ್ವರರು ಅಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ಕಾಪಾಡಲೆಂದು ಬೇಡುತ್ತೇನೆ

ಓರ್ವ ಉತ್ಸವಭಾಗಿ.

ಸ್ವೀಕಾರ

ಧಾರವಾಡ ಡಿ॥ ಗದಗ ಗ್ರಾಮದಲ್ಲಿರುವ ಶ್ರೀ ವೀರಭದ್ರ ವೀರಭದ್ರಪ್ಪ ಬಳಿಗಾರ ಇವರು ತಮ್ಮ ಗೃಹದಲ್ಲಿ ತಾ॥ ೫-೫ ೫೮ ಮತ್ತು ೭-೫-೫೮ ದಿವಸಗಳಲ್ಲಿ ನಡೆಸಿದ ಜಗದಾಚಾರ್ಯ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ 4 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ॥ ಹೊಸಪೇಟೆಯಲ್ಲಿರುವ ಶ್ರೀಯುತ ಹತ್ತಿ ರುದ್ರಪ್ಪನವರು ಜಗದಾಚಾರ್ಯರ ಕೃಪೆಯಿಂದ ತಮ್ಮ ಮನೋರಥವು ಪೆರಸೇರಿದ ಸಂತೋಷಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 4 ರೂ ಗಳು ಶ್ರೀ ಸಂ॥ ಬ್ರ॥ ಚರಪಟ್ಟಾಧ್ಯಕ್ಷ ರುದ್ರಮುನಿವಾಚಾರ್ಯ ದಿಗ್ಗಾವಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರಿನಲ್ಲಿರುವ ದಿ ಮೈಸೂರು ಊದುಬತ್ತಿ ಫ್ಯಾಕ್ಟರಿ ಮಾಲೀಕರಾದ ಯಜಮಾನ್ ಕೆಂಚಪ್ಪನವರು ತಮ್ಮ ಪುತ್ರಿ ಹ॥ಕುಂ॥ತೋ॥ ಸಾವಿತ್ರಮ್ಮನವ್ಲು ಬೆಂಗಳೂರಿನಲ್ಲಿರುವ ಶ್ರೀ ಸೂಲ್ಕುಂಟೆ ವೀರಭದ್ರಪ್ಪನವರ ಪುತ್ರ ಚಿ॥ ಸಿ॥ ಎಸ್ ವಿ. ನಾಗರಾಜ್ ಇವರಿಗೆ ಕೊಟ್ಟು ತಾ॥ ೧೪ ೫-೫೮ ದಿವಸ ನಡೆದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ॥ ಹರೇಹಡಗಲಿ ಗ್ರಾಮದ ಪಜ್ಯೇದ ಶ್ರೀಮಾನ್ ಕೊಟ್ರಪ್ಪನವರು ತಮ್ಮ ಪುತ್ರಿಯ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಶ್ರೀ ಎಸ್ ಎಂ ಮಲ್ಲಪ್ಪನವರ ದ್ವಾರಾ ತಲ್ಪಿರುತ್ತವೆ.

ತಿಪಟೂರ್ಗಾ ಡಿ॥ ಹಾರನಹಳ್ಳಿ ವೇ॥ ಗುಬ್ಬಿ ಶಿವ ಕಧಾಪಂಡಿತ ಶಿವರುದ್ರಶಾಸ್ತ್ರಿಗಳವರ ಪುತ್ರಿಯ ವಿವಾಹ ಸಮಯದಲ್ಲಿ ಶ್ರೀ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಶ್ರೀ ಶಿವರುದ್ರ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಗದಗ ತಾಲ್ಲೂ ಮುಂಡರಗಿನೇರಾ ಹಿರೇವಡ್ಡಿಟ್ಟಿಯ ಶ್ರೀ ಬಸಪ್ಪ ಕುಂಬಾರ ಇವರ ಪುತ್ರಿ ಹ॥ ಕುಂ॥ ಸೌ॥ ನಿಂಗವ್ವನವ್ಲು ಬೆಟಗೇರಿಯ ಶ್ರೀ ಕರಿಯಪ್ಪ ಕುಂಬಾರ ಇವರ ಪುತ್ರ ಚಿ॥ ವೀರೇಂಗಪ್ಪನಿಗೆ ಕೊಟ್ಟು ನಡೆದ ವಿವಾಹ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಕಕ್ಕಾಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ ಮತ್ತು ಸಿರಿ ಬೆಟಗೇರಿ ಶ್ರೀ ಕರಿಯಪ್ಪ ಕುಂಬಾರ ಇವರ ಪುತ್ರ ಚಿ॥ ಒನವ್ವನಿಗೆ ಡೋಣಿಯಲ್ಲಿರುವ ಶ್ರೀ ನಿಂಗಪ್ಪ ಕುಂಬಾರ ಇವರ ಪುತ್ರಿ ಹ॥ ಕುಂ॥ ಸೌ॥ ಬಸವಣ್ಣವ್ವನವ್ಲನ್ನು ಕೊಟ್ಟು ನಡೆದ ವಿವಾಹಸಮಯದಲ್ಲಿ ಪೂರ್ವ ಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ ಜುಮ್ಲಾ 2 ರೂ.ಗಳು ಶ್ರೀಮಾನ್ ನೀಲಪ್ಪಗೌಡರು ಹರೇಮಲ್ಲಿ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಜಾನಗಲ್ ತಾ॥ ಅಲೂರು ವಾಸಿ ಗಳಾದ ಶ್ರೀ॥ ತೋಟಪ್ಪ ಕೊಲ್ಲಾವರದ ಇವರ ಸುಪುತ್ರಿ ಸೌ॥ಚಿಕ್ಕವ್ವನವ್ಲು ಕರಜಗಿ ವಾಸಿಗಳಾದ ಶ್ರೀ॥ಈರಪ್ಪ ಪೂಜಾರಿಯವರ ಚಿರಂಜೀವಿ ಇವರ ಸುಪುತ್ರ ಚಿ॥ಚನ್ನಬಸಪ್ಪನಿಗೆ ಕೊಟ್ಟು ವೈಭವಯೋರ್ಯ ಮಾಡಿದ ಸಮಯದಲ್ಲಿ ಸಭುವರರ ಕಡೆಯಿಂದ ಒಂದೊಂದು ರೂಪಾಯಿಯಂತೆ ಪ್ರಭಾಪೋಷಣೆಗಾಗಿ ತೆಗೆಯಿಸಿದ ಒಟ್ಟು 2 ರೂ ಗಳು ಶ್ರೀ॥ ಚಿಕ್ಕ ವೀರಪ್ಪಕಟ್ಟೆರ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಕನ್ಯಾಕುಮಾರಿಯಿಂದ ಬೊಂಬಾಯಿಗೆ ರಸ್ತೆ

ಕನ್ಯಾಕುಮಾರಿಯಿಂದ ಬೊಂಬಾಯಿಗೆ ರಸ್ತೆಯಾಗುವುದು. ಈ ರಸ್ತೆಗೆ ಅಗುವ ವೆಚ್ಚದಲ್ಲಿ ಅರ್ಧವನ್ನು ಕೇಂದ್ರ ಸರಕಾರವೂ ಉಳಿದ ಅರ್ಧವನ್ನು ಪ್ರಾಂತ್ಯ ಸರಕಾರಗಳೂ ತೆರುವುತ್ತವೆ.

ವರ್ತಮಾನಸಂಗ್ರಹ

ಆಂಧ್ರವಾದಿ ಶ್ರೀಗಂಗಪ್ಪನವರಿಗೆ ಸವಾಲ್

ಬಳ್ಳಾರಿಯು ಮೈಸೂರಿನಲ್ಲಿ ವಿಲೀನವಾಗಿರುವುದರ ವಿರುದ್ಧ ಹಳುವಳಿಯಲ್ಲಿ ಪ್ರಮುಖಪಾತ್ರ ವಹಿಸುತ್ತಿರುವ ಮೈಸೂರು ವಿಧಾನಸಭೆಯ ಸದಸ್ಯರಾದ ಎಚ್. ಗಂಗಪ್ಪನವರ ವರ್ತನೆಯಿಂದ ಉದ್ಭವಿಸಿರುವ ಸಮಸ್ಯೆಗಳನ್ನು ಬಳ್ಳಾರಿಯಲ್ಲಿ ಸಭೆಸೇರಿದ್ದ ಬಳ್ಳಾರಿಯ ಜಿಲ್ಲಾ ಪಾರ್ಷದ್ಯ ಪರಿಷತ್ತು ಪರಿಶೀಲಿಸಿತು ಅಂಧ್ರರಲ್ಲಿ ಹಳುವಳಿಯಲ್ಲಿ ಭಾಗವಹಿಸಿ ಶ್ರೀಗಂಗಪ್ಪನವರು ಇತರ ವಿಚ್ಛಿದ್ರಸವನ್ನು ಕಳೆದುಕೊಂಡಿದ್ದಾರೆಂದೂ ಆದ್ದರಿಂದ ಅವರು ಬಹುತೇಕಮಂದಿ ಓಟುದಾರರ ಪ್ರತಿನಿಧಿಗಳೆಂದು ಕರೆಯಲ್ಪಡಲಾಗದೆಂದೂ ಪರಿಷತ್ತು ನಿರ್ಧರಿಸಿತು

ಪರಿಷತ್ತು ಮುಂದುವರೆದು ಸರ್ವಜನಿಕ ಹಿತದೃಷ್ಟಿಯಿಂದ ಶ್ರೀಗಂಗಪ್ಪನವರು ತಮ್ಮ ಮೈಸೂರು ವಿಧಾನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆಕೊಟ್ಟು ಮತ್ತೆ ಧಾನ ಪ್ರತಿ ಯಮೇಲೆ ಜನಾಪೇಕ್ಷೆಯಲ್ಲಿ ನಿಲ್ಲಬೇಕೆಂದು ಕೇಳಿತು ಸೌರಸಭೆಯ ಗಣಮಂದಿ ಹಾಲಿ ಸದಸ್ಯರ ಇಚ್ಛೆಯಂತೆ ಬಳ್ಳಾರಿ ಪೌರಸಭೆಯನ್ನು ರದ್ದುಗೊಳಿಸಬೇಕೆಂದು ಮೈಸೂರಿ ಸರಕಾರವನ್ನು ಪ್ರಾರ್ಥಿಸಿಕೊಳ್ಳಲು ನಿರ್ಧರಿಸಲಾಯಿತು ಜೂನ್ ತಿಂಗಳ ಕೊನೆಯಲ್ಲಿ ಬಳ್ಳಾರಿಗೆ ಭೇಟಿಕೊಡುವ ಮೈಸೂರಿನ ರಾಜಪ್ರಮುಖರಿಗೆ ಬಿನ್ನವತ್ತಳಿಕೆಯನ್ನು ಸಿಸಲು ನಿರ್ಧರಿಸಲಾಯಿತು.

ಪೂರ್ವಪಾಕ್‌ನಲ್ಲಿ ಮಿಲಿಟರಿ ಆಡಳಿತ

ಪೂರ್ವಪಾಕಿಸ್ತಾನದಲ್ಲಿ ಈಗಿರುವ ಯುವಕ ಸಚಿವರುಗಳ ಸಂಖ್ಯೆಯನ್ನು ರದ್ದುಗೊಳಿಸಿ ಗೌರ್ನರ್ ಆಡಳಿತ ವನ್ನೇರ್ಪಡಿಸಲು ಕೇಂದ್ರ ಪಾರ್ ಸರ್ಕಾರ ಆಲೋಚಿಸಿದೆ ಯೆಂದು ತಿಳಿದುಬಂದಿದೆ ಸೌರ್ವರಲಿಗರಿಗೆ ಮಣ್ಣು ಸಲಹೆ ನಾರಲನ್ನಾಗಿ ಫಜಲುಲ್ ಹಕ್‌ರವರನ್ನು ನೇಮಿಸಲಾಗುವುದೆಂದು ಸುದ್ದಿ ನ್ಯಾಯ ಮತ್ತು ಶಾಂತಿಯನ್ನು ಕಾಪಾಡುವ ಕಾರ್ಯದಲ್ಲಿ ಪೂರ್ವ ಬಂಗಾಳ ಸರ್ಕಾರ ಸೋತಿದೆಯೆಂದೂ ಹೊಸದಾಗಿ ವಿರ್ಪಟ್ಟರುವ ಕೈಗಾರಿಕೆಗಳಿಗೆ ವಿಲಿಬೆರಿ ರಕ್ಷಣೆ ಕೊಟ್ಟು ಹೊರತು ಅದರ ಪ್ರಗತಿ ಸಾಧ್ಯ ವಿಲ್ಲವೆಂಬ ಖಚಿತಾಭಿಪ್ರಾಯಕ್ಕೆ ಕೇಂದ್ರಸರ್ಕಾರ ಬಂದಿದೆಯೆಂದೂ ಗೊತ್ತಾಗಿದೆ

ಆಲಿ ಸರ್ಕಾರದ ಬಗ್ಗೆ ಡಾನ್ ಚಪ್ಪೆನಟಿಕೆ

ಅದಂಜಿ ಸೇಣಾಬು ಕಾರ್ಖಾನೆ ಗಲಭೆಯ ಬಗ್ಗೆ ಸಚಿವರುಗಳು ವಪ್ಪಿಸಿರುವ ವರದಿಯನ್ನು ಜನತೆಯು ಮುಂದಿಡದಿರುವುದು ಕುದ್ದ ನಾಚಿಗೇಡಿಂದು ಅಲಿ ಸರ್ಕಾರವನ್ನು ' ಡಾನ್ ' ಪತ್ರಿಕೆ ಕಟುವಾಗಿ ಟೀಕಿಸಿದೆ ಪಾಕಿಸ್ತಾನವೆಷ್ಟೆ ಈಗ ಸರಿಯಾದ ನಾಯಕತ್ವ ದೊರೆಯದಿದ್ದರೆ ಜನರ ಪಾಕಿಸ್ತಾನ ಮಣ್ಣುಗೂಡುವುದೆಂದು ಡಾನ್ ಎಚ್ಚರಿಸಿದೆ ಡಾನ್ ಪತ್ರಿ ಸಂಪಾದಕೀಯದಲ್ಲಿ "ಇದು ಆಡಳಿತ ದಕ್ಷತೆಯೇ, ಇಲ್ಲವೇ ಕೃತ್ರಿಮಗಳ ಒಳ ಸಂಚೇ " ಎಂದು ಪ್ರಶ್ನಿಸಿದೆ.

ರಾಷ್ಟ್ರೀಯ ವ್ಯಕ್ತಿಗಳ ಹೆಸರಿನ ದುರುಪಯೋಗ

ರಾಷ್ಟ್ರಪತಿ ಪ್ರಧಾನ ಮಂತ್ರಿ ಮೊದಲಾದ ರಾಷ್ಟ್ರೀಯ ಗಣ್ಯವ್ಯಕ್ತಿಗಳ ಹೆಸರುಗಳನ್ನು ಕೆಲವು ವ್ಯಕ್ತಿಗಳೂ, ಸಂಸ್ಥೆಗಳೂ ಅನುಮತಿ ಇಲ್ಲದೆ ಉಪಯೋಗಿಸಿಕೊಂಡು ಪ್ರಜಾಮಂತ್ರಾಂಗ ಮತ್ತು ಹಣ ಪಡೆಯುತ್ತಿರುವ ಕೆಲವು ವರದಿಗಳು ಭಾರತ ಸರ್ಕಾರದ ಕಿವಿಗೆ ಬಿದ್ದಿವೆ ಈ ರೀತಿಯ ದುರುಪಯೋಗದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದೂ, ಅಂತಹ ಸಂದರ್ಭಗಳಲ್ಲಿ ಭಾರತ ಸರ್ಕಾರದ ಗೃಹಶಾಖೆಗೆ ತಿಳಿಸಬೇಕೆಂದೂ, ಭಾರತ ಸರ್ಕಾರದ ಪ್ರಾಂತ್ಯ ಸರ್ಕಾರಗಳಿಗೆ ಸೂಚಿಸಿದೆ ಎಂದೂ ತಿಳಿದು ಬಂದಿದೆ.

ಅಮೆರಿಕಾದ ಸುಪ್ರೀಂಕೋರ್ಟಿನ ತೀರ್ಪು

ಸಾರ್ವಜನಿಕ ಶಾಲೆಗಳಲ್ಲಿ ಬೈಬಲ್ ಮತ್ತು ಏಸ್ಕ್ರೀಸ್ತ ವಿದ್ಯಾರ್ಥಿಗಳನ್ನು ಬೇರೆಬೇರೆ ಇಡುವುದು ರಾಜ್ಯಾಂಗಕ್ಕೆ ವಿರುದ್ಧವಾದುದಾಗಿದೆ ಎಂದು ಅಮೆರಿಕಾದ ಸುಪ್ರೀಂ ಕೋರ್ಟು ತೀರ್ಪಿತ್ತಿತು. ಈರೀತಿ ವಿದ್ಯಾರ್ಥಿಗಳಲ್ಲಿ ಭೇದ ಕಲ್ಪಿಸುವುದು ರಾಜ್ಯಾಂಗದಲ್ಲಿ ನಮೂದಿತವಾಗಿರುವ ಸಮಾನತಾ ಭಾವನೆಗೆ ಧಕ್ಕೆತಂದಂತಾಗುತ್ತೆಂದು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ ೫೭ ವರ್ಷಗಳ ಹಿಂದೆ ಸುಪ್ರೀಂಕೋರ್ಟು ಮಾಡಿದ ತೀರ್ಮಾನದಲ್ಲಿ, ಸಮಾನತಾನುಕೂಲಗಳನ್ನು ಕಲ್ಪಿಸಬಹುದಾದರೂ ಬೇರೆ ಬೇರೆ ಸ್ಕೂಲುಗಳನ್ನಿಡಬೇಕೆಂದು ತಿಳಿಸಲಾಗಿತ್ತು.

ಬಿಹಾರಿನಲ್ಲಿ ಭೂಮಿಯ ಹಂಚಿಕೆ ಕಾರ್ಯಾರಂಭ

ಭೂದಾನಯಜ್ಞಚಳವಳಿಯಲ್ಲಿ ಹೊರಿಕ ಭೂಮಿಯನ್ನು ಭೂಮಿಯಿಲ್ಲದವರಿಗೆ ಹಂಚುವ ಕಾರ್ಯವು ಬಿಹಾರಿನಲ್ಲಿ ರಾಜ್ಯಪಾಲರಾದ ರಂಗನಾಥಧೂಮಮಂದ್ರ ದಿವಾಕರ್‌ರವರ ನೇತೃತ್ವದಲ್ಲಿ ಆರಂಭವಾಯಿತು. ದಿವಾಕರ್‌ರವರು ನೇಳ್‌ವಾರ್ ಗ್ರಾಮದ ೭೪ ಮಂದಿ ಭೂಮಿಯಿಲ್ಲದವರಿಗೆ ಕ್ರಮಾಣಪತ್ರಗಳನ್ನು ಹಂಚಿದರು

ರಕ್ತದ ಒತ್ತಡಕ್ಕೆ ಗಿಡಮೂಲಿಕೆ

ಸಂಬುಳ್ಳಿಲವರ್ ಎಂಬ ಗಿಡಮೂಲಿಕೆ ರಕ್ತದ ಒತ್ತಡಕ್ಕೆ ಸರಮೌಷಧವೆಂದು ಹೇಳಲಾಗಿದೆಯಷ್ಟೆ. ಈ ವನಸ್ಪತಿಯನ್ನು ಹಾವು ಕಚ್ಚಿದವರಿಗೆ ಉಸಯೋಗಿಸಲಾಗುತ್ತಿದೆ ಕಳೆದವರ್ಷ ಬ್ರಿಟನ್, ಅಮೆರಿಕಾ ಮತ್ತು ಜರ್ಮನಿಗಳಿಗೆ ೨೬ ಟನ್‌ಗಳಷ್ಟು ಮೂಲಿಕೆಯನ್ನು ಕಳುಹಿಸಲಾಯಿತು ಸುಮಾರು ೩೫ ವರ್ಷಗಳ ಹಿಂದೆಯೇ ಈ ಮೂಲಿಕೆ ಬಗ್ಗೆ ಮದ್ರಾಸ್ ಆಸ್ಪತ್ರೆಯಲ್ಲಿ ಪ್ರಯೋಗ ನಡೆದಿತ್ತು

ಗಾಣದ ಎಣ್ಣೆ ಕೈಗಾರಿಕೆ

ಗಾಣದ ಎಣ್ಣೆ ಕೈಗಾರಿಕೆಯ ಅಭಿವೃದ್ಧಿಗಾಗಿ ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಸಮಿತಿಯು ರಾಷ್ಟ್ರದಲ್ಲಿ ೫೦ ಪ್ರದರ್ಶನ ಹಾಗೂ ಉತ್ಪನ್ನ ಕೇಂದ್ರಗಳನ್ನು ಸ್ಥಾಪಿಸಲಿದೆ ಈ ಪ್ರದರ್ಶನದ ಮೂಲಕ ಉತ್ಪಮ ಗಾಣಗಳ ಉಪಯೋಗದ ಬಗ್ಗೆ ಗ್ರಾಮಸ್ಥರಿಗೆ ತಿಳುವಳಿಕೆಯನ್ನು ಕೊಡಲಾಗುವುದು ಮಾರ್ಚ್ ಮತ್ತು ಕಲ್ಲುಪಟ್ಟಿಗಳಲ್ಲಿ ಶಿಕ್ಷಣಕೇಂದ್ರಗಳನ್ನು ತೆರೆಯಲಾಗುವುದು

ಸಿಲೋನಿನಲ್ಲಿ ಶ್ರೀರೇಣುಕಾಶ್ರಮ

ಪುಣ್ಯಕ್ಷೇತ್ರವಾಗಿದ್ದ ಸಿಲೋನ್‌ದೇಶ (ಸಿಂಹಳ ದ್ವೀಪ) ಜಾಫ್ನ ಜಿಲ್ಲಾ ತಲ್ಲೆಮಸ್ಸಾರ್ ಗ್ರಾಮದಿಂದ (೫೧) ಮೈಲಿನ ಮೇಲೆ ಇರುವ ಕಂಕೇಶನ ತುರಾಯ ಎಂಬ ಗ್ರಾಮದಲ್ಲಿ ಶ್ರೀ ಜ|| ರೇಣುಕಾಶ್ರಮ ಆದೆ ಆದರಲ್ಲಿ ಶ್ರೀ ಜ|| ರೇಣುಕಮೂರ್ತಿಯ ಶಿವಲಿಂಗ ಕಂಗೊಳಿಸುತ್ತಿದೆ ಆ ಹೀರೆವು ದೊಡ್ಡದಾಗಿದೆ, ಮಳೆಯ ಸುವ್ಯವಸ್ಥೆಗಾಗಿ ಒಬ್ಬ ದೇಶಿಕರು ಇದ್ದಾರೆ ರಾಮೇಶ್ವರ ಕುಂಭಕೋಣಂದಿಂದ ಸನುದ್ರದಲ್ಲಿ ಪ್ರಯಾಣಮಾಡ ಬೇಕು. ಇಂತಹ ಕ್ಷೇತ್ರದರ್ಶನಮಾಡಿಕೊಂಡು ಧನ್ಯ ರಾಗಬೇಕು

ಸಿದ್ಧಾಂತಶಿಖಾಮಣಿ

(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಹಿಂದೆ ಪ್ರಸಿದ್ಧ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವಾಗಾರಭೂಷಿಯೆಂದೆನಿಸಿದ್ದ ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶ್ರೀ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೈತಲ್ಲಿ ತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವೈಭವವನ್ನು ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ|| ಬ್ಬ|| ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಳು ಬೆಲೆ ರೂ. 2-8-0

ನ್ಯೂನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಠ (೬ನೆಯ ಆವೃತ್ತಿ)	...	೧ ಆಣೆ
ಷಟ್ಸಾಸ್ತ್ರಮತವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	...	೧ ಆಣೆ
ತಂತ್ರವಿಂಶತಿ ಪ್ರತ್ಯಕ್ಷಶಾಸ್ತ್ರ (೫ನೆಯ ಆವೃತ್ತಿ)	...	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	...	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	...	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	...	೨ ಆಣೆ
ಶ್ರೀರುದ್ರಮುನಿವಾಚಾರ್ಯಶತಕ	...	೨ ಆಣೆ
ತಿವಕಶ್ತಿವಿಲಾಸ	...	೨ ಆಣೆ
ವಿಜಯಪುರಿಗೆ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ	...	೨ ಆಣೆ
ತಿಲ್ಪಮಾಹಾತ್ಮ್ಯ (೨ನೆಯ ಆವೃತ್ತಿ)	...	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	...	೩ ಆಣೆ
ಅಸಮಾದಿವಿಷಕಶ್ತವದರ್ಪಣ (೫ನೆಯ ಆವೃತ್ತಿ)	...	೩ ಆಣೆ
ಪಂಚಾಚಾರ್ಯಪ್ರಕಾಶ	...	೩ ಆಣೆ
ಪಂಚಾಚಾರ ಪ್ರಕಾಶಿಕಾ	...	೩ ಆಣೆ
ಶ್ರೀಗುರುಚಕ್ತ್ವಪದಗಳು (೩ನೆಯ ಆವೃತ್ತಿ)	...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...	೪ ಆಣೆ
ಲಿಂಗಧಾರಣವಿಧಿ	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	...	೪ ಆಣೆ
ಶೈವಿಕವಾಙ್ಮಯರಸ್ಯ	...	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಮಾವಳಿ (೩ನೆಯ ಆವೃತ್ತಿ)	...	೪ ಆಣೆ
ಕೈವೇಷಪಕ್ಷಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ)	...	೬ ಆಣೆ
ಷಟ್ಸಾಸ್ತ್ರಮತವಿಮರ್ಶತ್ವಸ್ಥಿರೀಕರಣ (೩ನೆಯ ಆವೃತ್ತಿ)	...	೬ ಆಣೆ
ವೀರಶೈವಾಂಗೈಸ್ಥಿ—ಪ್ರಾಧ್ವವಿಧಿ	...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಕ್ಕಸ್ಥೆಯ)	...	೮ ಆಣೆ
ತಿಲಾದ್ಭೈತಕವಿಭಾಷಾ (ಸಂಸ್ಕೃತ)	...	೮ ಆಣೆ
ವೀರಶೈವಮತಹಾತ್ಮರು	...	೮ ಆಣೆ
ಬಸವಧ್ಯಾಂತವಿವಾಕರ (೨ನೆಯ ಆವೃತ್ತಿ)	...	೮ ಆಣೆ
ಅಗಮಪರಿಜ್ಞಾನ	...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಬಾಷಣಮು (ತೆಲುಗು)		೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	...	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ನಕ್ಷತ್ರಮಾಲಿಕಾ		೮ ಆಣೆ
ಕನ್ನಡ ನ್ಯಾಯಶತಕಮ್		೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚನಶಿವಾಚಾರ್ಯಕೃತ)	...	೧೨ ಆಣೆ
ತಿಷಾಸೂತ್ರಸಿದ್ಧಾಂತದರ್ಪಣ		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ		೧ ರೂ
ಮೂಷೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	...	೧ ರೂ.
ವಿವೇಕಮುಕ್ತಾವಳಿ	...	೧ ರೂ
ವಿಚಾರಸಾರಾವಳಿ	...	೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರಕ್ತಾಕರ		೧ ರೂ
ವೈದಿಕತಿವಪೂಜಾವಿಧಿ (ವೈದಿಕಶ್ಕಯಿಕ್ತ್ವಾಮುಮು. ೩ನೆಯ ಆವೃತ್ತಿ)		೧॥ ರೂ.
ತಿಷ್ಯರ ಮನೆಗಳ ರಿಜಿಸ್ಟರ್ ಬುಕ್	...	೧॥ ರೂ
ತಿವಾಗಮಸಂಗ್ರಹ (ಪಂಪ್ಕಾಷ್ಟ ಪಾಗಮಂ-ಕಾರಣಾಗಮ-ಉಳುತಿಂಗಾಗಮ ಸಮಸ್ತಾಗಮಗಳಿಂದ ಉದ್ಧರಿರುವುದು)		೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಾರ್ಥಪಟ್ಟಿದಿ)	...	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಪುಷ್ಕಳದ ಫೋಟೋಗಳಿರುವುದು		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...	೩॥ ರೂ.
A brief life-sketch of Pandit Sri-Kashinatha Shastr	(English)	4 As
The Philosophical Aspect of Virasaivism (English)		8As.
Speeches by Pandit Shri Kashinatha Shastriji (Engl	h)	12 As
ತಿಲಾಚಾರಚಂದ್ರಿಕಾ (ಚಕ್ಕಡ)	...	೩ ಕ
ಶೀರಶೈವರತ್ನ (ಸಚಿತ್ರ)	...	೧ ಕ.
ಷಟ್ಸಾಸ್ತ್ರಮತವಿಮರ್ಶತ್ವಸ್ಥಿರೀಕರಣ (ಶೀರಶೈವಾಚಾರ್ಯ-ಚಕ್ಕಡ)		೧ ಕ.
ಸಂಧಿಕಿಚಾರಚಂದ್ರಿಕಾ (ಚಕ್ಕಡ)	...	೨ ಆಣೆ

—ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahmasrimadhiyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಶಜಾತಜನಿತರ್ ಪಂಚಾಸ್ಯಶೀಶಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಲಿ ಶ್ರೀ ಶಾಶೀಲಾಷಪಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೮ ಆ.

ಸಂಪುಟ ೨೮] ಸೋಮವಾರ ತಾ॥ ೩೧ನೇ ಮೇ ೧೯೩೫ [ಸಂಚಿಕೆ ೪

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ಸೈಶಾಖ ಶು॥ ಪಂಚಮಿಗೆ ೨೭ ವರ್ಷಗಳು ತುಂಬಿ ೨೮ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸಜ್ಜನರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ. ಮಾಡಬೇಕೋಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ಅಷ್ಟೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೇ ೩ ರೂಪಾಯಿಗಳನ್ನು ಮಹಿಯರ್ಡರ್ ದ್ವಾರಾ ಳಉಬಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಆಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮೇರೆಯಲ್ಲಿ ತಿಳಿಸಬೇಕು

—ವ್ಯಾ

ನಾಡೀ ಲಕ್ಷಣಗಳು

ಉತ್ತಮ ನಾಡಿ

ಪರೀಕ್ಷಿಸುವಾಗ ನಾಡಿಯು ಬೇಗನೆ ಕೈಗೆ ಸಿಗಬೇಕು ಮತ್ತು ಉತ್ತಮವಾಗಿ ಆಡುತ್ತಿರಬೇಕು, ತನ್ನ ತಾಣದಲ್ಲಿಯೇ ಇರಬೇಕು, ತೀರ ಮಂದವಾಗಿರದೆ ತೀವ್ರವಾಗಿ ಹಾರದೆ ಮಧ್ಯಮ ಗತಿಯಲ್ಲಿರಬೇಕು ಇಂತಹ ನಾಡಿಯು ಉತ್ತಮವಾದುದು

ನಾಡಿಯಿಂದ ವಾತಾದಿಗಳು ತಿಳಿಯುವವು

ವಾತ-ಪಿತ್ತ-ಕಫಗಳ ಮತ್ತು ಅವುಗಳಲ್ಲಿ ಒಂದೆ ಕ್ಕೊಂದು ಸೇರಿದವುಗಳ, ಸನ್ನಿಪಾತ ಮುಂತಾದವುಗಳ ಸಾಧ್ಯಾಸಾಧ್ಯತೆಯ ಸರ್ವವನ್ನೂ ನಾಡಿಗಳು ತಿಳಿಸುತ್ತವೆ

ವಾತಾದಿ ನಾಡಿ

ವಾತಾಧಿಕ್ಯದಲ್ಲಿ ನಾಡಿಯು ಹಾವಿನಂತೆ ಅತ್ಯ ವಾಗಿಯೂ, ಪಿತ್ತಾಧಿಕ್ಯದಲ್ಲಿ ಕಾಗಿಯಂತೆ ಅತಿ ಜಂಜಲ ವಾಗಿಯೂ, ಶ್ಲೇಷ್ಮಾಧಿಕ್ಯದಲ್ಲಿ ಕಪ್ಪೆಯಂತೆ ಮಂದ ವಾಗಿಯೂ, ವಾತ-ಪಿತ್ತಾದಿಗಳ ಸಮ್ಮಿಶ್ರಣದಲ್ಲಿ ಆಗೆ ಬಗೆಯಾಗಿಯೂ ಹಾರುತ್ತಿರುವುದು.

ನಾಡಿ ಸ್ಥಾನಗಳು

ಕಂಠಣ ರೇಖೆಯ ಆರಂಭದಲ್ಲಿ ವಾತನಾಡಿಯೂ, ಅದಕ್ಕೆ ಹೊಂದಿಕೊಂಡು ಮೇಲಕ್ಕೆ ಪಿತ್ತನಾಡಿಯೂ, ಅದರ ಮಗ್ಗುಲು ಶ್ಲೇಷ್ಮನಾಡಿಯೂ ಆಡುತ್ತಿರುವುದು. ಆಯಾ ಪೀಡೆಗಳ ಅಧಿಕ್ಯದಲ್ಲಿ ಆಯಾ ನಾಡಿಗಳೇ ಜೆಜ್ಜಾಗಿ ಹಾರುತ್ತಿರುವುವು. ಸನ್ನಿಪಾತದಲ್ಲಿ ಒಂದು ಕ್ರಮವಿಲ್ಲದೆ ತೀವ್ರವಾಗಿಯೂ ವಿಲಕ್ಷಣವಾಗಿಯೂ ಹಾರುತ್ತಿರುವವು

ವಾತ-ಪಿತ್ತ ಮಿಶ್ರನಾಡಿ

ವಾತ ಪಿತ್ತಗಳ ಮಿಶ್ರಣ ಸಮಯದಲ್ಲಿ ನಾಡಿಯು ಒಮ್ಮೆ ಹಾವಿನಂತೆ ಆಡ್ಡನಾಗಿಯೂ, ಒಮ್ಮೆ ಕಪ್ಪೆಯಂತೆ ಮೇಲಕ್ಕೂ ಹಾರುತ್ತಿರುವುದು.

ವಾತ-ಶ್ಲೇಷ್ಮ ಮಿಶ್ರ ನಾಡಿ

ವಾತ-ಶ್ಲೇಷ್ಮ ಮಿಶ್ರಣ ಸಮಯದಲ್ಲಿ ನಾಡಿಯು ಒಮ್ಮೆ ಹಾವಿನಂತೆಯೂ, ಒಮ್ಮೆ ಹಂಸದಂತೆಯೂ ಹಾರುತ್ತಿರುವುದು

ಪಿತ್ತ-ಶ್ಲೇಷ್ಮ ಮಿಶ್ರ ನಾಡಿ

ಪಿತ್ತ-ಶ್ಲೇಷ್ಮ ಮಿಶ್ರಣ ಸಮಯದಲ್ಲಿ ನಾಡಿಯು ಒಮ್ಮೊಮ್ಮೆ ಕಪ್ಪೆಯಂತೆ ಒಮ್ಮೊಮ್ಮೆ ನವಿಲಿನಂತೆ ಹಾರುತ್ತಿರುವುದು

ಸನ್ನಿಪಾತ ನಾಡಿ

ಸನ್ನಿಪಾತ ಸಮಯದಲ್ಲಿ ನಾಡಿಯು ಒಮ್ಮೆ ಸಡಿ ಲಾಗಿ, ಒಮ್ಮೆ ಮಂದವಾಗಿ, ಒಮ್ಮೆ ತೀವ್ರವಾಗಿ, ಒಮ್ಮೆ ಮಧ್ಯಮವಾಗಿ, ಒಮ್ಮೆ ನಿಂತು ನಿಂತು, ಒಮ್ಮೆ ಪೂರ್ತಿ ಯಾಗಿ ನಿಂತು, ಕ್ಷಣದಲ್ಲಿಯೇ ಮತ್ತೆ ಭುಜದಲ್ಲಿ ಅದರುತ್ತ, ಒಮ್ಮೆಲೇ ಹೆಬ್ಬೆರಳವಲ್ಲಿ ಅದರುತ್ತ ಬಹು ವಿಧವಾಗಿ ಹಾರುತ್ತಿರುವುದು. ಇದು ಅಸಾಧ್ಯವು

ಅತಿಧ ನಾಡಿ

ನಾಡಿಯು ಒಮ್ಮೆಲೇ ಹೆಚ್ಚಾಗಿ ಹಾರುವುದು, ಒಮ್ಮೆಲೇ ಮಂದವಾಗುವುದು, ಒಮ್ಮೆಲೇ ಸುಮ್ಮನಾಗು ವುದು, ಮತ್ತೆ ಸೂಕ್ಷ್ಮವಾಗಿ ಆಡಲು ಪ್ರಾರಂಭವಾಗು ವುದು, ಸೊಟ್ಟಸೊಟ್ಟವಾಗಿ ಹಾರುವುದು ಈ ಲಕ್ಷಣಗಳು ಅಸಿಧ್ಯವಾದವುಗಳೆಂದರಿಯಬೇಕು

ಮೃತ್ಯು ನಾಡಿ

ನಾಡಿಯು ಮಂದಮಂದವಾಗಿ ನಿಂತು ನಿಂತು ತಪ್ಪ ಸ್ಥಾನದಿಂದ ಸರಿಸರಿದು ಸಕಿಲಾಗಿ ಆಡುತ್ತಿದ್ದರೆ ಮರಣ ಸೂಚಕವು.

ರೋಗಿಯ ಮೂಗಿನ ತುದಿಯು ಬಹಳ ತಣ್ಣಗಾಗಿ ಕಂಬುಗಳು ಆಡ್ಡಾಡದೆ ಇದ್ದಲ್ಲಿಯೇ ಇದ್ದು ನಾಡಿಯು ತಪ್ಪ ಸ್ಥಾನದಲ್ಲಿ ಗೋಡಿಯಿಪ್ಪಿದರೂ ಬೆಟ್ಟು ಸರಿದರೆ ಮೂರು ದಿವಸಗಳ್ಳಲ್ಲಿಯೇ ಮರಣ ಸಂಭವಿಸುವುದು.

(ಧರ್ಮಶಾಸ್ತ್ರ)

ಜಪಾನಿನಲ್ಲಿ ಒಬ್ಬ ತರುಣಪ್ರಾಧ್ಯಾಪಕ ಅವನ ವಯಸ್ಸು ಕೇವಲ ೬ ವರ್ಷ ಇವನಿಗೆ ೪ ಭಾಷೆಗಳಲ್ಲಿ ಪರಿಪೂರ್ಣ ಪಾಂಡಿತ್ಯವಿದೆಯಂತೆ.

ಅಂಧ್ರ ಪ್ರಾಂತ್ಯದ ಹಳ್ಳಿಯೊಂದರಲ್ಲಿ ಕೇವಲ ೮ ವರ್ಷದ ಶಿಶುವೊಂದು ಬಾಲಕನು ಒಕ್ಕತ್ತಿಗೆ ೧ ಸೇರು ಅಕ್ಕಿ ಅನ್ನವನ್ನು ಊಟಮಾಡುತ್ತಿರುವನಂತೆ.

ಸ್ವೀಕಾರ

ಗದಗ-ಬೆಟಗೇರಿ ನಿವಾಸಿಗಳಾದ ಶ್ರೀ ಚನ್ನವ್ವ ಬಸವ್ವ ಇಟಗಿ (ದೇಸಾಯಿ) ಇವರ ಪುತ್ರ ಚಿ॥ ಬಸ ವಂತೆಪ್ಪ ಬಿ-ಕಾಂ ಇವರಿಗೆ ಶ್ರೀರಾಚಪ್ಪ ಮಲ್ಲಪ್ಪ ಅಬ್ಬಿಗೇರಿ ಇವರ ಪುತ್ರಿ ಚಿ॥ ಸೌ॥ ಅನಸೂಯಾ ದೇವಿ ಯನ್ನು ಕೊಟ್ಟು ತಾ॥ ೩೦-೪-೩೫ ನೇ ಭಾನುವಾರ ನಡೆಸಿದ ನಿಶ್ಚಯಸಮಾರಂಭದಲ್ಲಿ ವೇ॥ ಶಕ್ತರಯ್ಯ ಹೊಸಮಠ ಇವರು ಸ್ವಭಾಪೋಷಣಕ್ಕಾಗಿ ತೆಗೆಯಿಸಿದ ನರನಕಡೆಯಿಂದ 1 ರೂ ಕನ್ಯಾಕಡೆಯಿಂದ 1 ರೂ ಒಟ್ಟು 2 ರೂ ಗಳ ಬೆಟಗೇರಿ ಪಂಚಾಚಾರ್ಯ ಸೇವಾ ಸಂಘದ ಸೆಕ್ರೆಟರಿ ಶ್ರೀ ಅಯ್ಯಸ್ವಾ ಶಂಕರಪ್ಪ ಮುದ ಗಲ್ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಮುಂಡರಿಗಿ ನಿವಾಸಿಗಳಾದ ಶ್ರೀ ಕಲ್ಲಪ್ಪನವರು ಬೆಲ್ಲದ ಇವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ದಿಗ್ಗಾವಿ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಡಿ॥ ಮಮದಾಪೂರ ಗ್ರಾಮದ ಶ್ರೀ ಈಲ್ಲಯ್ಯ ಕೆಂಬ ಎಂಬವರು ಶಿವಪೀಗನಾದ ಸಮಯ ದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 3-4-0 ರೂ ಗಳು ಶ್ರೀ ಜಿ ಜಿ. ಹಿರೇಮಠ ಇವರ ದ್ವಾರಾತಲ್ಪಿರುತ್ತವೆ

ಬಳ್ಳಾರಿ ಡಿ॥ ಹಂಪಸಾಗರದಲ್ಲಿರುವ ಕಾವಲಿ ಭಕ್ತಾ ವೃಷ್ಟಿಮಠದ ವೇ॥ ಚನ್ನಬಸವಯ್ಯಸ್ವಾಮಿಗಳು ತಮ್ಮ ಪುತ್ರನ ವೀಣ್ಣಮಹೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 5 ರೂ ಗಳು ದಿಗ್ಗಾವಿ ಹಿರೇಮಠದ ಶ್ರೀ ರುದ್ರಮುನಿವಿನಾಚಾರ್ಯಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ವಿಜಾಪೂರ ಡಿ॥ ಬಾಗಲಕೋಟೆವಾಸಿಗಳಾದ ಶ್ರೀ ಶಿವಸ್ವಾಮಿ (ಪಟ್ಟದಸ್ವಾಮಿ) ಬಿದವಟ್ಟೆ ಹಿರೇಮಠ ಇವರ ವಿವಾಹವು ಶ್ರೀ ವೀರಯ್ಯರು ಹಿರೇಮಠ ಸಾ॥ ಹಿರೇಮ್ಯಾಗೇರಿ ಇವರ ಸುಪುತ್ರಿ ಚಂ॥ ಸೌ॥ ಶಿವಾಂಬೆ (ಸುಶೀಲಾದೇವಿ)ಯೊಡನೆ ಬಿದವಟ್ಟೆ ಮುಳ್ಳಾಮಿಠಲ್ಲಿ ಪಟ್ಟಾಧ್ಯಕ್ಷ ಶ್ರೀ ಪಂಚಾಕ್ಷರಿತಿವಾಚಾರ್ಯಸ್ವಾಮಿಗಳವರ ಪತ್ರಿಕೆಯ ಪ್ರಕಾರ ತಾ॥ ೩೦-೪-೩೫ ನೇ ಗುರುವಾರದ ದಿವಸ ವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣೆಗಾಗಿ 5 ರೂ ಗಳನ್ನು ಸಮರ್ಪಿಸಿ ಳಉಬಿಸಿದ್ದಾರೆ.

ಧಾರವಾಡ ಡಿ॥ ಬೆಲವಂಕರ ಗ್ರಾಮದ ಳಂಬೆಪ್ಪ ಗೌಡ ಹೂಲ್ಪಿ ಇವರ ಪುತ್ರ ಚಿ॥ ಚನ್ನಪ್ಪಗೌಳ್ಪಿಗೆ ಆದರಗುಂಚ ಗ್ರಾಮದ ಶ್ರೀ ಕಲ್ಲಪ್ಪಗೌಡ ಧಾರವಾಡ ಇವರ ಪುತ್ರಿ ಚಿ॥ ಸೌ॥ ಸಿದ್ದವ್ವನವನ್ನು ಮತ್ತು ಹಿಮ್ಮಸ ಪುತ್ರಿ ಚಿ॥ ಸೌ॥ ಬಸವ್ವನವಳ್ಳು ಶ್ರೀ ಳಳವಪ್ಪಜವರ ಪುತ್ರ ಚಿ॥ ಶಂಕರಪ್ಪನಿಗೂ ತಾ॥ ೩೦-೪-೩೫ ನೇ ಗುರುವಾರ ನಡೆಸಿದ ವಿವಾಹ ಸಮಾರಂಭದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ವೆಲವಂಕರ ಹಿರೇಮಠದ ಶ್ರೀಗಳ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಾಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ

೧೯೫೪ನೆಯ ಮೇ ತಾ॥ ೩೧ ನೇ ಸೋಮವಾರ

ಶಿವಭಕ್ತ ಉಪಮನ್ಯು

ಭಕ್ತ ಉಪಮ ನು ವೃ ವೇದವ್ಯಾಸ್ಯಷ್ಟ ಶ್ರೀ ವ್ಯಾಸರ ಪಾದ ಮಹಾಋಷಿಯ ಜೇತ್ರಪುತ್ರನ ಉಪಮ ನ್ಯು ಏದುವರ್ಷದ ಬಾಲ್ಯದಲ್ಲಿ ಒಂಪವಿನ ಹಸ್ಸ ತಾಯಿಯು ಬಲಿಂದು ತನಗೆ ಒದಿಯಲು ಹಾಲನ್ನು ಕೊಡು ಎಂದು ಕೇಳಿದನು ಅಸ್ಯಮಾನಿಯಾದ ತಲಿಳು ಹಾಲನ್ನು ಎಲ್ಲಿ ತರಬೇಕು? ಆದರೆ ಮಗನಿಗೆ ಇಲ್ಲ ವೆಂದು ಹೇಳಿ ಆಪಾಬಂಗಮಾಡಲು ವ ಸಿಷ್ಟಿದೆ ನೀರಿಗೆ ಹಿಟ್ಟುಬೆರಸಿ ಮಗನಿಗೆ ಕುಡಿ ಲು ಕೊಟ್ಟಳ. ಆದರೆ ಉಪಮನ್ಯುವು ಹಿಂದೆ ಒ ದಲು ತನ್ನ ಸೋದರನಾದ ವನೆಯಲ್ಲಿ ಪಾಲನ್ನು ಕುಡಿದು ಸೋಡಿದ್ದನಾಗಿರಿಂದ, ಈಗ ತಾಯಿಯ ಕೊಟ್ಟಿದ್ದ ಪಾಲಿನ್ನ ದು ತಿಳಿದು ಕೊಂಡು ತಾಯಿಯನ್ನು ನೋಡಿ ಇದೀನಮ್ಮ ಇದು ಪುಲು ಅಜ್ಜನಲ್ಲ ಎ ದ ಕೇಳದನು ಆಗ ಯಸಿ ಪತ್ನಿಯು ಮಗನನ್ನ ನೋಡಿ ನ ನದಿಂದ 'ಅಪ್ಪಾ ಮಗನೆ ಇದು ಪಾಲಲ್ಲ ನಿಲಿ ಸುಹೆಗಳ್ಲುಂ ನಡುತೀರ ವಲ್ಲೂ ಇವ್ಯುಕೊಂಡು ಕಾಲಗಳೆ ಬ್ಟಿರುವ ನವಗೆ ಬೆಯಲ್ಲಿ ಎಲ್ಲ ಸಿಕ್ಕುತ್ತದೆ ನಮ ಸರ್ವಸಾಧಿಕ್ಯನ್ನು ಶ್ರೀ ಶಿವಮೂರ್ತಿಯೇ ಆಗಿದ್ದಾ ನಿನಗೆ ಹಾಲು ಬೇಕಾದರೆ ಜಗನ್ಮಾಯ ಕಪಾದ ಆ ಸಾಂಬಸದಾಶಿವ ಮೂರ್ತಿಯನ್ನು ಪ್ರಾರ್ಥಿಸಿ ಪ್ರಸನ್ನಿಕರಿಸಿಕೊ ಆತನು ನಿನಗೆ ಸಕಲ ಸೌಭಾಗ್ಯಗಳನ್ನು ಕೊಡುವನು. ಎಂದು ಹೇಳಿ ದಳು

ತಾಯಿಯು ಮಾತ್ಸಾನ್ಯ ಕೇಳಿದ ಬಾಲಕ ಉಪಮನ್ಯುವು ತಾಳಿಳ್ಳನು ಕುರಿಲು ಎಂಬಾ ಶ ಪರಮೇಶ್ವರ ನಾರ್ಯ, ಎಲ್ಲಿದ್ದಾನೆ ಹೇಗಿದ್ದಾನೆ ಅವನು ಪ್ರಸನ್ನನಾಗಲು ಏನು ಮಾಡಬೇಕು" ಎಂದು ಪ್ರಶ್ನಿಸಿದನು

ಬಾಲಕನ ಈ ಮುಗ್ಧವಾಣಿಗಳನ್ನ ಕೇಳಿ ತಾಯಿಯ ಕಣ್ಣಿನಲ್ಲಿ ನೀರುತುಂಬಿ ಆ ಮು ಸ್ಪಮ ಸ್ಫುರಾಣಾಗಿ ವ ಗನಿಗೆ ಉತ್ತರನ ದು ಪದನ್ನ ವರ್ಣಿಸಿ ನೀನು ಅವನ ಭಕ್ತನಾಗು. ಅವನ ರೂಪಗುಣವನ್ನು ಧ್ಯಾನಿಸುತ್ತ 'ನಮಃ ಶಿವಾ ಯ' ಎಂಬ ಪಂಚಾಕ್ಷರಿ ಮಹಾಮಂತ್ರವನ್ನು ಸಪಸ ಕ್ಕರಿ. ಸ್ವಾಮಿಯು ಪ್ರಸನ್ನನಾಗಿ ನಿನಗೆ ಸಕಲ ಕಲ್ಯಾಣವನ್ನು ಉಂಟುಮಾಡುವನು' ಎಂದು ಹೇಳಿದಳು

ತಾಯಿಯಿಂದ ಉಪದೇಶಪಡೆದ ಬಾಲಕ ಉಪಮನ್ಯುವು ತನ್ನ ಪಂಡೆಯುಬಳಿಗೆ ಹೋಗಿ ಪರಮಾತ್ಮನಾದ ಶಿವನನ್ನು ಪ್ರಸನ್ನೀಕರಿಸಿಕೊಳ್ಳಲು ಹೊರಡುವ ಕನ್ನ ಸಂಕಲ್ಪವನ್ನು ತಿಳಿಸಿದನು ಪರಮಾತ್ಮನ ಕಡೆಗೆ ತಿರುಗಿದ ತನ್ನ ಸುಪುತ್ರನ ವಿಷಯಕ್ಕೆ ಆತನ ತಂದೆಗೆ ಬಹಳ ಸಂತೋಷವಾಯಿತಾದರೂ ಆವನ ಎಳೆವಯಸ್ಸಿನ ವಿಷಯದಲ್ಲಿ ಸ್ವಲ್ಪ ಯೋಚಿಸಲೆಯೂ ಬಂಬಾಯಿತು ಆದರೂ ತನ್ನ ಮಗನ ದೃಢತೆಯನ್ನು ತಿಳಿದು, ಅವನಿಗೆ ಉಪ ನಯನಕರ್ಮವನ್ನು ಮಾಡಿ 'ಅಗ್ನಿರಿ ಭಕ್ಷ' ಮೊದ ಲಾದ ಮಂತ್ರಪೂರ್ವಕ ಭಸ್ಮರುದ್ರಾಕ್ಷಧಾರಣ ಮಾಡಿಸಿ ಪಂಚಾಕ್ಷರಮಂತ್ರಕ್ಕೆ ತಕ್ಕ ತಿವಲಿಂಗಾರ್ಚನೆಯ ವಿಧಾನೆ ವನ್ನು ತಿಳಿಸಿ ಆತೀರ್ವದಿಸಿ ಕಳುಹಿಕೊಟ್ಟನು ಮನೆ ಯಿಂದ ಹೊರಟ ಕೇವಲ ೫ ವರ್ಷ ವಯಸ್ಸಿನ ಬಾಲಕ ನಾದ ಉಪಮನ್ಯುವು ವನವನ್ನು ಸೇರಿ ನಿತ್ಯವೂ ವನ ದಲ್ಲಿರುವ ಪತ್ರ-ಪುಷ್ಪಗಳಿಂದ ನಮಃಶಿವಾಯ ಮಂತ್ರ ಮೂಲಕವೇ ಈಶ್ವರನನ್ನು ಪೂಜಿಸುತ್ತ ಉಳಿದ ಕಾಲ ವೆಲ್ಲ ಮಂತ್ರಜಪ ಮಾಡುತ್ತ ತಪವನ್ನಾಚರಿಸಹತ್ತಿ ದನು. ಹೀಗೆ ತಪಸ್ಸುಮಾಡುವಾಗ ಅವನಿಗೆ ಅನ್ಯಾದಿ ರುವ ವಿಘಾತಗಳು ಬಹಳ ಹೊಂದರೆ ಕೊಡುತ್ತಿದ್ದವು. ಆದರೂ ಉಪಮನ್ಯುವಿಗೆ ಮನಸ್ಸಿನಲ್ಲಿ ಭಯವಾಗಲಿ, ತಪಸ್ಸಿಗೆ ವಿಘ್ನವಾಗಿ ಅಥವ ಅವುಗಳ ವಿಚಾರದಲ್ಲಿ ಕೋಪವಾಗಲಿ ಉಂಟಾಗಲಿಲ್ಲ ಅವನು ಉಚ್ಚಸ್ವರದಲ್ಲಿ ಉಚ್ಚರಿಸುತ್ತಿದ್ದ 'ಶಮಃಶಿವಾಯ' ನೆಂಬ ಪಂಚಕ್ಷ ಮಂತ್ರದ ತ್ರವಣಧ್ವನಿಯಿಂದ ಅಲ್ಲಿಯ ವಿಕಾಟಗಳೂ ವಿಕಾಟಜಪ್ಪಿಯಂದ ಮುಕ್ತರಾದರು ಈ ಬಾಲಕನ ದೃಢ ತರವಾದ ತಪಸ್ಸನ್ನು ನೋಡುತ್ತಿರಿದ್ದ ಮಹರ್ಷಿಗಳೂ, ದೇವ ತೆಗಳೂ ಆಶ್ಚರ್ಯಗೊಂಡರು.

೨ ವರ್ಷ ಆಹೋರಾತ್ರಿ ಪರ್ಣಾಹಾರ, ಜಲಾಹಾರ ದಿಗಳಿಂದ ಹೀಗೆ ಕಾಲಕಳೆದ ಉಪಮನ್ಯುವಿನ ಉಗ್ರ ತಪ್ಪೋಜ್ಯಾಬೆಗೆ ಭೀತರಾದ ದೇವತೆಗಳು ಪರಿತಿನಲ್ಲಿ ಹೋಗಿ ಪ್ರಾರ್ಥಿಸಿಕೊಂಡರು ಭಕ್ತವತ್ಸಲನಾದ ಶಿವನು ಅವರಿಗೆ ಇವುಲ್ಲವೆಂಟುನ್ನು ತನ್ನ ಭಕ್ತನ ಕೇಕೆಯನ್ನು ಹೆಚ್ಚಿಸುವೆಕೆಂದು, ಅವನ ಅನನ್ಯಭಾವನೆಯನ್ನು ಪರೀಕ್ಷೆ ಮಾಡ ನ ವ್ಯಾಜದಿಂದ ತಾನು ದೇವೇಂದ್ರನ ರೂಪ ನನ್ನು ಧಾಂಗಿಸಿಕೊಂಡು ಐರಾವತವನ್ನೇರಿ ನಂದಿ ಯನ್ನೊಯೋಹಿಸಿ ಉಪಮನ್ಯುವಿನ ಒಳಗೆಬಂದನು ಹೀಗೆ ಒಳಗಬಂದ ದೇವೇಂದ್ರನನ್ನು ನೋಡಿ ಉಪಮನ್ಯುವು ಕ ಮೂರನು ಎದ್ದು ಸಾಷ್ಟಾಂಗಪ್ರಣಾಮಮಾಡಿ " ಹೇ ದೇವರಾಜ, ತಾವು ಕೃಪೆಯಿಟ್ಟು ನನ್ನ ಬಳಿಗೆಬಂದು ದರ್ಶನವನ್ನು ಅನುಗ್ರಹಿಸಿರುವಿರಿ, ನನ್ನಿಂದ ತಮಗೆ ಏನು ಸೇವೆಯಾಗಬೇಕು ದಯವಿಟ್ಟು ತಿಳಿಸಬೇಕು" ಎಂದು ಕೇಳಿಕೊಂಡನು ಇಂದ್ರರೂಪಿಗಾದ ಶಂಕರನು ಪ್ರೀತನಾಗಿ 'ಎಲ್ಲೆ ಸುವ್ರತನೆ, ನಿನಗೆ ಇಷ್ಟನಾದ ವರ ವನ್ನು ಕೇಳು ಕೊಡುತ್ತೇನೆ" ಎಂದನು

ಉಪಮನ್ಯುವು ಇಂದ್ರನವೆಷಾತನ್ನು ಕೇಳಿ 'ಹೇ ದೇವರೊಜ ತಮ್ಮ ಕೃಪೆಗೆ ನಾನ. ಬಹಳ ಕೃತಜ್ಞನಾಗಿ ದ್ದೇನ ಆದರೆ ನಾನು ತಮ್ಮಿಂದ ಏನನ್ನೂ ಅಪೇಕ್ಷಿಸು ವದಿಲ್ಲ. ನವಗ ಸ್ವರ್ಗವಾಗಲಿ ಸ್ವರ್ಗಸಮಿಗಳಾಗಲಿ ಬೇಕಾಗಿಲ್ಲ ಕೇವಲ ಭಗವಾನ್ ಶ್ರೀ ಶಂಕರನ ದಾಸಾ ನುದಾಸನಾಗಲು ಆಪೇಕ್ಷಿಸುತ್ತೇನೆ ಆ ಸ್ವಾಮಿಯು ಎಲ್ಲಿರುವರಿಗೆ ನನಗೆ ದರ್ಶನಕೊಡುವುದಿಲ್ಲವೋ ಅಲ್ಲಿಯ ವರೆಗೆ ನಾನು ಈ ತಪಸ್ಸನ್ನು ನಿಶ್ಚಿಸುವೆಂತಿಷ್ಟ ಆದಿಶ್ವರು ಪನೂ, ಅದ್ವಿತೀಯನೂ, ನಾರಿರಹಿತನೂ ಆದ ಭಗ ವಾನ್ ಶಿವನ ದರ್ಶನವಾದ ಹೊರತು ಶಾಂತಿ ದೊರೆಯು ವದಿಲ್ಲ ನಸ್ಸ ಯಾವ ದೋಷದಿಂದಲಾದರೂ ಈ ಜನ್ಮ ದಲ್ಲಿ ನನಗೆ ಆತನ ದರ್ಶನವಾಗದಿದ್ದರೂ ಮುಂದಿನ ಜನ್ಮದಲ್ಲಿಯೂ ಆತನಲ್ಲಿಯೇ ನಷ್ಟ ಭಕ್ತಿಯು ಸ್ಥಿರ ವಾಗಿ ನಲಸಿರಲಿ ಎಂದು ಹೇಳಿದನು

ಇಂದ್ರನಲ್ಲಿ ಅಂತೀ ಹೇಳಿ ಉಪಮನ್ಯುವು ತಿರುಗಿ ತಪ್ಪ ಕಪಸ್ಸನ್ನಾರಂಭಿಸಿದನು. ಆಗ ಇಂದ್ರರೂಪಿಯಾದ ಶಂಕರನು ಉಪಮನ್ಯುವಿನ ಎನುರಿನಲ್ಲಿ ಎವನಿಗುಣ ಗಳನ್ನು ನಂದಿಸಿಕೊಡಿದನಲು ಹೀಗೆ ತಿವಿಪಂದಿಯನ್ನು ಕೇಳಿ ಉಪಮನ್ಯುವುನಿಗೆ ಒಜಿಳ ದಃಖವಾಯಿತು ಸದಾಶಾಂತನಾದ ಅವನಿಗೆ ಇಷ್ಟದೇವನಾದ ತಿವನ ನಿಂದೆ ಕೇಳ ಕ್ರೋಧ ಉಗ್ರವಿಸಿತು ಆವರಿಂದ ಇಂದ್ರ ನನ್ನು ನುಂಬುಮಾಡಬೇಕೆಂಬ ಇಚ್ಛೆಯಿಂದ ಅಗ್ನಿಸಾಸ್ತ್ರ ದಿಂದ ಭಸ್ಮವನ್ನು ಅಭಿಮಂತ್ರಿಸಿ ಇಂದ್ರನಮೇಲೆ ಪಾಕಿ ಶಿವನೆಂದೆಯನ್ನು ಕೇಳಿದ್ದಕ್ಕೆ ಪ್ರಾಯಶ್ಚಿತ್ತರೂಪವಾಗಿ ತನ್ನ ದೇಹವನ್ನು ಯೋಗಾಗ್ನಿಯಿಂದ ಭಸ್ಮವನ್ನಾಗಿ ಸಲು ಅಗ್ನಿಧಾರಣೆ ಮಾಡಲುದ್ಯುಕ್ತನಾದನು ಭಕ್ತನ ಈ ಸ್ಥಿತಿಯನ್ನು ನೋಡಿ ಶಂಕರನು ಪರಮಪ್ರೀತನಾ ದನು ಆತನು ಕೂಡಲೆ ತನ್ನ ಅಮೃತವಾಣಿಯಿಂದ ಯೋಗಾಗ್ನಿಯನ್ನು ಶಾಂತಗೊಳಿಸಿದನು ಶ್ರೀ ನಂದೀ ಶ್ವರಮ ಆಘೋರಾಸ್ತ್ರವನ್ನು ನಿವಾರಿಸಿದನು ಅಕ್ಷಯ್ಯ ಚಕಿತನಾದ ಉಪಮನ್ಯುವು ಕಣ್ಣುಬಿಟ್ಟು ನೋಡುತ್ತಿರು ವಾಗಲೇ ೧೦೦ತಿವು ಜಿಂದ್ರನಂತೆ ಶ.ಭ್ರಸ್ರಕಾಶದಿಂದ ಹೊಳೆಯುವ ನಂದಿಯಾಗಿದ್ದಾನೆ. ಇಂದ್ರನ ಸ್ಥಳದಲ್ಲಿ ಭಗವಂತನಾದ ಮಹಾದೇವನು ತ್ರಿಶೂಲಧಾರಿಯಾಗಿ ತನ್ನ ದಿವ್ಯನಾದರೂಪಿನಿಂದ ಜಗಜ್ಜನನಿ ಪಾರ್ವತೀ ಸಹಿತ ನಂದಿವಾಹನನಾಗಿ ಸೂರ್ಯಕೋಟಿ ಪ್ರಕಾಶದಿಂದ ವಿರಾಜಿಸುತ್ತಿರುವುದನ್ನು ಕಂಡನು. ಹೀಗೆ ನಂದಿವಾಹ ನರಾದ ಉಮಾಮಹೇಶ್ವರ ದರ್ಶನದಿಂದ ಉಪಮನ್ಯು ನಿವ ದೇಹವು ಪುಳಕಿತವಾಯಿತು ಅವನು ಗದ್ಗದಕಂಠ ನಾಗಿ ಸ್ತೋತ್ರಮಾಡತೊಡಗಿದನು. ಭಕ್ತನ ಸರಳಮನ ಸ್ಸಿನ ಪ್ರಾರ್ಥನೆಯಿಂದ ಸಂಪ್ರೀತರಾದ ಶಿವ ಅವನಿಗೆ ಉಂಡು " ಮಗು ಉಪಮನ್ಯು, ನಾನು ನಿನ್ನ ಅನನ್ಯ ಭಕ್ತಿಗೆ ಮೆಚ್ಚುರುವೆಷು ವರವನ್ನು ಬೇಡು ಎಷಲು ಕಂಕ ರನ ಪ್ರೇಮಪೂರ್ಣವಚನವನ್ನು ಕೇಳಿ ಉಪಮನ್ಯುವು " ಸ್ವಾಮಿಯೇ ನಿಷ್ಟ ದರ್ಶನದಿಂದ ಧನ್ಯನಾದೆಯೆ. ಈ ರೋಳಕದಲ್ಲಿ ನಾನೂ ಶಕ್ತ ಕಂಠೆ-ತಾಯಿಗಳು ಕ್ಷೀರಾಬ್ಧಿ ವನ್ನು ಉಣ್ಣುವಂತೆಯೂ ತವಗೆ ನಿಶ್ಚಲ್ಲಿ ದೃಢವಾದ ಭಕ್ತಿಯು ಇರುವಂತೆಯೂ ಅಪೇಕ್ಷಿಸುವೆ" ಎಂದು ಕೇಳಿಕೊಂಡನು. ಭಗವಂತನಾದ ಶಂಕರನು ಉಪಮ ನ್ಯುವನ್ನು ಹಿಡಿದೆತ್ತಿ ಆಗಸ್ಯಾತೆಯು ಕೈಯ್ದಲ್ಲಿಟ್ಟನು. ಪರಮೇಶ್ವರಿಯು ಅವನನ್ನು ತನ್ನ ಅಮೃತಹಸ್ತದಲ್ಲಿ ಹಿಡಿದು ಅವನಿಗೆ ಚಿರಯೌವನವಿರುವಂತೆ ಅನುಗ್ರಹಿಸಿ ದಳು ಅನಂತರ ಪರಮೇಶ್ವರನು " ಸುಗುವೇ, ನೀನು ಸ್ಥಿರಕೌಮಾರ್ಯದಿಂದ ಕೂಡಿ ನಿನ್ನ ಇಷ್ಟಬಂದಷ್ಟುಕಾಲ ಭುಃಲೋಕದಲ್ಲಿ ಸರ್ವಸೌಖ್ಯವನ್ನು ತನುಭವಿಸು, ನಿನ್ನ ಅಪೇಕ್ಷೆಯಿಂತೆ ಕ್ಷೀರಸಮುದ್ರವನ್ನೇ ಕೊಟ್ಟೆನುವೆಷು ಎಂದು ಅತೀರ್ವದಿಸಿ ಅಂತರ್ಧಾನನಾದನು ಈ ಭಕ್ತ ಉಪಮನ್ಯುಮಹರ್ಷಿಯೇ ಮುಂದೆ ವ್ಯಾಸರಯುಗದಲ್ಲಿ ಶ್ರೀಕೃಷ್ಣ ಪರಮಾತ್ಮನಿಗೆ ಶಿವಮಂತ್ರ ದೀಕ್ಷೆಯನ್ನು ಅನುಗ್ರಹಿಸಿದನೆಂದು ಪ್ರಸಿದ್ಧವಾಗಿದೆ

ವರ್ತಮಾನಸಂಗ್ರಹ

ಪ್ರಾಂತ್ಯಗಳ ಪುನರ್ವಿಂಗಡಣೆ ೨೫ ವರ್ಷಗಳ ಶಾಲು ಮುಂದೆ ಹಾಕಬೇಕು

ಪ್ರಾಂತಗಳ ಪುನರ್ವಿಂಗಡನೆಯ ಕಾರ್ಯವನ್ನು ಕೈಗನೆಯಪಕ್ಕ ೨೫ ವರ್ಷಗಳವರೆವಿಗಾದರೂ ಮುಂದೆ ಹಾಕಬೇಕೆಂದು ಅಖಿಲಭಾರತ ರಾಷ್ಟ್ರೀಯ ಏಕ್ಯತಾ ಪ್ಲಾರ್ಟಿಯಾರು ಪರವಾಗಿ ಪ್ರಾಂತ್ಯಗಳ ಪುನರ್ವಿಂಗಡಣಾ ಸಮಿತಿಗೆ ಖಲ್ಲಿಸಲಾದ ವಿಜ್ಞಾಪನಾ ಪತ್ರದಲ್ಲಿ ವಿನಂತಿ ಆಗಿದೆ ಈ ಪತ್ರಕ್ಕೆ ಪ್ಲಾಸುಂದಿ ಪ್ಲಾಸಿಮೆಂಟ್ ಸದ ಸ್ಯರು ಸಹಿಹಾಕಿದ್ದಾರೆ ಇನ್ನೂ ೨೫೦ಮಂದಿ ಸಹಿಹಾಕು ವಂತೆ ಹೇಳಲಾಗಿದೆ ಭಾಷಾವಾರು ಪ್ರಾಂತ್ಯಗಳ ನಿರ್ನಾಣದಿಂದ ಸಂಕುಚಿತ ಭಾವನ ಬೆಳೆಯುವುದೆಂದು ವಿವರಿಸಲಾಗಿದೆ ಶ್ರೀ ಎಸ್ ಕೆ ಪಾಟೀಲರವರು ಪ್ಲಾರ್ಟಿಯಾರು ಅಧ್ಯಕ್ಷರಾಗಿದ್ದರು

ಮುಂಬಯಿ ಸರ್ಕಾರದ ಶಿಕ್ಷಣ ನೀತಿ ರಾಜ್ಯಾಂಗಕ್ಕೆ ವಿರೋಧ

ಬೊಂಬಾಯಿ ಸರ್ಕಾರದ ಶಿಕ್ಷಣ ನೀತಿಯನ್ನು ವಿರೋಧಿಸಿ ನಾಗರಿಕರಿಬ್ಬರು ಮುಂಬಯಿ ಹೈಕೋರ್ಟಿ ನಲ್ಲಿ ಳೇಸುಹೂಡಿದ್ದರಷ್ಟೆ ಮುಂಬಯಿನ ಹೈಕೋರ್ಟು ಈ ಒಗ್ಗೆಅಜ್ಞಿಯಿತ್ತು ಸರ್ಕಾರದ ಈ ನೀತಿ ರಾಜ್ಯಾಂಗಕ್ಕೆ ವಿರೋಧವಾದುದೆಂದು ಸಾರಿದ್ದಿತು ತದನ್ವಯ ವಿರೋ ಧಿಸಿ ಸುಪ್ರೀಂಕೋರ್ಟಿನಲ್ಲಿ ಮುಂಬಯಿ ಸರ್ಕಾರವು ಹೂಡಿದ್ದ ಮೂರು ಆಪೀಲುಗಳನ್ನು ವಜಾಮಾಡಲಾ ಯಿತು ಆಜ್ಞಾದಾರರಿಗೆ ಸರ್ಕಾರವು ಕೋರ್ಟುಖರ್ಚನ್ನು ತೆರಬೇಕೆಂದೂ ಆಜ್ಞೆಯಲ್ಲಿ ತಿಳಿಸಲಾಗಿದೆ

ಬೊಂಬಾಯಿ ಪ್ರಾಂತಕ್ಕೆ ಮೈಸೂರಿನಿಂದ ವಿದ್ಯುಚ್ಛಕ್ತಿ

ಬೊಂಬಾಯಿ ಪ್ರಾಂತದ ಕರ್ನಾಟಕ ಪ್ರದೇಶಕ್ಕೆ ಮೈಸೂರು ಪ್ರಾಂತದಿಂದ ವಿದ್ಯುಚ್ಛಕ್ತಿಯನ್ನು ಸರ ಬರಾಜು ಮಾಡುವ ಬಗ್ಗೆ ನಗರದಲ್ಲಿ ಎರಡು ದಿನಗ ಳವರೆಗೂ ಬೊಂಬಾಯಿ ಸರ್ಕಾರದ ಶ್ರುತಿಪಿಧಿಗಳೂ ಮೈಸೂರು ಸರ್ಕಾರದ ಪ್ರತಿನಿಧಿಗಳೂ ಸಭೆಸೇರಿ ಸವಿಾ ಲೋಚನೆ ನಡೆಸಿದ್ದಾರೆ ಉಭಯ ಸರ್ಕಾರಗಳೂ ವಿದ್ಯುಚ್ಛಕ್ತಿಯ ಸರಬರಾಜಿನ ಬಗ್ಗೆ ಒಮ್ಮತ ನಿರ್ಧಾ ರಕ್ಕೆ ಬಂದಿದ್ದಾರೆ ಹಿರಿಯೂರಿಂದ ರಾಣೇಬೆನ್ನೂರು ವ್ಯಾಪ್ತಿಗಿ ಹಾವೇರಿ ಮೊದಲಾದ ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದು ವಿದ್ಯುಚ್ಛಕ್ತಿಯ ದರಗಳ ಬಗ್ಗೆ ಸಚಿವ ಅಂತಸ್ಥಿನಲ್ಲಿ ಸಭೆಯಲ್ಲಿಯೇ ಸಮಾಲೋಚನೆ ನಡೆಯಲಿದೆ

ಹೈದ್ರಾಬಾದ್ ಸಂಸ್ಥಾನ ವಿಭಾಗವಾಗಲಿ

ಪ್ರದೇಶ ಕಾಂಗ್ರೆಸ್ಸಿನ ಒಮ್ಮತ ಮನವಿ ಪತ್ರ

ಹೈದ್ರಾಬಾದ್ ಸಂಸ್ಥಾನವನ್ನು ವಿಭಾಗಿಸುವಂತೆ, ಸ್ಟೇಂತ ಪುನರ್ರಚನಾ ಸಮಿತಿಗೆ ಸಂಘಟಿಸಾಯಿತ ಮನವಿ ಪತ್ರವನ್ನು ಹೈದ್ರಾಬಾದ್ ಪ್ರದೇಶ ಕಾಂಗ್ರೆಸ್ಸಿನ ಕಾರ್ಯ ಕಾರಿ ಸಮಿತಿಯು ಸರ್ವಾಧುಮತದಿಂದ ಒಪ್ಪಿತು.

ನೇಪಾಳದಲ್ಲಿ ಮಳೆ ಅಭಾವದಿಂದ ಕಳವಳ ಪರಿಸ್ಥಿತಿ

ಇಲ್ಲಿನ ಪ್ರದೇಶಗಳಿಗೆ ವೈಶಾಖದ ಮಳೆಯ ಅಭಾವದ ಪರಿಣಾಮವಾಗಿ ಭೀಕರ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಎದುರಿಸಬೇಕಾಗಿದೆ. ಈಗಾಗಲೇ ಭಾರತೀಯ ನಿಧಿಯಿಂದ ೧೯೦ ರೂ. ಬೆಲೆ ನೇಪಾಳದ ೧೩೦ ರೂ ಗಳಷ್ಟಕ್ಕೆ ಏರಿದೆ ಕೆಲವು ಪ್ರದೇಶಗಳಲ್ಲಿ ನೇಪಾಳದ ಹಣವನ್ನೇ ಯಾರೂ ಅಂಗೀಕರಿಸುತ್ತಿಲ್ಲ ಎಂದು ವರದಿಯಾಗಿದೆ ಅಕ್ಕಿಯ ಬೆಲೆ ಬಹಳವಾಗಿ ಹೆಚ್ಚಿದೆ ರೂ ಗೆ ಒಂದು ಸೇರಿನಂತೆ ಇಲ್ಲಿ ಅಕ್ಕಿ ಮಾರಾಟವಾಗುತ್ತಿದೆ ನೇಪಾಳದ ಹಣದ ಬೆಲೆಯು ಇಳಿತಾಯದಿಂದ ಇನ್ನಿತರ ಪದಾರ್ಥಗಳ ಬೆಲೆಯೂ ಗಗನಕ್ಕೇರುತ್ತಿದೆ

ಪಾಕ್ ಅಮೇರಿಕಾ ಒಪ್ಪಂದ ರದ್ದಾಗಲಿ

ಪಾಕೀಸ್ತಾನ್ ವಿದ್ಯಾರ್ಥಿಗಳ ಒತ್ತಾಯ

ಪಾಕೀಸ್ತಾನ್ ಅಮೇರಿಕಾ ಮಿಲಿಟರಿ ಸಹಾಯ ಒಪ್ಪಂದವನ್ನು ಸರ್ಕಾರ ರದ್ದುಮಾಡುವಂಗೆ ಒತ್ತಾಯ ಮಾಡಲು ದೇಶಾದ್ಯಂತ ತೀವ್ರ ಜನಾಭಿಪ್ರಾಯವನ್ನು ರೂಪಿಸಬೇಕೆಂದು ಢಾಕ್ಕಾ ವಿಶ್ವವಿದ್ಯಾನಿಲಯದ ಕೇಂದ್ರ ವಿದ್ಯಾರ್ಥಿ ಯೂನಿಯನ್ ಮತ್ತು ಪೂರ್ವಪಾಕೀಸ್ತಾನ್ ಯುವಕ ಲೀಗ್ ಜನಗಳಿಗೆ ಮನವಿ ಮಾಡಿಕೊಂಡಿದೆ. ಒಪ್ಪಂದ ಪಾಕೀಸ್ತಾನವನ್ನು ಯುದ್ಧನೆಲೆಯ ಸ್ಥಾನಿ ಮಾಡುವುದಲ್ಲದೆ ಆದರೆ ಸ್ವಾರಸ್ಯಂತ್ರ್ಯಕ್ಕೂ ಜೈತ್ರ ತಂದಿದೆಯೆಂದೂ ಮತ್ತು ರಾಷ್ಟ್ರವನ್ನು ಶಸ್ತ್ರೀಕರಣ ಜೂಜಿಗೊಳಗುಮಾಡಿ ನಾಡಿನ ಆರ್ಥಿಕ ಸ್ಥಿತಿಗತಿಗಳನ್ನು ಹದಗೆಡಿಸುವುದಾಗಿ ಈ ಸಂಘಗಳ ಜಂಟಿ ಪೇಳಿಕೆ ತಿಳಿಸುತ್ತದೆ

ಗೋಹತ್ಯಾನಿಷೇಧ ಶಾಸನವು ಅಗತ್ಯ

೧೯೫೫ ಆಗಸ್ಟ್ ೩೧ ನೇ ತಾರೀಕಿನ ವೇಳೆಗೆ ಭಾರತ ಸರ್ಕಾರ ಗೋಹತ್ಯಾ ನಿಷೇಧ ಕಾನೂನನ್ನು ತರದಿದ್ದರೆ, ಸತ್ಯಾಗ್ರಹ ಹೂಡಲು ನಿರ್ಧರಿಸಲಾಗಿದೆಯೆಂದು ಗೋಹತ್ಯೆ ನಿರೋಧ ಸಮಿತಿಯ ಅಧ್ಯಕ್ಷರಾದ ಪ್ರಭುದತ್ತ ಬ್ರಹ್ಮಚಾರಿ ಮತ್ತು ಕಾರ್ಯದರ್ಶಿಗಳಾದ ಲಾಲಾ ಹರಿಪ್ರಸಾದಸಹಾಯ್‌ರವರು ಪ್ರಕಟಿಸಿದ್ದಾರೆ ಕಳೆದ ವರ್ಷಗಳಂದಲೂ ಗೋಹತ್ಯವಿರುದ್ಧ ಕ್ರಮತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿದೆ.

ನುಹಿಳೆಗೆ ತೀರ್ಥ ಕುಡಿಸಿದೆ

ನಾರಾಯಣ ಸನ್ಯಾಸಿ ಬಂಧನೆ

ಚಿನ್ನಮ್ಮ ಉರುಫ್ ಶಾರದಮ್ಮ ಎಂಬ ಮೈಸೂರು ಮಂಡಿ ಮೊಹಲ್ಲಾದ ನಿವಾಸಿಯೊಬ್ಬಳಿಗೆ ಸಂತಾನ ಪ್ರಾಪ್ತಿಯು ಆಕೆಯೋರಿ ತೀರ್ಥ ಕುಡಿಸಿ ಆಕೆಯು ಇನಿಲಿಗೆ ಕಾರಣ ಕರ್ತನೆಂದು ಹೇಳಲಾದ ಸ್ವಾಮಿ ನಾರಾಯಣ ಸನ್ಯಾಸಿ ಎಂಬುವನ ಮೇಲೆ ರಾಜಧಾನಿಯ ಮಂಡಿ ಪೋಲೀಸರು ೩೦೨ನೇ ಸೆಕ್ಷನ್ ಕಾನೂನ್ ರೀತ್ಯಾ ಕೊಲೆ ಅಪಾದನೆಯಮ್ಮ ಹೊರಿಸಿ ಮೊಕದ್ದಮೆಯನ್ನು ಹೂಡಿರುತ್ತಾರೆ ಈಗ ಸ್ವಾಮಿಯನ್ನು ಬಂಧನವಲ್ಲಿಡಲಾಗಿದೆ ಈ ಸನ್ಯಾಸಿಯು ಹಸಿಹಣದಿಂದ ಬಂದು ಮೈಸೂರು ಮಂಡಿ ಮೊಹಲ್ಲಾ ಅಡಿಕ ಮಕದಲ್ಲಿದ್ದನೆಂತೆ.

ಮೈಸೂರು ಸಂಸ್ಥಾನಕೇಂದ್ರವಾಗಿರುವ ಕರ್ನಾಟಕ ಪ್ರಾಂತ್ಯ ರಚನೆಯಾಗಲಿ

ಸಂಸ್ಥಾನಗಳ ಪುನರ್ವಿಜಣಾ ಕಮಿಷನ್ನಿಗೆ ಕರ್ನಾಟಕ ಏಕೀಕರಣ ಸಮಿತಿಯ ಮನವಿ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ರಚಿತವಾಗಿರುವ ಕರ್ನಾಟಕ ಏಕೀಕರಣ ಸಮಿತಿಯವರು ಸಂಸ್ಥಾನಗಳ ಪುನರ್ವಿಜಣಾ ಕಮಿಷನ್ನಿನವರಿಗೆ ಒಂದು ಮೆಮೋರಾಂಡಂ ಸಲ್ಲಿಸಿ, ಮೈಸೂರು ಸಂಸ್ಥಾನವು ಅಂಗರವಾಗುಳ್ಳ ಕರ್ನಾಟಕ ಪ್ರಾಂತರಚನೆಯಾಗುವೇಕೆಂದೂ, ಅದರಲ್ಲಿ ಹೊಂಬಾಯಿ, ಹೈದರಾಬಾದು, ಆಂಧ್ರ ಮದ್ರಾಸು ಮತ್ತು ಕೊಡಗು ಸಂಸ್ಥಾನಗಳ ಕನ್ನಡ ಪ್ರದೇಶಗಳು ವಶ್ಯವಾಗ ಬೇಕೆಂದೂ ಒತ್ತಿಹೇಳಿದ್ದಾರೆ

ಮೈಸೂರು ಸಂಸ್ಥಾನದಲ್ಲಿ ಈರೀತಿ ಕರ್ನಾಟಕ ಪ್ರಾಂತರಚನೆಯಾಗಬೇಕು ತಕ್ಕ ಆಡಳಿತಯಂತ್ರ ಸೌಕರ್ಯ ವಿರುವ ಪ್ರಯುಕ್ತ ಕರ್ನಾಟಕ ಪ್ರಾಂತರಚನೆ ಕಾರ್ಯವು ಯಾವ ಕೊಡಕೂ ಇಲ್ಲದೆ ಸುಲಭಸಾಧ್ಯ ನಾಗುವುದು ಎಂದು ಕೇಳಿದ್ದಾರೆ ಹೀಗೆ ರಚನೆಯಾದ ಕರ್ನಾಟಕ ಪ್ರಾಂತದ ವಿಸ್ತೀರ್ಣವು ೮೫೫೮೮ ಚದರಮೈಲಿ ಗಳಾಗುವುದು ಅಂದರೆ ಈಗಿನ ಹೈದರಾಬಾದು ಪ್ರಾಂತ ಕ್ಕಿಂತಲೂ ದೊಡ್ಡದಾಗುವುದು, ಜನಸಂಖ್ಯೆಯು ೨೧೬ ಕೋಟಿಯಷ್ಟಾಗುವುದು, ಅಂದರೆ ಕರ್ನಾಟಕಪ್ರಾಂತಕ್ಕಿಂತಲೂ ಎರಡರಷ್ಟಿರುವ ಮಧ್ಯಪ್ರದೇಶದ ಜನಸಂಖ್ಯೆಗಿಂತಲೂ ಹೆಚ್ಚಾಗುವುದು ಅಲ್ಲದೆ ನೂತನ ಕರ್ನಾಟಕ ಪ್ರಾಂತದ ಜನಜಾತಿಯ ಸ್ಥಿತಿಯು ಸ್ವಭದ್ರವಾಗಿರುವುದು ಆರ್ಥಿಕಾಭಿವೃದ್ಧಿಯೂ ಹೆಚ್ಚಿಲವಕಾಶವಾಗುವುದು ಎಂದೂ ತಿಳಿಸಿದ್ದಾರೆ

ದಾವಣಗೆರೆ ಅಧಿವೇಶನ

ಈ ಸಮ್ಮೇಳನಕ್ಕೆ ಮೈಸೂರು, ಮುಂಬೈ, ಹೈದರಾಬಾದು, ಆಂಧ್ರ, ಮದರಾಸು ಮತ್ತು ಕೊಡಗು ಇತ್ಯಾದಿ ಕನ್ನಡ ಪ್ರದೇಶಗಳಿಂದ ೧೫೩೫ ಮಂದಿ ಸದಸ್ಯರುಗಳು ಬಂದಿದ್ದರು

ಮೆಮೋರಾಂಡಂನಲ್ಲಿ ಅಡಕವಾಗಿರುವ ಮುಖ್ಯ ಅಂಶಗಳು ಈ ರೀತಿ ಇವೆ—

೧ ಮೈಸೂರು ಸಂಸ್ಥಾನವು, ೪೮೪೪೫.೬೦ ಜನ ಸಾಂದ್ರತೆ ಉಳ್ಳದ್ದಾಗಿಯೂ, ೩೬,೩೧೦ ಚದರ ಮೈಲಿ ಗಳ ವಿಸ್ತೀರ್ಣ ಉಳ್ಳದ್ದಾಗಿಯೂ ಇದೆ

೨. ಮುಂಬೈ ಸಂಸ್ಥಾನದ ಕನ್ನಡ ಪ್ರದೇಶಗಳು—ಧಾರವಾಡ, ಉತ್ತರ ಕರ್ನಾಟಕ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಂದು ಒಟ್ಟು ೩೨೧೧,೨೫೫ ಮಂದಿ ಜನಸಾಂದ್ರತೆಯುಳ್ಳದಾಗಿಯೂ ೨೧,೯೯೫ ಚದರ ಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇವೆ.

೩ ದಕ್ಷಿಣ ಸತಾರ ಜಿಲ್ಲೆಯ ಜಾವ್ಲಿ ತಾಲ್ಲೂಕು ೧,೦೮,೭೭೦ ಜನಸಾಂದ್ರತೆ ಉಳ್ಳದ್ದಾಯಿಯೂ, ೧೭೩ ಚದರಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇದೆ

೪ ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲ್ಲೂಕು ೯೩,೫೦೩ ಜನಸಾಂದ್ರತೆ ಉಳ್ಳದ್ದಾಗಿಯೂ, ೪೬೧ ಚದರ ಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇದೆ.

೫ ಸೊಲ್ಲಾಪುರ ಜಿಲ್ಲೆಯ ಬಶ ಅಕ್ಕಲಕೋಟೆ ತಾ|| ೧,೪೯,೬೨೬ ಜನಸಾಂದ್ರತೆ ಉಳ್ಳದ್ದಾಗಿಯೂ, ೫೩೬ ಚದರ ಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇದೆ

೬ ಕೊಲ್ಲಾಪುರ ಜಿಲ್ಲೆಯ ಸಾಧಿಗಲಾಜ್ ತಾ|| ಬಹುಭಾಗವಲ್ಲಿ ೧೧,೫೭೭ ಜನಸಂಖ್ಯೆಯೂ, ೧೯೧ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿಯೂ ಇದೆ

೭ ಕೊಲ್ಲಾಪುರ ಜಿಲ್ಲೆಯ ಶಿರೋಲ್ ತಾಲ್ಲೂಕಿನ ಭಾಗವೆಲ್ಲಾ ಕೂಡಿ, ೧೩೫೧೯೭ ಜನಸಮುದಾಯ ಉಳ್ಳದ್ದಾಗಿಯೂ, ೩೧೨ ಚದರ ಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇದೆ.

೮ ಕೊಲ್ಲಾಪುರ ಜಿಲ್ಲೆಯ ಮತಳವಂಗಲೆ ತಾಲ್ಲೂಕಿನ ಬಹುಭಾಗದಿಂದ ೧೫೯,೭೦೦ ಜನಸಂಖ್ಯೆಯೂ, ೩೩೫ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿಯೂ ಇದೆ

೯. ದಕ್ಷಿಣ ಸತಾರ ಜಿಲ್ಲೆಯ ಮಿರಜ್ ತಾಲ್ಲೂಕು ೨೮೪೫,೬೧೬ ಜನಸಂಖ್ಯೆಯುಳ್ಳದ್ದಾಗಿಯೂ, ೬೧೧ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿಯೂ ಇದೆ.

೧೦ ದಕ್ಷಿಣ ಸತಾರ ಜಿಲ್ಲೆಯ ವಲ್ವಾ ಮತ್ತು ತಾಸ್‌ಗೋನ್ ತಾಲ್ಲೂಕುಗಳಲ್ಲಿ ನೇರವಾಗಿ ಕನ್ನಡದ ಹಳ್ಳಿಗಳು ಸೇರಿಕೊಂಡಿವೆ.

೧೧. ಸೊಲ್ಲಾಪುರ ಶಹರವು ಉತ್ತರ ಸೊಲ್ಲಾಪುರ ತಾಲ್ಲೂಕಿನಲ್ಲಿ ಒಟ್ಟು ೩೫೫,೬೩೨ ಜನಸಂಖ್ಯೆಯೂ, ೩೦೮ ಚದರಮೈಲಿ ವಿಸ್ತೀರ್ಣವುಳ್ಳದ್ದಾಯಿಯೂ ಇದೆ.

೧೨. ಹೈದರಾಬಾದಿನ, ಬೀದರ್, ಗುಲಬರ್ಗ, ಮತ್ತು ರಾಯಚೂರು ಮೂರು ಜಿಲ್ಲೆಗಳಿಂದ ೩೭ ಲಕ್ಷ ಕನ್ನಡಿಗರಿದ್ದಾರೆ. ಇವುಗಳಿಗೆ ಸೇರಿಕೊಂಡಂತೆ.

೧೩. ಮದರಾಸು ಸಂಸ್ಥಾನದ ದಕ್ಷಿಣ ಕನ್ನಡಜಿಲ್ಲೆ, ಮತ್ತು ನೀಲಗಿರಿ ಜಿಲ್ಲೆಗಳಿಂದ ೫೨,೬೦,೭೨೦ ಜನ ಸಂಖ್ಯೆ ಮತ್ತು ೫೦೨೨ ಚದರಮೈಲಿ ವಿಸ್ತೀರ್ಣ ಉಳ್ಳ ದ್ದಾಗಿಯೂ ಇದೆ

೧೪ ಕೊಯಮತ್ತೂರುಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ ೧೩೮೨೦ ಜನಸಂಖ್ಯೆ ೧೨೬೬ ಚದರಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಇವೆ

೧೫ ಉಟ್ಟಿಯ ಕೊಯಮತ್ತೂರು ಜಿಲ್ಲೆಯ ಗೋಪಿ ಚೆಟ್ಟಿಪಾಳ್ಯಂ ಭವಾನಿ ಮತ್ತು ತಿರುಚಾಪಿ ತಾಲ್ಲೂಕು ಗಳಲ್ಲಿ ಬಹುಮಂದಿ ಕನ್ನಡಿಗರಿದ್ದಾರೆ

೧೬ ಸೇಲಂಜಿಲ್ಲೆಯ ಹೊಸೂರು ತಾಲ್ಲೂಕಿನಲ್ಲಿ ೩೭೦೬೮೨ ಜನಸಂಖ್ಯೆ ಮತ್ತು ೧೧೬೮ ಚದರಮೈಲಿ ವಿಸ್ತೀರ್ಣ ಉಳ್ಳದ್ದಾಗಿದೆ.

೧೭. ಸೇಲಂಜಿಲ್ಲೆಯ ಕೃಷ್ಣಗಿರಿ ಮತ್ತು ಧರ್ಮಪುರಿ ತಾಲ್ಲೂಕುಗಳಲ್ಲಿ ನೇರಿಕೊಂಡಿರುವ ಕನ್ನಡಪ್ರದೇಶವಿದೆ.

೧೮. ಮಲಬಾರು ಜಿಲ್ಲೆಯ ಯಸಾಡು ತಾಲ್ಲೂಕಿ ನಲ್ಲಿ ಸೇರಿಕೊಂಡಿರುವ ಕನ್ನಡದ ಹಳ್ಳಿಗಳಿವೆ

೧೯ ಆಂಧ್ರದೇಶದ ಅನಂತಪುರಜಿಲ್ಲೆಯ ಮಡಕ ಶಿರ ತಾಲ್ಲೂಕಿನಲ್ಲಿ ೧ ೫೦ ೩೦೯ ಜನಸಂಖ್ಯೆಯು ೪೧೬ ಚದರಮೈಲಿಯುಳ್ಳದ್ದಾಗಿಯೂ ಇದೆ

೨೦ ಕರ್ನೂಲ್ ಜಿಲ್ಲೆಯ ಆಧೋನಿ, ಆಲೂರು ತಾಲ್ಲೂಕುಗಳು ಅನಂತಪುರ ಜಿಲ್ಲೆಯ ರಾಯದುರ್ಗ, ಹಿಂದೂಪುರ, ಕಲ್ಯಾಣದುರ್ಗ, ಗೂಟಿ, ಅನಂತಪುರ, ಧರ್ಮಾವರಂ, ಪೆನಗೊಂಡ, ತಾಲ್ಲೂಕುಗಳು ಚಿತ್ತೂರು ಜಿಲ್ಲೆಯ ಕುಪ್ಪಂ ಮತ್ತು ಕನ್ನಗುಡಿ ತಾಲ್ಲೂಕುಗಳಲ್ಲಿ ಕನ್ನಡಪ್ರದೇಶವಿದೆ

೨೧. ಕೊಡಗುಸಂಸ್ಥಾನ ೨೪೯,೫೯೯ ಜನಸಂಖ್ಯೆ ಮತ್ತು ೧,೫೯೩ ಚದರಮೈಲಿ ವಿಸ್ತೀರ್ಣ ಉಳ್ಳದ್ದಾಗಿದೆ.

ಸುದ್ದಿ ಸಂಗ್ರಹ

ನ್ಯೂಯಾರ್ಕಿನಲ್ಲಿ ಒಂದು ವಿಚಿತ್ರ ಪ್ರಾಣಿಯು ಮನುಷ್ಯರಂತೆಯೇ ಮಾತನಾಡುವ ಶಕ್ತಿಯನ್ನು ಹೊಂದಿದೆಯಂತೆ.

ಮಾನವನ ಕೂದಲು, ಚರ್ಮ ಮತ್ತು ಉಗುರಿನಲ್ಲಿ ಇತ್ತೊಂಬತ್ತು ವಿವಿಧ ಲೋಹಗಳಿವೆಯಂತೆ

೧೯೨೯ ನೇ ಏಪ್ರಿಲ್ ೬ ರಂದು ನೊಬ್ಬುನೊದಲ ನೆಯ ನಾಗರಿಕ ಅಮೆರಿಕಾದ ನಿಗ್ರೋ ಆಲೆಗ್ಸಾಂಡರ್ ಉತ್ತರದ್ರುವ ತಲುಪಿದನು.

ಫ್ರಾನ್ಸ್ ದೇಶದ ವಿಜ್ಞಾನಿಯೊಬ್ಬನು ಒಂದು ವಿಚಿತ್ರ ಹಾರ್ಮೋನಿಯಂ ಕಂಡುಹಿಡಿಯುವಕ್ಕಯತ್ನ ದಲ್ಲಿದ್ದಾನೆ ಆದರಲ್ಲೀ ಮೃದಂಗ, ವೀಣೆ, ಮುಂತಾದ ವಾದ್ಯಗಳು ತಮ್ಮಷ್ಟಕ್ಕೆ ತಾನೇ ಬಾರಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆಯಂತೆ

ದುಃಖವಾರ್ತೆ

ಹೂರಮೂರ್ಧಾಕ್ಷ ಮಠಸಂಗಳು

ಲೇ —ಶ್ರೀ ಪಟ್ಟಿ ಬ್ರ|| ಶಿವಪ್ಪಶಾಸ್ತ್ರಿಗಳು ಉಜ್ಜಯಿನಿ

ಗುರುವೇ ಧರ್ಮರಕ್ಷಕನೆಂಬರು ಗುರುವಾಮೊಡೆ ಆತ್ಮತತ್ತ್ವವಂ ತಿಳಿದಿರ್ಪೀಗು ವಿಮುಕ್ತ ವಿಷಯನಾಗಿ ವಿರಾಗಿಯಾಮೊಡೆ ಗುರುವೆಂಬರು

ಶಿಷ್ಯನ ಚಿತ್ತವಂ ನಚೀಕರಿಸಿ ಭವರೋಗನಿವಾರಕ ನಾಗಿ ಶಿವೇಚ್ಛೆಯನಿತ್ತು ಸದ್ಧರ್ಮವಂ ಸ್ಥಾಪಿಸಿ ಪಂಚಾಚಾರ್ಯರೇ ಗುರುವಾದ ಕಾರಣ ಶಿವಪಥವಿವದೆ ಗುರುಪಥವೇ ಮೊದಲೆಂದರು ಪ್ರಮಥರು ಆಚಾರ್ಯ ದೇವೋಭವ ಎಂದಿತ್ತು ವೇದ ಅದಕಾರಣ ಜಗದ ಶಾಂತಿಗೆ ಶ್ರೀ ಗುರುವೇ ಕಾರಣಾಯ್ತು, ಶಿವಪ್ರಕಾಶ ಪ್ರಭುವೆ

ಲಿಂಗ

ವೈಜ್ಞಾನಿಕರಿಗೆ ಭೃಥ್ವಿಯು ಲಿಂಗವಾಗಿ ತೋರ್ಪುದು. ಹಠಬ್ರಹ್ಮಾದಿಗಳ ಪದವಿಗೆ ಕಾರಣವಾಯ್ತು ಲಿಂಗ. ಲಕ್ಷ್ಮಿ ಸರಸ್ವತಿಯರಿಗೆ ಸಾಮರ್ಥ್ಯವನಿತ್ತಿತ್ತುಲಿಂಗ. ಗೊಲ್ಲಾಳನ ಭಕ್ತಿಗೆ ಕುರಿ ಹಿಕ್ಕೆ ಲಿಂಗವಾಯ್ತು ಭಾವುಕರ ಇಷ್ಟಾರ್ಥಕ್ಕೆ ಕಾರಣವಾಯ್ತು ಲಿಂಗ. ವೀರಶೈವರ ಶಿವಯೋಗಸಾಧನೆಯ ಮುಕ್ತಿಗೆ ಕಾರಣವಾಯ್ತು ಲಿಂಗ.

ವೇದಾಂತಿಗಳಿಗೆ ಸಚ್ಚಿದಾನಂದರೂಪ ಪರವಸ್ತು ವಾಯ್ತು ಲಿಂಗ.

ಲಿಂಗವೇ ಸರ್ವಶ್ರೇಷ್ಠವಾದ ಕಾರಣ ಜಗದಾಚಾರ್ಯರು ಲಿಂಗೋದ್ಭವರೆಂಬರು ಇದುಕಾರಣ ಲಿಂಗರೂಪ ಶಕ್ತಿ ವಿಕಾಸಭೇದದಿಂದ ಲಿಂಗಭೇದೋಪಭೇದಿಗಳು ಆದ ಕಾರಣ ನಿತ್ಯ ಅಯುಷು ಮೂಲಕಾರಣವಾಯ್ತು ಲಿಂಗ ಶಿವಪ್ರಕಾಶ ಪ್ರಭುವೇ.

ಶಿವದೀಕ್ಷಾಸಮಾರಂಭ, ಚಿಗಟೇರಿ

ಗ್ರಾಮ ಪ್ರಮುಖರ ಪ್ರಾರ್ಥನೆಯಂತೆ ಮರಬದ ಶ್ರೀ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು ತಾ|| ೭-೬-೫೪ ರಲ್ಲಿ ಇಲ್ಲಿಗೆ ಆಗಮಿಸಿದರು. ಅಂದು ರಾತ್ರಿ ೮ ಘಂಟೆಗೆ ವೀರಭದ್ರ ದೇವಾಲಯದಲ್ಲಿ ಶ್ರೀ ಪೂಜ್ಯಶಿವಯೋಗಿಗಳ ಉಪದೇಶವಾಯಿತು ಶ್ರೀಗಳವರ ಏರೂರದ ಮೇರೆಗೆ ತಾ|| ೧೦ ರಲ್ಲಿ ಶ್ರೀಯುತ ತಿಪ್ಪೆರ ಪುಟ್ಟಿಪ್ಪ ಮತ್ತು ಕೊಟ್ರಿಪ್ಪ, ಮಲ್ಲಿಕಾರ್ಜುನಪ್ಪ ಭದ್ರಪ್ಪ, ನವರು ಸಿದ್ಧವೀರಪ್ಪ, ಸೊಗೆಂಜಪ್ಪ, ಪೆಂಪ್ಪ ಪ್ಪನವರೆ ಚೆನ್ನ ಬಸಪ್ಪ, ಆದಿರೆಟ್ಟಿ, ಮಹಾದೇವಪ್ಪ, ಅಮರಶೆಟ್ಟಿ, ಚೆನ್ನ ಬಸಪ್ಪ, ಉಜ್ಜಂಗಿ ಮಲ್ಲಪನಗೌಡ ಇವರು ಸಪರಿವಾರ ಗುರುಮಲ್ಲದೇವ ಮಠದ ಶ್ರೀ ಗಂಗಾಧರಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಶಿವದೀಕ್ಷಾಸಂಸ್ಕಾರವಾದರು. ಅನಂತರ ಪ್ರಸಾದನಿವೇದನಾನಾ ಜಗದಾಚಾರ್ಯರ ಜಯ ಘೋಷದಿಂದ ಕಾರ್ಯ ಕೊನೆಗೊಂಡಿತು ಮರಬದ ಶ್ರೀಗಳವರ ಪ್ರಯತ್ನದಿಂದ ಇಂತಹ ಕಾರ್ಯಕಲಾಪ ಗಳು ಜರುಗುತ್ತಿರುವುದು ಅದರ್ಶನೀಯವೇ ಸರಿ. ಇಂತು ಭಕ್ತಿಕೈರಂಗಿ ಸೌಖ್ಯಭಾಗಿಗಳಾಗುವಂತೆ ಸದರಿ ಭಕ್ತವರ್ಯರಿಗೆ ಜಗದಾಚಾರ್ಯರು ಕೃಪೆ ತೋರಲಿ! ಚಿಗಟೇರಿ ಭಕ್ತರ ಭಕ್ತಿಯು ಬೆಳೆದು ಬೆಳಗಲಿ !.

ಶಿರೀಕ್ಷಕ.

ವರ್ತಮಾನ ಸಂಗ್ರಹ

೧೬೦೦ ಎಕರೆ ಭೂಮಿಗೆ ನೀರಿನ ಆಸರೆ

ಹೊಮ್ಮರಡಿ ಕೆರೆ ಕಾಮಗಾರಿ ಪ್ರಾರಂಭ

ಹದಿನೈದುವರ್ಷಗಳ ಎಳೆರೆ ಭೂಮಿಗೆ ನೀರಿನ ಆಸರೆ ತಪ್ಪಿ ಕಲ್ಲುಬಲ್ಲ ಹೊಮ್ಮರಡಿ ಕೆರೆ ಕಾಮಗಾರಿಯ ಪ್ರಾರಂಭೋತ್ಸವವು ಕಳೆದ ಸೋಮವಾರ ರಾಜ್ಯದ ಅರಣ್ಯ ಖಾತೆ ಉಪಮಂತ್ರಿಗಳಾದ ಶ್ರೀ ಪಾಟೀಲ್ ಕಲ್ಲಪ್ಪ ಗೌಡರ ಹಸ್ತದಿಂದ ನೆರವೇರಿತು.

ಕೇಂದ್ರ ಸರಕಾರದಿಂದ ದೊರೆತಿಳ ೮೭ ಕೋಟಿ ರೂ. ಸಾಲದ ಸಹಾಯದಿಂದ ಮುಂಬಯಿ ಸರಕಾರವು ಕರ್ನಾಟಕದಲ್ಲಿ ಮಂಜೂರು ಮಾಡಿದ ಒಂಭತ್ತು ಕಾಮಗಾರಿಗಳಲ್ಲಿ ಹೊಮ್ಮರಡಿ ಕೆರೆಯು ಒಂದಾಗಿದೆ. ಈ ಒಂಭತ್ತು ಕಾಮಗಾರಿಗಳಿಗೆ ಒಟ್ಟು ೫೯ ಲಕ್ಷ ರೂ. ವೆಚ್ಚ ತಗಲುವದೆಂದೂ ಅವುಗಳಿಂದ ೨೦ ಸಾವಿರ ಎಕರೆ ಭೂಮಿಗೆ ನೀರು ಬರಬಹುದೆಂದೂ ಅಂದಾಜಿದೆ.

ಹೊಮ್ಮರಡಿ ಕಾಮಗಾರಿಯು ಸುಮಾರು ೨೮ ವರುಷಗಳ ಹಿಂದೆ ಹಾಳಾದ ಒಂದು ಕೆರೆಯ ಜೀರ್ಣೋದ್ಧಾರವಷ್ಟಾಗಿ ಹಾಗು ವಿಸ್ತರಣೆಯಾಗಿ ಮಾಡಲೆಳಸುತ್ತಿದೆ. ಈ ಕಾಮಗಾರಿಯು ಪೂರ್ತಿಯಾದೊಡನೆ ಅದರ ಕೆಳಗಿನ ೧೫೫೦ ಎಕರೆ ಭೂಮಿಗೆ ನೀರುಬರುವುದಲ್ಲದೆ ಕೆಳಬದಿಗೆ ಇರುವ ಹೆಗ್ಗೇರಿ ಕೆರೆಯು ಅಳವಿನಲ್ಲಿ ಬರುವ ಸುಮಾರು ೪೫೦ ಎಕರೆ ತೋಟದ ಭೂಮಿಗೂ ನೀರಿನ ಆಸರೆಯಾಗುವುದು. ಈ ಕೆರೆಯ ಹೆಚ್ಚಿನ ನೀರು ಹೆಗ್ಗೇರಿ ಕೆರೆಯನ್ನು ತುಂಬುವದು. ಕೆರೆಯು ಕಾಮಗಾರಿಯು ೧೮ ತಿಂಗಳಲ್ಲಿ ಮುಗಿಯಬಹುದು.

ಈ ಮಹೋತ್ಕರ್ಷ ಸಮಾರಂಭದ ನಿಮಿತ್ತ ಹೊಮ್ಮರಡಿ ಗ್ರಾಮವು ತಳಲುತ್ತೋರಣಗಳಿಂದ ಸಿಂಗರಿಸಲ್ಪಟ್ಟಿತ್ತಲ್ಲದೆ ಎಲ್ಲೆಡೆಗೂ ಉತ್ಸಾಹದ ವಾತಾವರಣವಿದ್ದಿತು. ತಾಲ್ಲೂಕಿನ ಮುಖಂಡರು ಸಾಮಾಜಿಕ ಕಾರ್ಯಕರ್ತರು ಹಾಗೂ ಅಧಿಕಾರೀ ವರ್ಗವನ್ನೊಳಗೊಂಡು ಸುಮಾರು ಏಸೂರು ಜನರು ಸಮಾರಂಭಕ್ಕೆ ಬಂದಿದ್ದರು

ಈ ಸಂದರ್ಭದಲ್ಲಿ ಮಾತಿದ ತಮ್ಮ ಭಾಷಣದಲ್ಲಿ ಉಪಮಂತ್ರಿಗಳು ಭಾರತವು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸಾಧಿಸಿದ ಪ್ರಗತಿಯನ್ನು ಸಿಂಹಾವಲೋಕನ ಮಾಡಿ ಆ ಕಾರ್ಯದ ಹಾಗೂ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತವು ಮೊರೆಸಿರುವ ಸ್ವಾತಂತ್ರ್ಯದ ಶ್ರೇಯಸ್ಸು ಜನತೆಯ ಅಂತಃಕರಣ ಹಾಗೂ ಅಂತಃಶಕ್ತಿಗೆ ಸಲ್ಲುವುದೆಂದು ಹೇಳಿದರು ಒಕ್ಕಲತನದ ಸುಧಾರಣೆ ನೀರಾವರಿ ವಿದ್ಯುತ್ಶಕ್ತಿಯ ಉದ್ಯಮಗಳ ಅಭಿವೃದ್ಧಿ ಇತ್ಯಾದಿ ವಿಶಾಲ ಯೋಜನೆಗಳಿಂದ ದೇಶದ ಆರ್ಥಿಕ ಬಲಾಭಿವೃದ್ಧಿಯನ್ನು ಸಾಧಿಸುವುದೇ ನಮ್ಮ ಗುರಿಯಾಗಿದ್ದು ಆರ್ಥಿಕ ಸ್ವಾತಂತ್ರ್ಯವೇ ರಾಜಕೀಯ ಸ್ವಾತಂತ್ರ್ಯವನ್ನು ಭದ್ರಪಡಿಸಬಲ್ಲದೆಂದು ಹೇಳಿದರು ತಾವು ಇರುವದು ಜನಪ್ರತಿನಿಧಿಗಳಾಗಿಯೇ ಎಂಬ ಮನೋಭಾವ ಅಧಿಕಾರಿ ವರ್ಗದಲ್ಲಿ ಮೂಡುತ್ತಿದೆ. ಜನತೆ ಹಾಗೂ ಅಧಿಕಾರವರ್ಗದವರುವೆ ಸಹಕಾರ ಹೆಚ್ಚಿದಷ್ಟು ಹೊಮ್ಮರಡಿ ಕೆರೆಯಂಥ ಜನ ಹಿತದ ಕಾರ್ಯಗಳು ಭರದಿಂದ ನಡೆಯುವುವೆಂದು ಹೇಳಿ ಕೆರೆ ಕಾಮಗಾರಿಯ ಪೂರ್ತಿಗೆ ಎಲ್ಲರೂ ಸಹಕಾರ ನೀಡಬೇಕೆಂದು ಕೇಳಿಕೊಂಡರು

ಎಕ್ಸಿಕ್ಯೂಟಿವ್ ಎಂಜನಿಯರ್ ಶ್ರೀ ಕುಡಾಳಕರು, ಸ್ಥಳೀಯ ಮುಖಂಡರು ಹಾಗೂ ತಾಲ್ಲೂಕಿನ ಪರವಾಗಿ ಶುಭಾಶಯಗೊಂಡ ಶ್ರೀ ಕಿಟ್ಟೂರಂದ ಅಧಾರ ಮಸ್ಸಿನೆ ಯಾಗಿ ಸಮಾರಂಭವು ಶೋಭೆಗೊಂಡಿತು.

ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಪಂಚಾಯಿತಿಗಳ ಸ್ಥಾನ

ಭಾರತ ಸರ್ಕಾರದ ಆಡಳಿತ್ಯಸಚಿವ ಶಾಖೆಯಿಂದ ಏರ್ಪಡಿಸಲ್ಪಟ್ಟಿರುವ ಸ್ಥಳೀಯ ಸಂಸ್ಥೆಗಳ ಸಚಿವರ ಪರಿಷತ್ತಿನಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಪಂಚಾಯತಿಗಳ ಸ್ಥಾಪನೆಯ ಕುರಿತು ವಿವರವಾಗಿ ಪರಿತೀರಿಸಲಾಗುವುದು.

ಈ ಪರಿಷತ್ತು ಜೂನ್ ೨೫ ಕ್ಕೆ ನವದೆಹಲಿಯಲ್ಲಿ ಆರಂಭವಾಗುವುದು ಮುಖ್ಯ ಸಚಿವ, ಕಾಡುಜೆಳೆಸುವುದು, ಜಲಾಶ್ರಯ ನಿರ್ಮಾಣ, ವಸುಸ್ಥರ ಶಿಕ್ಷಣ,—ಉತ್ತಮ ಬೀಜಗಳ ಉಪಯೋಗ, ಸುಧಾರಿತರೀತಿಯ ಬೇಸಾಯ ಇತ್ಯಾದಿಗಳನ್ನೆಲ್ಲಾ ಪಂಚಾಯತಿಗಳು ಸರಿಯಾಗಿ ಪೂರ್ತಿ ನಿಭಾಯಿಸಿದಲ್ಲಿ ಅಹಿಂಸಾ ಪರಿಣಾಮಕಾರಿ ಯಾಗಬಹುದು ಇದಕ್ಕೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಪಂಚಾಯತಿಗಳು ತಮ್ಮ ಅಧಿಕಾರ ಪರಿಧಿಯ ಅಭಿವೃದ್ಧಿಕಾರ್ಯಗಳನ್ನು ಅನುಕೂಲವಾಗಿರಿಸಿದ್ದರೂ ಯಶಸ್ವಿಯಾಗಿ ಕೆಲಸಮಾಡಿರುವುದೇ ಸಾಕ್ಷಿ

ಪ್ರತಿಯೊಂದು ಕುಟುಂಬಕ್ಕೂ ಕೃಷಿ ಹಾಗೂ ಇತರ ಉಪವೃತ್ತಿಗಳನ್ನು ಕೈಗೊಳ್ಳುವುದಕ್ಕೆ ಒಂದೊಂದು ಯೋಜನೆ ಇರಬೇಕೆಂಬುದೇ ಈ ಯೋಜನಾಸಮಿತಿಯ ಉದ್ದೇಶವಾಗಿದೆ. ಪ್ರತಿ ಕುಟುಂಬವೂ ಕನಿಷ್ಠಪಕ್ಷ ಒಂದು ಸಹಕಾರಿ ಸಂಘದ ಸದಸ್ಯತ್ವವನ್ನು ಹೊಂದಿ ತನ್ನ ಸಮುದಾಯದಲ್ಲಿ ಕೆಂಚಿತ್ತಾದರೂ ಸಮೃದ್ಧಿ ಹಿತ ಶ್ಚಾಗಿ ವಿಶೇಷೋತ್ಪಾದನೆಯಾಗುವ ಕೃಷಿಯ ಉತ್ಪನ್ನವನ್ನು ಹೆಚ್ಚಿಸಿ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸ ಬೇಕು. ಪಂಚಾಯಿತಿಗಳಿಂದ ನಿರ್ಮಿಸಲ್ಪಟ್ಟ ಗ್ರಾಮ ಸಭೆಗಳು ಸಾಮಾನ್ಯವಾಗಿ ಹಳ್ಳಿಗರಿಗೆ ದೇಶಾಗುವ ಅವಶ್ಯಕತೆಗಳನ್ನು ಕುರಿತು ಚರ್ಚಿಸಿ ಉತ್ಪತ್ತಿಯನ್ನು ಏರ್ಪಾರಿಸುವುದಕ್ಕೆ ಸಹಾಯಕವಾಗಬಹುದು ಹಳ್ಳಿಗಳಲ್ಲಿ ದ್ವಿಪ್ರತಿನಿಧಿ ಪದ್ಧತಿಯ ಕೆಲಸ ನಡೆಯುತಿರಬೇಕೆಂಬ ಒಂದು ಗುಂಪು ಇನ್ನೊಂದು ಗುಂಪಿನೊಂದಿಗೆ ಹೊಡೆದಾಟ ನಡೆಸದಂತೆಯೂ ನೋಡಿಕೊಳ್ಳುವುದಕ್ಕಾಗಿ ಜಿಲ್ಲಾ ಬೋರ್ಡುಗಳು ಈ ಕುರಿತು ಸರಿಯಾದ ವಿಷಯಗಳನ್ನು ಸಂಗ್ರಹಿಸಬಹುದು. ಆಗ ಜಿಲ್ಲಾ ಯೋಜನೆಗಳನ್ನು ಗ್ರಾಮ ಯೋಜನೆಗಳ ಆಧಾರದ ಮೇಲೆ ರಚಿಸಬಹುದು. ಹೆದ್ದಾರಿ ಇತ್ಯಾದಿಗಳನ್ನು ಜಿಲ್ಲಾ ಯೋಜನೆಯ ಪ್ರಕಾರವೇ ನಿರ್ಮಿಸಬೇಕಾಗಿದೆ.

ಕೇವಲ ಧನ ಸಹಾಯ ಇಲ್ಲದೇ ಕೆಲಸಗಾರರನ್ನು ಸಿದ್ಧಗೊಳಿಸುವುದರಿಂದ ಅಭಿವೃದ್ಧಿ ಕಾರ್ಯವು ಸಾಗಲಿ ಕೈಲ್ಲ ಜಿಲ್ಲಾ ಯೋಜನೆಯನ್ನು ಪ್ರತಿಯೊಂದು ಪಂಚಾಯತಿಗಳು ಳಳುಬಿಸಿದರೆ ಪಂಚಾಯತಿಗಳು ಈ ಯೋಜನೆಯನ್ನು ಸಂಪೂರ್ಣವಾಗಿ ಕೃತಿಯಲ್ಲಿ ತರಲು ಸಹಕರಿಸಲು ಮುಂದಾಗುವುದರಲ್ಲಿ ಸಂದೇಹವಿಲ್ಲ

ಆರ್ಥಿಕ ಅಭಿವೃದ್ಧಿಗೆ ರಸ್ತೆಗಳ ನಿರ್ಮಾಣ

ಇಡೀ ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ರಾಷ್ಟ್ರದ ಎಲ್ಲಾ ಭಾಗಗಳನ್ನು ಕೂಡಿಸುವಂಥ ರಸ್ತೆಗಳ ನಿರ್ಮಾಣ ಮಾಡಲು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೧೫೦ ಕೋಟಿ ರೂಪಾಯಿಗಳ ಅನುಕಾವನ್ನು ಕಲ್ಪಿಸಲಾಗಿದೆ —ಎಂದು ಕೇಂದ್ರ ಸರ್ಕಾರದ ಸಂಚಾರರಾಜ್ಯ ಉಪಸಚಿವರಾದ ಶ್ರೀ ಟಿ ಎ ಅಲಗೇಶನ್‌ರವರು ಜೆಂಗಳೂರು ವಿಜ್ಞಾನ ಪರಿಷತ್ತಿನ ಆವರಣದಲ್ಲಿ ಪ್ರಾರಂಭವಾದ ಪ್ರಾಂತೀಯ ಚೀಫ್ ಇಂಜನಿಯರುಗಳ ಹಾಗೂ ಮುಖ್ಯ ಇಂಜನಿಯರಿಂಗ್ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ತಿಳಿಸಿದರು

ಬ್ಯಾಡರ ಹೊಸಹಳ್ಳಿ ಬಳಿ ನಾಲಾನೀರು ಬಿಡಲಾಯಿತು

ತುಂಗಾ ಆಣೆಕಟ್ಟಿನ ಎಡಭಾಗದನಾಲಾದಲ್ಲಿ ನೀರನ್ನು ಬಿಡಲಾಗಿ ಬ್ಯಾಡರ ಹೊಸಹಳ್ಳಿ ಗ್ರಾಮದ ಬಳಿ ನಾಲಾ ನೀರು ನುಗ್ಗಿ ಗದ್ದೆಗಳ ಮೇಲೆ ಹಾಗೂ ಊರೊಳಕ್ಕೆ ನುಗ್ಗುತ್ತಿದನ್ನು ತಪ್ಪಿಸಿ ನದಿ ಕಡೆಗೆ ಹೋಗಲು ಬಿಡ ಬಾಯ್ತು. ಊರಲ್ಲಿ ನೀರು ನುಗ್ಗುವ ಪರಿಸ್ಥಿತಿಯು ವಾರ್ತೆಯು ತಿಳಿಯಲಾಗಿ ತಾತ್ಕಾಲಿಕ ಜಿಲ್ಲಾ ಮುಖ್ಯ ಧಿಕಾರಿಯಾದ ಶ್ರೀ ಅದಿರಾಜಯ್ಯನವರು ಕೂಡಲೇ ಸ್ಥಳಕ್ಕೆ ಧಾವಿಸಿ ನೀರು ಊರೊಳಕ್ಕೆ ನುಗ್ಗದಂತೆ ವ್ಯವಸ್ಥೆ ನಾಡಿಸಿ—ತುಂಗಾ ಆಣೆಕಟ್ಟಿಗೆ ಭೇಟಿಯಿತ್ತು ನಾಲಾ ನೀರನ್ನು ಕಡಿಮೆ ಮಾಡಲು ತಿಳಿಸಿದರು ಅಧಿಕಾರಿಗಳಿಗೆ ತಿಳಿಸಿ ಅವಾಯ ಸಂಭವಿಸದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಂಡರು.

ಜವಿಾಪುಗಳ ಮೇಲೆ ನೀರು ನುಗ್ಗಿ ವಿಷ್ಣ ಸಂಭವಿಸಿದುವಾಗಿಯೂ, ಅದನ್ನು ಪರಿತೀರಿಸಿ ಪರಿಹಾರಮಾಡಲು ತಾಲ್ಲೂಕು ಅಧಿಕಾರಿಗಳು ಸ್ಥಳಕ್ಕೆ ಧಾವಿಸಿರುತ್ತಾರೆ.

ವಿಮರ್ಶಾಪೂರ್ಣ ರಾಮಾಯಣ

ಪೂನದ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟಿನವರು ಮಾಡಿರುವ 'ಮಹಾಭಾರತ' ವಿಮರ್ಶಾತ್ಮಕ ಗ್ರಂಥದಂತೆ, ವಾಲ್ಮೀಕಿ ರಾಮಾಯಣ ವನ್ನು ಸಿದ್ಧಗೊಳಿಸಲು ಬರೋಡ ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟಿನವರು ಕಾರ್ಯೋ ನ್ಮುಖರಾಗಿದ್ದಾರೆ. ಭಾರತ ಮತ್ತು ಹೊರದೇಶಗಳ ಛಿದ್ರ ಪಂಡಿತರು ಈ ಕಾರ್ಯದಲ್ಲಿ ಭಾಗವಹಿಸಿದ್ದಾರೆ

ಈ ಕಾರ್ಯವು ೧೯೫೧ ರಲ್ಲಿ ಪ್ರಾರಂಭವಾಯಿತು. ಒಂಭತ್ತುವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷಣೆಯಿದೆ. ಈ ಕಾರ್ಯಕ್ಕೆ ಒ.೫೫,೦೦೦ ರೂಪಾಯಿ ಖರ್ಚಾಗಲಿದೆ.

ಹಸ್ತಪ್ರತಿಗಳನ್ನು ಸಂಗ್ರಹಿಸಲು ಎರಡು ವರ್ಷಗಳ ಕಾಲ ಹಿಡಿಯಿತು. ಸಂಸ್ಕಾರ ಮಂಡಲಿಗೆ ಬರೋಡ ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರಾದ ಶ್ರೀಮತಿ ಹಂಸಾಮೆಹತಾರವರು ಛೇರ್‌ಮನ್ನರಾಗಿದ್ದಾರೆ.

ನನಗೆ ಯುದ್ಧದ ದಿಗಿಲು

ಯುದ್ಧವೆಂದರೆ ನನಗೆ ದಿಗಿಲು. ಆದ್ದರಿಂದ ಯುದ್ಧಕ್ಕೆ ಕಾರಣವಾಗುವಂತಹ ನೀತಿಯನ್ನು ಅನುಸರಿಸುತ್ತಿರುವ ಯಾವುದೇ ರಾಷ್ಟ್ರಗಳ ಗುಂಪಿಗೆ ನೇರಲು ನಾವು ಇಚ್ಛಿಸುವುದಿಲ್ಲ. ಬರ್ಮಾವು ತನ್ನ ಇತಿಹಾಸದುದ್ದಕ್ಕೂ ಯುದ್ಧವನ್ನೇ ಅನುಭವಿಸುತ್ತಾ ಬಂದಿದೆ. ಈಗ ಅದು ಶಾಂತಿಯನ್ನು ಬಯಸುತ್ತಿದೆ—ಎಂಬುದಾಗಿ ಬರ್ಮದ ಮುಖ್ಯಸಚಿವರಾದ ಯೆನುರವರು ಒಂದು ಕಡೆ ಭಾಷಣ ಮಾಡುತ್ತಾ ತಿಳಿಸಿದರು.

++++++++++++++++++++

ಶ್ರೀ ಶಾಂತೇಶ್ವರ ಆಯುರ್ವೇದ ಪವಾಜಾತಾ, ನಂದೂರ.

ನಾರುಹುಣ್ಣಿಗೆ ಹಿಮಾಲಯ ಬಾಮ್

ನಾರುಬೇನೆಗೆ ಹೆದರಬಾರದು ಅದರ ಮೇಲೆ ಅದ್ಭುತವಾದ ಔಷಧವಿದೆ. ಹಿಮಾಲಯ ವನಸ್ಪತಿಗಳಿಂದ ಸಶಾಸ್ತ್ರೀಯವಾಗಿ ಸಿದ್ಧವಾಗಿದೆ ನಾರು ಗುರುಳೆ ಬಂದೊಡನೆ ಪ್ರತಿದಿನಸ ಮುಂಜಾನೆ ಒಂದು ಗೋಲಿ, ರಾತ್ರಿ ಭೋಜನಾನಂತರ ಒಂದು ಗೋಲಿ ಇದರಂತೆ ಮೂರು ದಿವಸ ತೆಗೆದುಕೊಳ್ಳಬೇಕು. ಪಥ್ಯ—ಆಕ್ಕಿಅನ್ನಾ ಗಂಜಿ ತೆಗೆದು ಮಾಡಬೇಕು ಅನ್ನಾ-ತುಪ್ಪ ಉಂಬುವಂತೆ

೬ ಗೋಲಿ ಪಾಕೇಟಿಗೆ ಬೆಲೆ ರೂ. ೧-೬-೦.

ಪೊಸ್ಟ್—ಖಾಜಾಬಾದ, ಗುಲ್ಬರ್ಗಾ.

++++++++++++++++++++

ಕಲ್ಪಲತೆ

ಈ ಗ್ರಂಥವು, ತರುಣಸಾಹಿತಿಗಳಾದ ಶ್ರೀ ಚ. ಸುಂದರೇಶ್ ಸೋಸಲೆಯವರಿಂದ 64 ಪುಟಗಳಲ್ಲಿ ಸ್ಪಿಂಟಾಗಿದೆ ಇದರ ಬೆಲೆ 0-12-0

ಮಾನವನು ಪವಿತ್ರಜೀವಿಸದೆ ಆದರ್ಶವನ್ನು ಪಡೆದು ಧನ್ಯನಾಗಲು ಬಾರ್ಶನಿಕರ ಜೀವನದರ್ಶನವು ಅಗತ್ಯ. ಈ ದರ್ಶನ ಹಾಗೂ ಸಾಧನೆಗಳ ಪರಿಚಯವನ್ನು ಈ "ಕಲ್ಪಲತೆ" ಮಾಡಿಕೊಡಲೆತ್ನಿಸಿದೆ ಶ್ರೀ ಬಸವಣ್ಣ, ಅಕ್ಕಮಹಾದೇವಿ, ಪಾಪಿಮಾರುದೇ ಜೀವನ ಪರಿಚಯದ ಕೃತಿಗಳು ಇದರಲ್ಲಿ ಅಡಕವಾಗಿದ್ದಲ್ಲದೆ, ಜೀವಪರಿದಲ್ಲಿ ಮಾತೆಯಸ್ಥಾನ, ಬಾಳುವೆಯಗುರಿ, ಭಕ್ತಿ, ಮುಕ್ತಿ ಮೊದಲಾದ ಉಪಯುಕ್ತ ಲೇಖನಗಳೂ ಸತ ಹೃದಯಂಗಮವಾಗಿವೆ. ಇದಕ್ಕೆ ಕನ್ನಡಾಡಿತ ಹಿರಿಯಾಂತ ಸಾಹಿತಿಗಳಪೇಕ್ಷರು ತಮ್ಮ ಮೆಚ್ಚುಗೆಯನ್ನು ಕೊಟ್ಟಿದ್ದಾರೆ. ಕನ್ನಡಸಾಹಿತ್ಯದ ಸಿರಿಸಂಪತ್ತನ್ನು ಬೀರುವ ಈ ಗ್ರಂಥವನ್ನು ಎಲ್ಲ ಕನ್ನಡಿಗರು ಕರಾಸಿ ಓದಿ ಧನ್ಯರಾಗಲೆಂದು ಆಶಿ.

ಪುಸ್ತಕ ದೊರೆಯುವ ವಿಳಾಸ—

ಕಾಂತಮೆಮೋರಿಯಲ್ ಪ್ರೈವಾಶ್ಚ ಪ್ರಕಾಶಕರು,
ಸಿ ಸೆಟ್ಟರಾಜ್, ಬಿ.ಎಸ್.ಸಿ.,
ಎಂ. ಎಸ್. ಕೆ ಮೂರ್ತಿ, ಬಿ.ಎಸ್.ಸಿ.,
542 ನಂಜಿಮೊಹಲ್ಲಾ, ಮೈಸೂರು.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಿಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವತಾಗಣಭಾಷೆಯಲ್ಲಿದ್ದಿತು. ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶ್ರೀ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೋಹಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಪದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ಲ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಜಮಖಾಲ್ಯ ಗ್ರಂಥವನ್ನು ಸರ್ವರೂ ತಂದು ಓದಿ ಧನ್ಯರಾಗಬೇಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಜಂಭರ್ಷಿ ಅಮ್ಮನವರಿಲೀಲೆಗಳಿಂದ ಕೂಡಿದ ಫೋಟೋ ಸೈಜು ತಂಗಾಲಿ ಬೆಲೆ ೧೫೯	೦—೬—೦
ಶ್ರೀರೇಣುಜಗದ್ಗುರು ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೪—೦
ಶ್ರೀರೇಣುಜಗದ್ಗುರು ಪಂಚಾಚಾರ್ಯರು ಪಂಚಮಹಸ್ಥಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫	೦—೩—೦
" " " ಚಿಕ್ಕ ಸೈಜು ಬೆಲೆ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಜಗಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಜಗಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಜಗಾಚಾರ್ಯರು ವಿಶೇಷಜ್ಞಾನ ಪ್ರಾಪ್ತರಾಗಿರುವಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯರುಮಹಸ್ಥಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ತತ್ತೀಚಿಪಾದಾರಣಮಾಡುವ ಫೋಟೋ	೦—೧—೬
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ನಿಶ್ಚಲೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮದ್ಜಯಚಿಹ್ನ ಪೀಠಾಸನಾರೂಢರಾದ ಶ್ರೀ ಜಗದ್ಗು॥ ಸಿದ್ಧ ರೇಣುಕಶಿವಾಚಾರ್ಯರ ಫೋಟೋ	೦—೧—೦
ಶ್ರೀಮಜ್ಜಯಚಿಹ್ನಪೀಠಾರೂಢರಾದ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮಜ್ಜಯಚಿಹ್ನ ಜಗದ್ಗುರುಗಳವರ ಸ್ಥಾಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಸಂತಾಪಕೊಂಡಿರುವ ಫೋಟೋ	೦—೧—೬
ಖಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾನ್ ರಥಾರೂಢರಾದ ಶೋಭಾಯಮಾನವಾದ ಫೋಟೋ ಬೆಲೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಸ್ವಾಭೀಷ್ಟ ಕಷ್ಟಿಸಿದ ಸುಂದರ ಫೋಟೋ ಬೆಲೆ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ...	೦—೩—೬

ಮ್ಯಾನೇಜರ್- ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಇತರ ಗ್ರಂಥಗಳು

ಸೋಽತ್ರಸೂತ್ರಸಟೀ (೩ನೆಯ ಆವೃತ್ತಿ)	೧ ಆಣೆ
ಸಪ್ತಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಮಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀರಂಭಾಪಾಲ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿವಾಚಾರ್ಯಶತಕ	೨ ಆಣೆ
ತಿನಕೃತಿ ವಿಲಾಸ	೩ ಆಣೆ
ಪುಳಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ	೩ ಆಣೆ
ಉಲ್ಲಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	೩ ಆಣೆ
ಜಾಸವಾದಿನಿಜತತ್ವದರ್ಪಣ (೫ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಸ್ತವಕಿರಣ	೩ ಆಣೆ
ಶ್ರೀಗುರುಶಕ್ತ್ಯಷ್ಟಪದಗಳು (೩ನೆಯ ಆವೃತ್ತಿ)	೩ ಆಣೆ
ವೀರಶೈವಾಚಾರವಿವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ವೀರಶೈವ ವ್ಯಾಯಶ್ಚಿತ್ತವಿಧಿ	೪ ಆಣೆ
ವೈದಿಕಾಚ್ಚಾರ್ಯರಕಸ್ಯ	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೪ ಆಣೆ
ಕೈವೋಪನಿಷತ್ಸಂಗ್ರಹಃ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ
ಸಪ್ತಾಸಾಶ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಹ್ನೀಕ-ಶಾಂತ್ಯವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಒನವಧ್ಯಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯಂ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣಾವಿಜಯ ನಕ್ಷತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯಶತಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶಿವಾಸನುತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಚಾರಸಾರಾವಳಿ	೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧ ರೂ.
ವೈದಿಕಶಿವಪೂಜಾವಿಧಿ (ಸೈದಿಕಸ್ತರಯುತ್ತಪಾಮದು ೩ನೆಯ ಆವೃತ್ತಿ)	೧॥ ರೂ.
ಶಿಷ್ಯರ ಮನೆಗೆಳ ರಿಜಿಸ್ಟರ್ ಬುಕ್	೧॥ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸುಪ್ರಭಾಗಮಗಳಿಂದ ಕೂಡಿರುವುದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಪ್ಟಿದಿ)	೨ ರೂ
ವೀರಶೈವರತ್ನ (೩ನೆಯ ಆವೃತ್ತಿ, ೫೦ ಮತ್ತಷ್ಟದ ಫೋಟೋಗಳಿಂದಲೂ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೩॥ ರೂ.
A brief life-sketch of Pandit Sri-Kashinatha Shastr (English)	4 As
The Philosophical Aspect of Virasaivism (English) ...	8 As
Speeches by Pandit Shri Kashinatha Shastriji (Eng h)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ.
ವೀರಶೈವರತ್ನ (ಮರಾಠಿ)	೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಾರ್ಥ-ಸಂಸ್ಕೃತ)	೧ ರೂ
ಸಂಧಿಕಾಸ್ಕಾರಕಾರಿಕಾ (ಸಂಸ್ಕೃತ)	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahmmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.2681

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾತಿಮಹನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಿಮಾನವರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂಕ್ತಪ್ರಮಿತರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಜಾಗನೂರು ಬೃಹನ್ಮಠಾಧ್ಯಕ್ಷರಾದ ವೇದ ಪಂಡಿ ಶ್ರೀ ಶಾಂತೀಶಾಖಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಜಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯಸ್ವಾಮಿಗಳವರು [ವಿ. ಪಿ. ಖರ್ಚು ಸೇರಿ ೩ ರೂ ೮ ಆ

ಸಂಪುಟ ೩೮] ಸೋಮವಾರ ತಾ॥ ೩೦ ನೇ ಜೂನ್ ೧೯೩೫ [ಸಂಚಿಕೆ ೮

ಪತ್ರವ್ಯವಹಾರ

[ಚಾತ್ರಿಧಾರರು ಅಭಿಪ್ರಾಯ ಪಡುವ ಲೇಖಕಗಳಿಗೆ ಪತ್ರಿಕಾಕಾರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಪಂಚಾಚಾರ್ಯ ಪ್ರಭಾ ವಾಚಕರಿಗೆ
ಸೂಚನೆಯೂ
ಜೀವದಂಡಿಯವರ ಲೇಖನದ ಖಂಡನೆಯೂ

ಮಹಾಶಯರೇ,

ತಾ॥ ೨೬-೪-೩೫ ಮೈ॥ ಪಂ॥ ಪ್ರಭಾ ಪತ್ರಿಕೆಯಲ್ಲಿ ಪಿ. ವಿ. ಶಾಟ್ಲಾ ಜೆವರಿಗಿ ಜಂಟರು ಮಾಳ್ಕಿಪತಿ ಮೂಪಾಯಗಳ ಸಂಬಂಧವಾಗಿ ಅಸಮಂಜಸವಾದ ಲೇಖ ಬರೆದು " ಗುರುವರ್ಗದರ್ಪಣ " ಗ್ರಂಥವನ್ನು ಹೀಯಾಳಿಸಿ ವಾಚಕರ ಮನಸ್ಸನ್ನು ಕಲ್ಮಷಗೊಳಿಸುತ್ತಾರೆ. ಸದರಿ ಗ್ರಂಥದ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸಿದೆ, ಅವನ್ನು ಸಂಪೂರ್ಣ ಓದಿನೋಡದೆ, ಅಥವ ಪತ್ರಬರೆದು ವಿಷಯಂಬಿ ತಿಳಿದುಕೊಳ್ಳದೆ ಮನಸ್ಸಿಗೆ ತೋರಿದಂತೆ ಬರೆದಿರುವದು ಯೋಗ್ಯವಾಗುವುದೋ.

"ಗುರುವರ್ಗದರ್ಪಣ"ವೆಂದರೆ " ಗುರುಗಳ ಸಮೂಹವನ್ನು ತೋರಿಸುವ ಕನ್ನಡಿ " ಎಂದಾಗುವುದಿಲ್ಲವೇ. ಹಾಗು ಈ ಗ್ರಂಥದ ಪ್ರಸ್ತಾವನೆಯಲ್ಲಿ ವಿಶದವಾಗಿ ಲಿಖಿಸಿರುತ್ತೇನೆ. ಅದನ್ನು ನೋಡದಂತೆ ತಾತ್ಪರ್ಯವನ್ನು ದಿಲ್ಲಾ. ಗ್ರಂಥದ ತಾತ್ಪರ್ಯ ತಿಳಿಯದೆ' ರಾಜರಿಂದ ಕೊಡಲ್ಪಟ್ಟ ಇನಾಂಭೂಮಿಗಳಲ್ಲಾ, ಇತಿಹಾಸಗಳಲ್ಲಾ, ಬರುವಾವಳಿಗಳಲ್ಲಾ ಎಂದು ಏನೇನೋ ಅಧಿಕಪ್ರಸಂಗ ಬರೆದುಕೊಂಡಿದ್ದಾರೆ

ಈ ಗ್ರಂಥ ಮುದ್ರಣವಾಗಿ ೧ ವರುಷದ ಮೇಲಾಯಿತು ಗ್ರಂಥವನ್ನು ಪಕಡಮಾಡಿ ಸರ್ವರೂ ಸಂತೋಷಪಡುತ್ತಿರುವರು. ಹಾಗು ಕೆಲವು ಮಹಾನುಭಾವರು ತಮ್ಮ ಸದಭಿಪ್ರಾಯ ಲೇಖ ಬರೆದು ಕಳುಹಿಸಿರುತ್ತಾರೆ. ಯಾರೆಂದರೆ---ಶಾಕೀಪೀಠದ ಜಗದ್ಗುರು ಮಹಾ ಶ್ರೀ॥ ॥ ಸಿದ್ಧಿಲಿಂಗಯತಿಗಳು (ತಾ॥ ೨೫-೭-೩೩.) ಧಾರವಾಡ ರಿ॥ ಕಲೆಕ್ಟರ ಆಫ್. ಎಸ್. ಹಿಲೇಮಳ ರವರು (ತಾ॥ ೧೦-೫-೩೩) ಹೋಟಗಿ ಶ್ರೀಗಳವರು (ತಾ॥ ೨೫-೬-೩೩) ಕಲಬುರ್ಗಿ, ಜವರಾಪುರೀ ಶ್ರೀಗಳವರು (ವಿಜಯಾ ಸಂ॥ ಆಷಾ॥ ಶು॥ ೩) ಮತ್ತು ಗದಗ, ಹೂಲಿ, ಕಂದೂರು, ರಾಂಪುರ ಮೊದಲಾದ ಶ್ರೀಗಳವರಿಂದಲೂ ಪ್ರಮುಖರಿಂದಲೂ ಅಭಿಪ್ರಾಯದ ಪತ್ರಿಕೆಗಳು ಬಂದಿರುತ್ತವೆ

ಹೀಗಿದ್ದು ಈ ಹುಚ್ಚಾಗ್ರೇಸರರು ಏನೇನೋ ಬರೆದಿದ್ದಾರೆ. ಇವರ ಗೊಡವೆ ಇವರಿಗೇ ತಕ್ಕೆ ಬೇಕು. ಸುಮ್ಮನೆ ತಮ್ಮ ಉದ್ಯೋಗದಲ್ಲಿರುವರೋ ಇರಲಿ. ಇವರಲ್ಲಿ ತಿಳುವಳಿಕೆಗಳನ್ನು ಕೆಳಗೆ ಬಿಚ್ಚಿ ತೋರಿಸುವೆವು :—

(೧) ಇವರ ಲೇಖದಲ್ಲಿ—ಶಾಸ್ತ್ರಿಗಳು ಜತೆಯಾಯಿ ಕೊಟ್ಟವರಿಗೆ ೧ ಗ್ರಂಥವನ್ನು ಪುಕ್ಕಟೆ ತೊಯ್ದುವುದಾಗಿ ಮೈಸೂರು ಪಂ॥ ಪ್ರಭಾದಲ್ಲಿ ಪ್ರಕಟಿಸಿರುವರು—ಎಂಬುದಾಗಿ ಬರೆದಿರುವರು. ಹೀಗೆ ನಾವು ಬರೆದಿರುವದು ನಿಜವೋ, ಯಾವ ತಾರೀಖಿನ ಪ್ರಭಾ ಪತ್ರಿಕೆಯಲ್ಲಿದೆ, ತೋರಿಸಿಕೊಡುವರೋ, ಇದು ಕೇವಲ ಸುಳ್ಳು ಸಂಗತಿಯಲ್ಲವೇ.

(೨) ಗುರುವರ್ಗದರ್ಪಣ ಗ್ರಂಥವನ್ನು ನೋಡಿದೆ, ಅದರಲ್ಲಿ ಹುರುಳಿಲ್ಲವೆಂದು ಬರೆದಿರುವರು. ಇದನ್ನು ಓದಿದ ಸಜ್ಜನರು, ನಗುತ್ತಿರುವರು ಏನಿದು ಎಂಥಾ, ಅಸಾಯ, ಅಸಹ್ಯ, ಅಜ್ಞತೆಯ ಲೇಖವಿದು. ಈ ಗು॥ ದರ್ಪಣ ಗ್ರಂಥದಲ್ಲಿ ೩ ಭಾಗಗಳನ್ನು ಮಾಡಿದೆ. (೧) ಶ್ರೀ ಜ॥ ಪಂಚಪೀಠಗಳ ಪರಿಚಯ (೨) ಪಟ್ಟಭದ್ರಾಧಿಕಾರಿಗಳ ಪರಿಚಯ (೩) ಮಹಾಧಿಕಾರಿಗಳ ಪರಿಚಯ ಹಾಗು ಸಂತೈರ್ಜಾಧಾನವೆಂದು. ಇಷ್ಟು ಸಾಹಸಪಟ್ಟು, ಅಮೂಲ್ಯ ವಿಷಯಗಳ ಸಂಗ್ರಹಿಸಿರುವದು ವೀ॥ ಸಮಾಜಕ್ಕೊಂದು ಸಹಾಯ ಮಾಡಿದಂತಾಗಿರುವದೆಂದೂ, ಸಂತೋಷಪಡುತ್ತಿರುವರು.

(೩) ಸಮ್ಮೇಳನದ ಕಾರ್ಯದರ್ಶಿಗಳಿಗೆ ೧ ಗ್ರಂಥ ಕಳುಹಿಸಿಲ್ಲವೆಂಬುವದು. ಅತ್ಯಂತ ವಿಷಾದಕರ. ಅಷ್ಟು—ಎಂದು ಬರೆದಿರುವರು. ನಾವು ಈ ಮೊದಲೇ ತಾ॥ ೧೯-೬-೩೩ ದಿವಸ ಹೋಟಗಿ ಶ್ರೀಗಳವರಿಗೆ (೧) ಗ್ರಂಥ ೧ನ್ನೂ, ತಾ॥ ೬-೭-೩೩ ಕಲಬುರ್ಗಿ ಜವರಾಪುರೀ ಶ್ರೀಗಳವರಿಗೆ (೧) ಗ್ರಂಥವನ್ನು ವೇಷ್ಟ ದ್ವಾರ ರವಾನೆ ರಸೀದಿ ಪಡೆದಿರುತ್ತೇವೆ. ಹೀಗಿದ್ದು ಇವರು ಸದರಿ ಉಭಯರು ಶ್ರೀಗಳಿಗೂ ಬರೆದು ತಿಳಿದುಕೊಳ್ಳದೆ, ಅಜ್ಞ ಬಾಲಕನಂತೆ ಅಸತ್ಯ ಅಸಂಬದ್ಧ ಲೇಖ ಬರೆಯುವದು ದಕ್ಷತಕವಲ್ಲವೇ.

(೪) ಈ ಗ್ರಂಥಕ್ಕೆ ಅನೇಕ ಇವರ ಸಹಾಯ ಸಹಕಾರ ದೊರೆತಿದ್ದು ಗ್ರಂಥದಲ್ಲಿ ಪ್ರಕಟವಾಗಿದೆ—ಎಂದು ಬರೆದಿರುವರು. ಈ ಬುದ್ಧಿವಂತರು ಯಾರ್ಯಾರು ಎಷ್ಟೆಷ್ಟು ಸಹಾಯ ಮಾಡಿರುತ್ತಾರೆಂಬುವದನ್ನು ಆ ಗ್ರಂಥದಲ್ಲಿ ತೋರಿಸಿಕೊಡುವರೋ. ಹೀಗೆ ಹುಬ್ಬುದ್ದಿಯಿಂದ ಬರೆದ ಇವರ ಲೇಖಕ್ಕೆ ಧಿಕ್ಕಾರ.

(೫) ಸಮಾಜದ ಮಹಿತ ಮರುಪಯೋಗಕ್ಕೆ ಈ ಗು॥ ದರ್ಪ ಸಾಸ್ತ್ರಿಯೆಂದು ಹೆಚ್ಚರಿಸಿರುತ್ತೆ ಉಚ್ಚರಿಸಿರುವರು.

ವಾಚಕಮಹಾಶಯರೇ—ಇವರಿಗೆ ಚಿಕ್ಕಾಗಿ ಬುದ್ಧಿ ಹೇಳಿರಿ. ತಾವೆಂತೂ ಈ ಗ್ರಂಥಕ್ಕೆ ಒಂದು ಕಾಸು, ಅವರೆ ಸಹಾ ಸಹಾಯಮಾಡಿರುವದಿಲ್ಲ ಇಷ್ಟು ಅವರ ರೆಕ್ಕೆಪ್ಪ ಸಹಾಯ ಮಾಡಿರುತ್ತಾರೆ, ದಾವಣಗೆರಾರಿ ದ್ವಾರೆ ಮುಂದೆ ಬಂದು ಹೇಳುವರೋ. ಪುರ್ವಾಪರ ವಿಚಾರವಿಲ್ಲದೆ ಲೇಖ ಬರೆದು ಮಹಾಪಂಡಿತರೆನಿಸಿಕೊಳ್ಳ ಹೇಳೆಂದು ಪ್ರಯತ್ನ ಮಾಡಿರುತ್ತಾರೆ. ಇವರ ಲೇಖಕ್ಕೆ ೧ ಅವರೆ ಕಿಮ್ಮತ್ತು ಸಹಾ ಇಲ್ಲದಾಗಿದೆ. ಇಂತಹ ಅಪ್ರಯೋಜಕ ಲೇಖಗಳಿಗೆ ಯಾರೂ ಉತ್ತರಕೊಡುವಾರದು ಮತ್ತು ಸದಯವರ ಲೇಖ ಮಾತ್ರ ಮಾಡಬೇಕಾಗಿದೆಂದು ಸೂಚನೆ.

ಗ್ರಂಥಕರ್ತ
ಪಿ. ಎಂ. ವಿರೂಪಾಕ್ಷಶಾಸ್ತ್ರಿಗಳು, ಹಿರೇಹಡಗಲಿ

ಗುರುಭಕ್ತಿತೋಮಣಿಗಳ ಕಣ್ಣಿಗೆ ಗದಗ

ಶ್ರೀ ಲಿಂಗಯ್ಯನೆಂಬ ನಾಮಧೇಯವನ್ನು ಸಾರ್ಥಕ ಮಾಡಿಕೊಂಡ ವೇ॥ ಲಿಂಗಯ್ಯಸ್ವಾಮಿ ಶಿಲ್ಪಿಮಠ ಗದಗ ಇವರು ತಾ॥ ೧೫-೬-೧೯೩೫ ನೇ ಮಂಗಳವಾರ ಮುಂಜಾನೆ ೧೦॥ ಘಂಟೆಗೆ ಇಂಗಡಲೊಂಪಿ, ಬೆಳಿಂಗೆ ಕೋಳ್ ಹಂಪಿ, ಕುಸುಗಲಿಕೋಳ್ ಕಂಪು ಬೆರೆದಂತೆ ಶ್ರೀ ಲಿಂಗಯ್ಯನವರು ವೀ॥ ಲಿಂಗೈಕ್ಯರಾದರು. ಇವರು ದೊಡ್ಡ ವ್ಯಾಪಾರಿಗಳೂ ಗದಗಪಟ್ಟಣದಲ್ಲಿ ಪ್ರಗಣ್ಯ ಪದೆಯ ಕೌಸ್ತುಭರೂ ಆಗಿದ್ದರು "ಪರೋಪಕಾರ್ಥಮಿದಂ ಶರೀರಂ" ಎಂಬುಕ್ತಿಯಂತೆ ಅವರಿಷ್ಟಾನೆಯನ್ನೇ ತಮ್ಮ ನಿತ್ಯ ಕಾರ್ಯದ ಗುರಿಯನ್ನಾಗಿ ಇಟ್ಟುಕೊಂಡಿದ್ದರು. ವ್ಯವಹಾರದಲ್ಲಿ ಕೂಡಾ ಬಡವ ಬಲ್ಲಿದರೆಂಬ ವೀತವರಿಲ್ಲದೆ ಸಮಾನವಿಟ್ಟುಕೊಂಡಿದ್ದರು. ವೈವಹಾರದಲ್ಲಿ ಕೂಡಾ ಬಡವ ಬಲ್ಲಿದರೆಂಬ ವೀತವರಿಲ್ಲದೆ ಸಮಾನವಿಟ್ಟುಕೊಂಡಿದ್ದರು. ಇವರ ಮರಣದ ವಾರ್ತೆಯು ತಿಳ್ಪದ ಕೂಡಲೇ ಯಾವತ್ತು ಬಜಾರಿಗಳ ಜಾಲೆಗಾಲೇಜುಗಳ ವೈವಹಾರಗಳು ನಿಂತುಹೋದವು. ೧೯೪೪ ನೇ ಇಸ್ವಿಯಲ್ಲಿ ಶ್ರೀಮದ್ಭಂಭಾಪುರಿ ಜಗದ್ಗುರುಗಳವರು ದಯಮಾಡಿಸಿದಾಗ್ಗೆ ನಿಸ್ಪೃಹ ಭಕ್ತಿಯಿಂದ ಸೇವೆಗೈದು ಶ್ರೀ ಗುರುಕೃಪೆಗೆ ಪಾತ್ರರಾಗಿದ್ದರು ಇಷ್ಟೂ ಅನೇಕ ಧರ್ಮಕಾರ್ಯಗಳಲ್ಲಿ ಕಮ-ಮಕ್ತ-ಭಕ್ತಿಗಳಿಂದ ಸೇವೆ ಸಲ್ಲಿಸಿ ಕೀರ್ತಿಧನಿಗಳಾಗಿದ್ದರು. ಇವರ ಸ್ವಾಭಾವ ಯಾತ್ರೆಗೆ ೫-೬ ಸಾವಿರಕ್ಕೆ ಮೇಲ್ಪಟ್ಟು ಜನರು ಪುರ ಪ್ರಮುಖರನ್ನೊಳಗೊಂಡು ತೆರೆದಿದ್ದರು. ಇಂಥ ಮಹಾಮಭಾವರು ಅಗಲಿಹೋದದ್ದಕ್ಕಾಗಿ ಯಾವತ್ತು ಜನಾಂಗಕ್ಕೆ ಅತೀವ ದುಃಖವಾಗಿದೆ. ಶ್ರೀ ಜ॥ ರೇಣುಕಾದಿ ಪಂಚಾಚಾರ್ಯರು ಇವರಿಗೆ ಶಿವಸಾಯುಜ್ಯವದವಿಯನ್ನು ದಯಪಾಲಿಸಲಿ ಮತ್ತು ಅವರ ಪುತ್ರಕೌಶ್ಯಾದಿಗಳಿಗೂ ಬಂಧುವರ್ಗಕ್ಕೂ ಉಂಟಾಗಿದ್ದ ದುಃಖವನ್ನು ಹೋಗಲಾಡಿಸಿ ಕಾಪಾಡಲೆಂದು ಹೇಳುತ್ತೇವೆ.

ಲಿವರ ದುಃಖಭಾಗಿ

ದುಃಖಸೂಚಕಸಭೆ ಗದಗ

ತಾ॥ ೨೦-೬-೧೯೩೫ ನೇ ದಿವಸ ಶ್ರೀಮಂತ ಬಸಪ್ಪ ಪವರು ಅಧ್ಯಕ್ಷರಿಗೆ ಇವರ ಆಯುಲ್ ಮಿಲ್ಲಿನಲ್ಲಿ ಪಂಚಾಚಾರ್ಯ ಸೇವಾಸಂಘದ ವತಿಯಿಂದ ಕರೆದ ದುಃಖ ಸೂಚಕ ಸಭೆಯಲ್ಲಿ, ಅವರ ಬಂಧುಗಳಾ ಶ್ರೀ ಜ॥ ಪಂಚಾಚಾರ್ಯ ಸೇವಾಮಂಡಳರೂ ಆದ ವೇ॥ ಲಿಂಗಯ್ಯಸ್ವಾಮಿ ಶಿಲ್ಪಿಮಠ ಮತ್ತು ಅವರ ಅಣ್ಣಂದಿರಾದ ವೇ॥ ಸೋಮಯ್ಯಸ್ವಾಮಿ ಶಿಲ್ಪಿಮಠ ಈ ಉಭಯರ ನಿಧನದಿಂದ ವೀರಶೈವ ಸಮಾಜಕ್ಕೂ ಮತ್ತು ಸಾರ್ವಜನಿಕರಿಗೂ, ಪಂಚಾಚಾರ್ಯ ಸೇವಾಸಂಘಕ್ಕೂ ತುಂಬಿ ಬಾರದ್ದು ಆಪತ್ತಾಯಾಗಿದ್ದು ಅವರೀರ್ವರ ನಿಧನದ ಬಗ್ಗೆ ಅವರ ಗುಣಾವಲಂಬನವಾದ ದುಃಖದ ಒಕ್ಕೊರಲು ಭಾವಾಯಾಗಿತ್ತು. ಪೀಠದ ಭಕ್ತರ ಅಕ್ಷಯ ಕಾಂತಿಯಿಮ್ಮಾಗಲೆಂದು ಈ ಸಭೆಯು ಪ್ರಾರ್ಥಿಸುತ್ತಿದೆ.

ಅಧ್ಯಕ್ಷರು :—ಸಿ. ಬಿ. ರಾಚಯ್ಯಸ್ವಾಮಿಗಳ ಪರೀಕ್ಷರು.

ಸಂಜೀವಾಚಾರ್ಯಪ್ರಭಾ

೧೯೫೪ ನೆಯ ಜೂನ್ ತಾ|| ೩೦ ನೇ ಸೋಮವಾರ

ನರ್ಮದಾಲಿಂಗಮಾಹಾತ್ಮ್ಯ

(ಶ್ರೀ ಶಿವರಹಸ್ಯೇ ತೃತೀಯಾಂಶಾರ್ಜಿತ)

ಪೂರ್ವದಲ್ಲಿ ಧರಕಖಂಡವೆಸರಿನ ಗಂಗಾನದಿಯೇ ಮೊದಲಾದ ಪುಣ್ಯನದಿಗಳೆಲ್ಲ ಕೂಡಿ ಪ್ರಪಂಚವೆಲ್ಲ ತಾವೇ ಹೆಚ್ಚಿನ ಪವಿತ್ರತೆಯಿಂದ ಸಡೆಯಬೇಕೆ ನು ಉದ್ದೇಶಿಸಿ ಪರಶಿವನನ್ನ ಕುರಿತು ಉಗ್ರ ತಪವನ್ನಾ ಚರಿಸಿದವು ಎಲ್ಲರಿಗಿಂತಲೂ ವಿಂಧ್ಯಪ್ರವೇರದಲ್ಲಿ ತಪವನ್ನು ಗೈದ ನರ್ಮದೆಯ. (ರೇನೆಯ.) ತಪಸ್ಸಿಗ ಮೆಚ್ಚಿ ಪರಮೇಶ್ವರನು ಅವಳ ಕೇಳಿಕೊ ಡಂತೆ ಪಾರ್ವತಿ ಸಹಿತ ಅಲ್ಲಿಯೇ ನಾಸಿ ಸೈರ್ಯ ನಾಮಕನಾಗಿ ವಾಸ ಮಾಡಿ ನರ್ಮದೆಯೂ ಅಲ್ಲಿಯ ತೀರ ವು ಸೋಮೇಶ್ವರ ತೀರ್ಥವೆ ಮು ಪ್ರಸಿದ್ಧವಾಗಿಹೆಂದೂ ಅಲ್ಲಿನ ತೀರ್ಥಗಳು ನರ್ವಾಭರಣವೂ ಶ್ರೇಷ್ಠ ಲಿಂಗಗಳೆಂದೂ ಆ ಲಿಂಗಗಳ ದರ್ಶನ ಪೂಜನಗಳಿ ದ ಇತದಲ್ಲಿ ನರ್ವ ವಿಧ್ಯವೂ ಪರದಲ್ಲಿ ರುಶ್ಯತವಾದ ಶಿವಸಾಯುಜ್ಯವೂ ಲಭಿಸಲೆಂದೂ ವರಪ್ರದಾನ ಮಾಡಿದನು ಅಂದಿನಿಂದ ವಿಶ್ವವ್ಯಾಪ್ತಿಗಳಾದಿಯಾಗಿ ನರ್ವ ದೇವಶ್ರೇಷ್ಠರೂ ಮುನಿಗಳೂ ಆ ನರ್ಮದಾ ತೀರದಲ್ಲಿ ನರ್ವದಾ ಪರ ಶಿವನ ಲಿಂಗಪೂಜೆಮಾಡುತ್ತಿರುವರ ಎಷ್ಟೋ ಪಾಪ ಗಳನ್ನು ಮಾಡಿ ನರಕಭಾಜನರಾದವರು ಕೂಡ ಆ ಲಿಂಗಗಳ ಮೇಲಿನ ಗಾಳಿಯು ಸೋಕಿದ್ದರಿಂದಲೇ ಪುಣ್ಯ ಲೋಕಗಳನ್ನೂ ಪರಮಪದಗಳನ್ನೂ ಪಡೆದಿರುವರು ಈ ಬಗ್ಗೆ ಒಂದು ಕತೆಯುಂಟು

ಹಿಂದ ವಿಂಧ್ಯಪ್ರದೇಶದಲ್ಲಿ ಒಬ್ಬ ಪ್ರಸಿದ್ಧ ರಾಜ ನಿದ್ದನು ಅವನು ತನ್ನ ವಿಶ್ವರ್ಯಮದದಿಂದ ಗುರುದೈವ ಭಕ್ತಿಹೀನನಾಗಿ ಯಾವಾಗಲೂ ಸ್ತ್ರೀಲಂಪಟನಾಗಿ ಅಪೇಯಾಪಾನ ಅಭಕ್ಷ್ಯ ಭಕ್ಷಣಗಳಿಂದ ದೇಹದ ಆರೋಗ್ಯ ಕೆಟ್ಟು ಡೋಗಿಡಿತಕಾದರೂ ಲಕ್ಷ್ಯವಿಲ್ಲದೆ ದುರ್ಮಾರ್ಗಿಯಾಗಿದ್ದನು ಹೀಗಿರುವಲ್ಲಿ ದೆ ವಕೋಪ ವೆಂಬಂತೆ ಅವನ ರಾಜ್ಯಕ್ಕೆ ಭಯಂಕರ ಕ್ಷಾಮ ಪ್ರಾಪ್ತ ವಾಯಿತು ತಿನ್ನಲು ಆಹಾರವಿಲ್ಲದೆ ಪ್ರಜೆಗಳೆಲ್ಲರೂ ಊರುಬಿಟ್ಟು ಕಾಡುಮೇಡುಗಳನ್ನು ಸೇರಿದರು. ಹೀಗೆ ಪ್ರಜೆಗಳೂ ಆಧಿಕಾರಿಗಳೂ ಒಬ್ಬೊಬ್ಬರಾಗಿ ಬಿಟ್ಟು ಹೋದದ್ದರಿಂದ ರಾಜನೂ ಅರಣ್ಯವನ್ನು ಸೇರಿ ಅಲ್ಲಿ ದೇಹದಲ್ಲಿ ಸ್ಪಾಸ್ತವಾದ ಉಗ್ರ ವ್ಯಾಧಿಗಳಿಂದಲೂ ಆಹಾರವಿಲ್ಲದೆಯೂ ನರಳಿ ಪ್ರಾಣವನ್ನು ಬಿಟ್ಟನು ಯಮಭಟರು ಅವನ ಜೀವವನ್ನು ಯಮಲೋಕಕ್ಕೆ ಕೊಯ್ದರು. ಇವನ ಪಾಪಕರ್ಮಗಳನ್ನು ಚಿತ್ರಗುಪ್ತರಿಂದ ಕೇಳಿದ ಯಮಧರ್ಮರಾಜನು, ಅವನಿಗೆ ಘೋರವಾದ ಅನಂತ ನರಕಶಿಕ್ಷೆಗಳನ್ನು ವಿಧಿಸಿದನು ಹೀಗೆ ಶಿಕ್ಷೆ ಯನ್ನು ಅನು.ಭವಿಸುತ್ತ ದಿಕ್ಕುಗಾಣದೆ ಹಂಬಲಿಸುತ್ತಿದ್ದ ಈ ಜೀವನ ಮೇಲೆ ಯಾವ ಕಂಚಿತ್ ಪುಣ್ಯದಿಂದಲೋ ಲೋಕಸಂಚಾರದಲ್ಲಿದ್ದ ಪಾರ್ವತಿಯ ದೃಷ್ಟಿಯು ಬಿದ್ದಿತು ಆಗ ದೇವಿಯು ದಯಾರ್ದ್ರಹೃದಯಳಾಗಿ ಪಕ್ಕದಲ್ಲಿದ್ದ ಶಂಕರನನ್ನು ಕುರಿತು ಸ್ವಾಮಿಯೆ, ರಾಜನಾ ನಿದ್ದು ಪಾಪವು ನರಕ ಸೇರಿರುವ ಇವನು ನಿನ್ನ ನಾಮ ವನ್ನೆ ಅವನ ಜಪ್ಯದಲ್ಲಿ ಒಂದು.ಸಲವಾದರೂ ಸ್ಮರಿ ಸಿಲ್ಲನೇ ಅವನು ಅನುಭವಿಸುತ್ತಿರುವ ಯಾತನೆಯು ವರ್ಣನಾತೀತವಾಗಿದೆಯಲ್ಲಾ ಎಂದು ಕೇಳಲು, ಪರಮಾತ್ಮನು ಗೌರಿಯನ್ನು ಕುರಿತು ನೀನು ನೋಡಿದ ಆ ಜೀವಿಯು ಬಹು ಪಾಪಿಯು, ನರ್ವದಾ ಸ್ತ್ರೀಲಂಪಟ ನಾಗಿದ್ದುದಲ್ಲದೆ ಒಂದುಸಲವಾದರೂ ಶಿವಲಿಂಗಪೂಜೆಯ ನ್ನಾಗಲಿ, ದರ್ಶನವನ್ನಾಗಲಿ ಮಾಡಿದವನಲ್ಲ. ಕೊನೆಗೆ ಭಕ್ಷರಾದ್ಯಾನ್ನಗಳನ್ನೂ ಕಣ್ಣಿತ್ತಿ ನೋಡಿದವನಲ್ಲ ಇಂಧನವಿಗೆ ಕಲ್ಲ್ಯಾಂತದವರೆಗೆ ಕಿಕ್ಕೆಯಾದರೂ ಸಾಲ ದೆಂದು ಹೇಳದನು. ಆದಕ್ಕೆ ಗಿರಿಜೆಯು ಸ್ವಾಮಿಯೇ ಪಾಪಪರಿಹಾರಕ್ಕೆ ಏನಿಂದ ಅನಂತ ವ್ರಗಳಿಗಳು ನಿರ್ಮಿತವಾಗಿವೆ ಹಾಗೆಯೇ ಇವನಿಗೂ ಯಾವುದಾ ದರೂ ಒಂದು ದಾರಿಯನ್ನು ತೋರ. ಆವಕು ಬಹು ಪಾಪಿಷ್ಠನಾದೂ ಅವನು ಮೃತಪಟ್ಟ ಬಳಿ ಅರಣ್ಯದಲ್ಲಿ ಒಂದು ಶಿವಲೀಂಗಾಲಯವಿದ್ದು ಅದರ ಮೇಲೆ ಬೀಸಿ ಬಂದ ಗಾಳಿಯು ಇವನ ದೇಹವನ್ನು ಸ್ಪರ್ಶಿಸಿದೆ. ಅಲ್ಲಿ ಕಾಡುಗಿಚ್ಚಿನಿಂದ ಉಂಟಾದ ಪವಿತ್ರ ಭಸ್ಮವು ಅವನ ದೇಹದಮೇಲೆ ಬಿದ್ದಿದೆ ಆ ಪುಣ್ಯ ಗಾಳಿಯ ಸ್ಪರ್ಶ ದಿಂದಲೂ, ಆ ಪವಿತ್ರ ಭಸ್ಮದ ಸಂಪರ್ಕದಿಂದಲೂ ಇವನ ಸಾಪರಾಶಿಯು ಕ್ಷೀಣಿಸಿರುವದು ಈ ಒಂದು ಯೋಗದಿಂದ ಅವನು ನರಕದಿಂದ ಮುಕ್ತನಾಗಲು ಯೋಗ್ಯನಾಗಿರಿಲ್ಲನೆ? ಅವ್ಯಂತ ಜೀವರುಗಳನ್ನು ರಕ್ಷಿಸುವದೇ ಕರ್ತವ್ಯನಾಗಿ ಉಳ್ಳ ನೀನು ಇವನನ್ನೂ ಕಾಪಾಡಬೇಕೆಂದು ಹೇಳಿದಳು ಶಿವನು ಯುಕ್ತವಾಕ್ಯ ವನ್ನು ಕೇಳಿ ಶಿವನು ಈ ವಿಷಯವನ್ನು ಯಮಧರ್ಮರಾಜನಿಗೆ ತಿಳಿಸಿ ಆ ರಾಜನನ್ನು ನರಕದಿಂದ ಮುಕ್ತ ಗೊಳಿಸಲು ತನ್ನ ದೂತರನ್ನು ಕಳಿಸಿದನು ಶಿವದೂತ ರಿಂದ ಶಿವನ ಆಜ್ಞೆಯನ್ನು ತಿಳಿದ ಧರ್ಮರಾಜನು ಚಿತ್ರಗುಪ್ತರನ್ನು ಕರೆದು ಕೇಳಿ ಹೀಗೆ ಭಸ್ಮ ಮತ್ತು ಪುಣ್ಯ ವಾಯುಸಂಬಂಧದಿಂದ ಆ ರಾಜನ ಪಾಪವು ನಶ್ಯವಾ ಗಿರುವದನ್ನು ತಿಳಿದು ಅವನನ್ನು ಶಿಕ್ಷೆಯಿಂದ ಬಿಡಿಸಿ ಶಿವಭಕ್ತನೆಂದು ಮನ್ನಿಸಿ ಶಿವದೂತರ ವಶಕ್ಕೊಪ್ಪಿಸಿದನು ಶಿವದೂತರು ಅವನನ್ನು ವಿಮಾನದಲ್ಲಿ ಶ್ರೀಮ ಲೋಕಕ್ಕೆ ಕರೆದೊಯ್ದರು ಅಲ್ಲಿ ಆ ರಾಜನು ಶಙ್ಖ ಚಕ್ರಾಯುಧಕ್ಕನಾಗಿ ಶಿವಪೂಜೆಯನ್ನು ಮಾಡುತ್ತ ಶಿವ ಯೋಗಿಯಾಗಿ ಬಹಳ ಕಾಲ ವಾಸವಾಗಿದ್ದನು ಹೀಗೆ ಯೋಗಸ್ಥಿಯನ್ನು ಪಡೆದ ರಾಜನು ಪ್ರತ್ಯಲೋಕವು ಶಾಶ್ವತವಲ್ಲವೆಂದರಿತು, ಶಾಶ್ವತವಾದ ಶಿವಸಾಯುಜ್ಯ ವನ್ನು ಪಡೆಯಬೆಕೆಂದು ಅದಕ್ಕೆ ಭೂಲೋಕದಲ್ಲಿ ರೇವಾತೀರದಲ್ಲಿರುವ ನರ್ಮದಾಲಿಂಗಗಳೊಂದೇ ಸುಲಭ ಸಾಧನವೆಂಬುದನ್ನು ತಿಳಿದು, ರೂಪಲಾವಣ್ಯ ಯುಕ್ತವಾದ ಒಬಲವೆಂಬವನು ಧರಿಸಿ ಆಯೋನಿಜನಾಗಿ ರೇವಾತಾರತೀರದಲ್ಲಿ ಒಂಭಿದನು ಅನಂತರ ಭಕ್ತಿ ಯಿಂದ ಆ ಬಾಲಕನು ನರ್ವದೆಯಲ್ಲಿ ಸ್ನಾನಮಾಡಿ ಶುಭ್ರವಾದ ಭಸ್ಮತ್ರಿಪುಂಡ್ರಗಳನ್ನು ಧರಿಸಿ ಶಿವಧ್ಯಾನ ವನ್ನು ಮಾಡಿ ಕಣ್ಣುಬಿಟ್ಟು ನೋಡಲು ತಿವನಿಗೆ ನರ್ವದೆಯ ತೀರಪ್ರದೇಶದಲ್ಲಿ ಅದ್ಭುತ ಕಾಂತಿಯುಕ್ತ ಗಳಾದ ಅಸಂ.ಖ್ಯ ಲಿಂಗಗಳ ದರ್ಶನವಾಯಿತು. ಅದರಿಂದ ಪುಲಕಿತದೇಹವುಳ್ಳವನಾಗಿ ನರ್ವದೆಗೆ ಕೈಮುಗಿದು ಓ ನರ್ವದಾದೇವಿಯೇ ನಿನ್ನ ಅನುಗ್ರಹದಿಂದಲೇ ಇಂದು ಪರಮೇಶ್ವರನ ರೂಪಗಳಾದ ಅಸಂಖ್ಯ ಲಿಂಗಗಳ ದರ್ಶನವಾಯಿತು ಬ್ರಹ್ಮಲೋಕದಲ್ಲಿ ನಿನ್ನ ಜನ್ಮನಿ ಭೂವಿಸಿ ಪಿತಾಮಹನಿಂದ ಪೂಜಿತವಾದ ಲಿಂಗಗಳನ್ನು ನೋಡಿದ್ದನು ನಿನ್ನ ಮಹಾತ್ಮ್ಯವನ್ನು ಎಷ್ಟು ಹೊಂಡಿದರೇ ನಿನ್ನ ತೀರದಲ್ಲಿ ಬೆಳೆದ ವೃಕ್ಷಗಳು ಕೂಡ ಸದ್ಗತಿಯನ್ನು ಪಡೆಯುವವು ಇಂಥ ಪಾವನ ಳಾದ ನಿನ್ನ ಬಳಿ ಇದ್ದುಕೊಂಡು ಶಿವನನ್ನು ಪೂಜಿಸಿ ಧನ್ಯನಾಗುತ್ತೇನೆ ಎಂದು ಸಂಕಲ್ಪಿಸಿ ತೀರದಲ್ಲಿ ಬೆಳೆದಿದ್ದ ಬಿಲ್ವವೃಕ್ಷಗಳಿಂದ ಉತ್ತಮವಾದ ದಳಗಳನ್ನು ಕೊಯ್ದು ತಂದು ಪ್ರತಿನಿತ್ಯ ತ್ರಿಕಾಲದಲ್ಲೂ ಶಿವಪೂಜೆಯನ್ನು ಮಾಡುತ್ತಿದ್ದನು

ಹೀಗಿರಲು ಆಲ್ಲಿಯೇ ಸಮೀಪದಲ್ಲಿ ವಾಸಿಸುತ್ತಿದ್ದ ಜನರು ಆಪಾರ ನಿಷ್ಠೆಗಳ ಪರಿಪೂರ್ಣವಾಗಿ ಶಿವಭಾವ ಲೀಲನಾದ ಆ ಸುಂದರ ಬಾಲಕನ ವಿಷಯವಾಗಿ ವರ್ಣಿಸುತ್ತಿದ್ದ ಸುದ್ದಿಯು ನಗರದ ಚಿತ್ರಧರಧಾಪ್ತಿಗೆ ಮುಟ್ಟಿತು. ಶಿವಭಕ್ತನಾದ ರಾಜನು ಆ ಬಾಲಕನನ್ನು ತಾನೂ ನೋಡಬೇಕೆಂದು ಆತಿಸಿ ಮಿತಪರಿವಾರದೊಡನೆ ನರ್ಮದಾತೀರಕ್ಕೆ ಬಂದನು ತನ್ನ ಸತ್ಕರಿಂದ ನ ಯಾವದಪೇಕ್ಷೆ ಗಮನಿಸದೆ ದೇಹಭಾವವನ್ನು ಮರೆತು ಶಿವಪೂಜೆಯಲ್ಲೇ ಮಗ್ನನಾಗಿರುವ ಬಾಲಕನನ್ನು ನೋಡಿ ಭಕ್ತಿಯಿಂದ ಪ್ರದಕ್ಷಿಣನಾಡಿ ನಮಸ್ಕರಿಸಿ ಹತ್ತಿರಕ್ಕೆ ಹೋಗಿ, ನೀವು ಯಾರು ಎಂದು ವಿನಯ ದಿಂದ ಪ್ರಶ್ನಿಸಿದೂ ಉತ್ತರಕೊಡದೆ ಶಿವ ಮಹಾದೇವ ಎಂದು ಉಚ್ಚರಿಸುತ್ತ ಶಿವಾರ್ಚನೆಯಲ್ಲಿ ತೊಡಗಿದ್ದನು ಆಗ ರಾಜನು ಅತಿ ಪೂಜೆಯು ಮುಗಿದ ಬಳಿಕ ಆತನಿಗೆ ಕೊಡಬೇಕೆಂದು ಹಾಲು ಹಣ್ಣೂಗಳನ್ನು ತರಿಸಿಟ್ಟು ಕೊಂಡು ಕಾದಿದ್ದನು. ಆ ವೇಳೆಗೆ ಬ್ರಹ್ಮದೇವನು ಸಾಯಂಕಾಲದ ಶಿವಪೂಜೆಯನ್ನು ಮುಗಿಸಿ ಆ ಬಾಲ ಭಕ್ತನನ್ನು ನೋಡಲು ಅಲ್ಲಿಗೆ ಬಂದನು. ಹೀಗೆ ಸಮೀ ಪಕ್ಕೆ ಬಂದ ಬ್ರಹ್ಮನನ್ನು ನೋಡಿಯೂ ಆ ಬಾಲಕನು ಒಂದು ಸಲ ಶಿವ, ಶಿವ ಎಂದು ಹೇಳುತ್ತ ಧ್ಯಾನಮಗ್ನ ನಾದನು. ಆಲ್ಲಿದ್ದ ರಾಜನು ಪಿತಾಮಹನನ್ನು ನೋಡಿ ನಮಸಿ, ಪೂಜಿಸಿದ ಮೇಲೆ, ಆತ್ಮಾಹಾರಗಳ ಯೋಚನೆ ಯಿಲ್ಲದೆ ಲಿಂಗಪೂಜೆಯಲ್ಲಿ ತೊಡಗಿರುವ ಆಶ್ಚರ್ಯಕರ ನಾದ ಈ ಬಾಲಕನು ಯಾರು ಎಂಬುದನ್ನು ತಿಳಿಸ ಬೇಕೆಂದು ಕೇಳಿಕೊಂಡನು. ಆಗ ಬ್ರಹ್ಮದೇವನು ರಾಜನಿಗೆ ಅಯ್ಯಾ ಈ ಬಾಲಕನು ಮೊದಲು ಪಾಪಿ ಯಾದ ರಾಜನಾಗಿದ್ದನೆಂಬುದನ್ನೂ ಮೃತನಾಗಿ ನರಕ ವಾಸದಲ್ಲಿದ್ದವನು, ಜಗದ್ಜನಿಯಾದ ಪಾರ್ವತಿಯ ದಯದಿಂದ ಹೇಗೆ ರಕ್ಷಿಸಲಾಗಿ ಬ್ರಹ್ಮಲೋಕಕ್ಕೆ ಬಂದ ನೆಂಬುದನ್ನೂ ಅಲ್ಲಿ ಈಶ್ವರಪೂಜೆಯಿಂದ ಯೋಗಸಿದ್ಧಿ ಹೊಂದಿ ಶಾಶ್ವತ ಶಿವಸಾಯುಜ್ಯಾಪೇಕ್ಷೆಯಿಂದ ರೇವಾ ನರ್ಮದಾತೀರದಲ್ಲಿ ಬಾಲಕರೂಪ ಧಾರಣೆಮಾಡಿ ಈ ನರ್ಮದಾತೀರಕ್ಕೆ ಬಂದು ಶಿವಪೂಜೆ ಯಲ್ಲಿ ತೊಡಗಿರುವನೆಂದೂ ತಿಳಿಸಿದನು. ಆ ಬಾಲಕನ ವೃತ್ತಾಂತವನ್ನು ತಿಳಿದ ಚಿತ್ರಧರರಾಜನು ಅವನೆಷ್ಟು ತನ್ನ ಖಂಡನೆಗೆ ಕರೆದುಕೊಂಡು ಬಂದು ಅಲ್ಲಿ ಸ್ಥಾಪಿಸ ಲಾಗಿರುವ ರೇವಾಲಿಂಗಗಳನ್ನು ಸಂದರ್ಶಿಸಿ ಪೂಜೆ ಮಾಡಿಸಬೇಕೆಂದು ಬ್ರಹ್ಮದೇವನನ್ನು ಪ್ರಾರ್ಥಿಸಿ ಕೊಂಡನು ಅದರಂತೆ ಬ್ರಹ್ಮನು ಆ ಬಾಲಕಸಹಿತ ಒಡಂಬಡಿ ತಿವಮನೆಗೆ ಕರೆದುಕೊಂಡುಹೋದನು. ಆ ಅರಮನೆಯಲ್ಲಿ ಅಲ್ಲಲ್ಲಿ ನವರತ್ನಾಲಂಕೃತಮಂಟಪ ಗಳಲ್ಲಿ ಪ್ರತಿಷ್ಠಿತವಾಗಿರುವ ಪುಣ್ಯಪ್ರದಗಳಂದಲೂ ಬಿಲ್ವ ಪತ್ರೆಗಳಿಂದಲೂ ಅರ್ಚಿಸಲ್ಪಟ್ಟ ಮನೋಹರವಾಗಿ ಕಂಗೆಳಿಸುವ ಅನೇಕ ಲಿಂಗಗಳನ್ನು ನೋಡಿ ಆ ಬಾಲ ಕನಿಗೆ ಪರಮಾನಂದವಾಯಿತು. ಕೂಡಲೆ ಅವನು ಆ ಲಿಂಗಗಳಿಗೆ ಘೋಡಶೋಪಚಾರಗಳಿಂದಲೂ ಪೂಜಾ ನಂತರ ಶಿವಭಜನೆ ಮಾಡುತ್ತ ಆನಂದಪರವಶನಾಗಿ ನರ್ತಿಸಿದನು

ಈ ಪೂಜೆಯನ್ನು ನೋಡಲು ಬಂದಿದ್ದ ರಾಣಿ ವಾಸವನರಲ್ಲಿದ್ದ ಕನ್ಯೆಯೊಬ್ಬಳು ಆನಂದದಿಂದ ತಾನೂ ಆ ಬಾಲಕನೊಡನೆ ನರ್ತಿಸಹತ್ತಿದಳು ಅವನ್ನು ನೋಡಿದ ಬ್ರಹ್ಮದೇವನು ಆ ಬಾಲಿಕೆಯು ಯಾರೆಂದು ರಾಜನನ್ನು ಕೇಳಿದನು ಅದಕ್ಕೆ ರಾಜನು ಸ್ವಾಮಿಯೇ ಅವಳ ವಿಷಯವನ್ನು ತಾವೇ ತಿಳಿದು ಹೇಳಬೇಕು ಒಂದು ಸಲ ನಾವು ರೇವಾತೀರದಲ್ಲಿ ಸಂಚಾರಾರ್ಥ ಹೊಗಿದ್ದಾಗ ಚಿಟ್ಟುವ ಕಪ್ಪಲಲ್ಲಿ ತಿವಲಿಂಗವನ್ನು ಇಟ್ಟು ಪೂಜಿಸುತ್ತಿದ್ದ ಬಾಲಿಕೆಯನ್ನು ನೋಡಿ ಅವಳಲ್ಲಿ ಉಂಟಾದ ಪ್ರೀತಿಯಿಂದ ನನ್ನೊಡನೆ ಕರೆತಂದೆನು ಅವಳು ಈಗಲೂ ನಿತ್ಯ ರೇವಾತೀರಕ್ಕೆ ಹೋಗಿ ಲಿಂಗ ಪೂಜೆಮಾಡಿ ಒರತ್ರಿದಫ್ಟೆ ಅವಳನ್ನು ನೋಡಿದಂದಿ ನಿಂದ ನನಗೂ ಸಹ ನರ್ಮದಾ ತಿವಧ್ಯಾನ ತಿವಾರ್ಚನೆ ಗಳನ್ನು ಮಾಡುವ ಬುದ್ಧಿಯುಂಟಾಗಿದೆ ಎಂದು ಹೇಳಿದನು

ಆಗ ಬ್ರಹ್ಮನು ಧ್ಯಾನದಿಂದ ಆ ಯುವತಿಯ ವೃತ್ತಾಂತವನ್ನು ತಿಳಿದು ರಾಜನನ್ನು ಕುರಿತು ಈ ಬಾಲಿಕೆಯು ಹಿಂದಿನ ಜನ್ಮದಲ್ಲಿ ಒಬ್ಬ ಭಿಲ್ಲನ ಮಗಳು ಅರಣ್ಯದಲ್ಲಿದ್ದ ಇವರ ಕುರಿರದ ಬಳಿ ಒಂದು ಬಿಲ್ವ ವೃಕ್ಷವಿತ್ತು ಅದರಡಿಯಲ್ಲಿ ಪೂರ್ತನವಾದ ಒಂದು ರೇವಾಲಿಂಗವೂ ಇತ್ತು. ಆ ಬಾಲಿಕೆಯು ಆ ಪ್ರದೇಶ ವನ್ನೆಲ್ಲ ಜೊಕ್ಕಮಟವಾಗಿ ಗುಡಿಸುತ್ತಲು ಬಿಲ್ವವೃಕ್ಷವು ಜಾಸ್ತಾಗಿ ಬೆಳೆದು ನೆರಳು ಕೊಡಲೆಂದು ಅದಕ್ಕೆ ನಿತ್ಯವೂ ನೀರು ಹಾಕುತ್ತಲೂ, ಎಳಸಾಗಿ ಇರುವ ಪತ್ರೆ ಗಳನ್ನು ಕಿತ್ತು ನೆಲದಮೇಲೆಲ್ಲ ಮೆತ್ತಗಿರುವಂತೆ ಹರಡು ತ್ತಲೂ, ಅರಣ್ಯದ ಹೂಗಳನ್ನು ತಂದು ಅಲ್ಲಿ ಇದ್ದ ಲಿಂಗದ ಬಳಿ ಕೂಡಿಡುತ್ತಲೂ ಆಟವಾಡುತ್ತಿದ್ದಳು. ಇದರಿಂದ ತನಿಗೆ ನಿತ್ಯ ಗಿಡಿಕ್ಕಿ ಹಾಕುವ ನೀರು ನೆಲಕ್ಕೆ ಹಾಸುತ್ತಿದ್ದ ಬಿಲ್ವಪತ್ರೆಗಳು ಲಿಂಗದ ಮೇಲೆ ಬೀಳುತ್ತಿದ್ದುದರಿಂದ ಒಂದು ವಿಧವಾದ ಅಭೀಕ್ಷ್ಣ ಪೂಜೆ ನಡೆಯುತ್ತಿತ್ತು ಹೀಗೆ ಸ್ವಲ್ಪಕಾಲದ ಮೇಲೆ ಅಯುಸ್ಸು ಮುಗಿದು ಅವಳು ಮೃತಳಾದಳು ಯಮ ಧರ್ಮರಾಜನ ಸುಂತೆ ತರಲ್ಪಟ್ಟ ಅವಳ ವಿಷಯ ವನ್ನು ಚಿತ್ರಗುಪ್ತರಿಂದ ತಿಳಿದ ಧರ್ಮರಾಜನು ಅವಳು ಮಾಸಪರ್ಯಂತಕಾಲದಲ್ಲಿ ಯಾವ ಪುಣ್ಯಕರ್ಮಗಳನ್ನು ಮಾಡದಿದ್ದರೂ ಅಜ್ಞಾತವಾಗಿ ನಡೆದ ಈ ರೇವಾಲಿಂಗ ಪೂಜೆಯ ಫಲದಿಂದ ಅವಳು ಪುಣ್ಯಾತಿಯೆಂದು ನಿರ್ಧರಿಸಿ ಅವಳನ್ನು ಬ್ರಹ್ಮಲೋಕಕ್ಕೆ ಕಳಿಸಿದನು ಅಲ್ಲಿ ಅನೇಕ ಕಾಲವಿದ್ದು ತಿವಪೂಜೆಯಿಂದ ಯೋಗಸಿದ್ಧಳಾಗಿ ತಿವಲೋಕವನ್ನು ಪಡೆಯಲಪೇಕ್ಷೆಯಿಂದ ರೇವಾತೀರಕ್ಕೆ

ಯೋಗಿಯಾಗಿ ಬಾಲಿಕಾದೇಹ ಧರಿಸಿ ಬಂದು ಲಿಂಗ ಪ್ರತಿಷ್ಠೆಯಲ್ಲಿ ತೊಡಗಿರುವೆಯೆಂದು ಹೇಳದಳು. ಇದನ್ನು ಕೇಳಿದ ಆ ರಾಜನು ಬಹಳ ಸಂತೋಷಗೊಂಡು ಸ್ವಾಮಿಯೇ, ಈ ಅಘೋರಬಾಲೆಯು ಈಗ ವಿವಾಹ ವಯಸ್ಕಳಾಗಿದ್ದಾಳೆ. ತವಳಿಗು ಸರಿಯಾದ ವರಪಾಗಿ ಸಂತೋಷಪಡಬೇಕೆಂದಿದ್ದೇನೆ. ಇದ್ದಿ ನಿವ ಈ ಬಾಲಕನಿಗೆ ವಿವಾಹಮಾಡಿಕೊಡಲು ಇಷ್ಟವಿದ್ದರೆ ಈಗಲೇ ಹೇಳಿರಿ ಇವೆಕ್ಷಣ ಇವೆಕ್ಷಣ ಇವೆಕ್ಷಣ

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಶೈವಕ್ಕೆ ಸಲ್ಲತಕ್ಕರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಪ್ರಸಿದ್ಧ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟದ್ದು. ದೇವತಾಗರಿಭಾಷೆಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೊಕುನೂರು ಭೂಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ರ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಭತ್ತು ಆದ್ಯತಲೆಲೆಗಳಿಂದ ಕೂಡಿದ ಫೋಟೋ ಸೈಜು ೫೦×೪೪ ಬೆಲೆ ೧೫೫ ೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮಂತ್ರಿಕವಾರುಯ)ಸೈಜು ೧೪ × ೧೦ ಬೆಲೆ ೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫೫ .. ೦—೩—೦
" " " ಚಿಕ್ಕ ಸೈಜು ಬೆಲೆ .. ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ... ೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .. ೦—೧—೬
ಶ್ರೀರೇಣುಕಾಚಾರ್ಯರು ಶ್ರೀಪಂಚಾಚಾರ್ಯರಿಗೆ ಜಂಧ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಧೀಕ್ಷಣ ಸ್ವಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕೀರ್ತಿಧಾರಣವಾಗುವ ಫೋಟೋ .... ೦—೧—೬
ಸದ್ಭಃ ಪೀಠಾರೋಹಣವಾಗುವ ಶ್ರೀಕಾಶೀಜಗದ್ಗುರು ವಿಶ್ವಕ್ಷೇತ್ರರಕ್ಷಿತಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦
ಶ್ರೀಷಮುಷ್ಣಯಾನೇ ಸಿಂಹಾಸನಸಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ . ೦—೧—೬
ತಿಷಮುದ್ಯುಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
ಶ್ರೀಷಮುಷ್ಣಯಾನೇ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ ೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೫ ೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೫ ೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಾಚಾರ್ಯ ಅತ್ಯಂತ ಸುಂದರವಾದ ಫೋಟೋ ೧೫ ೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಲ್ಲುತಡದ ಸುಂದರ ಫೋಟೋ ೧೫ ೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ನಿಡಾಘಾಲರವರು ವಿಂಜಿಸುತ್ತಿರುವ ಫೋಟೋ ೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ವಾಮಿಸಲ್ಪಟ್ಟಿರುವ ಶಿಲಾಶಾಸನಗಳು ... ೦—೨—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಠ (೬ನೆಯ ಆವೃತ್ತಿ) — ೧ ಆಣೆ
ಸಚ್ಚಾಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) — ೧ ಆಣೆ
ತಂಜಮಂಜರಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) — ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ — ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) — ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) — ೨ ಆಣೆ
ಶ್ರೀಗುರುಪ್ರಸೂನಿಶಿವಾಚಾರ್ಯಶತಕ — ೨ ಆಣೆ
ತಿಪತಕ್ಕಿವಿಲಾಸ — ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ — ೨ ಆಣೆ
ಶಿಲ್ಪಮಾಹಾತ್ಮ್ಯ (೨ನೆಯ ಆವೃತ್ತಿ) — ೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) — ೩ ಆಣೆ
ಜಂಗಮದಿವಿಜತತ್ವವಿವರಣ (೫ನೆಯ ಆವೃತ್ತಿ) — ೩ ಆಣೆ
ತಂಜಾಚಾರ್ಯಪ್ರಕಾಶ — ೩ ಆಣೆ
ತಂಜಾಚಾರ ಪ್ರಕಾಶಿಕಾ — ೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) — ೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) — ೪ ಆಣೆ
ಲಿಂಗಧಾರಣವಿಧಿ — ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) — ೪ ಆಣೆ
ಶ್ರೀಷಡಿಂಡಿಶಾರಾಧ್ಯ ಕಾಲನಿರ್ಣಯ — ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ — ೪ ಆಣೆ
ಶೈವಶಾಖ್ಯಾರಹಸ್ಯ — ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) — ೪ ಆಣೆ
ಶೈವೋಪಪತ್ತಿಪಪ್ಪಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ) — ೬ ಆಣೆ
ಸಚ್ಚಾಸಾಸ್ತ್ರಸವಿಮರ್ಶತತ್ತ್ವನಿರೀಕ್ಷಣ (೩ನೆಯ ಆವೃತ್ತಿ) — ೬ ಆಣೆ
ವೀರಶೈವಾಂತ್ಯೇಷ್ಟಿ—ಪ್ರಾದ್ಧವಿಧಿ — ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ- ಚಿಕ್ಕಸೈಜು) — ೮ ಆಣೆ
ಶಿವಾದ್ವೈತಪರಭಾಷಾ (ಸಂಸ್ಕೃತ) — ೮ ಆಣೆ
ವೀರಶೈವಮಹಾತ್ಮರು — ೮ ಆಣೆ
ಜಸವಧ್ಯಾಂತದಿವಾಳರ (೨ನೆಯ ಆವೃತ್ತಿ) — ೮ ಆಣೆ
ಆಗಮಪರಿಜ್ಞಾನ — ೮ ಆಣೆ
ಪಂಡಿತ ಶ್ರೀಕಾಶೀನಾಥಕಾಸ್ತ್ರುಲವಾರಿ ಭಾಷಣಮು (ತೆಲುಗು) — ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ — ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ನಕ್ಷತ್ರಮಾಲಿಕಾ — ೮ ಆಣೆ
ಕನ್ನಡ ನ್ಯಾಯಶತಕಮ್ — ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) — ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ — ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ — ೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) — ೧ ರೂ.
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) — ೧ ರೂ.
ವಿವೇಕಮುಕ್ತಾವಳಿ — ೧ ರೂ.
ವಿಜಾರಸಾರಾವಳಿ — ೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ — ೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತವಾದುದು. ೩ನೆಯ ಆವೃತ್ತಿ) — ೧॥ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್ — ೧॥ ರೂ.
ಶಿವಾಗಮಸಂಗ್ರಹ (ಶಂಭ್ಯಷ್ಟಾಸಾಗಮ-ಪಾರಮೇಶ್ವರಾಗಮ-ಮುಕುಟೋತ್ತಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು) — ೨ ರೂ.
ರೇಣುಕವಿಜಯ ಮಹಾಪುರಾಣ (ಅಚ್ಚಿನ ಭಾಷೆಯಲ್ಲಿಪ್ಪದು) — ೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು) — ೨ ರೂ.
ಸಿದ್ಧಾಂತಶಿಖಾಮಣಿ (ಅಚ್ಚಿನ ಟೀಕಾಸಹಿತ) — ೩॥ ರೂ.
A brief life-sketch of Pandit Sri Kashinatha Shastr (*English*) 4 A.
The Philosophical Aspect of Virasaivism (*English*) ಅವಲೋ 8 As.
Speeches by Pandit Shri Kashinatha Shastriji (*Eng* ಫೋ 12 As.
ಶಿವಾಚಾರನಿರ್ಣಯ (ಸಂಸ್ಕೃತ) ೩ ಪ
ವೀರಶೈವರತ್ನ (ಮರಾಠಿ) ೧ ರೂ.
ಷಣ್ಮತಾರಾಧನವಿಧಿಪದ್ಧತಿ (ವೀರಶೈವಾಚಾರ-ಸಂಸ್ಕೃತ) ೧ ರೂ.
ಸಂಧಿಶೇಖರಕಾರಿಕಾ (ಸಂಸ್ಕೃತ) ೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahmasrimathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M 2266 | ಶ್ರೀಜಗನ್ಮೂರು ಪಂಚಾಚಾರ್ಯಾಃ ಪ್ರಸೀದಂತು | REGISTERED No. M 2626

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತನಿಸರ್ ಪಂಚಾಸ್ಯರೀಪಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ಕ್ಕಿ॥
ಪಂಚಾಚಾರನಿಯಾಮಕರ್ ವರಿಲಸತ್ಪಂಚಾಕ್ಷರೀಮೋಪಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ವಾಲಿಪ್ಪ ದೀಯೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಸಂ॥ ಶ್ರೀ ಕಾತೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏ ಪಿ ಖರ್ಚು ಸೇರಿ ೩ ರೂ ೮ ಆ.

ಸಂಪುಟ ೩೮] ಸೋಮವಾರ ತಾ॥ ೫ ನೇ ಜುಲೈ ೧೯೫೫ಳ [ಸಂಚಿಕೆ ೯

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು



ರುದ್ರಾಭಿಷೇಕಾದಿಗಳನ್ನು ಮಾಡುವುದಕ್ಕೆ ಅನುಕೂಲವಾಗುವಂತೆ ಪಂಚಲೋಹದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂಬ ಬಹುಜನ ಗುರುಭಕ್ತರು ಅವೇಕ್ಷಿಸುತ್ತಿದ್ದರು. ಅವರ ಅಪೇಕ್ಷೆಯನುಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ ಎಷ್ಟರಲ್ಲಿ ನಾಲ್ಕು ಇಂಚು ಇವೆ ಬೇಕಾದವರು ಬರೆದು ತಿರಿಸಿಕೊಳ್ಳಬಹುದು.

ಒಂದು ಮೂರ್ತಿಯ ಬೆಲೆ ೧೬ ರೂ

ಮ್ಯಾನೇಜರ್ —
ಶ್ರೀ ಪಂಜಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಪ್ರಕಟಣೆ

ಮಹಾಶಯರೇ, ಗದಗ ಮುಕ್ಕಾಲ ಬಸವೇಶ್ವರ ದೇವಸ್ಥಾನದಲ್ಲಿ ತಲ್ಲ ಪ್ರತಿವರುಷ ಪಟ್ಟಣ ಪ್ರಕಾರ ಪುರಾಣವು ಶ್ರಾವಣ ತಿಂಗಳಲ್ಲಿ ಪ್ರತಿದಿನವೂ ಪುರಾಣ ಶ್ರವಣವನ್ನು ದೇವಸ್ಥಾನದ ಕಾರ್ಯಕರ್ತರು ಸೇವಾ ಮಾಡಿದ್ದಾರೆ "ಯೋಗ್ಯ ಪುರಾಣ ಕೇಳಲಿಕ್ಕೆ ಶಾಸ್ತ್ರಿ ಬೇಕಾಗಿದ್ದಾರೆ ಒಳತಕ್ಕವರು ಒಂದು ತಿಂಗಳ ಸಂಭಾವನೆಯೇನು ತೆಗೆದುಕೊಳ್ಳುವದು ತಿಳಿಸಬೇ

ಸ್ವಾಮಾ ರಾಜಪ್ಪನವರು ಲಕಸ್ಥಾಪೆರೆ
ಕಬ್ಬಿಣ ಅಂಗಡಿ ಗದಗ ಮುಕ್ಕಾಮ್.

ಪತ್ರವ್ಯವಹಾರ

[ಬಾಷ್ಪೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರೆಲ್ಲ ಎಂಬ ವಿಷಯವನ್ನು ಪರರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಕರ್ನಾಟಕ ಏಕೀಕರಣದ ಬೇಡಿಕೆಯಲ್ಲಿ

ಮೈಸೂರು ಕಾಂಗ್ರೆಸ್ಸಿನ ಪತಿತನೆ

ಭಾರತದ ಸ್ವಾತಂತ್ರ್ಯಕ್ಕಾಗಿ ಮಜಬತ್ತಾ ಗಾಂಧಿಯವರದ್ದು ಉದ್ಭವಿಸಿದ ಕಾಂಗ್ರೆಸ್ಸನ್ನು ಸ್ವಾತಂತ್ರ್ಯ ದೊರೆತೊಡನೆಯೇ ವಿಸರ್ಜಿಸಬೇಕಾಗಿ ಅವರು ಹಲವು ನೆಹರೂರವರಿಗೆ ತಮ್ಮ ಸೂಕ್ತ ಸಲಹೆಯನ್ನು ವ್ಯಕ್ತಗೊಳಿಸಿದ್ದರೂ ವಿಸರ್ಜನೆಯಾಗದ್ದಕ್ಕೆ ಎನ್ನೋ ಕಡೆ ಕಾಂಗ್ರೆಸ್ಸಿನ ಹೆಸರಿನಲ್ಲಿ ಆನ್ಯಾಯಗಳು ಘಟಿಸುತ್ತಲಿವೆ ಇದನ್ನು ಭಾರತದ ಮುಖ್ಯಮಂತ್ರಿಗಳೂ ಕಾಂಗ್ರೆಸ್ ಅಧ್ಯಕ್ಷರೂ ಆದ ಶ್ರೀ ನೆಹರೂರವರು ಕರ್ನಾಟಕ ಕಂಡು ಉದಾಸೀನ ಮಾಡುತ್ತಿರುವುದು ಜನತೆಯ ದೌರ್ಭಾಗ್ಯವೇ ಸರಿ ತಪ್ಪುಮನಭಿನಗಳನ್ನು ದೇಶಸೇವೆಗಾಗಿ ಧಾರೆಯೆದ ಮಹಾಮಹಾ ಕಾಂಗ್ರೆಸ್‌ವೃಕ್ಷಗಳು ಕಣ್ಣಾರೆ ಯಾದರೂ ಈಗಿರುವ ಪಲಕೆಲಬರು ಸ್ವಾರ್ಥಕ್ಕಾಗಿ ಸಂಕುಚಿತಭಾವನೆಯನ್ನು ತಾಳಿಬವದು ಕಾಂಗ್ರೆಸ್ಸಿನ ಸಿಸ್ಸಿಗೂ ಸಂಘಟನೆಗೂ ವ್ಯತಿರಿಕ್ತವಾಗಿದೆ. ಇದರಿಂದ ರಾಷ್ಟ್ರದ ಅಥವಾ ದೇಶದ ಉದ್ಧಾರವಾಗಿಲಾರದು ಇತ್ತೀಚೆಗಿಂಗೂ ಮೈಸೂರಿನ ಕಾಂಗ್ರೆಸ್ಸಿನಲ್ಲಿ ಹೀಗೆಕೂಡ ದಮ್ಮು ಮತಾಂತರಗಳು ಹುಟ್ಟಿಕೊಂಡಿರುವದಲ್ಲದೆ ಅದರ ಆನ್ಯಾಯಸ್ವರೂಪವು ಮೂರ್ತಿಮತ್ತಾಗಿ ಶ್ರೀ ನೆಹರೂರವರ ದೃಷ್ಟಿಪಥದಲ್ಲಿ ಕಾಣಿಸಿಕೊಂಡಿದ್ದರೂ ಸಾಧಕ ಕರ್ನಾಟಕ ಏಕೀಕರಣದ ವಿಷಯದಲ್ಲಿ ತನ್ನ ದುರುದ್ದೇಶವನ್ನು ಸಾಧಿಸಲೋಸುಗ ಮೈಸೂರನ್ನು ಬಿಟ್ಟು ಕರ್ನಾಟಕ ಪ್ರಾಂತ ರಚನೆಯಾಗಲಿ ಎಂಬ ಸಂಕುಚಿತಭಾವನೆಯು ವರದಿಯನ್ನು ಸಿದ್ಧಪಡಿಸಿರುವುದು ಕಾಂಗ್ರೆಸ್ಸಿನ ಸಿಸ್ಸಿಗೆ ಕಲಂಕವನ್ನುಂಟುಮಾಡಿರುವುದು ಎತಿಯಾ-ಯುರೋಪ-ಆಫ್ರಿಕಾ-ಅಮೇರಿಕಾ ಮೊದಲಾದ ಜಗತ್ತಿನ ಎಲ್ಲ ರಾಷ್ಟ್ರಗಳೂ ಒಂದೇ ತಾಯಿಯ ಮಕ್ಕಳೇ ಎನ್ನೋಣವೆನ್ನ ಪ್ರೇಮುದಿಂದ ಇರಬೇಕೆಂದು ಹೇಳುವ ವಿಶ್ವ ಕಾಂಗ್ರೆಸ್ ತತ್ವದಲ್ಲಿ ಕರ್ನಾಟಕವನ್ನು ಇಬ್ಭಾಗಮಾಡಬೇಕೆಂದು ಹೇಳುವ ಮೈಸೂರು ಕಾಂಗ್ರೆಸ್ ತತ್ವವು ಯಾವ ಆಧಾರಕ್ಕೆ ಹೊಂದಿರುವುದೋ ದೇವರೇ ಬಲ್ಲ ಇದಕ್ಕಾಗಿ ಒಂದು ಪುಟ್ಟ ಕಥೆಯಷ್ಟು ವಾಚಕರ ಅವಗಾಹನೆಗಾಗಿ ಕೆಳಗೆ ಕೊಡಲಾಗಿದೆ.

ಹಿಂದಕ್ಕೆ ಒಂದು ದೇಶದಲ್ಲಿ ಒಬ್ಬ ದೊರೆ ಇದ್ದನು. ಆತನಲ್ಲಿಗೆ ಇಬ್ಬರು ಸ್ತ್ರೀಯರು ಒಂದು ಕೂಸಿನ ಸಲುವಾಗಿ ತನ್ನದು ತನ್ನದು ಎಂದು ವ್ಯಾಕ್ಯಮಾಡುತ್ತ ಒಂದರು. ಆವಾಗ್ಗೆ ದೊರೆಯು ಅವರ ಬಾಯಿಂದ ಎಲ್ಲ ವಿಷಯವನ್ನು ಕೇಳಕೊಂಡು ಈ ಕೂಸು ಇಂದವರದೇ ಎಂದು ಹೇಳಲಿಕ್ಕೆ ಬಲವಾದ ಪ್ರಮಾಣಗಳ್ಳದ್ದರಿಂದ ಇದನ್ನು ಎರಡುತುಂಡು ಮಾಡಿಸಿಕೊಡುತ್ತೇನೆ ಒಬ್ಬೊಬ್ಬರು ಒಂದೊಂದು ತುಂಡು ತಕ್ಕೊಂಡು ಹೋಗಿರೆಂದು ತೀರ್ಮಾನಿಸಿದನು ಆವಾಗ್ಗೆ ಅವರಲ್ಲಿ ಒಬ್ಬಳು ಸುಮ್ಮನೆ ಕುಳತಳು ಮತ್ತೊಬ್ಬಳು ದುಃಖದಿಂದ ಕಣ್ಣೀರು ಸುರಿಸುತ್ತ ಸ್ವಾಮೀ ನನ್ನ ಕಂದನನ್ನು ತುಂಡು ಮಾಡಬೇಡಿರಿ ಎಲ್ಲದರೂ ಜೀವದಿಂದಿದ್ದು ಬಾಳಲಿ ಅವಳಿಗೇ ಕೊಟ್ಟುಬಿಡಿರಿ ಎಂದು ಬೇಡಿಕೊಂಡಳು. ದೊರೆಯು ಇವಳೇ ಕೂಸಿನ ನಿಜವಾದ ತಾಯಿಯೆಂದು ತಿಳಿದು ಆ ಕೂಸನ್ನು ಅವಳಿಗೆ ಒಪ್ಪಿಸಿ ಇನ್ನೊಬ್ಬಳನ್ನು ಸುಳ್ಳು ಹೇಳಿದ್ದಕ್ಕಾಗಿ ಶಿಕ್ಷಿಸಿದನು. ಇದರಿಂದ ಕೆಂಡುಬರುವುದೇನೆಂದರೆ ಅನ್ನಡ ಭಾಷಾ ಪ್ರದೇಶವೆಲ್ಲಾ ತುಂಡಾಗದೆ ಒಂದಾಗಿಯೇ ಉಳಿಯಬೇಕೆಂಬುದಿಷ್ಟೇ? ಹಾಗೆ ತುಂಡು ಮಾಡಿದಲ್ಲಿ ಗಾಯಕ್ಕೆ ಬರೆಹಚ್ಚಂತಾಗುವದು ಆವಕ್ಯಾಗಿಯೇ ಕೇಂದ್ರ ಸರ್ಕಾರದವರು ರಾಜ್ಯಾಡಳಿತ ದೃಷ್ಟಿಯಿಂದಲೂ ಪ್ರತಿಶತ ಹಿತದೃಷ್ಟಿಯಿಂದಲೂ ಭಾಷಾವಾರ ಪ್ರಾಂತಗಳನ್ನು ರಚಿಸಬೇಕೆಂದು ನಿರ್ಧರಿಸಿರುವುದು ಸೂಕ್ತವಾಗಿದೆ. ಇದಕ್ಕಾಗಿ ಒಂದು ಸಮಿತಿಯೂ ಬಂದಿದೆ ಅವರು ಒಂದು ಭಾಷೆಯ ಎಲ್ಲ ಪ್ರದೇಶವನ್ನು ಸೇರಿಸಿ ಒಂದು ಮಾಡಲು ಬಂದಿರುವರೇ ಹೊರತು ಎರಡು ಮಾಡಲು ಬಂದಿಲ್ಲ ಆದರೆ ಅವರ ಉದ್ದೇಶವನ್ನೇ' ಭಾಷಾವಾರ ಪ್ರದೇಶಗಳನ್ನು ವಿಂಗಡಿಸುವಾಗ ತಂಟೆ ಎಲ್ಲಿರುವುದೋ ಅಲ್ಲಿಯ ವಿಚಾರವನ್ನು ಮಾತ್ರ ಗಮನಕ್ಕೆ ತಂದುಕೊಳ್ಳುವರು ಇವನ್ನು ಮೈಸೂರು ಕಾಂಗ್ರೆಸ್ ಮುಖಂಡರು ಅಳವಾಗಿ ಅಲೋಚಿಸಿ ವರದಿಯನ್ನು ಒಪ್ಪಿಸುವವು ಸೂಕ್ತವು ಸಮಯೋಚಿತವೂ ಆಗಿದೆ.

ಪ್ರಾಂತ್ಯಗಳ ಪುನರ್ವಿಂಗಡಣಾ ಸಮಿತಿಯು ಭಾರತ ದಲ್ಲಿಯ ದೊಡ್ಡ ದೊಡ್ಡ ಭಾಷೆಗಳನ್ನು ಸುಸಿರಿಸಿ ಒಂದೊಂದು ಪ್ರಾಂತವನ್ನೇರ್ಪಡಿಸಲು ಬಂದಿದೆಯೇ ಹೊರತು ತುಂಡುಮಾಡಿಲಿಕ್ಕೆ ಬಂದುದಲ್ಲ ಹಾಗು ಈ ಸಮಿತಿಯು ತಮಗಾಗಿ ಮೈಸೂರು ಕಾಂಗ್ರೆಸ್ಸಿನೊದನೆ ಮಾತನಾಡಿದ್ದರಲ್ಲಿ ಆ ಕಾಂಗ್ರೆಸ್ಸಿನ ಧ್ಯೇಯವನ್ನೂ ಜನ್ಮಾಗಿ ತಿಳಿದುಕೊಂಡಿದ್ದರಿಂದ ಸಮಿತಿಗೆ ಇವರ ನರದಿಯೇ ಬೇಕಾಗಿದ್ದಿಲ್ಲ ಅವರೂ ತಮ್ಮಲ್ಲಿರುವ ಕಲ್ಪನವನ್ನು ಇನ್ನಿಷ್ಟು ಪ್ರಕಾಶಪಡಿಸಲು ಈ ವರದಿಯು ಅವಕಾಶ ಕೊಟ್ಟಿದೆ. ಮೈಸೂರು ಕಾಂಗ್ರೆಸ್ಸು ಕಾಂಗ್ರೆಸ್ಸಿನ ಉಚ್ಚ ತತ್ವಗಳನ್ನನುಸರಿಸುವಂತಿದ್ದರೆ ಈಗ ತಯಾರಿಸಿರುವ ವರದಿಯನ್ನು ಒಪ್ಪಿಸದಿರುವುದೇ ಉತ್ತಮವೂ ಸಾಧುವೂ ಆಗಿರುವುದು ಭಗವಂತನು ಆವರಿಗೆ ಸದ್ಬುದ್ಧಿಯನ್ನು ಕೊಟ್ಟು ಇಂಥ ವರದಿ ಒಪ್ಪಿಸದಂತೆ ಮಾಡಲೆಂದು ಬೇಡಿಕೊಳ್ಳುತ್ತೇನೆ.

ಒಬ್ಬ ಕಳ್ಳಡಾಳಮಾತ್ರ

ಪಂಚಾಚಾರ್ಯಪ್ರಭಾ

೧೯೫೫ ನೆಯ ಜುಲೈ ತಾ|| ೫ ನೇ ಸೋಮವಾರ

ಶಿವಪಂಚಾಕ್ಷರೀ ಮಂತ್ರಮಹಿಮೆ

(ಶ್ರೀಚಿತ್ತರಜಕ್ಷೇ ವಿರಚಿತಾ)

ಪಾರ್ವತೀದೇವಿಯು ಮಹೇಶ್ವರನನ್ನು ಕುರಿತು, ಪ್ರಭುವೆ, ಭಕ್ತರಿಗೆ ನೋವನ್ನು ಕರುಣಿಸಲು ಪರಮ ಪವಿತ್ರವಾದ ಶಿವಪಂಚಾಕ್ಷರ ನ ಕ್ರಮವನ್ನೂ ನನಗೆ ಹೇಳು ಎಂದು ಕೇಳಲು ಈಗ ಪ್ರಶ್ನಿಸಲ್ಪಟ್ಟ ಪರಶಿವನು ಅರಿಕೆಯನ್ನು ನೋಡಿ ದೇವಿಯೇ ಕೇಳು ಪಂಚಾಕ್ಷರಮಹಿಮೆಯನ್ನು ನಿಸ್ಸಂಶಯವಾಗಿ ವರ್ಣಿಸಲು ಎಷ್ಟು ಕಲ್ಪಗಳಾದರೂ ಸಾಲದು. ವೇದಪೌರಾಣಾದಿ ಶಾಸ್ತ್ರಾಗಮಗಳಲ್ಲಿ ಈ ಮಂತ್ರವು ಅನಂತವಾಗಿ ಅನ್ವರ್ಥಗಳಲ್ಲಿ ಹೊಗಳಲ್ಪಟ್ಟಿದೆ. ಲೋಕದ ಸಮಸ್ತ ಜ್ವರಗಳಿಂದ ಕೂಡಿರುವವರೆಂದೇ ಹೇಳಲಾಗಿದೆ

ಈ ಮಂತ್ರವು ಎಲ್ಲ ಮಂತ್ರಗಳಿಂಲಲಾ ಶ್ರೇಷ್ಠ ನೆನಿಸಿ ಶಾಂಭವರಿಗೆ ಸಕಲ ಶುಭಗಳನ್ನೂ ಉಂಟು ಮಾಡುವದು ಎಳ್ಳಕೋಟಿಎ ಪಾಪಸಂಕಲಗಳು ಇನ್ನೂ ಅನೇಕ ಉಪಮಾಂತ್ರಗಳಿಗಿಂ ಕೆಲಾ ಇದು ಬೀಯೋಗದಲ್ಲು ಯಾವ ಕುಲದಲ್ಲಿ ಹುಟ್ಟಿದವನಾಗಲಿ, ಆಶ್ರಮ ನಾಗಲಿ, ಮನುಷ್ಯನಾಗಲಿ ಸಂತತಿನಾಗಲಿ ಶಿವಮಂತ್ರ ವ್ಹರೆ ಮಂತ್ರಜಪ ನಿರತನಾದರೆ ತಕ್ಷಣ ಸಕಲ ಪಾಪ ಗಳಿಂದ ಬಿಡುಗಡೆ ಹೊಂದುವನು ಈ ಮಂತ್ರಕ್ಕೆ ಪ್ರಹ್ಮನೇ ಋಷಿ, ಗಾಯತ್ರೀ ಛಂದಸ್ಸು ನಾನೇ ದೇವತೆ ಯಾಗಿರುವೆನು ಭುವರ್ಲೋಕಾದಿಯಾದ ನೀನೇ ಇದರ ಶಕ್ತಿಯು ಮಾಯಾತ್ಮಕವೇ ಬೀಜ ರುದ್ರನು ಸಂಕಲ್ಪನಿರ್ಣಾಕನಿಯವನು ನಾನು ಮಂತ್ರಾನುಷ್ಠಾನದಲ್ಲಿ ನೆನೆಸಿ ಮಂತ್ರನುಯಾಗಿದ್ದೇನೆ ಶಿವಪಂಚಾಕ್ಷರ ಮಂತ್ರನೇ ಶಿವನ್ಮರೂಪವೆಂದು ತಿಳಿ ಗಿರಿಜೆಯೆ ಕೇಳು ಮೊಗಸರು ಮತ್ತು ಶೂದ್ರರು ಈ ಮಂತ್ರವನ್ನು ಏಂಕಾರವನ್ನು ಅಲದು ನಮಶ್ಶಬ್ದಾಂತವಾಗಿ ಉಚ್ಚಾರಮಾಡ ಬೇಕು ಬ್ರಹ್ಮ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರೂ ಪ್ರಣವಸಹಿತ ಉಚ್ಚರಿಸಬೇಕು ಸಂನಾಸ್ತ ನಿಯಮದಿಂದ ಬ್ರಹ್ಮಚಾರಿಯು ಸಾಧಿಸಿ ಸಂಪೈಯಲ್ಲೂ, ಗೃಹಸ್ಥನು ಸಮಿತಿ ಸಾವಿರ ವಾನಪ್ರಸ್ಥಕ್ಕಿಯು ಹತ್ತು ಸಾವಿರ, ಸನ್ಯಾಸಿಯು ಏನತು ಸಾವಿರ ಸಂಖ್ಯೆಯಲ್ಲಿ ಮಂತ್ರವನ್ನು ಮಾಡಬೇಕು ಸ್ತ್ರೀಯರೂ ಕೂಡ್ರರೂ ಒಂದುನೂರು ಎಂಟು ಸಂಖ್ಯೆಯಲ್ಲಿ ಮಾತ್ರ ದಿನವೂ ಜಪಮಾಡಬೇಕು ಹೊಲೆಯರಿದ, ನೀಚ, ಹಸುವಿನ ಕೊಟ್ಟಿಗೆ, ಕಾಡು ಅಥವಾ ಶಿವಶಿವಾಲಯ ವಿಶೇಷ ವಾಗಿ ಬಿಲ್ವವೃಕ್ಷಸನಿಧಾನ ಈ ಸ್ಥಳಾಂತ್ಯ ಕುಳಿತು ಆಚಾರ್ಯ ರಿಂದ ಉಪದಿಷ್ಟವಾದ ರೀತಿಯಲ್ಲಿ ಈ ಮಂತ್ರವನ್ನು ಜಪಿಸಬೇಕು.

ಈ ಮಂತ್ರದ ಋಷಿ, ದೇವತಾ, ಛಂದಸ್ಸುಗಳನ್ನು ತಿಳಿದು, ನೊದಲು ಮೂರು ಪ್ರಾಣಾಯಾಮಗಳನ್ನು ಮಾಡಿ ಶಕ್ತಿ, ಬೀಜ, ದೇವತೆಗಳನ್ನು ಪರಿಸಿ ಅಂಗ ಗಳಲ್ಲಿ ಸರಿಯಾಗಿ ಮಂತ್ರಕ್ಕನುಗುಣವಾಗಿ ಅಂಗನ್ಯಾಸ ಮಾಡಿ ನಂತರ ಮಂತ್ರಕ್ಕೆ ಮೂಲಗುರುವಾದ ನಕ್ಷತ್ರ ಸ್ಥ, ಧ್ಯಾನಶಕ್ತ ನನ್ನ ಆಕಾರವನ್ನು ಲಿಂಗದಲ್ಲಯಾಗಲಿ, ಸ್ಥಂಡಿಲದಲ್ಲಿಯಾಗಲಿ, ಚಂದ್ರ, ಸೂರ್ಯ, ಅಗ್ನಿ ಮಂಡಲ ಗಳಲ್ಲಾಗಲಿ ಜಗದ್ವ್ಯಾಪಿಯಾದ ನನ್ನನ್ನು ಅನುಸಂಧಾನ ಮಾಡಿ ಎಡುಲಕ್ಷಸಂತ್ರಗಳನ್ನು ಜಪಮಾಡಬೇಕು

ಜಪಾದಿಯಲ್ಲಿ ನನ್ನ ಆಕಾರವನ್ನು ಕುರಿತು ಧ್ಯಾನಿಸ ಬೇಕು ವರದಮುದ್ರ, ಶ್ರೀಫಲ, ಕಪಾಲ, ಅಭಯ ಮುದ್ರೆಗಳಂದ ಯುಕ್ತವಾದ ನಾಲ್ಕು ತೋಳುಗಳಿಂದ ಕೂಡಿ ಪರ್ವತೆರಾಜಕುಮಾರಿಯು ಸಾಹಚರ್ಯದಿಂದ ಉಜ್ವಲವಾದ ಕರೀರಕಾಂತಿಯುಳ್ಳವನೂ ಎಡತೊಡೆ ಯಲ್ಲಿ ಕುಳಿತು ಎಡಗೈಯಿಂದ ಕೆಂದಾವರೆಯನ್ನು ಹಿಡಿದ ಜಗದಂಬೆಯಿಂದ ವ್ಯಾಪ್ತವಾದ ದೇಹವುಳ್ಳ ನೆಂಬ ಅರಿವಿನಿಂದ ನಮಸ್ಕರಿಸುತ್ತೇನೆ ಎಂದು ಭುಜಾ ಸ್ಥರ ಬಾಹಿರಭದಲ್ಲಿ ಧ್ಯಾನಿಸಬೇಕು ಮತ್ತು ಶಾಂಭವೀಮೂರ್ತಿಯಾ ಪದ್ಮಾಸನದಲ್ಲಿ ಕುಳಿತಿರುವವನೂ ಚಂದ್ರಕೆರೀಟಧಾರಿಯೂ, ನಂದು ಮುಖಗಳುಳ್ಳವನೂ, ಮೂರು ಕಣ್ಣುಗಳುಳ್ಳವನೂ, ಒಡಭಾಗದಲ್ಲಿ ಸರ್ಪ, ಖಡ್ಗ, ಘಂಟೆ, ಪ್ರಳಯಾಗ್ನಿ ಮತ್ತು ಅಂಕುಶಗಳನ್ನೂ, ದಕ್ಷಿಣಭಾಗದಲ್ಲಿ ನಾನಾವಿಧವಾದ ಆಲಂಕಾರಗಳಿಂದ ಪ್ರಜ್ವಲಿಸುತ್ತ ಕೂಲ, ವಜ್ರ, ಕತ್ತಿ, ಕೊಡಲಿ ಮತ್ತು ಅಭಯಮುದ್ರೆಗಳನ್ನು ಧರಿಸಿರುವನನ್ನೂ ಪಾರ್ವತೀ ರಮಣನಾದ ಆದ ಮಹಾದೇವನಿಗೆ ನಮಸ್ಕರಿಸುತ್ತೇನೆ ಎಂದು ಧ್ಯಾನಿಸಬೇಕು.

ಭಕ್ತಿಪೂರ್ವಕ ನಿಶ್ಚಯ ಹನ್ನೆರಡುಸಾವಿರ ಸಂಖ್ಯೆ ಯಲ್ಲಿ ಜಪಮಾಡಿದವನು ಸಂಪೂರ್ಣ ಜ್ಞಾನಸಿದ್ಧಿಯು ನನ್ನಲ್ಲಿ ಐಕ್ಯನಾಗುವನು ಐವತ್ತುಲಕ್ಷ ಸಂಖ್ಯೆಯಿಂದ ಜಪಮಾಡಿದರೆ ಇಂದ್ರಪದವನ್ನೈದುವನು ಎಂಬತ್ತು ಲಕ್ಷ ಜಪದಿಂದ ಬ್ರಹ್ಮಪದವುಂಟಾಗುವದು ಎಂಬತ್ತು ಲಕ್ಷ ಜಪದಿಂದ ವಿಷ್ಣುಪದವನ್ನು ಪಡೆಯುವನು. ನೂರು ಲಕ್ಷ (ಒಂದು ಕೋಟಿ) ಜಪದಿಂದ ಸಾಕ್ಷಾದ್ರುದ್ರ ಪದವಿಯೇ ಲಭಿಸುವದು. ಒಂದು ಲಕ್ಷ ಜಪದಿಂದ ದಿನಾಹಾರವುಳ್ಳವನೂ, ಏರಡುಲಕ್ಷಜಪದಿಂದ ಸತ್ಯುತ್ಪ ರನ್ನೂ ನಿರವಲ್ಲೆಯಂದ ಹತ್ತುಲಕ್ಷ ಜಪಮಾಡುವವನು ಅಪಮೃತ್ಯುವನ್ನೂ ಪಡೆಯುವನು. ದೇವಿಯೇ ಇಷ್ಟಯಸರೆಗೆ ಈ ಮಂತ್ರದ ವಿಸಯೋಗವನ್ನು ಹೇಳಿ ದೆನು, ಇನ್ನು ಜಪಮಾಡುವ ಲಕ್ಷಣವನ್ನು ಕೇಳು ನೆನೆ ಕೇಳು ಪ್ರಶ್ನೆರಹೇನಾದುವನನ್ನು. ಮೊದಲು ತನ್ನ ಶಕ್ತಿಯಿದ್ದಷ್ಟು ಆಹಾರ್ಯನಿಗೆ ದಕ್ಷಿಣೆಯನ್ನು ಕೊಟ್ಟು ಪವನ ಅನುಮತಿ ಪಡೆದು ಅನಿನಿಂದ ಉಪದೇಶ ಪಡೆದ ಅನ ಕರ ಕುಳಿತು ಜಪಮಾಡಬೇಕು ಆ ಮಂತ್ರಸ್ಥಾನವನ್ನೇನಿದೆ ಅದು ಉಪ್ಪನಿಸಿದಾಗ ಸುವರ್ಣಕಾಂತಿಯುಳ್ಳದ್ದೂ ದುನ್ನಾಗಿ ಉಪ್ಪತವಾದ ಪ್ರಸಾಗಂಳಿಂ ಸ್ತ್ರೀಯು ಆರ್ಯ ಶುದ್ಧಾಗಿದ್ದಾಗಿ ಆ ವೇಳೆಗಾಲ್ಲಾ ತೋಳುಗಳೂ ನಂಗು ಕಣ್ಣುಗಳು ಬಾಲಚಂದ್ರಾಲಂಕೃತ ಶಿರಸ್ಸು ತಾವರೆ ಪೈದಿಲೆಗಳನ್ನು ಹಿಡಿಮಕೊಂಡಿರುವ ನೆಂಬುವಾದ ಆಕೃತಿ, ವರವ ಅಭಯ ಹಸ್ತಗಳಿದ ಕೂಡಿ ಸಕಲ ಲಕ್ಷಣಯುಕ್ತ ವಾಗಿ ಸರ್ವಾಭರಣಭೂಷಿತವಾಗಿ ಶುಭ್ರವಾದ ತಾವರೆ ಯಲ್ಲಿ ಕುಳಿತು ನೀಲವೂ ಗುಂಗುರುವೂ ಆದ ಕೂದಲಿಳಿಳ ದ್ದಾಗಿ ಗೋಚರಿಸಿತು ಈ ಪೂಜಾಕ್ರಮ ಜಪದಿಂದ ಭಕ್ತರ ಸಕಲ ಪಾಪನಮೂಹವೂ ಕ್ಷಯವಾಗುತ್ತವೆ ಯಾವ ಸಕಲಿಯು ಬೆಬ್ಬಕ್ಕಿಬ್ಬಿಡ್ಡಿಗಳನ್ನು ಹಣೆ ಮತ್ತ ಪತ್ರಕ್ಷರಳಿಗಲ್ಲಿ ಧರಿಸಿಕೊಂಡು ರುದ್ರಾಕ್ಷಮಾಲಾ ಲಂಕೃತನಾಗಿ ಈ ಮಂತ್ರವನ್ನು ಜಪಮಾಡುವನೋ ಅವನು ನಾರಾಹಿವಾದ ನನ್ನ ಸ್ಥಾನವನ್ನು ಪಡೆಯು ವನು ಊಳ್ಳಜನಾಗಲಿ, ಮೂರ್ಖನಾಗಲಿ, ಮೂಢ ನಾಗಲಿ, ಚಾಕರಿತಕ್ಕ, ನೀಚ ಇವರಿಗೂ ಸಹ ಈ ಮಂತ್ರವು ಫಲಕಾರಿಯೆಂದು ತಿಳಿಯಬೇಕು ಹೀಗೆ ಸಕಲ ಆಶಯಗಳನ್ನು ಪಡೆದಿದ್ದರೂ ನಿಸ್ಸಕ್ತಿ ಭಕ್ತಿಯೊಂದುಮಾತ್ರ ಇರುವದಾದರೆ ಅಂಥವರಿಗೆ ಈ ಮಂತ್ರವು ಸಿದ್ಧಿಸುವದರಲ್ಲಿ ಸಂದೇಹವಿಲ್ಲ

ಮಂತ್ರಸಿದ್ಧಿಯನ್ನು ಪಡೆದ ಗುರುವಿನಿಂದ ಉಪ ದೇಶ ಮಾಡಲ್ಪಟ್ಟ ಈ ಮಂತ್ರವು ಸುಸಿದ್ಧಿಮಂತ್ರ ನೆಂದೂ, ಸಿದ್ಧಿಯನ್ನು ಪಡೆಯುವ ಗುರುವಿನಿಂದ ಉಪ ದೇಶಿಸಲ್ಪಟ್ಟದ್ದು ಸಾಧಿದ್ಧಮಂತ್ರನೆಂದೂ, ಇನ್ನು ಸಾಧಿಸ ಯಲ್ಲಿರುವ ಗುರುವಿನಿಂದ ಉಪದೇಶಿಸಲ್ಪಟ್ಟದ್ದು ಸಾಧ್ಯ ನೆಂದೂ ಹೇಳಲ್ಪಡುವದು. ಮೇಲಿನ ಯಾವೀತಿ ಯಲ್ಲಿ ಉಪದೇಶಿಸಲ್ಪಟ್ಟ (ಮಂತ್ರವಾಗಲಿ ಭಕ್ತಿಸಹಿತ ನಾದ ಶಿಷ್ಯನಲ್ಲಿ ಸಿದ್ಧಿ ಹೊಂದುವದು ಖಂಡಿತ ಈ ಮಂತ್ರಕ್ಕಸವನ್ನು ನಿಯಮದಿಂದ ಮಾಡುವ ಬ್ರಾಹ್ಮಣನು ಬಡವನಾದರೂ ಮುಕ್ತನಾಗುವನು. ಸಾಮಾನ್ಯ ವಾಗಿ ಒಂದು ವರ್ಷಕಾಲ ಜಪಮಾಡುವ ಯಾವ ಮಾನವನಾದರೂ ಧನ್ಯನೂ ಮಾನ್ಯನೂ ಆಗುವನಲ್ಲದೆ ಆವನು ನನ್ನ ಭಕ್ತವರ್ಯನೆನಿಸುವನು ಎಂದು ಶಿವನು ಪಾರ್ವತಿಗೆ ಹೇಳಿದನು

ಕೊಹಿನೂರ್‌ಗಿಂತ ದೊಡ್ಡ ವಜ್ರ

ಳಿಟಜಿ ಕ್ಯಾರೆಟ್ ತೂಕದ ನೀಲಿ ಮತ್ತು ಬಿಳಿ ಬಣ್ಣ ಮಿಶ್ರವಾದ ವಜ್ರವೊಂದು ಪ್ರಿಟೋರಿಯಾ ಬಳಿ ಇರುವ ಗಣಿಯೊಂದರಲ್ಲಿ ಸಿಕ್ಕಿದೆ. ಅದರ ಬೆಲೆ ೧ ಲಕ್ಷ ಪೌಂಡ್. ಪ್ರಿಟೊ ಅರಸರ ಕೀರೀಟದಲ್ಲಿ ಕುಡ್ರಿಸಲ್ಪಟ್ಟಿದ್ದು ಸುಪ್ರಸಿದ್ಧ ಕೊಹಿನೂರ್ ವಜ್ರಕ್ಕಿಂತ ಇದು ನಾಲ್ಕರಷ್ಟು ತೂಕವಿದೆ.

ವಿಶೇಷಪೂಜಾಪ್ರಾರಂಭ! ಕಂಪಲಿ

ಲೋಕದಲ್ಲಿ ಪರಮ ಸಾರಭೂತವಾದ ಆತ್ಮಾನುಭವ ವನ್ನು ಸಕಲರೂ ಕೋರುತ್ತಾರೆ ಆದಕ್ಕು ಬೇಗ ಆತ್ಮ ಸಾಕ್ಷಾತ್ಕಾರವಾಗಬೇಕೆಂದು ತವಕಿಸುತ್ತಿರುವರು. ಆದರೆ ಅದಕ್ಕೋಸುಗ ಕಷ್ಟಸಹಿಸಲು ಮಾತ್ರ ಸಿದ್ಧರಾಗುವ ದಿಲ್ಲ ಯಾವ ಪದಾರ್ಥವಾದರೂ ಆದಕ್ಕೆ ತಕ್ಕ ಬೆಲೆ ಯನ್ನು ಕೊಟ್ಟರೆ ಮಾತ್ರ ದೊರೆಯುವದಷ್ಟೇ! ಹಾಗೆ ಯೇ ಆತ್ಮಾನುಭವದ ಪರಮಾನಂದವು ನಮಗೆ ಲಭಿಸ ಬೇಕಾದರೆ ಅದರ ಸರಿಯಾದ ಕ್ರಯವನ್ನು ನಾವು ಕೊಡಲೇಬೇಕು ನಿಜವಾದ ವೈರಾಗ್ಯವೇ ಆದಕ್ಕೆ ಸರಿದೂಗುವ ಬೆಲೆ! ಪತ್ನಿ-ಪುತ್ರ-ಧನ-ಧಾನ್ಯ ಬಂಧು ಗಳೆ ಮೊದಲಾದ ಪ್ರಪಂಚದ ಯಾವ ವಸ್ತುವಿನಲ್ಲಾ ದರೂ ಆಸಕ್ತಿಯಿಲ್ಲದಿರುವದೇ ನಿಜವಾದ ವೈರಾಗ್ಯವು. ಇಂತಹ ವೈರಾಗ್ಯವು ಪ್ರಾಪ್ತವಾಗದ ಹೊರತು ಸ್ವಾನು ಭವವು ಸಿಕ್ಕಲಾರದು ಕ್ಷುದ್ರಮನೋವೃತ್ತಿಗಳನ್ನು ನಿವಾರಿಸಿಕೊಂಡು ನೀತಿಂದಾಗ ಸತ್ಯವನ್ನು ಸೇರ ಬಹುದು

ವೈದ್ಯರಲ್ಲಿ ಅತ್ಯಂತ ಸೂಕ್ಷ್ಮವಾದ ತೂಕದ ಯಂತ್ರ ವಿರುತ್ತದೆ ಅದನ್ನು ದೊಗಿಟ್ಟರೆ ಆದರ ಪರಡಿಗಳು ಮೊಯಿಪಾಡುವವು ಆಗ ಅದಕ್ಕೂ ಗಾಳಿಯಿಲ್ಲದ ಸ್ಥಳ ದಲ್ಲಿ ಇಡುವರು ಅವರಂತೆ ಮನವು ಬಾಹ್ಯ ವಿಷಯ ಗಳಿಂದ ಚಲಿಸಲಾರಂಭಿಸಿದರೆ ಅದನ್ನು ಸ್ಥಿರಗೊಳಿಸಲು ಶಾಂತವಾದ ಶಾಣದಲ್ಲಿ ಕೆಲವು ಕಾಲ ಕುಳಿತು ಪ್ರಣವ ಪುರಶ್ಚರಣವನ್ನು ಮಾಡಿ ಮನಸ್ಸನ್ನು ಶಾಂತಗೊಳಿಸ ಬೇಕು (ಯಪಾವಧಿ) ಮನೋವಿಕಾರಗಳುಂಟಾದಾಗ ಜನಗಳಲ್ಲಿ ಸೇರಬಾರದು. ಏಕೆಂದರೆ ಮನೋವಿಕಾರ ಗಳು ಸಾಂಕ್ರಾಮಿಕರೋಗದಂತೆಯೇ ಸರಿ! ಆದುಕಾರಣ ಚಿತ್ತವು ಶಾಂತವಾಗುವವರೆಗೆ ಏಕಾಂತದೊಳಗಿದ್ದು ಪರ ಮಾತ್ಮಭಾವನೆಯನ್ನು ಅಳವಡಿಸಿಕೊಳ್ಳುವದು ಅತ್ಯ ಗತ್ಯವಾಗಿದೆ ಇಂತು ಹಗಲಿರುಳು ಅನುಸಂಧಾನ ಸಾಗಿ ದರೆ ಜ್ಞಾನಾಗ್ನಿಯು ಬೆಳೆದು ಸಾತೆಂದರತಕ್ಷಣವೆಲ್ಲ ಸಂಶಯವೇ ಇಲ್ಲ ಈ ವಿಷಯಗಳನ್ನು ಕರತಲಾ ಮಲಕವಾಗಿ ತಿಳಿದ ಪೂಜ್ಯ ಮರಬದ ಶ್ರೀಗಂಗಾಧರ ಶಿವಾಚಾರ್ಯಸ್ವಾಮಿಗಳವರು ಕಂಪಲಿಯಲ್ಲಿ ಸಾಂಗ ತ್ರಯಾ ಸಾರಶಾಲೆಯ ಪಕ್ಕದಲ್ಲಿರುವ ಕಲ್ಯಾಣ ಮಂಟಪದಲ್ಲಿ ತಾ|| ೨೮-೬-೫೫ ರಿಂದ ಪ್ರತಿದಿನ ತಿವ ಪೂಜಾನಿರತರಾಗಿರುವರು ಇಲ್ಲಿಯ ಪ್ರಮುಖರಾಗಿ ಶ್ರೀವಂ ಕಂಠರಪ್ಪ ಕಲ್ಲುಡಿ, ಶ್ರೀಮಂತ ಕರಬಸಪ್ಪ ಕಲ್ಲುಡಿ, ಶ್ರೀಮಂತ ರಾಚಪ್ಪ ಕಲ್ಲುಡಿ ಈ ಸಜ್ಜನರು ಶ್ರೀಶಿವಯೋಗಿಗಳವರ ಸೇವಾಮಗ್ನರಾಗಿ ಆನಂದ ಕರವಾಗಿದೆ ಒಂದು ಮಂಡಲವರೆಗೂ ಈ ನೈವೆದ್ಯ ನಿರವೇರುವದು ಶ್ರೀಜಗದಾಚಾರ್ಯರ ಕೃಪೆಯಿಂದ ಶ್ರೀಗಳವರ ಶಿವಪ್ರತಿಷ್ಠಾನವಾಗಿ ನಡೆಯಲಿದೆಯಂ ಶ್ರೀವಾರ್ಷಿಕಾಭಿಷೇಗನೈಪ್ಯರಂಪ್ಪ ಭಕ್ತಿಯಿಂದ ಪ್ರಾರ್ಥಿ ಸುವ.

ಪಂ|| ಬಸವರಾಜಶಾಸ್ತ್ರಿ,
ಸಾಂಗತ್ಯಯಾ ಪಾಠಶಾಲಾಧ್ಯಾಪಕರು, ಕಂಪಲಿ

ವಿಶೇಷಸೂಚನೆ :—ಶ್ರೀ ಶ್ರೀಗಳವರೊಂದಿಗೆ ಪತ್ರ ವ್ಯವಹಾರಮಾಡಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ನೇರವಾಗಿ ಬರೆದು ಬೇಕು

ಮರಬದ ಶ್ರೀಗಳವರು
ಸಾಂಗತ್ಯಯಾಪಾಠಶಾಲಾ, ಕಂಪಲಿ ಪೋಸ್ಟು
ತಾಲೂಕು—ಹೊಸಪೇಟೆ, ಜಿಲ್ಲಾ-ಬಳ್ಳಾರಿ

ಮಹಾಪೂಜಾ ಮಹತ್ವ ಸ್ವಯಚರಿತ್ರ ಎಮ್ಮಿಗನೂರು

ಶ್ರೀಮದ್ವಿದ್ಯಾನಗರ ದಕ್ಷಿಣಕಾಶಿ ಹಂಪಿ ಸಾನಿಧ್ಯ ದೇವರ ಶ್ರೀಗುರು ಮಹಾಂತಸಮಕ್ಷದೆ ಪಟ್ಟಾಭ್ಯಷ್ಟಕ ಶ್ರೀ ||ಷಷ್ಠಿ ಬ್ರಿ|| ಕವಿಭೂಷಣ ಪ್ರವಚನಪಟು ಶ್ರೀ ಗುರುಸಿದ್ಧವಿನಾಚಾರ್ಯಸ್ವಾಮಿಗಳವರು ಸಮಸ್ತ ಶಿಷ್ಯ ಮಂಡಳಿಯು ಉಪಾಧ್ಯಕ್ಷಾಗಿ ನಮ್ಮೂರ ಪ್ರಾರ್ಥನೆಯು ಮೇರೆಗೆ ತಮ್ಮ ಆಶ್ರಮದಲ್ಲಿ ಜರುಗಿಸುವ ಮಹಾಕಾರ್ಯ ಕ್ರಮವು—ಜಯನಾಮ ಸಂವತ್ಸರದ ಶ್ರಾವಣ ಶು|| ಪ್ರತಿಪದೆ ದಿನಾಂಕ ೩೦-೭-೫೫ ರಿಂದ ಭಾದ್ರಪದ ಶು|| ೨ ದಿನಾಂಕ ೩೦-೮-೧೯೫೫ ಸೋಮ

ಶಾಸದನರೆವಿಗೆ ಪ್ರತಿಶಿಕ್ಷ ಪ್ರಾತಃಕಾಲ ೪ ಘಂಟೆಯಿಂದ ೬ ಘಂಟೆಯವರೆಗೆ ಶ್ರೀ ರುದ್ರಾಭಿಷೇಗ ಮಹಾಪೂಜೆ ಯೂ, ಸಾಯಂಕಾಲ ೬-೩೦ ಘಂಟೆಯಿಂದ ೮-೩೦ ಘಂಟೆಯವರೆಗೆ ಶ್ರೀ ಸಿದ್ಧರಾಮೇಶ್ವರ ಪುರಾಣಪ್ರವಚನ ವೂ ನಡೆಯುವುದು. ಈ ಪ್ರವಚನಕಾರ್ಯದಲ್ಲಿ ಭಾಗವಹಿಸಿರುವವರು; ಪ್ರಸಿದ್ಧ ನಾಟಕ ಕಂಪನಿ ನಟರು-ಎರಿಮಾಳ ಸಿದ್ಧಯ್ಯಸ್ವಾಮಿಯವರ ನಾಪ. ಹಾರ್ಮೋನಿಯಂ ವಾದಕರು ಕುಂಟಿಕಾನ ಸಿದ್ಧಪ್ಪಗೌಡರು. ಟೇಲ್ ವಾದಕರು ಹೊಳಗುಂದಿ ಸಿದ್ಧಪ್ಪನವರು. ಮೃದಂಗ ವಾದಕರು ಬ್ಯಾಗವಾಟಿ ಅಮರಯ್ಯನವರು. ಖವರ ಇಂಪಾದ ಸಂಗೀತದೊಂದಿಗೆ ಪೂಜ್ಯರ ಕಂಪಾದ ಧರ್ಮೋಪದೇಶದ ಪ್ರವಚನವನ್ನು ಸರ್ವರೂ ಕೇಳುವುದ ಕ್ಕೆ ಇದೊಂದು ಸುಸಮಯವು ಈ ಕಾರ್ಯಸಮಾಪ್ತಿ ಯಲ್ಲಿ ಲಿಂಗೈಕ್ಯರಾದ ಶ್ರೀ ಮಹಾಂತಾತ್ಮಿಕಿವಾಜಾರ್ಯ ಸ್ವಾಮಿಗಳವರ ಗದ್ದುಗೆಯ ಸ್ಥಾಪನ, ದೀಕ್ಷಾ, ಅಯ್ಯಾಚಾರ ಅಪ್ಪ ಸಂಸ್ಕಾರಗಳು, ಮಹಿಷಾಳಿ, ಕವಿ ಶಾಸ್ತ್ರಿ ಪಂ॥ ಮತ್ತು ವಿದ್ವಾಂಸರ ಭಾಷಣಗಳು ಜರುಗುವುವು ಕಲಾ ವಿದರಿಗೆ ಶ್ರೀಗಳವರ ಸನ್ನಿಧಿಯಿಂದ ಪ್ರಶಸ್ತಿಗಳು (ಬಿರುದುಗಳು) ಕೊಡಲ್ಪಡುವವು.

ಈ ಮಹಾಕಾರ್ಯಕ್ಕೆ ಸರ್ವರೂ ಆಗಮಿಸಿ ಭಾಗವಹಿಸಿ ಶ್ರೀಗಳವರ ಧರ್ಮೋಪದೇಶವನ್ನು ಕೇಳಿ ಧನ್ಯರಾಗಬೇಕೆಂದಪೇಕ್ಷಿಸುವ,

ಸಮಸ್ತ ಸದ್ಭಕ್ತಮಂಡಳಿ, ಎಮ್ಮಿಗನೂರು.

ಕಾರ್ಯಕರ್ತರು,

ಮು॥ ರಾ॥ ಶ್ರೀ ವೆಟಗೇರಿ ಸೂಗಪ್ಪನವರು,

,, ಶ್ರೀ ಕವಿತಾಳ ದೊಡ್ಡಬಸಪ್ಪನವರು

ಮನಸಿಗೆ ನಿವೇಳ

ಲೇ.—ಮಹಾಂತಿಪಮರದ ಶ್ರೀಗಳು, ಎಮ್ಮಿಗನೂರು

ಯಾರನ್ನು ನಂಬುವಿ ಮನವೇ ನೀನು ।
ಯಾರಿಗಾರಿಲ್ಲ ತಿಳಿ ಹುಚ್ಚುಮನವೇ ॥

ಹುಟ್ಟಿದ ತಂದೆಯು ಬಾಗನನ್ನು ಮಾಡುತಿರಲು ।
ಹೊಟ್ಟೆಯೊಳಗಿಟ್ಟುಕೊಳ್ಳುವವರಾರು ಮನವೆ ॥

ಹುಟ್ಟುತು ವೀಕಾಯ ಪೆಟ್ಟುಗಳತನ್ನುದೆಕೆ ।
ಕಷ್ಟವನನುಭವಿಸಿ ಸಾಕಾಯಿತು ಮನವೆ ॥೧॥

ಹೆತ್ತತಾಯಿಯು ತನ್ನ ಮಗನನ್ನು ಕೊಲುತಿರಲು ।
ಯೆತ್ತಪೋಯಿತು ಸತ್ಯಧರ್ಮವು ಮನವೆ ॥

ಉತ್ತಮರು ಬಾಳ್ವುದು ಅತಕಷ್ಟವೀಜಗದಿ ।
ಯೆತ್ತಹೋಗುವಿ ನೀನು ಯೆತ್ತಸೇರುವೆ ಮನವೆ ॥೨॥

ಪಿತನೆಂದು ಸುತನೆಂಬ ಹಿತದ ಸ್ನೇಹಿತನೆಂದು ।
ಅತಿಪ್ರೇಮದಿಂದಲಿ ನೀನಿರುತಿರಲು ಮನವೆ ॥

ಸತತ ಸ್ನೇಹವಬೆಳೆದು ಮಿತ್ರನು ನಿಶ್ಚನು ।
ಮತಿಗೇಡಿತನದಿಂದ ದೂಷಿಸುತಿಹನು ಮನವೆ ॥೩॥

ಗುರುನಮೊನೆ

ಲೇ:—ರೇಣುಕಸರ್ಮ ಗುಂಕಲು ಸೊಲ್ಲಾಪುರ
(ಭಾಮಿನಿ)

ಹರನೆ ಗುರುವಾಗುತಲಿಮೆರೆಯುತೆ ।
ಧರಧಿ ಭಕ್ತರ ಪಾವಕಳೆಯಲು ।
ಧರಣಿಯಲಿ ಬೇಗುರುಪು ದಿವ್ಯದೇಹವಂಧರಿಸಿ ॥
ಅರಿಳರನು ಪೀಗದಲಿ ಸು-
ಚ್ಚರಿ ಪೊರೆವನು ಕರುಣಿಯಂದಲಿ ।
ನರಕುರಿಗಳಜ್ಞಾನವನು ಹೊರದೂಡಹುದುಮ ಬೇಗ ॥೧॥

ಮುಕ್ತಿಕಾಷ್ಠಜ್ಞಾನದಿಂದಲಿ ।
ಮತ್ಕಾಗಿಹ ನರವ ವೃಷ್ಟಿಗೆ ।
ಕತ್ತಿಯಂದದಲಿಹುದು ನೋಡು ಗುರೂಪದೇಶವದು ॥
ಚಿತ್ತನು ಸಲಿಸಿದರೆ ಗುರುವಿಗೆ ।
ಸತ್ಯವನು ಘನ ನೋಲ್ಪುಮರವನು ।
ಚಿತ್ತಾಚಾರಿಯು ಪಾದದಬ್ಜನೆನೆದು ಮೆರೆಯುವನು ॥೨॥

ಅಣುಕ್ಕಾದಲಲವರತ ನೆರೆವಗೆ ।
ಘನ ಮಹಿಮ ಗುರುಸಾರ್ವಭೌಮಗೆ ।
ಮನದ ಮೋಹವಬಿಡಿಸಿ ಪೊರೆಯುವ ಮಂದಹಾಸನಗೆ ॥
ದೀನರಂ ದೀನತನ ಬಿಡಿಸುವ ।
ಮಾನನೇಕ ಮಹೋಪಕಾರಿಯು ।
ರೇಣುಕನ ಪದಕಮಲಗಳಿಗಮಿನಿಧಿ ನಮಿಸುವೆನು ॥

ವರ್ತಮಾನಸಂಗ್ರಹ

ತುಂಗಭದ್ರಾ ಅಣೆಕಟ್ಟು

ಬಳ್ಳಾರಿ ಜಿಲ್ಲೆಯ ಸೌಭಾಗ್ಯದ ನಿಧಿಯೆನಿಸಿದೆ ತುಂಗಭದ್ರಾ ಅಣೆಕಟ್ಟು. ಹೊಸಪೇಟೆಗೆ ಮೂರು ಮೈಲಿ ದೂರದಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಈ ಅಣೆಕಟ್ಟು ೧½ ಮೈಲಿ ಉದ್ದವೂ 160 ಅಡಿ ಎತ್ತರವೂ ಇದೆ,

ಈ ಅಣೆಕಟ್ಟಿನಲ್ಲಿ 113,1260 ಘನ ಅಡಿಗಳಷ್ಟು ನೀರು ನಿಲ್ಲಲಿದೆಯು. ಇದರಿಂದ ಮೈಸೂರು, ಹೈದರಾಬಾದ್ ಮತ್ತು ಆಂಧ್ರಗಳಲ್ಲಿ ಒಟ್ಟು 20 ಲಕ್ಷ ಎಕರೆ ಗಳಷ್ಟು ಜಮೀನು ಹೆಚ್ಚಾಗಿ ಸಾಗುವಳಿಗೆ ಒಳಪಡುವುದು. ಇದರಿಂದ 140,000 ಟನ್ನುಗಳಷ್ಟು ಆಹಾರ ಧಾನ್ಯಗಳೂ, 80,000 ಟನ್ನುಗಳಷ್ಟು ವಾಣಿಜ್ಯ ಬೆಳೆಗಳೂ ಹೆಚ್ಚು ಉತ್ಪನ್ನವಾಗುವುವು. ಸಾಗುವಳಿಯ ಹೊತ್ತಿಗೆ ಈ ನೀರು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಅಭಿವೃದ್ಧಿ ಪಡಿಸುವುದಕ್ಕೂ ಸಹಾಯಕವಾಗುತ್ತದೆ. ಸುಮಾರು 18,000 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಪ್ರಥಮ ಸಂಚಾರ್ಷಿಕ ಯೋಜನೆಯ ಅವಧಿಯಲ್ಲಿ ಉಪಯೋಗಕ್ಕೆ ದೊರೆಯುವುದು.

ಈ ಅಣೆಕಟ್ಟನ್ನು ಪೂರ್ಣವಾಗಿ ಕಟ್ಟಿ ಮುಗಿಸಲಾಗಿದೆ ಪ್ರಾಜೆಕ್ಟಿನ ಕಾರ್ಯನಿರ್ವಹಣೆಯಲ್ಲಿ ತಯಾರಾಗಿ ತ್ತಿರುವ ಕೆಲವು ಉಕ್ಕಿನ 'ಷಟರ್'ಗಳನ್ನು ಮಾತ್ರ ಹಾಕಬೇಕಾಗಿದೆ ಅಣೆಕಟ್ಟಿನ ಮೇಲೆ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರೆಗೆ ಮೋಟಾರು ರಸ್ತೆಯ ನಿರ್ಮಾಣಕಾರ್ಯ ಭರದಿಂದ ಸಾಗುತ್ತಿದೆ ನೀರಾವರಿ ಕಾಲುವೆಗಳ ಕಟ್ಟುಕಟ್ಟಿಗಳನ್ನು ಆಗೆಯುವುದರಲ್ಲಿ ಕಾರ್ಮಿಕರು ನಿರತರಾಗಿರುವರು ಎರಡು ವಿದ್ಯುಚ್ಛಕ್ತಿ ಯಂತ್ರ ಗೃಹಗಳಿಗಾಗಿ ತಳಪಾಯಗಳನ್ನು ತೋಡಲಾಗಿದೆ ಎತ್ತರದ ಕಾಲುವೆಯ ಕಾರ್ಯ ಮುಕ್ತಾಯದ ಘಟ್ಟದಲ್ಲಿದೆ

ಈ ಜಲಾಶಯವು 133 ಚದುರ ಮೈಲಿಗಳಷ್ಟು ವಿಸ್ತಾರವುಳ್ಳದ್ದಾಗಿದೆ. ಇಲ್ಲಿಂದ ನೀರನ್ನು ನಾಲೆಗಳ ಮೂಲಕ ಬೆಂಗಾವಾದ ರಾಯಲಸೀಮೆಗೂ, ಮುಂಬಾಯಿ ಮಳೆಯಾನಂತರ ನೀರಿನ ಆಭಾವವನ್ನು ಹೊಂದುವ ಜಮಾನುಗಳಿಗೂ ಹರಿಸಬಹುದು.

ಈ ಜಲಾಶಯ ನಿರ್ಮಾಣಕ್ಕಾಗಿ ಹೈದರಾಬಾದ್, ಮುಂಬೈ ಸುತ್ತು ಸೈಸೂರು ಸಂಸ್ಥಾನಗಳಿಗೆ ಸೇರಿದ ಸುಮಾರು 65 ಹಳ್ಳಿಗಳನ್ನು ಖಾಲಿಮಾಡಿಸಲಾಯಿತು ಅವು ಮುಳುಗಿಹೋಗಿವೆ. ನದಿಯು ಎಡಕ್ಕೊಂದು ಬಲಕ್ಕೊಂದು ಎರಡು ಕಾಲುವೆಗಳು ಅಣೆಕಟ್ಟಿನಿಂದ ನೀರನ್ನು ಸಾಗಿಸುವುವು. ಬಲಭಾಗದ ಕಾಲುವೆಯು ಮುಖ್ಯವಾದುದು ಇದರ ಉದ್ದ 225 ಮೈಲಿಗಳು ಇದರ ಮುಕ್ಕಾಲುಭಾಗ ಕೆಲಸವು ಈಗಾಗಲೇ ಮುಗಿದಿದೆ ಎಡಭಾಗದಲ್ಲಿರುವ 127 ಮೈಲಿ ಉದ್ದದ ಕಾಲುವೆಯ ಕೆಲಸವು ಅರ್ಧಕ್ಕಿಂತಲೂ ಹೆಚ್ಚುಭಾಗದಷ್ಟು ಮುಗಿದಿದೆ

ಸೆಕೆಂಡಿಗೆ 10,000 ಘನ ಅಡಿಗಳಷ್ಟು ನೀರನ್ನು ಸಾಗಿಸಬಲ್ಲ ಈ ಕಾಲುವೆಗಳು ಸಾವಿರಾರು ಉಪಕಾಲುವೆ ಗಳಿಗೆ ನೀರುಣ್ಣಿಸಿ ದಗುವುವು ಈ ಉಪಕಾಲುವೆಗಳು ಅಂಧ್ರ, ಮೈಸೂರು, ಹೈದರಾಬಾದ್ ಸಂಸ್ಥಾನಗಳಲ್ಲಿ ಅಷ್ಟೂದವರೆಗೂ ಪಸರಿಸಿವೆ. ಅವುಗಳ ಮೂಲಕ ನೀರನ್ನು ಸಾಗಿಸಿ ವ್ಯವಸಾಯಕ್ಕೆ ಅನುಕೂಲಮಾಡಿ ಕೊಡಬಹುದಾಗಿದೆ.

ತುಂಗಭದ್ರ ಕಟ್ಟಲು ಮತ್ತು ಸುತ್ತಮುತ್ತಿನ ಪ್ರದೇಶ ಗಳಿಗೆ ಅತ್ಯಗತ್ಯವಾದ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನೇಕ ವಿದ್ಯುಚ್ಛಕ್ತಿ ಯಂತ್ರಶಾಲೆಗಳನ್ನು ನಿರ್ಮಿಸುವ ಯೋಚನೆಯಿದೆ. ಅಣೆಕಟ್ಟಿನ ಬಲಭಾಗಕ್ಕೆ ಒಂದು ವಿದ್ಯುಚ್ಛಕ್ತಿ ಯಂತ್ರಶಾಲೆ ಸ್ಥಾಪಿಸಲ್ಪಡುವುದು. ನೀರಾವರಿ ಕಾಲುವೆಯ ನೀರು 15 ಮೈಲಿ ದೂರದಾಚೆ ಬೀಳುವ ಜಾಗದಲ್ಲಿ ಮತ್ತೊಂದು ಯಂತ್ರ ಶಾಲೆಯನ್ನು ನಿರ್ಮಿಸಲಾಗುವುದು. ಈ ಎರಡು ವಿದ್ಯುತ್ ಕೇಂದ್ರಗಳಿಂದಲೂ ಮೊದಲಿನೆಯ 5 ವರ್ಷ ಗಳಲ್ಲಿ ಒಟ್ಟು 30,000 ಕೀಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು. ಎರಡನೆಯ ಏದು ವರ್ಷಗಳಲ್ಲಿ 45,000 ಕಿಲೋವ್ಯಾಟುಗಳಷ್ಟು ಉತ್ಪತ್ತಿ ಯಾಗುವದು. ಆ ಮುಂದೆ 60,000 ಕಿಲೋವ್ಯಾಟು ಗಳಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದು. ಎಡ ಗಡೆಯ ದಡದಲ್ಲಿ ನೀರಾವರಿ ಕಾಲುವೆಗಲ್ಲಿಯೂ ಸಾಲು ಕಡೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡ ಲಾಗುತ್ತದೆ. ಇವೆಲ್ಲವುಗಳಿಂದ ಒಟ್ಟು 1,30,800 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿ ಯಾಗುವುದು.

ಈ ರೀತಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿಪ ಮನೆಗಳಲ್ಲಿ ಬೆಳಗಿಸು ವುದಕ್ಕೂ ಗೃಹಕೈಗಾರಿಕೆಗಳ ಚಾಲನೆಗೂ ಬೇಕಾಯ ಕ್ಕಾಗಿ ಭಾವಿಗಳಿಂದ ನೀರನ್ನೆತ್ತುವ ಪಂಪುಗಳ ಚಾಲ ನೆಗೂ ಉಪಯೋಗಿಸಲಾಗುವುದು ಹತ್ತಿಕೈಗಾರಿಕೆ ಮತ್ತು ಸಿಗರೇಗೊಟ್ಟದ ತಯಾರಿಕೆಗಳಂತಹ ಕೈಗಾರಿ ಗಳನ್ನು ಇಲ್ಲಿ ಆರಂಭಿಸುವುದಕ್ಕೆ ಸಾಧ್ಯತೆಗಳೂ ಇವೆ.

ಈ ಶತಮಾನದ ಆರಂಭದಲ್ಲಿ ಹೊಳೆದ ಯೋಜ ನೆಯು ಈಗ ನಿರ್ದಿಷ್ಟವಾದ ರೂಪುತಾಳಿದೆ ಈ ಅಣೆಕಟ್ಟಿಗೆ ಕೇಸಲ ಎಂಟುವರ್ಷಗಳ ದೂರದಲ್ಲಿರುವ ಹಂಪೆಯನ್ನು ರಾಜಧಾನಿಯಾಗಿಟ್ಟುಕೊಂಡು ವೈಭವ ದಿಂದ ಮೆರೆದ ವಿಜಯನಗರ ಸಾಮ್ರಾಜ್ಯದ ಕನಸನ್ನು ಮತ್ತೊಮ್ಮೆ, ಕಾಣುತ್ತಿರುವ ಗ್ರಾಮವಿವಾಸಿಗಳ ಮಹದಾಸೆಯ ಈ ಅಣೆಕಟ್ಟಿನ ನಿರ್ಮಾಣದೊಂದಿಗೆ ಬೆಳೆಯುತ್ತಿದೆ.

ಅಣುಶಕ್ತಿ ಬಗ್ಗೆ ಪರಿಶೋಧನೆ

ಬೆಂಗಳೂರು ವಿದ್ಯಾರ್ಥಿಯ ಸೈಪುಣ್ಯತೆ

ಸಿಡ್ನಿ ವಿಶ್ವವಿದ್ಯಾನಿಲಯದಲ್ಲಿ ಅಣುಶಕ್ತಿಯ ಬಗ್ಗೆ ಪರಿಶೋಧನೆ ಪಡೆಸುತ್ತಿರುವ ಭಾರತೀಯ ವಿದ್ಯಾರ್ಥಿ ಯೋಬ್ಬರು ಅಣುಗಳ ಸಂಯೋಜನೆಗೆ ಕಾರಣವೇನೆಂಬ ಬಗ್ಗೆ ಉಂಟಾಗಿರುವ ಸಮಸ್ಯೆಗೆ ಪರಿಪೂರ್ಣ ತೋರಿಸ ಬಹುದಾದ ಪರಿಶೋಧನೆಯೊಂದನ್ನು ನಡೆಸಿರುವುದಾಗಿ ಪ್ರೊ॥ ಹ್ಯಾರಿಮೆಸೆಲ್ ತಿಳಿಸಿದ್ದಾರೆ. ಈ ಪರಿಶೋಧನೆ ಮಹತ್ವಪೂರ್ಣವಾಗಿದ್ದರೂ ಹೆಚ್ಚು ಪ್ರಾಮುಖ್ಯ ವಾವುದೇ ಇಲ್ಲವೆಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲವೆಂದು ಅವರು ಹೇಳಿದ್ದಾರೆ ಈ ಪರಿಶೋಧನೆ ಯನ್ನು ನಡೆಸಿರುವ ವಿದ್ಯಾರ್ಥಿ ಬೆಂಗಳೂರಿನ ಶ್ರೀ ಗಣಪತಿ ಶ್ರೀಧರಯ್ಯ ಎಂಬುವರು ಅವರಿಗೆ ಈಗ ೨೪ ವರ್ಷ ವಯಸ್ಸು.

ಬಳ್ಳಾರಿ ಅಡ್ವೋಕೇಟರುಗಳ ಎನ್‌ರೋಲ್‌ಮೆಂಟ್

ಮೈಸೂರು ಹೈಕೋರ್ಟಿನಲ್ಲಿ ಜೂನ್ ೨೭ ನೆಯ ತಾರೀಖು ದಿವಸ ಶ್ರೇಷ್ಠನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪ ಮತ್ತು ಬಿ ವಾಸುದೇವಮೂರ್ತಿಯವರ ಮುಂದೆ ಈ ಕೆಳಗಿನಂತೆ ಬಳ್ಳಾರಿ ಅಡ್ವೋಕೇಟುರುಗಳು "ಎನ್‌ರೋಲ್" ಮಾಡಿಕೊಂಡರು. ಶ್ರೀಗಳಾಡ ಕೆ ಬಿ. ರಾಮರಾವ್, ಎಂ. ಎಸ್. ಗುರುತ್ತರಯ್ಯ, ಪಿ ರಾಮರಾವ್, ಕೆ ಸೀತಾರಾಮರಾವ್, ಡಿ ಎಲ್. ಚೆಟ್ಟಿ, ಎಸ್. ಗೋಪಿನಾಥ್, ಎಸ್. ಶ್ರೀನಿವಾಸಯ್ಯರ್, ಜಿ ವೆಂಕಟಾಚಲಂ, ಎಸ್. ಶೇಷಗಿರಿಯಾಚಾರ್, ಎಂ. ವಿ. ಚೆಟ್ಟಿ, ಜಿ ಶ್ರೀಧರಮೂರ್ತಿ, ಡಿ ಶ್ರೀನಿವಾಸ್, ಎಸ್. ಗುರುರಾಜರಾವ್, ಎ ಎಂ. ಎಸ್. ತಗಡೂರ್, ಎಂ. ವಿ. ರಾಮಕೃಷ್ಣರಾವ್, ಎಸ್ ಕೆ ಪಾರ್ಥಸಾರಥಿ, ಎನ್. ಸಿದ್ದಲಿಂಗಪ್ಪ, ಪಿ. ಹೆಚ್. ಎ. ಪಂಚಾಕ್ಷರಯ್ಯ, ಕೆ. ಶ್ರೀನಿವಾಸಾಚಾರಿ, ಪಿ ಎಸ್. ನಾಗರಾಜ್ ಮತ್ತು ಹೆಚ್ ಪಾಣ್ಯಾನಾಯಕ. ಶ್ರೇಷ್ಠನ್ಯಾಯಾಧೀಶರ ಅಡ್ವೋಕೇಟ್ ಜನರಲ್‌ರವರು ಬಳ್ಳಾರಿ ವಕೀಲ ಬಂಧುಗಳನ್ನು ಸ್ವಾಗತಿಸಿ ಕೆಲವು ಆದರದ ಮಾತುಗಳ ನ್ನಾಡಿದರು. ಬಳ್ಳಾರಿಯ ವಕೀಲಸಂಘದ ಅಧ್ಯಕ್ಷರಾದ ಶ್ರೀ ಕೋಲಾರದ ರಾಮರಾಯರು ಬಳ್ಳಾರಿ ವಕೀಲರು ಮೈಸೂರು ವಕೀಲಬಂಧುವರ್ಗದವನ್ನು ಸೇರುತ್ತಿರುವುದು ಸಂತೋಷದಾಯಕವಾದ ಸಂಗತಿ ಎಂದರು.

ಸಿದ್ಧಾಂತಶಿಖಾಮಣಿ
ಮಾನವನು ಸನ್ಮಾರ್ಗದಲ್ಲಿ ನಡೆದು ಇಹದಲ್ಲಿ ಸೌಖ್ಯವನ್ನೂ ಪರದಲ್ಲಿ ಮೋಕ್ಷವನ್ನೂ ಪಡೆಯಲು ಪುರಾಣ ಶ್ರವಣ, ಪೂಜೆ, ವ್ರತಾನುಷ್ಠಾನಗಳು ಸಾಧನಗಳಾಗಿವೆ ಪೂಜೆ, ವ್ರತಾನುಷ್ಠಾನಗಳು ಸಾಧನಗಳಾಗಿವೆ ಪುರಾಣಶ್ರವಣವು ಶೀಘ್ರವಾಗಿ ಮನಸ್ಸಿಗೆ ಏಕಾಗ್ರತೆಯನ್ನು ಬೆಳೆಸಿ ಸ್ವರ್ಗಪ್ರದವಾಗಿದೆ ಎಂಬುದು ಪುರಾಣಗಳ ಅಭಿಪ್ರಾಯವಾಗಿದೆ. ಪುರಾಣಶ್ರವಣವು ಮನಸ್ಸಿಗೆ ಏಕಾಗ್ರತೆಯನ್ನು ಬೆಳೆಸಿ ಸ್ವರ್ಗಪ್ರದವಾಗಿದೆ ಎಂಬುದು ಪುರಾಣಗಳ ಅಭಿಪ್ರಾಯವಾಗಿದೆ. ಸಾಮಾನ್ಯವಾಗಿ ಪುರಾಣಶ್ರವಣವು ಸಾಧ್ಯವಾಗುವುದು ಶ್ರಾವಣಮಾಸದಲ್ಲಿ ಆದ್ದರಿಂದ ಶ್ರಾವಣಮಾಸವು ಪುರಾಣಶ್ರವಣಕ್ಕೆ ಪ್ರಶಸ್ತವಾಗಿದೆ.

ಶ್ರೀಮನ್ಮಹಾರಾಜರವರ ವರ್ಧಂತಿಯ ಶುಭಾಶಯಗಳು

" ಚಿರಮಭಿವರ್ಧತಾಂಯದುಸಂತಾನಶ್ರೀಂ

ಮೈಸೂರಿನ ರತ್ನಸಿಂಹಾಸನಾಧಿಪತಿಗಳಾದ ಶ್ರೀಮನ್ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರವರ ೩೩ ನೇ ವರ್ಧಂತಿಮಹೋತ್ಸವವು ಇಂದೇ ಜಯನಾಮಸಂವತ್ಸರದ ಆಷಾಢ ಬಾ ೬ ಬುಧವಾರ (ತಾ॥ ೨೧-೭-೫೪) ದಿವಸ ಅರಮನೆಯಲ್ಲಿ ವೈಭವದಿಂದ ನಡೆಯಿತು. ೩೩ ಕುಶಾಲ ತೋಪುಗಳು ಹಾರಿಸಲ್ಪಟ್ಟವು ಈ ಧರ್ಮಪ್ರಭುಗಳ ವರ್ಧಂತಿನುಹೋತ್ಸವನ್ನು ಪ್ರತಿವರ್ಷ ಕರ್ನಾಟಕ ನೋಡಿ ಆನಂದಿಸುವುದೇ ಕನ್ನಡಿಗರ ಭಾಗ್ಯವು ದಯಾಮಯರೂ, ಸತ್ಯಸಂದರೂ, ಸೌಜನ್ಯಶೀಲರೂ, ಪ್ರಜಾವತ್ಸಲರೂ, ಆತ್ಮಜ್ಞಾನಿಗಳೂ ಆದ ಶ್ರೀಮನ್ಮಹಾರಾಜರವರ ಅಲ್ಪಿಕೆಯು ಕನ್ನಡಿಗರಿಗೆ ಸದಾ ಇರಲೆಂದೂ, ಭಗವಂತನು ಇವರಿಗೆ ಆಯುರಾರೋಗ್ಯಾದಿಗಳನ್ನಿತ್ತು ಕಾಪಾಡಲೆಂದೂ, ಶ್ರೀಚಾಮುಂಡೇಶ್ವರೀ ಕೃಪೆಯಿಂದ ಪಂಚಾಭವೃದ್ಧಿಯಾಗಿ ಮೆರೆಯಲೆಂದೂ ಹಾರೈಸಿ ರಾಜಭಕ್ತ್ಯಾಯಿಂದ ನಮ್ಮ ಶುಭಾಶಯಗಳನ್ನು ಸಲ್ಲಿಸುತ್ತೇವೆ.

ಸಂಪಾದಕರು

ವೀರಶೈವಮಹಾಜನಗಳಲ್ಲಿ ಪ್ರಾರ್ಥನೆ

ಗಣ್ಯವರ್ತಕರಿಂದಲೂ, ಅಧಿಕಾರಿಗಳಿಂದಲೂ ಕೂಡಿದ ವೀರಶೈವ ಮಹಾಜನಗಳು ಬೆಂಗಳೂರಿನಲ್ಲಿ ವಾಸವಾಗಿದ್ದು ಈ ವೆಗರವು ಅಗ್ರಸ್ಥಾನವನ್ನು ಪಡೆದಿದೆ. ಇಲ್ಲಿಯ ಹಲವು ಧರ್ಮಸ್ಥರು, ಶ್ರೀ ರಂಭಾಪುರೀ ಜಗದ್ಗುರು ಗಂಗಾಧರತಿವಾಚಾರ್ಯ ಮಹಾಸ್ವಾಮಿಗಳವರ ಬೆಳ್ಳಿ ಆಷ್ಟವರ್ಷಕ್ಕೆ ಮಹೋತ್ಸವನ್ನು ನಗರದಲ್ಲಿ ವಿಜೆಸ ಬೇಕೆಂದು ಉತ್ಸುಕರಾಗಿದ್ದಾರೆ ಆದಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾಗಿರುವ ಕರ್ತವ್ಯ ಕಾರ್ಯಗಳನ್ನು ಗೊತ್ತುಮಾಡಲು ವೀರಶೈವ ಪ್ರಮುಖರು ಬೆಂಗಳೂರಿನಲ್ಲಿ ಒಂದು ಸಭೆಯನ್ನು ಕರೆಯಬೇಕು ಈ ಸಭೆಯಲ್ಲಿ ನಿರ್ಣಯಿಸಬೇಕಾದ ವಿಷಯಗಳು ಉತ್ಸವಕಾಲಕ್ಕೆ ಉಕ್ತರ, ದಕ್ಷಿಣ ಭಾರತದಿಂದ ಇಲ್ಲಿಗೆ ಬರಬಹುದಾದ ವೀರಶೈವರ ಊಟ, ವಸತಿಗಳ ವ್ಯವಸ್ಥೆಯನ್ನು ಗೊತ್ತುಪಡಿಸಬೇಕು ಶ್ರೀ ಜಗದ್ಗುರುಗಳವರ ವಾಸಕ್ಕೂ ಮತ್ತು ಉಪನ್ಯಾಸಮಾಡುವದಕ್ಕೂ ತಕ್ಕ ನವತಿ, ಸಭಾಮಂಟಪಗಳ ನಿರ್ಮಾಣ ವಿಷಯವನ್ನು ಚರ್ಚಿಸಿ ನಿರ್ಧರಿಸಬೇಕು ಶ್ರೀ ಸ್ವಾಮಿಗಳು ಬೆಂಗಳೂರಿಗೆ ದಯಮಾಡಿಸಿದ ಜ್ಞಾಪಕಾರ್ಥವಾಗಿ ಒಂದು ಮತಿಯಾ ಅದರಲ್ಲಿ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ಮೂರ್ತಿ ಪ್ರತಿಷ್ಠೆಯೂ ಆಗಬೇಕು ಇದರ ಅಂಗವಾಗಿ ಒಂದು ವೀರಶೈವ ಲೈಬ್ರರಿ ತೆರೆಯಲ್ಪಡಬೇಕು ಈ ಸಮಯದಲ್ಲಿ ಒಂದು ವೀರಶೈವ ಮಹಾಸಭೆಯನ್ನು ಕೂಡಿಸುವ ಏರ್ಪಾಡನ್ನೂ ಮಾಡಬೇಕು ಈ ಎಲ್ಲ ಕೆಲಸಕಾರ್ಯಗಳಿಗೆ ಬೇಕಾದ ಧನವನ್ನು ಮೈಸೂರು ದೇಶದ ಮತ್ತು ಉತ್ಸವಕಾರ್ಯಕಾರಿಗಳಿಂದ ವೀರಶೈವ ಪ್ರಮುಖರಿಂದ ಸಂಗ್ರಹಿಸುವ ಏರ್ಪಾಡು ಸಹ ಮಾಡಬೇಕು ಆದ್ದರಿಂದ ವೀರಶೈವ ಮಹಾಜನಗಳು ತುರ್ತು ಸಭೆಸೇರಿ ಮೇಲ್ಕಂಡ ಎಲ್ಲ ವಿಚಾರಗಳನ್ನು ನಿರ್ಣಯಿಸುವುದೆಲ್ಲದೆ ಸಮಾಜ ಹಿತಕ್ಕೆ ಸಂಬಂಧಪಟ್ಟ ಇತ್ತೀಚೆಗೆ ಅನೇಕ ವಿಷಯಗಳ ಒಗ್ಗೆಯೂ ಚರ್ಚಿಸಿ ಮೇಲ್ಕಂಡ ಕಾರ್ಯಗಳನ್ನು ರೂಪುಗೊಳಿಸುವಲ್ಲಿ ತಕ್ಕ ಸಮಾನು ಭೂತಿಯನ್ನು ವಹಿಸಿಕೊಟ್ಟಾರೆಂದು ಈ ಮೂಲಕ ಸಮಾಜಬಂಧುಗಳಲ್ಲಿ ಅರಿಕೆಮಾಡಿಕೊಳ್ಳುವ,

ಕೆ ಎಸ್ ಮರಿಯಪ್ಪಶೆಟ್ಟಿ
ಬೆಂಗಳೂರು ಪೈರ್‌ಬ್ರಿಕ್ ಮತ್ತು ಟೈಲ್‌ವರ್ಕ್ಸ್
ಎಜೆಂಟ್
ಜಾಮರಾಜನಪೇಟೆ, ಬೆಂಗಳೂರು

ವೀರಶೈವ ಗುರುಶಿಲುಜಕ್ಕೆ ಆಭೂತಪೂರ್ವವಾದ ಗುರುಪೂರ್ಣಿಮೋತ್ಸವ, ಸೊಲ್ಲಾಪುರ

ಈ ಮುಂಚೆ ಪ್ರಸಿದ್ಧಿಪಡಿಸಿದಂತೆ ಸೊಲ್ಲಾಪುರದ ಶ್ರೀಮದ್ವೀರಶೈವಗುರುಕುಲದಲ್ಲಿ ಶಾ. ಶ ೧೮೭೩ನೆ ಜಯ ನಾಮ ಸಂವತ್ಸರ ಆಷಾಢ ಶುಃ ೧೫ (ತಾ॥ ೧೫ ೭ ೫೪) ಗುರುವಾರ " ಗುರುಪೂರ್ಣಿಮೋತ್ಸವವು " ಸದರೀ ಗುರು ಕುಲದ ವಿದ್ಯಾರ್ಥಿವೃಂದದಿಂದ ಮತ್ತು ಕಾರ್ಯಕಾರಿ ಮಂಡಲದಿಂದ ಮಹಾ ವೈಭವದೊಂದಿಗೆ ನೆರವೇರಿಸಲ್ಪಟ್ಟಿತು ಅಂದು ಪ್ರಾತಃಕಾಲ ಸಮಸ್ತ ವಿದ್ಯಾರ್ಥಿಗಳ ಮತ್ತು ಪಂಡಿತರ ಮಂಗಲಸ್ನಾನಾದಿ ನಿತ್ಯಕೃತ್ಯಗಳು ಜರುಗುತ್ತಲೇ ಸಮಸ್ತ ವಟುಸಮೂಹದೊಂದಿಗೆ ಗುರು ಕುಲದ ಪಂಡಿತರಿಂದ ಶ್ರೀಜಗದ್ಗುರು ಪಂಡಿತಾರಾಧ್ಯ ಲಿಂಗೋದ್ಭವಮೂರ್ತಿಗೆ ಮತ್ತು ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ತಿವೈಸ್ಯ ಸಿದ್ಧಲಿಂಗ ಜಗದ್ಗುರು ವಿಗ್ರಹಕ್ಕೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ಮಾಡಲ್ಪಟ್ಟಿತ್ತಲ್ಲದೆ ೧೧ ಘಂಟೆಗೆ ಮಹಾಗಣಾರಾಧನೆಯೂ ಕೃತ್ತಿಕರವಾಗಿ ಜರುಗಿತು ಪ್ರಾರ್ಥನೆಯಮೇರೆಗೆ ಮಧ್ಯಾಹ್ನ ೩॥ ಘಂಟೆಗೆ ವೇದಘೋಷಗಳೊಂದಿಗೆ ಹಾಗು ಸದ್ಭಕ್ತ ಶಿಷ್ಯಶ್ರೇಣಿಯ ಗಂಭೀರ ಜಯಧ್ವನಿಗಳೊಂದಿಗೆ ಶ್ರೀಮದ್ವೀರಶೈವ ಗುರುಕುಲದ ಸಮಸ್ತ ವಟುಗಳಿಂದ ಮತ್ತು ಪಂಡಿತಮಂಡಲಿ ಮೊದಲಾದ ಸಜ್ಜನಮು ದಾಯದಿಂದ ಆಗಮಿಸಿದ ಶ್ರೀಗಿರಿರಾಜ ಸೂರ್ಯಸಿಂಹಾ ಸನಾಧೀಶ್ವರ ಶ್ರೀಜಗದ್ಗುರು ಮಹಾಪಾದಂಗಳವರಿಗೆ ಅಭೂತಪೂರ್ವವಾದ ಸ್ವಾಗತವನ್ನು ಸಲ್ಲಿಸಿದ ನಂತರ ಮಹಾಸನ್ನಿಧಿಯವರು ಸಭಾಮಂಟಪದ ಮಧ್ಯವಿಸ್ಯೇ ತಮಾನವಾಗಿದ್ದ ಮಹಾಪೀಠದಮೇಲೆ ಮೂರ್ತಮಾಡಿ ದರು ಆಗ ಶ್ರೀಗುರುಕುಲೀಯ ವಟುಗಳಿಂದ ವೇದ ಘೋಷ, ಭಗವತ್ಪ್ರಾರ್ಥನೆ, ಸ್ವಾಗತಗೀತೆ ಸಂಸ್ಕೃತ ಪ್ರಾಸ್ತಾವಿಕ ಭಾಷಣ ನಡೆದು ಅನಂತರ ಶ್ರೀಮದ್ವೀರ ಶೈವ ಗುರುಕುಲೀಯ ವಿದ್ಯಾರ್ಥಿ ಸಮೂಹದೊಂದಿಗೆ ಪ್ರಾಧ್ಯಾಪಕರಾದ ವೇ॥ ಹಂಪಿ ನ್ಯಾಯರತ್ನಂ ಗಂಗಾಧರ ಶಾಸ್ತ್ರಿಗಳವರಿಂದ ಶ್ರೀಜಗದ್ಗುರು ಮಹಾಪಾದಂಗಳವರ ಪಾದಸನ್ನಿಧಿಯಲ್ಲಿ ವೇ॥ ರೇಣುಕಕವರ್ಮಾ ಎಂಬ ಗುರು ಕುಲೀಯ ವಟುವಿನಿಂದ ಸಂಸ್ಕೃತ ಕನ್ನಡದಲ್ಲಿ ಭಾವ ಪೂರ್ಣವೂ, ಶುಲಲಿತವೂ, ಸುಂದರವೂ ಆಗಿ ರಚಿಸ ಲ್ಪಟ್ಟ " ಗುರುಭಕ್ತಿವಿಷ್ಕಾಶ್ಯಕಂ ಮತ್ತು " ಸ್ತುತಿ ಕುಸುಮಾಂಜಲಿ " ಎಂಬ ಶೈಷಿಸ ಕವನಗಳೊಂದಿಗೆ ಗುರುದಕ್ಷಿಣೆಯೂ, ಸಮರ್ಪಿಸಲ್ಪಟ್ಟಿತು ಮಹಾಪಾದಂಗ ಳವರು ಗುರುಪೂರ್ಣಿಮಾ ಮಹತ್ವ " ವೆಂಬ ವಿಷಯ ವನ್ನು ಗರ್ಭೀಕರಿಸಿಕೊಂಡು ವಿಶೇಷವಾಗಿ ಸಂಸ್ಕೃತ ನೈದಿಕನಾಮ್ನಾಯದ ಬಗ್ಗೆ ಮತ್ತು ಸನಾತನ ಆಚಾರ ವಿಚಾರ ವ್ಯವಹಾರಗಳ ಬಗ್ಗೆ ಸಾಕಾಮುಖವಾಗಿ ದಿವ್ಯೋಪದೇಶವನ್ನು ಅರುಹಿಸುತ್ತ ಶ್ರೀಗುರುಮಲ್ಲೇಶನು ಭಕ್ತಿಭರಿತರಾದ ನಿಮ್ಮೆಲ್ಲರಿಗೆ ಆಯುರಾರೋಗ್ಯ ಭೋಗ ಭಾಗ್ಯಾದಿಗಳನ್ನು ಸದಾ ಅನುಗ್ರಹಿಸಲೆಂದು ಹಾರೈಸಿ ದರು ಶ್ರೀಮದ್ವೀರಶೈವ ಗುರುಕುಲೀಯ ವಟುಸಮೂ ಹದಿಂದ ಸಮರ್ಪಿಸಲ್ಪಟ್ಟ ಶ್ರೀ ಗುರುದಕ್ಷಿಣೆಯ ಜೊತೆ ಯಲ್ಲಿ ವಿದ್ಯಾಪಕ್ಷಪಾತಿಗಳೂ, ವಿದ್ಯಾರ್ಥಿಚಿಂತಾಮಣಿ ಗಳೂ ಆದ ಶ್ರೀ ಜಗದ್ಗುರು ವಾಗೀಶವಿಂತಿರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ಗುರುಕುಲೀಯ ವಟುಗಳುದ್ದೇಶಿಸಿ ಈ ಗುರುಕುಲೀಯ ವಟುಗಳಾದ ನೀವು ಸ್ವಲ್ಪಕಾಲ ನಿಷ್ಕಾಮರಾಗಿ, ಸನಾತನ ಧರ್ಮ ಸಂಸ್ಕೃತಿಗಳ ರಕ್ಷಣೆಗಾಗಿ ವಿದ್ಯಾವಿನಯಶೀಲರೂ, ಸಮಾಜದ ಮತ್ತು ವಿಶ್ವದ ಏಳ್ಗೆಗಾಗಿ ನರ್ವತೋಮುಖ ವಾಗಿ ವ್ಯದ್ಧಿಗೊಳ್ಳುತ್ತ ಮುಂದುವರಿಯುವವೆಂದೂ, ಆಗಿ ರೆಂದು ಪಮಪದೇಶವನ್ನು ಮಾಡುತ್ತ ನಿನ್ನಿಮ್ಮ ಸಂಘವು " ಸಂಸ್ಕೃತ ವಾಗ್ವರ್ಧಿನೀಸಭೆಯು ' ಶ್ರೀ ಗಿರಿಮಲ್ಲೇಶ ರ್ಜುನ ಪಂಡಿತಾರಾಧ್ಯ ಜಗದ್ಗುರುಗಳ ಕೃ.ಭಾಕಿರ್ವಾದ ದಿಂದ ಉತ್ತರೋತ್ತರ ಅಭಿವೃದ್ಧಿಗೊಳ್ಳಲೆಂದು ಹಾರೈ ಸುತ್ತ ಸದರೀ ಕಾರ್ಯಕಾರಿಮಂಡಲದ ಪ್ರಾಧ್ಯಾಪಕರೂ, ಸಂಸ್ಕೃತ ವಾಗ್ವರ್ಧಿನೀಸಭೆಯು ಉಪಾಧ್ಯಕ್ಷರೂ ಆದ ವೇ॥ ನ್ಯಾಯ ರತ್ನಂ ಗಂಗಾಧರಶಾಸ್ತ್ರಿಗಳವರ ಆಶಿರ್ವಾದಗಳೊಂದಿಗೆ ಗುರುಪೂರ್ಣಿಮೋತ್ಸವ ಪರವಾದ ಸಭಾ ಕಾರ್ಯಕ್ರಮವು ಪೂರ್ತಿಗೊಂಡಿತು

ಕಾರ್ಯದರ್ಶಿ, ಶ್ರೀಮದ್ವೀರಶೈವಗುರುಕುಲ ಸೊಲ್ಲಾಪುರ

ಭಾರತೀಯ ಸಿದ್ಧಾಂತ

(ಮಾನಪತ್ರಿಕೆ)

ಈ ಪತ್ರಿಕೆಯ ಜ್ಞಾನಿಗಳಾದ ರೌಡಕುಂದಿ ಶ್ರೀ॥ ಪ॥ ಬ್ರ॥ ಶಿವಯೋಗಿಶಿವಾಚಾರ್ಯಸ್ವಾಮಿಗಳವರ ಪರಿಶ್ರಮದಿಂದ ಆದಷ್ಟೂ ನಿಷ್ಪಕ್ಷಪಾತಿಯಲ್ಲಿ ಪ್ರತಿ ತಿಂಗಳು ಹೊರಡಲು ಪ್ರಾರಂಭವಾಗಿ ಒಂದು ವರ್ಷವಾಯಿತು. ಈವರೆಗೆ ನಡೆದುಬಂದವರಲ್ಲಿ ಇದು ಕನ್ನಡ ನಾಡುನುಡಿಯ ಸೇವೆಗಾಗಿ ಕರ್ನಾಟಕ ವಿಶೇಷೀಕರಣಕ್ಕೆ ಸಹಕಾರವನ್ನಿತ್ತು ಪ್ರತಿಯೊಂದು ಧರ್ಮಕ್ಕೆ ಅನ್ವಯಿಸುವಂಥ ಜ್ಞಾನಾರ್ಜನೆಯ ವಿಷಯಗಳನ್ನೂ ಕಾಲಕ್ಕೆ ತಕ್ಕ ಲೌಕಿಕ ವಿಷಯಗಳನ್ನೂ ಪ್ರಕಟಿಸಿ ತನ್ನ ಭಾರತೀಯ ಸಿದ್ಧಾಂತವನ್ನು ಕನ್ನಡಿಗರಿಗಲ್ಲ ಬೀರುತ್ತ ಸರ್ವರ ಆದರಕ್ಕೆ ಪಾತ್ರವಾಗಿದೆ ಇಂಥ ಪತ್ರಿಕೆಗಳಿಂದ ಕನ್ನಡದ ಹಿರಿಮೆಯೂ ಜ್ಞಾನಪ್ರಸಾರವೂ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಕನ್ನಡಾಭಿಮಾನಿಗಳು ಈ ಮಾಸಪತ್ರಿಕೆಯನ್ನು ತರಿಸಿ ಓದಿ ಮಾನವನ ಮುಖ್ಯಗುರಿಯಾದ ಜ್ಞಾನವನ್ನು ಪಡೆದ ಇಹ ಪರ ಸೌಖ್ಯಪಡೆಯಲೆಂದು ಹಾರೈಸುತ್ತೇವೆ

ಸಂಪಾದಕರು

ಮನೋಹರವಾದ ಫೋಟೋಗಳು.

ಶ್ರೀ ವೀರಾಚಾರಾಚಾರ್ಯರ ಒಂಭತ್ತು ಅದ್ಭುತಲೀಲಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಮಹಾತ್ಮರ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಮಹಾತ್ಮರ ಫೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ	೦—೩—೦
" " " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಜಂಭದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಶ್ವಕರ್ಮನಿಗೆ ಪ್ರಾಣಲಿಂಗ ಪ್ರತಿಷ್ಠಾನವೆಸಗಿ ೭ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಂಠಪಿದ್ಧಾರಣಮಾಡುವ ಫೋಟೋ	೦—೧—೬
ಸದ್ಯೋ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಷಡುಜ್ಜಯಾರೀ ನಿಜಪಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಗ್ರತಪಮಾಡುವ ಫೋಟೋ	೦—೧—೬
ಪಂಡಿತ ಶ್ರೀರಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೨—೦
ಪಂಡಿತ ಶ್ರೀರಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಒಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀಷಡಕ್ಷರಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠವಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೫—೦

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು ೨

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶತಕತ್ರಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಲ್ಪಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೧ನೆಯ ಆವೃತ್ತಿ)	೩ ಆಣೆ
ಬಸವಾದಿಪ್ರಮಥಸ್ತವರ್ಣನ (೫ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಶ್ರೀಗುರುತತ್ತ್ವಪದಿಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೀರಶೈವ ಅಂತ್ಯೇಷ್ಟಿ ಶಾಖ್ಯವಿಧಿ	೪ ಆಣೆ
ವೈದಿಕನಾಮ್ಯುಯರಹಸ್ಯ	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರೆ ನಾಮಾವಳಿ (೩ನೆಯ ಆವೃತ್ತಿ)	೪ ಆಣೆ
ವೈವೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ)	೬ ಆಣೆ
ಸಪ್ತಾಸಾಶ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ತಿಳಾದ್ಯೌತಕರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತವಿದಾರಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀರಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮಾವಿಜಯ ಪಸ್ಪತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯಶತಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಭೋಜನಶಿವಾಚಾರ್ಯಕೃತ)	೧೨ ಆಣೆ
ಶಿಖಾಸೂತ್ರನಿತ್ಯಾಂತೆವರ್ಜಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರೆ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	೧ ರೂ
ವಿನೇಕಮುಕ್ತಾವಳಿ	೧ ರೂ
ವಿಚಾರನಾರಾವಳಿ	೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರಯುಕ್ತವಾದುದು ೩ನೆಯ ಆವೃತ್ತಿ)	೧॥ ರೂ
ಶಿಷ್ಯರ ಮನೆಗೆಳ ರಜಿಸ್ಟರ್ ಬುಕ್	೧॥ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸುಧಾಖ್ಯಾಗಮಗಳಿಂದ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಪಾಶ್ಚಾತ್ಯರ ಫೋಟೋಗಳಿರುವುವು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩॥ ರೂ
A brief life-sketch of Pandit Sri Kashinatha Shastr (*English*)	4 As
The Philosophical Aspect of Viraasaivism (*English*)	8 As
Speeches by Pandit Shri Kashinatha Shastriya (*English*)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ.
ವೀರಶೈವರತ್ನ (ಮರಾಠಾ)	೧ ರೂ
ಮಹಾನಾರಾಯಣೋಪನಿಷತ್ (ಶ್ರೀಶೈವಭಾಷ್ಯ-ಸಂಸ್ಕೃತ)	೧ ರೂ
ಸಹಿಕೆಶ್ವರಕಾರಿಕಾ (ಸಂಸ್ಕೃತ)	೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ತ್ತಿ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್‌ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯಶಾಸ್ತ್ರಿಗಳವರು [ಏಕ ಪ್ರತಿ ಕಿಂಮತ್ತು ಸೇರಿ ೩ ರೂ ೪ ಆ.

ಸಂಪುಟ ೩೮] ಸೋಮವಾರ ತಾ॥ ೨೨ನೇ ಆಗಸ್ಟ್ ೧೯೫೪ [ಸಂಚಿಕೆ ೧೩

ರೇಣುಕವಿಜಯಪುರಾಣಂ

(ಶ್ರಾವಣಮಾಸವು ಬಂದಿತು)

ಶ್ರೀಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾವಿನೋದಕವಾದೀಪುರಾಣವು ಕರ್ನಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಎರಡನೇ ಆವೃತ್ತಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀರೇಣುಕಗುರುಸಾರ್ವಭೌಮರ ಸಮಸ್ತಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ ಈ ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಬೈಂಡಿನೊಡಗೂಡಿದೆ ಪುರಾಣದಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾವಿನೋದಕಗಳಾದ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ ಸದ್ಯಃ ಶ್ರಾವಣಮಾಸವು ಸಮೀಪವಾಗಿದ್ದು ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಸಪರಿವಾರಕ್ಕಾಗಬೇಕೆಂದು ಕೋರಿಕೆ ಬೆಲೆ ರೂ. ೨-೦-೦

ಮ್ಯಾನೇಜರ್,
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೀರಶೈವಮಹಾತ್ಮರು

ಸನಾತನವಾದ ವೀರಶೈವ ಮತದಲ್ಲಿ ಉದ್ಭವಿಸಿ ತಮ್ಮ ತಪಃಪ್ರಭಾವದಿಂದಲೂ ಕ್ರಿಯಾವಿಶೇಷದಿಂದಲೂ ಜಗತ್ಪ್ರಸಿದ್ಧರಾದ ಕೆಲವು ಮಹಾತ್ಮರ ಸಂಕ್ಷಿಪ್ತಜೀವನ ಚರಿತ್ರೆಗಳನ್ನು ಕ್ಕೋಢೀಕರಿಸಿ ಕೈ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು "ವೀರಶೈವಮಹಾತ್ಮರು" ಎಂಬ ಹೆಸರಿನಿಂದ ಮುದ್ರಣಮಾಡಿಸಿದ್ದ ಗ್ರಂಥದ ಪ್ರತಿಗಳು ಮುಗಿದ ಕಾರಣ, ಈಗ ಪಂಡಿತರ ಸಹೋದರರಾದ ನಾಗನೂರು ಬೃಹನ್ಮಠಾಧ್ಯಕ್ಷ ವೇ॥ ಮಹಾದೇವಯ್ಯನವರು, ಸದರಿ ಗ್ರಂಥಕ್ಕೆ ಕೈ॥ ರಂಭಾಪುರೀ ಜಗದ್ಗುರು ಶ್ರೀಚಿನ್ನಾನಂದರಾಜೇಂದ್ರಮಹಾಸ್ವಾಮಿಗಳೆ, ಕೈ॥ ಕಾಶೀಜಗದ್ಗುರು ಶ್ರೀವೀರಭದ್ರಶಿವಾಚಾರ್ಯಸ್ವಾಮಿಗಳವರ ಮತ್ತು ಕೈ॥ ಕಾಶೀನಾಥಶಾಸ್ತ್ರಿಗಳವರ ಸಂಕ್ಷಿಪ್ತ ಜೀವನಚರಿತ್ರಗಳನ್ನೂ ಸೇರಿಸಿ ಅಂದವಾಗಿ ದ್ವಿತೀಯ ಮುದ್ರಣವನ್ನು ಮಾಡಿಸಿರುತ್ತಾರೆ. ಅಭಿಮಾನಿಗಳೆಲ್ಲರೂ ಈ ಗ್ರಂಥವನ್ನು ತರಿಸಿಕೊಂಡು ಸಂಪೂರ್ಣವಾಗಿ ಓದಿನೋಡಿ ಆ ಮಹಾತ್ಮರು ಆಚರಿಸಿದ ಲೀಲೆಗಳನ್ನು ತಿಳಿದು ಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ : ೮ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪತ್ರವ್ಯವಹಾರ

[ಚಾತ್ರೀವಾರರು ಅಭಿಪ್ರಾಯ ಪಡುವ ಲೇಖಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರಾವಣಮಾಸದ ಪೂಜಾ ಮಹೋತ್ಸವಾಹ್ವಾನ ಪತ್ರಿಕಾ

ತುಮಕೂರು ತಿಪ್ಟೂರ್ಸ್ ಚಿಕ್ಕನಾಯ್ಕನಹಳ್ಳಿ ಶಾಖಾಮಠ ಶ್ರೀ ಕುಪ್ಪೂರು ಗದ್ದುಗೆ ಪುಣ್ಯಕ್ಷೇ॥ ಶ್ರೀ॥ ಜಂಗಮಶೇಷರಿತವಾಹಾರ್ಯಸ್ವಾಮಿಗಳವರು ಶ್ರೀ ಜಯನಾಮ ಸಂವತ್ಸರದ ಶ್ರಾವಣ ಶುದ್ಧ ಪಾಡ್ಯಮಿ ತಾ॥ ೩೦-೭-೧೯೫೪ ನೇ ಸುಶ್ರವಾರದಿಂದ ತಾ॥ ೨೮-೮-೧೯೫೪ ನೇ ಶನಿವಾರ ಪೂರ್ತಾ ಸ್ತೋತ್ರ ಸಾಥದಾದ ಶ್ರೀ ಮರುಳಸಿದ್ಧೇಶ್ವರಸ್ವಾಮಿಗೆ ಪ್ರತಿನಿತ್ಯ ಬ್ರಾಹ್ಮಮುಹೂರ್ತಕಾಲ (ಬೆಳಿಗ್ಗೆ ೪-೩೦ ರಿಂದ ೮ ಘಂಟೆಯವರೆಗೆ) ವೇ॥ ಸಿದ್ಧಾಂತಿ ಆರ್ ಎಸ್ ಮಹದೇವಶಾಸ್ತ್ರಿ, ರಾಂಪುರ ಇನರ ಪೌರೋಹಿತ್ಯದಲ್ಲಿ ರುದ್ರಾಭಿಷೇಕ ಮತ್ತು ಸಹಸ್ರಬಿಲ್ವಾರ್ಚನೆ ಪಡೆಸುವರು ಪ್ರತಿದಿವಸ ಸಾಯಂಕಾಲ ಆರಮನೆಕೆರೆ ತಾ॥ ನಾಗವೇಧಿ ಮಹದ ವೇ॥ ಶ್ರೀ ಸಿದ್ಧಾಂತಿ ಮತ್ತು ಪುರಾಣ ರತ್ನ ಎಸ್ ವಿ ವೀರಸಂಗಶಾಸ್ತ್ರಿಗಳಿಂದ ಪುರಾಣ ಪ್ರವಚನವು ಶ್ರಾವಣಮಾಸದಲ್ಲಿ ಒಂದು ತಿಂಗಳು ಪಡೆಯುವುದು

ಮೇಲ್ಕಂಡ ಮಹಾಪೂಜಾದಿಗಳನ್ನು ಪ್ರತಿದಿವಸ ಪಡೆಸಲು ಎಷ್ಟೋ ಭಕ್ತಮಂಡಲಿಯವರು ಭಕ್ತಿಯಿಂದ ಒಪ್ಪಿರುತ್ತಾರೆ ಸರ್ವರೂ ಸಕಾಲಕ್ಕೆ ಬಂದು ಶ್ರೀ ಸ್ವಾಮಿಯ ದರ್ಶನಾಶೀರ್ವಾದ ಪಡೆದು ಧನ್ಯರಾಗ ಬೇಕಾಗಿ ಅಪೇಕ್ಷಿಸುತ್ತೇನೆ

ಸೇವಾಮಾಡಿಸಬಕ್ಕ ಭಕ್ತಾದಿಗಳು ಒಂದು ದಿವಸ ಮುಂಚಿತವಾಗಿ ಬಂದು ಶ್ರೀಗಳವರಿಗೆ ವಿಷ್ಣವಿಸಿಕೊಳ್ಳ ತಕ್ಕದ್ದು.

ಭಕ್ತಮಂಡಲಿ

ಬಸವಪ್ಪಶಾಸ್ತ್ರಿಗ್ರಂಥಮಾಲೆಯಲ್ಲಿ ದೊರೆಯುವ ಪುಸ್ತಕಗಳು

ಕರ್ನಾಟಕ ಶಾಕುಂತಲ ನಾಟಕಂ	೨ ೪ ೦
ಕರ್ನಾಟಕ ರತ್ನಾವಳೀ ನಾಟಿಕೆ	೧ ೪ ೦
ಕನ್ನಡ ಭರ್ತೃಹರಿ ಸುಭಾಷಿತ ಶತಕತ್ರಯ	೦ ೮ ೦
ವಿಕ್ರಮೋರ್ವಶೀಯ	೧ ೮ ೦
ಉತ್ತರರಾಮಚರಿತ್ರೆ	(ಅಚ್ಚಿನಲ್ಲಿ)

ವಿಳಾಸ —
ಎಂ. ಮಹದೇವಶಾಸ್ತ್ರಿ,
ಕೇರಳಪುರ, ಅರಕಲಗೂಡು ತಾಲ್ಲೂಕು,
ಹಾಸನ ಡಿಸ್ಟ್ರಿಕ್ಟ್.

ಪಂಚಾಚಾರ್ಯ ಪ್ರಭಾ

೧೯೫೪ನೆಯ ಆಗಸ್ಟ್ ತಾ|| ೨ ನೇ ಸೋಮವಾರ

ಗುರು ಶಿವ್ಯ ಸ್ವರೂಪ

ಶಿಷ್ಯನ ಅಜ್ಞಾನಾಂಧಕಾರವನ್ನು ಪರಿಹರಿಸಿ ಆತ್ಮ ಜ್ಞಾನವನ್ನು ಪಡೆಯಿಸಿ ಪಾರಮಾರ್ಥ ಮಾರ್ಗದರ್ಶಕನಾದ ಆಚಾರ್ಯನೇ ಗುರುವು ಶಾಸ್ತ್ರಾರ್ಥಗಳನ್ನೂ ವೇದೋಕ್ತ ಆಚಾರಗಳನ್ನೂ ಸುಲಭವಾಗಿ ತಿಳಿಸುವ ಗ್ರಂಥಗಳನ್ನು ರಚಿಸಿ ಅವರಿಂತೆ ಆಚರಿಸಿ ಇತರರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವವನೇ ಆಚಾರ್ಯ ಸೇವಿಸಿಕೊಳ್ಳತ್ತಾನೆ ಹೀಗೆ ಗುರುಪೀಠವನ್ನು ಅಲಂಕರಿಸ ಬೇಕಾದವನು ಶಾಸ್ತ್ರಗಳನ್ನು ತಿಳಿದವನೂ ಜ್ಞಾನಿಯೂ ತಪಸ್ವಿಯೂ, ಜನಗಳಲ್ಲಿ ಪ್ರೀತಿಯುಳ್ಳವನೂ, ಸಾರ ವಾರ್ಥಿಕ ಆಚರಣೆಗಳಲ್ಲಿ ಅಸಕ್ತನೂ ಶಕ್ತಗಳನ್ನು ಚೆನ್ನಾಗಿ ಬಲ್ಲವನೂ ಆಗಿರಬೇಕು ಅಂತಹ ಗುರುವೇ ಶಿಷ್ಯನಿಗೆ ಮೋಕ್ಷಮಾರ್ಗದರ್ಶಕನಾಗಲು ಅರ್ಹನು ಸಕಲ ಲಕ್ಷಣಾನ್ವಿತನೂ, ಸಕಲ ಶಾಸ್ತ್ರಕೋವಿದನೂ ಸಕಲೋಪಾಯಜ್ಞರುನೂ ಆಗಿದ್ದರೂ ಆತ್ಮಜ್ಞಾನವಿಲ್ಲದವನಾದರೆ ಅಂಧನು ಕತ್ತೆಸದೃಶನೂ ಮೂಲಕ ಶಿಷ್ಯನಿಗೆ ಮೋಕ್ಷವನ್ನು ದೊರಕಿಸಿಕೊಡಲು ಯೋಗ್ಯತೆ ಇಲ್ಲದವನಾಗುವನು ಆತ್ಮಜ್ಞಾನವಿಲ್ಲದವರು ಪಶು ಸಮಾನರು ಅಂತಹವರು ಇತರರಿಗೆ ಉಪದೇಶ ಮಾಡಲು ಅರ್ಹರಾಗಿರುವರು ಅವರಿಂದ ಉಪದೇಶ ಪಡೆದವರೆಲ್ಲರೂ ಪಶುಗಳೇ ಆಗುವರು ತತ್ವಜ್ಞಾನಿ ಗಳಾಗಿ ಕಾವು ಮುಕ್ತರಾಗಿದ್ದರೆ ಮಾತ್ರ ಇನ್ನೊಬ್ಬರಿಗೆ ಮಾರ್ಗದರ್ಶಕರಾಗಿ ಅವರನ್ನು ಮುಕ್ತರನ್ನಾಗಿ ಮಾಡ ಬಲ್ಲರು ತಾಗಿದ್ದರೆ ಒಬ್ಬ ಕುರುಡನು ಇನ್ನೊಬ್ಬ ಕುರುಡನಿಗೆ ದಾರಿ ತೋರಿದಂತಾಗುತ್ತದೆ ತತ್ವಜ್ಞಾನವು ಆತ್ಮಜ್ಞಾನವನ್ನೂ ಶ್ರೇಷ್ಠ ನಾದ ಬ್ರಹ್ಮಾನಂದವನ್ನೂ ಉಂಟುಮಾಡುವುದಿಂದ ಈ ಪರಿತಾನವ ಯಾರು ತಿಳಿಯುತ್ತಾರೋ ತಿಳಿದೇ ನಿಜವಾದ ಆನಂದವನ್ನು ಕಂಡ ವರು ಯಾರಿಗೆ ತೇಜಲ ರುದ್ರಿ ದ ಸೂತ್ರ ತತ್ವಜ್ಞಾನದ ಪರಿಚಯವಿಲ್ಲವೋ ಅವರಿಗೆ ನೋಕ್ಷವಾಗಲಿ ಉಪದೇಶಿಸುವ ಅರ್ಹತೆ ಬರಿಯುವುದಿಲ್ಲ ಬ್ರಹ್ಮ ಸಾಕ್ಷಾತ್ಕಾರದ ಅನಂದವನ್ನು ಪಡೆದ ಶಿವಯೋಗಿ ಗಳನ್ನು ನೋಡುವದರಿಂದಲೂ ಪ ಶ್ಚಾತ್ತಾಪದಿಂದಲೂ, ಅವನ ಸಂಗಡ ಮಾತನಾಡ ವದಿಂದಲೂ ಕ್ಷಣಕ್ಷಣ ಸಂಸಾರಬಂಧನವು ಹರಿಯು ತ್ಪಜ್ಞಾನವು ಸಾಧ್ಯ ವಾಗುತ್ತದೆ

ಆದ್ದರಿಂದ ಶುಭಾಪೇಕ್ಷಿಯಾದ ಮಾನವನು ಶಿವ ಭಕ್ತನೂ, ಭಸ್ಮರುದ್ರಾಕ್ಷಧಾರಿಯೂ ವೇದಾಧ್ಯಸ್ಯಯನ ವನ್ನು ತಿಳಿದ ಆತ್ಮಜ್ಞಾನಿಯೂ, ತೀರ್ಥೋದಂತನೂ ಆದ ಸದ್ಗುರುವಿನ ಆಶ್ರಯಿಸಿ ಇಂಥ ಆಚಾರನಿಷ್ಠನೂ ಸಮರ್ಥನೂ ಆದ ಗುರುವನ್ನು ತ್ರಿಕಾಲಗಳಲ್ಲಿಯೂ ಶಿವನಂತೆ ಭಾವಿಸಿ ಪೂಜಿಸಿ ಅವನಿಂದ ಅನುಗ್ರಹವನ್ನು ಪಡೆಯಬೇಕು. ಗುರುವು ಪ್ರಸನ್ನನಾಗಲು ಸಂಸಾರ ಪಾಶವು ಅಕ್ಷಣ ನಾಶವಾಗುವದು ಅದ್ದರಿಂದಲೇ ಗುರುವೇ ಪರಮೇಶ್ವರನೆಂದು ವೇದಗಳು ಸಾರುತ್ತಿವೆ. ತಿಷ್ಯಾದಿವಸಿಗೆ ಗುರುವನ್ನು ಮನೋವಾಕ್ಕಾಯಗಳಿಂಲ ತ್ರಿಕರಣಗಳಿಂದಲೂ ಸೇವಿಸಿ ಅನುಗ್ರಹ ಪಡೆಯಬೇಕು ಗುರುವು ಶಿಷ್ಯರನ್ನು ಮೂರು ವರ್ಷಕಾಲ ಅನ್ನ ಪಾನಾದಿ ಗಳನ್ನು ಕೊಡುತ್ತೆ. ಗುರುಕುಲದಲ್ಲಿಟ್ಟುಕೊಂಡು ಬೇರೆ ಬೇರೆ ಕೆಲಸಗಳನ್ನು ಕೊಟ್ಟು ಪರೀಕ್ಷಿಸಬೇಕು ಯಾರು ಎಷ್ಟೇ ಕಷ್ಟವಾದರೂ, ಎಷ್ಟೇ ಬೆಟ್ಟು ಬಿದ್ದರೂ ವಿಮುಖ ರಾಗದೆ ಗುರುಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸು ವರೋ ಅಂಥವರೇ ಶಿವಧರ್ಮದಲ್ಲಿ ಅಸಕ್ತರೂ, ಕರ್ಮ ಸಂಪನ್ನರೂ, ಧೀರರೂ, ಗುರುಪ್ರೀತಿಯುಳ್ಳವರೂ ಆಗಿ ಶಿಷ್ಯರಾಗಲು ಅರ್ಹರಾಗುತ್ತಾರೆ. ಸತ್ಯವಾದಿಗಳೂ, ನ್ಯಾಯಪ್ರಿಯರೂ, ಪ್ರಾಣಿದಯೆಯುಳ್ಳವರೂ, ಅರೋಗ್ಯ ವಂತರೂ, ವಿನಯಶೀಲರೂ ಆದ ಶಿವಭಕ್ತಿಯುಳ್ಳ ಬ್ರಾಹ್ಮಣರೇ ಯೋಗ್ಯ ಶಿಷ್ಯರು. ಹೀಗೆ ಗುರುವು ಸನತ್ಕುಮಾರಸಕ್ಷತೂ, ಧರ್ಮವನ್ನು ತಿಳಿದು ಧರ್ಮ ಮಾರ್ಗದಲ್ಲಿ ನಡೆಯುವವನೂ ವೇದಾಭ್ಯಾಸಿಯೂ ಆದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಲ್ಲಿ ಯೋಗ್ಯವಾದವನನ್ನು ಪರೀಕ್ಷಿಸಿ ಶಿಷ್ಯನಾಗಿ ಸ್ವೀಕರಿಸಬೇಕು ಒಂದು ದೀಪದ ಸಹಾಯದಿಂದ ಹತ್ತು ಸಾವ್ಯಬ್ಬು ಅನೇಕ ದೀಪಗಳು ಹೇಗೆ ಬೆಳಗುವವು ಹಾಗೆ ಗುರುವಿಂದ ಪಕ್ತತ್ವವಾದ ಜ್ಞಾನ ಜ್ಯೋತಿಯು ಅವರ ಅನೇಕ ಶಿಷ್ಯರಲ್ಲಿ ಬೆಳಗಿ ಅವರಿಗೆ ಮಾರ್ಗದರ್ಶಕವಾಗುವುದು. ಈ ಪ್ರಕಾರ ಪರಂಪರಾನಾದ ಶಿಷ್ಯನು ಶಿವ, ಗುರು, ಅಗ್ನಿ ಇವರೆದುರಿಗೆ ದೀಕ್ಷೆಯನ್ನು ಪೊಂದಿ ಮುಂದೆ ಹೇಳುವ ನಿಯಮಗಳನ್ನು ಆಚರಿಸ ಬೇಕು

ಶಿವದೀಕ್ಷೆಯನ್ನು ಪಡೆದವನು ಪ್ರಾಣಹೋಗುವ ಕಷ್ಟ ವದಗಿದರೂ ಶಿವ(ಲಿಂಗ) ಪೂಜೆಯನ್ನು ಮಾಡದೆ ಭೋಜನವನ್ನು ಮಾಡಬಾರದು ಪ್ರತಿದಿನವೂ ತ್ರಿಕಾಲ ದಲ್ಲಿಯಾಗಲಿ ಒಂದು ಕಾಲದಲ್ಲಾಗಲಿ ಲಿಂಗಪೂಜೆ ಮಾಡಬೇಕು ದೀಕ್ಷೆಯಿಲ್ಲದವನು ಪ್ರತಿದಿನವೂ ಮಾಡು ತ್ತಿರುವ ಅಗ್ನಿಹೋತ್ರ, ವೇದಾಭ್ಯಾಸ, ಯಜ್ಞಾದಿಗಳು ದೀಕ್ಷೆಯನ್ನು ಪಡೆದವನ ಲಿಂಗಪೂಜೆಗೆ ಹದಿನಾರನೆಯ ಒಂದಂಶಕ್ಕಾದರೂ ಸಮವಾಗಲಾರವು ಪ್ರತಿದಿನವೂ ಲಿಂಗಪೂಜೆ ಮಾಡುವವರು ಶಿವಸ್ವರೂಪರೇ ಆಗುವ ರಲ್ಲದೆ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಚತು ರ್ವಿಧ ಪುರುಷಾರ್ಥಗಳನ್ನು ಪಡೆದು ಇಹ ಪರ ಸೌಖ್ಯ ಗಳನ್ನನುಭವಿಸುವರು

ಗುರುವು ಶಿಷ್ಯನಿಗೆ ದೀಕ್ಷೆಯನ್ನು ಕೊಡುವಾಗ ಲಿಂಗ ವನ್ನು ಶಿಷ್ಯನ ಕೈಯಲ್ಲಿಟ್ಟು ಯಾವ ಮಂತ್ರದಿಂದ ತಿವನನ್ನು ಸ್ಥಾಪಿಸುವನೋ ಆ ಮಂತ್ರಕ್ಕೆ ಪಾಶಮಂತ್ರ ವೆಂದು ಹೆಸರು ಈ ಪ್ರಕಾರ ಗುರುವಿಂದ ಲಿಂಗವನ್ನು ಪಡೆದ ಶಿಷ್ಯನು ಪಾಶಮಂತ್ರದಿಂದ ಧ್ಯಾನಿಸಿ ಮೋಕ್ಷ ವನ್ನು ಪಡೆಯಲು ಅರ್ಹನಾಗುತ್ತಾನೆ ಅದ್ದರಿಂದಲೇ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ ನಾತಮುನಿ ಮೊದಲಾದ ಮಹಾಗಳೂ ತಮ್ಮ ತಿರಿಸ್ಸನ್ನಲ್ಲಿ ಯಾವಾ ಗಲೂ ಲಿಂಗವನ್ನು ಧರಿಸಿ ಪೂಜಿಸಿ ಸ್ತುತಿಸುತ್ತಾರೆ ವೇದ ಶಾಸ್ತ್ರ ಪುರಾಣಗಳಲ್ಲೂ ಬ್ರಾಹ್ಮಣರು ಲಿಂಗ ಧಾರಣೆಯನ್ನು ಮಾಡಬೇಕೆಂದು ವಿಧಿಸುತ್ತದೆ ಹೀಗೆ ಗುರೂಪದಿಷ್ಟವಾದ ಲಿಂಗವನ್ನು ಮಾನವನು ಭಸ್ಮ ಗಂಧ ಪತ್ರ ಪುಷ್ಪಾದಿಗಳಿಂದ ಸ್ಥಾಪಿಸಿ ಪರಿಶುದ್ಧನಾಗ ಬೇಕು ಇದರಿಂದ ನಿಜವಾದ ತತ್ವಜ್ಞಾನವು ಬೆಳೆಯು ತ್ತದೆ ಕವಿರಿಗಿವ ನೋಡಗಳು ಗಾಳಿಯಿಂದ ಜಾರಿಕೆ ಸೂರ್ಯನು ಸೋಂಕಿಸುವಂತೆ ಆನರಿಸಿದವ ಆಜ್ಞಾನವು ಗುರುಪದೇಶದಿಂದ ಹರಿಯಲು ಲಿಂಗವು ಬೆಳಗಿ ಶಿವನ ಪ್ರಕಾಶಿಸುತ್ತಾನೆ

ಭಕ್ತಿಮಹಿಮೆ

ಉಂಬೆ ಜೋಳಪದೇಶದಲ್ಲಿ ಶಶಾಂಕಪುರವೆಂಬ ಒಂದು ಪಟ್ಟಣದಲ್ಲಿ ಕದ್ಮಿತಿ ಎಂಬ ವೈವಬ್ರಾಹ್ಮಣನಿದ್ದನು ಅವನು ವಾಗೀಶವೆಂಬ ಶಿವಭಕ್ತನ ವಿಷಯವನ್ನು ಕೇಳಿ ಜಿವನಲ್ಲಿ ನೂಂಡಿದ ಪೂಜ್ಯಭಾವದಿಂದ ಅವನ ಹೆಸರಿ ನಲ್ಲಿ ಅನೇಕ ಅರವಟ್ಟಿಗೆಗಳನ್ನು ಇಟ್ಟು ಶಿವಾರ್ಪಣ ಬುದ್ಧಿಯಿಂದ ನಡೆಸಿಕೊಂಡು ಬರುತ್ತಿದ್ದನು ಹೀಗಿರು ವಲ್ಲಿ ಕೆಲವು ಕಾಲಾಪಂತರ ವಾಗೀಶಭಕ್ತನು, ಶಿವಕ್ಷೇತ್ರ ಗೆಳಲ್ಲಿ ಸಂಚಾರಮಾಡುತ್ತ ಜೋಳಪದೇಶಕ್ಕೆ ಬಂದನು ಅಲ್ಲಿ ತನ್ನ ಹೆಸರಿನಲ್ಲಿ ನಡೆಯುತ್ತಿರುವ ಅರವಟ್ಟಿಗೆ ಗಳನ್ನು ನೋಡಿ ಅತ್ಯಶ್ಚರ್ಯವನ್ನು ಇವನನ್ನು ಸಡೆಸುತ್ತಿರು ವವರು ಯಾರೆಂದು ಅಲ್ಲಿದ್ದವರನ್ನು ವಿಚಾರಿಸಿದನು. ಅವರುಗಳು ಶಶಾಂಕಪುರದಲ್ಲಿರುವ ಕದ್ಮಿತಿಯೆಂಬ ಬ್ರಾಹ್ಮಣನು, ವಾಗೀಶರೆಂಬವರಲ್ಲಿರುವ ಪ್ರೇಮಭಕ್ತಿ ಗಳಿಂದ ಈ ಹೆಸರಿನಮೇಲೆ ಕೆರೆ, ಭಾವಿ, ಉದ್ಯಾನಗ ಳನ್ನು ಅರವಟ್ಟಿಗೆ ಧರ್ಮಕಾಲೆಗಳನ್ನು ನಿರ್ಮಿಸಿರುವ ನೆಂದು ಹೇಳಿದರು. ಇದನ್ನು ಕೇಳಿ ಅವನನ್ನು ನೋಡುವ ಕುತೂಹಲದಿಂದ ಆ ಶಿವಭಕ್ತನ ಮನೆ ಯಿರುವ ಸ್ಥಳವನ್ನು ವಿಚಾರಿಸಿ ತಿಳಿದು ಅಲ್ಲಿಗೆ ಹೋದನು

ಅಕಸ್ಮಾತ್ತಾಗಿ ತಮ್ಮಲ್ಲಿಗೆ ಶೈವಬ್ರಾಹ್ಮಣನು ಬರುವದನ್ನು ಕಂಡು ಕದ್ಮಿತಿಯು ಇದಿರುಗೊಂಡು ನಮಸ್ಕರಿಸಿ ವಿಶಿಷ್ಟವಾದ ಉಪಚಾರಗಳಿಂದ ಸತ್ಕರಿಸಿ ಆತನೇ ಶಿವಭಕ್ತನಾದ ವಾಗೀಶನೆಂದರಿತನು. ವಾಗೀಶನೂ ತೇಜಸ್ವಿಯಾದ ಕದ್ಮಿತಿಯನ್ನು ನೋಡಿ ಸಂತೋಷ ಭರಿತನಾಗಿ ಪ್ರತಿವಂದನಾರ್ಥಗಳನ್ನು ಮಾಡಿ ಕುತೂಲಪ್ರಶ್ನ ಮಾಡುತ್ತ, ಅಯಸ್ಕಾ ಕದ್ಮಿತಿಯೇ ನೀರು ನೆರಳು ಗಳ್ಲದ ಸ್ಥಳಗಳಲ್ಲಿ ನೀನು ಕಷ್ಟಪಟ್ಟು ಅರವಟ್ಟಿಗೆಗಳ ನ್ನು ಇಡಿಸಿ ಅದೆಲ್ಲ ಬೇರೆಯವರ ಹೆಸರನ್ನು ಕೊಡುವದಕ್ಕೆ ಕಾರಣವೇನೆಂದು ಪ್ರಶ್ನಿಸಿದನು. ಅದಕ್ಕೆ ಕದ್ಮಿತಿಯು, ಎಲ್ಲೆ ಭಕ್ತಶಿರೋಮಣಿಯೆ ಇದರಲ್ಲಿ ಆಶ್ಚರ್ಯವೇನಿದೆ. ಮಹೇಶ್ವರಿಗೆ ಹೆಸರಿಗೂ ಅವನ ಭಕ್ತರ ಹೆಸರಿಗೂ ವ್ಯತ್ಯಾಸವೇನಿದೆ ಎಂದನು. ಅದನ್ನು ಕೇಳಿ ಸಂತೃಪ್ತ ನಾದ ವಾಗೀಶನು, ಎಲ್ಲೆ ಕದ್ಮಿತಿಯೇ ನೀವರಲ್ಲಿ ನಿನಗಿರುವ ಪ್ರೇಮವನ್ನು ಕಂಡು ನನಗೆ ಆತ್ಯಾನಂದವಾಯಿತು ನಿನ್ನನ್ನು ನೋಡಲೆಂದೇ ಶಿವಕ್ಷೇತ್ರಗಳನ್ನು ದರ್ಶನಮಾಡುತ್ತ ಇಲ್ಲಿಗೆ ಬಂದೆನು. ನಾನೇ ವಾಗೀಶ ನೆಂಬ ಬ್ರಾಹ್ಮಣನೆಂದು ಹೇಳಿದನು. ಅದನ್ನು ಕೇಳಿದ ತದ್ಭಕ್ತಿಯು ಪ್ರೇಮಭರಿತನಾಗಿ ತನ್ನ ಮಗನೊಡನೆ ಆತನಿಗೆ ಪ್ರಮಸ್ಕಾರಮಾಡಿ, ಎಲ್ಲೆ ಪೂಜ್ಯನೆ ನಿನ್ನ ಆಗಮನದಿಂದ ನಾನು ಧನ್ಯನಾದೆನು, ನನ್ನ ಗೃಹವು ಪವಿತ್ರವಾಯಿತು, ಪಿತೃಗಳು ಕೃಪ್ತರಾದರು. ಎಲ್ಲಿ ತಿವಯೋಗಿ ಇರುವನೋ ಅಲ್ಲಿ ಶಿವನಿರುವನು, ಎಂದು ಹೇಳಿ ಆತನನ್ನು ಆಸನದಲ್ಲಿ ಕುಳ್ಳಿರಿಸಿ ಪಾದಪೂಜೆ ಯನ್ನು ಮಾಡಿ, ಸಾೋದಕವನ್ನು ಪ್ರಾಶನಮಾಡಿ ಅಲ್ಲಿಯೇ ಭೋಜನಕ್ಕೆ ಆಪ್ಯಾಸಿಸಲು, ತದ್ಭಕ್ತಿಯ ಭಕ್ತಿಭಾವಕ್ಕೆ ಪ್ರೀತನಾದ ವಾಗೀಶನು ಅದಕ್ಕೆ ಒಪ್ಪಿ ಕೊಂಡನು ಆಗ ತದ್ಭಕ್ತಿಯ ಅಪ್ಪಣೆಯಂತೆ ಆತನ ಹೆಂಡತಿಯು ನಾನಾರೀತದ ಭಕ್ಷ್ಯ ಭೋಜ್ಯಗಳನ್ನು ಸಿದ್ಧ ಪಡಿಸಿ ಫಲಪುಷ್ಪಗಳನ್ನೂ ಬಾಳೆ ಎಲೆಗಳನ್ನೂ ತರ ಬೇಕೆಂದು ತನ್ನ ಮಗನಿಗೆ ತಿಳಿಸಿದಳು ತಾಯಿಯ ಅಭಿವ್ರಾಯದಂತೆ ತಂದೆಯ ಅಪ್ಪಣೆಯನ್ನು ಪಡೆದು ಮನನು ಉದ್ಯಾನವನಕ್ಕೆ ಹೋಗಿ ಬಾಳೆ ಎಲೆಯನ್ನು ಕೊಯ್ಯತ್ತಿರಲು ಒಂದು ದೊಡ್ಡ ಸರ್ಪವು ಆ ಕುಮಾರನ ಕೈಯನ್ನು ಕಚ್ಚಿತು ವಿಷಬೀಡಿತನಾದ ಬಾಲಕನು ಅಳುತ್ತ ಕೈಯನ್ನು ಕೊಡವುತ್ತ ಕೊಯ್ದು ಬಾಳೆ ಎಲೆ ಗಳನ್ನು ತಂದು ತಾಯಿಗೆ ಕೊಟ್ಟು ಮೂರ್ಛೆಹೊಂದಿ ಬಿದ್ದುಬಿಟ್ಟನಲ್ಲದೆ ಸ್ವಲ್ಪೀ ಹೊತ್ತಿನಲ್ಲಿ ಮೃತಿಯನ್ನೈದಿದನು ಆದರೂ ಆ ದಂಪತಿಗಳು ದುಃಖಿತರಾಗದೆ ಶ್ರೀ ವಾಗೀಶನ ಭೋಜನನಮಾರಂಭದಲ್ಲಿ ಉಷ್ಣಕಾಲ ಉಷ್ಣಕ್ಕೆ ಎಬ್ಬಿಸಿದರು ಆಗ ವಾಗೀಶನು ಎದ್ದು ಕೈ ಕಾಲು ತೊಳೆದುಕೊಂಡು ಮಣೆಯ ಮೇಲೆ ಕುಳಿತು ಭಸ್ಮಧಾರಣೆ ಮಾಡಿಕೊಂಡು ದಂಪತಿಗಳ ಕೈಯಲ್ಲಿ ಕೊಟ್ಟು ನೀನೂ ನಿವ್ಯ ಕುಮಾರನೂ ಭಸ್ಮಧಾರಣೆ ಮಾಡಿಕೊಳ್ಳಿರಂದು ಹೇಳಿದ್ದನ್ನು ಕೇಳಿ ಸ್ವಾಮಿ ಮೆಗಾನು ಇಲ್ಲಿ ಇಲ್ಲ ನಾನು ಮಾತ್ರ ಧರಿಸಿಕೊಳ್ಳುತ್ತೇ ನೆಂದು ಹೇಳಿ ಭಸ್ಮವನ್ನು ಧರಿಸಿಕೊಂಡರು ಆವರಿಬ್ಬರ ಮನೋವಿಕಾರವನ್ನು ನೋಡಿ ಜ್ಞಾನಶಕ್ತಿಯಿಂದ ಎಲ್ಲ ವನ್ನೂ ಅರಿತ ವಾಗೀಶನು ನಿಜವನ್ನು ಹೇಳಿರಿಂದು ನುಡಿಯಲು ಭಯಾಶ್ಚರ್ಯದ ಆ ದಂಪತಿಗಳು ಪ್ರಭುವೇ ನಿನ್ನ ಮಗನಿಗೆ ಉದ್ಯಾನವನ್ನಲ್ಲಿ ಸರ್ಪಕಚ್ಚಿ ವೃತಕಾರಿ ನನು ತಮಗೆ ಗೂಡಿಕ್ಕಿ ನಿರಿಂಬಾಕಾಗುವೆಯೆಂದು ದಯಾ ಪಿಟ್ಟು ಭೋಜನಮಾಡಬೇಕೆಂದು ಬೇಡಿಕೊಂಡರು ಆಗ ವಾಗೀಶನು ಭಕ್ತವಾತ್ಸಲ್ಯದಿಂದ ಮೇಲೆದ್ದು—ಆ ವೃತಕುಮಾರನ ದೇಹವಿದ್ದಲ್ಲಿಗೆ ಹೋಗಿ-ಹೇ ಪರಮಾ ತ್ಮನೇ ದಯಾಪಿನೆನೇ ಮಹಾದೇವನೇ ನಿನ್ನ ಪವಿತ್ರ ನಾಮೋಚ್ಚಾರಣೆಯಿಂದ ಸಕಲ ಪಾಪಗಳೂ ದೂರಾಗು ವಲ್ಲಿ ನಿನ್ನ ಸೇವೆಗಾಗಿ ಪ್ರಾಣವನ್ನು ನೀಡಿದ ಈ ಕುಮಾ ರನಿಗೆ ದಯತೋರುವುದು ನಿನ್ನ ಕರ್ತವ್ಯವಲ್ಲವೇ ಅದು ದರಿಂದ ನಿನ್ನ ನಾಮೋಚ್ಚಾರಣೆಯಿಂದ ಅಭಿಮಂತ್ರಿಸಿ ಲಿಟ್ಟ ಈ ಭಸ್ಮಸಂಬಂಧಿಂದ ಕುಮಾರನ. ಬದುಕಲಿ ಎಂದು ಹೇಳಿ ಶವದ ಮೈತುಂಬಾ ಭಸ್ಮವನ್ನು ಬಳಿ ಯಲು ಆ ವಿಭೂತಿಯ ಮಹಿಮೆಯಿಂದ ಮಗುವು ಮಲಗಿದವನು ಎದ್ದಂತೆ ಎಚ್ಚರವಾದನು ಇದನ್ನು ಕೋ ಡಿದ ಜನಗಳೂ-ತಂದೆತಾಯಿಗಳೂ ಆಶ್ಚರ್ಯಚಕಿತರಾಗಿ ವಾಗೀಶರಲ್ಲಿ ಅತುಳವಾದ ಭಕ್ತಿಯನ್ನಿಟ್ಟು ಸ್ತುತಿಸಿದರು.

ಸ್ವೀಕಾರ

ಸವಾಚಾರ ಸ್ವೀಸಮಾಜವತಿಯಿಂದ ಶ್ರೀಮತಿ ಗೌರಾಬಾಯಿ ನಾಟೇಲ ಸೊಲ್ಲಾಪುರ ಸಿಟಿ, ಇವರು ಪ್ರಭಾಪ್ರಚಾರಣೆಗಾಗಿ ೨ ರೂ ಗಳನ್ನು ಸಮರ್ಪಿಸಿ ಕಳಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತಿದೆ.

ಶ್ರೀಜಗದ್ಗುರು ಸಿದ್ಧಲಿಂಗೇಶ್ವರ ಪುರಾಣಾಹ್ವಾನಪತ್ರಿಕಾ

ಶ್ಲೋ|| ಸದ್ವರ್ಮಮುದ್ವರೀಕರ್ತುಂ । ಬದ್ಧೋತ್ಸಾಹಂ ಸದೈವಯಃ
ಸಿದ್ಧಸಂಜ್ಞೋಮಹೇಸೋಽಹಂ ಸಿದ್ಧಲಿಂಗೋಗೇಜಗದ್ಗುರುಃ ॥

ಯಾವ ಮಹಾತ್ಮನಿಂದ ಜಗತ್ತು ಉದ್ಧಾರವಾಯಿತೋ ಯಾವ ಮಹಾತ್ಮನಿಂದ ಪಂಚಪೀಠಗಳು ಅಭಿವೃದ್ಧಿಯಿಟ್ಟವೋ ಯಾವ ಮಹಾತ್ಮನಿಂದ ಗುರುವರ್ಗ ಉತ್ಕೃಷ್ಟವಾಯಿತೋ ಅಂಥ ದಯಾ ಸಮುದ್ರನಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ೧೦೦೮ ಜಗದ್ಗುರು

ಶ್ರೀ ಸಿದ್ಧಲಿಂಗತಿವಾಚಾರ್ಯರ ಪುರಾಣವನ್ನು

ಗಂಗಾಮತಿ ಶ್ರೀಮದ್ವೀರಶೈವ ಪಂಚಾಚಾರ್ಯ ಧರ್ಮಾರ್ಥ ಶ್ರೀವಿದ್ಯಾಪ್ರಕಾಶಲಾಧ್ಯಕ್ಷ ಷ|| ಬ್ರ|| ಶ್ರೀ ಬೂದುಗುಂಪಿ ನಾಲ್ಕುರಾಣ್ಯಾವ.ಕಿದೆ ಜರಪಟ್ಟಾಧ್ಯಕ್ಷ ರುದ್ರಮುನಿತಿವಾಚಾರ್ಯಸ್ವಾಮಿಗಳ ಸನ್ನಿಧಿಯಲ್ಲಿ ಶಿರಗುಪ್ಪಿ ತಾಲೂಕು ಭಂಡ್ರಾಳುಗ್ರಾಮದ ಮಹಮಹೇ ಸಮಸ್ತ ಭಕ್ತಮಹೇಶ್ವರರು ಕೂಡಿ ಶ್ರೀ ಜಯನಾಮ ಸಂಗಿರದ ಶ್ರಾವಣಮಾಸ ಪುಣ್ಯಕಾಲದಲ್ಲಿ ತಿವಳಧಾಪ್ರವಣ ಜರುಗಿಸಬೇಕೆಂದು ಮೇಲ್ಕಂಡ ಬೂದುಗುಂಪಿ ಶ್ರೀಗಳವರನ್ನೆ, ತಮ್ಮ ಗ್ರಾಮಕ್ಕೆ ಬಿನ್ನೈಯಿಸಿ ಬರಮಾಡಿಕೊಂಡು ತಮ್ಮ ಗ್ರಾಮದ ಪಶ್ಚಿಕಂಥ ಪೆಂಡಮ್ಮನವರ ಮಕದಲ್ಲಿ ಫಡಿಯುವಂತೆ ನೇಮಿಸಿ ತಿಂಗಳು ಪುಣ್ಯಕಾಲದಲ್ಲಿ ಶ್ರೀ ಜಯನಾಮ ಸಂಗಿರ ಶ್ರಾವಣ ಶು|| ೧ ವಾಡ್ಯಮಿಯಿಂದ ಪ್ರತಿನಿತ್ಯ ನಡೆಯುವ ಕಾರ್ಯಕ್ರಮಗಳು:

ಪ್ರತಿದಿನ ಬ್ರಾಹ್ಮೀಮುಹೂರ್ತದಲ್ಲಿ ಇಷ್ಟಲಿಂಗಕ್ಕೆ ಮಹಾರುದ್ರಾಭಿಷೇಕ ಸಹಸ್ರಬಿಲ್ವಾರ್ಚನ ಪಾದ ಪೂಜಾ ಸಮಾರಂಭ ಹರಗುರು ಭಜನೆ.

ಮಧ್ಯಾಹ್ನ ೧೧ ಗಂಟೆಗೆ ಅನ್ನಸಂತರ್ಪಣ.

೫ ಗಂಟೆಯಿಂದ ೮ ಗಂಟೆ ಪರ್ಯಂತರ ಮೇಲ್ಕಂಡ ಪುರಾಣಪ್ರವಚನ.

ಭೋಧಕರು—ವೇ|| ಶಿವಾರ ಮಕದ ಶರಣಬಸವಪ್ಪಶಾಸ್ತ್ರಿಗಳು.

ಗಾಯಕರು—ಹಂಚಿನಾಳು ಮಕದ ಉಳ್ಳಯ್ಯಲಿಂಗಾಸ್ವಾಮಿಗಳವರು

ಮೃದಂಗವಾದಕರು—ಹಂಚಿನಾಳು ನಾಗೇಶಲಾಯರ ಮಕದ ಅಂಕ್ಲಯ್ಯನವರು

ಹಾರ್ಮೋನಿಯಂ ಮಾಸ್ತರು—ರಾಮಸಾಗರ ಮಠದ ಪಂಚಾಕ್ಷರಯ್ಯನವರು.

ಇತ್ಯಾದಿ ವಾದ್ಯವೈಭವದೊಡನೆ ಶ್ರೀಗಳವರ ಅಧ್ಯಕ್ಷತೆಯಲ್ಲಿ ಜರುಗುತ್ತದೆ ಸಮಸ್ತ ಭಕ್ತಮಹೇಶ್ವರರು ಬಂದು ಪೂಜಾದರ್ಶನದಿಂದಲೂ ಪುರಾಣಶ್ರವಣದಿಂದಲೂ ಉಂಟಾಗುವ ಪುಣ್ಯಫಲಕ್ಕೆ ಭಾಗಿಗಳಾಗಬೇಕೆಂದು ಕೋರುವ,

ಭಂಡ್ರಾಳು ಸಮಸ್ತ ವೈವದವರು.

ಸೂಚನೆ—ಶ್ರಾವಣಾನಂತರ ಭಾದ್ರಪದ ಶು|| ೨ ಸೋಮವಾರ ಲಕ್ಷಬಿಲ್ವಾರ್ಚನೆಯಿಂದ ಭೂರಿಗಣಾರಾಧನೆ ಜರುಗಿ ನವವಿಧ ಮಹೋತ್ಸವದೊಡನೆ ಪುರಾಣಸಮಾಪ್ತಿಯ ಪಲ್ಲಕ್ಕಿಮಹೋತ್ಸವವು ನಡಿಸಲ್ಪಡುತ್ತದೆ

ಪ್ರಯಾಣೀಕರ ಸೌಕರ್ಯ ಶಿರಗುಂಪಿ ತಾಲೂಕ ರಾಂಪುರಿ ಗ್ರಾಮಕ್ಕೆ ಬಂದವರೆ ಜಲ್ಲಿಂದ ಭಂಡ್ರಾಳು ದಕ್ಷಿಣದಿಕ್ಕಿಗೆ ನಾಲ್ಕುಮೈಲು ಇರುತ್ತದೆ.

ಶ್ರೀ ಜಯಭಾಮರಾಜ ಒಡೆಯರ್ ಬಹದ್ದೂರರವರ ವರ್ಧಂತ್ಯುತ್ಸವ ಸಾರ್ವತ್ರಿಕೋತ್ಸವ

೧೯೩೫ ನೇ ಜುಲೈ ತಾರೀಕು ೩೧ ರಲ್ಲು ಸೋರಬ ತಾಲ್ಲೂಕ್ ಕೊಪ್ಪದ ಗಾ|| ಸ್ಕೌಮ್ರಿ ಬಾಯ್ಸ್ ಸ್ಕೂಲಿನಲ್ಲಿ ಜಯಚಾಮರಾಜ ಒಡೆಯರವರ ಭಾವಚಿತ್ರಕ್ಕೆ ಹೂಮಾಲೆಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕರಿಸಿ ಸದರಿ ಗ್ರಾಮದಲ್ಲಿ ಪ್ರಭಾತ್‌ಫೇರಿ ನಡಿಸಲಾಯಿತು ಅನಂತರ ಗ್ರಾಮವಾಸಿಗಳಾದ ಶ್ರೀ ಶಾಂತವೀರಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಲಾಯಿತು ಮೊದಲು ದೇವತಾಸ್ತುತಿಗೀತೆಯಿಂದ ಆರಂಭವಾಗಿ ಯಂ ಶಿವಾನಂದಯ್ಯನವರು ಬಹಳ ಚೆನ್ನಾಗಿ ಹೇಳಿದರು ಆಮೇಲೆ ಹೆಡ್‌ಮಾಸ್ಟರ್ ಮಾ|| ಹೆಚ್. ಬಸವಂತಪ್ಪನವರು ಪ್ರಭುಗಳಿಗೆ ಜಯಕೋರುವ ಬಗ್ಗೆ ತಮ್ಮ ಸ್ವಂತ ಕವನವನ್ನು ಹೃದಯಂಗಮವಾಗಿ ಹಾಡಿದರು. ಮತ್ತು ಮಹಾರಾಜರ ಗುಣಾತಿಶಯವನ್ನು ವಿವರಿಸಿ ಭಾಷಣಮಾಡಿದರು. ನಂತರ ಅಧ್ಯಕ್ಷರು ಪ್ರಭುಗಳ ವಿಷಯವಾಗಿಯೂ ಈಗಿನ ಸಧ್ಯಾರದ ವಿಷಯವಾಗಿಯೂ ಸೂಕ್ತವಾದ ಹಿತೋಕ್ತಿಗಳನ್ನು ಹೇಳಿದರು. ಈ ಕಾರ್ಯಕ್ಕೆ ಊರಿನ ಪ್ರಮುಖರೆಲ್ಲರೂ ಸೇರಿದ್ದರು. ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು ಆಮೇಲೆ ರಾಷ್ಟ್ರಗೀತೆಯೊಡನೆ ವಿಸರ್ಜನೆಯಾಯಿತು.

ಕಾರ್ಯದರ್ಶಿ,
ಹೆಚ್. ಶಿವಜಿಗೌಡ

ವರ್ತಮಾನ ಸಂಗ್ರಹ

ಅರಮನೆಯಲ್ಲಿ ನಾಮಕರಣ ಸಮಾರಂಭ

ಆರಮನೆಯ ಮುಂದಿರುವ ರಲ್ಯಾಣಮಂಟಪದಲ್ಲಿ ೨೬ನೇತಾರೀಖು ಬೆಳಿಗ್ಗೆ ೧೦-೩೦ ರ ಸಮಯದಲ್ಲಿ ಶ್ರೀಮನ್ಮಹಾರಾಜರವರ ನೂಪನ ಶಿಶುವಿನ ನಾಮಕರಣ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶಿಶುವಿಗೆ ಕಾಮಾಕ್ಷಿದೇವಿಯೆಂದು ನಾಮಕರಣ ಮಾಡಲಾಯಿತು. ನಾಮಕರಣೋತ್ಸವ ಸಮಾರಂಭಕ್ಕೆ ರಾಷ್ಟ್ರಪತಿಗಳಾದ ಡಾ|| ರಾಜೇಂದ್ರ ಪ್ರಸಾದ್‌ರವರೂ ಆಗಮಿಸಿದ್ದರು.

ನಿಯಮಿತಕಾಲಕ್ಕೆ ಸರಿಯಾಗಿ ಆಗಮಿಸಿದ ರಾಷ್ಟ್ರ ಪತಿಗಳನ್ನು ಅರಮನೆಯ ಮಹಾದ್ವಾರದ ಬಳಿ ಶ್ರೀಮನ್ಮಹಾರಾಜರವರು ಅರಮನೆಯ ಬ್ಯಾಂಡಿನವರ ರಾಷ್ಟ್ರ ಗೀತೆಯೊಡನೆ ಸ್ವಾಗತಿಸಿದರು. ಅನಂತರ ರಾಷ್ಟ್ರಪತಿಗಳು ಅವರಿಗಾಗಿ ನಿರ್ಮಾಪಿಸಲ್ಪಟ್ಟಿದ್ದ ವಿಶೇಷ ಸ್ಥಳದಲ್ಲಿ ಅಸೀನರಾಗಿರಲಾಗಿ ನಾಮಕರಣಮಹೋತ್ಸವವನ್ನು ವೀಕ್ಷಿಸಿದರು.

ಶ್ರೀಮನ್ಮಹಾರಾಜರವರು ಪ್ರಥಮವಾಗಿ ರಾಜ ಗುರು ಗಳಾದ ಪರಕಾಲಸ್ವಾಮಿಯವರ ಪಾದಪೂಜೆ ಫಡಿಸಿದರು. ಅನಂತರದಲ್ಲಿ ನಾಮಕರಣಮಹೋತ್ಸವವು ಶಾಸ್ತ್ರೋಕ್ತ ವಾಗಿ ನಡೆದು, ಶಿಶುವಿಗೆ ಕಾಮಾಕ್ಷಿದೇವಿ ಎಂದು ನಾಮ ಕರಣಮಾಡಲಾಯಿತು. ಅರಮನೆಯ ಬತೇರಿಯಿಂದ ೨೧ ಕುಶಾಲತೊಪ್ಪುಗಳನ್ನು ಹಾರಿಸಲಾಯಿತು.

ಸನಾರಂಭಕ್ಕೆ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯ, ಸರ್ಕಾರದ ಇತರ ಸಚಿವರು ಗಳು ಶ್ರೀ ಮಿರ್ಜಾ ಇಸ್ಮೈಲ್ ಸಂಸ್ಥಾನದ ಪ್ರೌಢ್ಯ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪ, ಸರ್ಕಾರದ ಉನ್ನತ ಅಧಿಕಾರಿಗಳು, ಪಾಷಣೀ ಮಹಿಸೀಯರುಗಳು, ಅಗಮಿಸಿದ್ದರು. ಆತಿಥಿಗಳೆಲ್ಲರಿಗೂ ಹಾರಗಳನ್ನರ್ಪಿಸಿ ಸಿಹಿ ತಿಂಡಿ ಹಂಚಲಾಯಿತು

ಮೈಸೂರಿನ ಶ್ರೀಮನ್ಮಹಾರಾಜರವರ ಸಹೋದರಿಯವರ ನಿಧನ

ಧರತಪುರದ ಮಹಾರಾಣಿಯವರೂ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಸಹೋದರಿಯವರೂ ಆದ ಶ್ರೀಮತಿ ಚಾಮುಂಡಮ್ಮಣ್ಣಿಯವರುಜುಲೈ ೨೬ನೇ ತಾರೀ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ 'ಚಾಮುಂಡಿ ವಿಹಾರ' ಗೃಹದಲ್ಲಿ ವಿಧಿವಶರಾದೆಂದು ತಿಳಿಸಲು ವಿಷಾದಿಸುತ್ತೇವೆ. ಈಗ ಹದಿನೈದುದಿನಗಳ ಹಿಂದೆ ಶ್ರೀಮತಿ ಚಾಮುಂಡಮ್ಮಣ್ಣಿಯವರು ಹೆಣ್ಣು ಮಗು ವೊಂದಕ್ಕೆ ಜನ್ಮನಿತ್ತಿದರು ತಕ್ಷಣಂಬಂದನಾಗಿ ಅಂದಿ ನಿಂದಲೂ ಅವರು ಅನಾರೋಗ್ಯದಿಂದ ನರಳುತ್ತಿದ್ದರು.

ಮಹಾರಾಣಿಯವರಿಗೆ ೨೭ ವರ್ಷ ವಯಸ್ಸಾಗಿದ್ದಿತು. ಅವರ ನಿಧನದ ಸಮಯದಲ್ಲಿ ಧರತಪುರದಮಹಾರಾಜ ರವರು ಅವರ ಪಕ್ಕದಲ್ಲಿಯೇ ಇದ್ದರು ಸುದ್ದಿಯನ್ನು ಕೇಳಿದ ಸಂಸ್ಥಾನ ಸರ್ಕಾರದ ಸಚಿವರುಗಳು ಚಾಮುಂಡಿ ವಿಹಾರಕ್ಕೆ ತೆರಳಿ ತಮ್ಮ ಸಂತಾಪವನ್ನು ಸೂಚಿಸಿದರು.

ಧರತಪುರದ ಶ್ರೀಮನ್ಮಹಾರಾಣಿಯವರ ಕಳೇಬರ ವನ್ನು ವಿಶೇಷ ವ್ಯಾನಿನಲ್ಲಿ ಏರೋಡ್ರೋಮಿಗೆ ತೆಗೆದು ಕೊಂಡುಹೋಗಿ ಅಲ್ಲಿಂದ ಧರತಪುರಕ್ಕೆ ವಿಶೇಷ ವಿಮಾನದಲ್ಲಿ ಒಯ್ಯಲಾಯಿತು

ಧರತಪುರದ ದಿವಂಗತೆ ಮಹಾರಾಣಿಯವರಿಗೆ ಈಗ ಜಪಸಿರುವ ಶಿಶುವು ಸೇರಿ ಏದು ಹೆಣ್ಣುಮಕ್ಕಳಷ್ಟಾರೆ, ಈಗ ಹದಿನೈದುದಿನಗಳ ಹಿಂದೆ ಜನಿಸಿದ ಹೆಣ್ಣುಶಿಶುವಿ ಆರೋಗ್ಯವಾಗಿದೆ ದುಃಖಪೂರಿತರಾಗಿ ಅಂತ್ಯಸಂಸ್ಕಾರ ಬತೇರಿಯಿಂದ ೨೬ ತೋಪುಗಳನ್ನು ಹಾರಿಸಲಾಯಿತು

ಶ್ರೀಜಯಚಾಮುಂಡಮ್ಮಣ್ಣಿಯವರು ೧೯೨೨ ರಲ್ಲಿ ಜಪಸಿದರು ಅವರ ವಿವಾಹವು ಧರತಪುರದ ಸಂಸ್ಥಾನಾ ಧೀಶರಾದ ಶ್ರೀ ಬ್ರಿಜೇಂದ್ರಸಿಂಹರಾಯ ಶ್ರೀಬ್ರಿಜೇಂದ್ರ ಸಿಂಗ್ ಬಹದ್ದೂರ್‌ರವರೊಂದಿಗೆ ೧೯೨೮ನೇ ಜೂನ್ ೧೫ ರಂದು ನಡೆಯಿತು

ಮಧ್ಯಾಹ್ನ ೨-೩೦ ಕ್ಕೆ ಸರಿಯಾಗಿ ಕಳೇಬರವನ್ನು ಕಾರಿನಲ್ಲಿ ಕೂರಿಸಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಕೊಂಡೊಯ್ಯಲು, ಕಳೇಬರಕ್ಕೆ ಕಂಕಾಪು ಬಟ್ಟೆ ಹೊದಿಸಿದ್ದರು ಅರವ.ನೆಯ ಸಮಸ್ತ ರಾಜಮರ್ಯಾದೆಗಳೂ ಶೋಕಸೂಚಕಾರ್ಥವಾಗಿ ಚಾಮುಂಡಿ ವಿಹಾರದ ಆವರಣದಲ್ಲಿದ್ದವು ಕಾರಿನ ಮುಂಭಾಗದಲ್ಲಿ ಆನೆ, ಕುದುರೆ, ಒಂಟೆ, ಛತ್ರಿ, ಚಾಮರ ಮರ್ಯಾದೆಗಳಿದ್ದುವು. ದಿಗಿಲಾಕ ಮಹಾರಾಣಿಯವರ ಮುಖವು ಎಲ್ಲರಿಗೂ ಕಾಣುವಂತೆ ಕಳೇಬರವನ್ನು ಕಾರಿನ ಹಿಂಭಾಗದಲ್ಲಿ ಕೂಡಿಸಿದ್ದರು ಶ್ರೀಮನ್ಮಹಾರಾಜರು ಪಂಚೆ ಉಟ್ಟು ಕೊಂಡು ತಿನ್ನೆ ಮುಖದಿಂದ ತಮ್ಮ ಸಹೋದರಿಯ ಕಳೇಬರಕ್ಕೆ ಪುಷ್ಪಗಳನ್ನು ಅರ್ಪಿಸಿದರು. ಆಕೆಯ ಪತಿ ಧರತಪುರದ ಮಹಾರಾಜರೂ ಪಕ್ಕದಲ್ಲಿದ್ದು ಪುಷ್ಪಗಳನ್ನು ಅರ್ಪಿಸಿದರು ವಿಶೇಷವಾಗಿ ತರಿಸಿದ ಏ ಎ ಎಫ್. ವಿಮಾನದಲ್ಲಿ ಧರತಪುರಕ್ಕೆ ಶವವನ್ನು ಕೊಂಡೊಯ್ದರು.

ಈ ಅತೀವದುಃಖವನ್ನು ಸಹಿಸಲು ನಮ್ಮ ಶ್ರೀಮನ್ಮ ಹಾರಾಜರವರಿಗೂ ಶ್ರೀಮಜ್ಜಯಚಾಮುಂಡಿಯವರಿಗೂ ಧರತ ಪುರದ ಮಹಾರಾಜರವರಿಗೂ, ರಾಜಕುಟುಂಬದವರಿಗೂ ಶಕ್ತಿಯನ್ನು ಕರುಣಿಸಲೆಂದು ಭಗವಂತನನ್ನು ನಾವು ಪ್ರಾರ್ಥಿಸುವೆವಲ್ಲದೆ, ಶ್ರೀಮನ್ಮಹಾರಾಜರವರಿಗೂ ರಾಜ ಕುಟುಂಬದವರಿಗೂ ನಮ್ಮ ಹೃತ್ಪೂರ್ವಕ ಅನುತಾಪ ಗಳನ್ನು ಸಲ್ಲಿಸುತ್ತೇವೆ. ದಿಗಿಲಂತೆ ಅಕ್ಕಳಿಕೆ ತಿರಿ ಮಾಕ್ಕಳು ಕಾಂತಿಪೀಡಲಿ.

ಸಿದ್ಧಾಂತ ಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವನೆಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯ ರಿಂದ ರಚಿಸಲ್ಪಟ್ಟದ್ದು ದೇವನಾಗರಿಭಾಷೆಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕ ಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗೆಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟಾ ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವಿನೋದಪಟಾದಿ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರಿ ಗ್ರಂಥದ ಎರಡನೇ ಮುದ್ರಣವು ಸಂಡಿತರ ಸಹೋದರರಾದ ವೇ॥ ಬ್ಲಾ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿಸಲಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಡ್ಡ ತಲೆಲೆಗಳಿಂದ ಕೂಡಿದ ಫೋಟೋ ಸೈಜು ೫೦×೧೪ ಬೆಲೆ ೧೫೯ ೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ ೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಪೀಠಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪ ... ೦—೩—೦
" " ಚಿಕ್ಕ ಸೈಜು ಬೆಲೆ ೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .. ೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೨—೬
ಶ್ರೀರೇಣುಕಾಚಾರ್ಯರು ಶ್ರೀಕಂಠರಾಜಾರ್ಯರಿಗೆ ಜಂಧ್ಯನುಪೌತಕ್ಕರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀ ರೇಣುಕಾಚಾರ್ಯರು ವಿಧ್ಯಧಿಕಾರಿ ಪ್ರಾರ್ಥನೆಯಂತೆ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .... ೦—೧—೦
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೬
ಶ್ರೀಮದ್ರಂಭಾಪುರೀ ವೀಠಾಧೀಶ್ವರ ಜಗದ್ಗುರು ಶಿವಸಿದ್ಧಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ . ೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ವಹಸ್ತದಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪದೇಶಿಸುವ ಫೋಟೋ ೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ಕ್ಕೆ ೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ಕ್ಕೆ ೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸ್ವಹಸ್ತದಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು .. ೦—೩—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ) ---- ---- ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ---- ೧ ಆಣೆ
ಪಂಚವಿಂಶತಿ ಪ್ರಶ್ನೆ ಪ್ರಕಾಶ (೫ನೆಯ ಆವೃತ್ತಿ) ---- ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ ---- ೧ ಆಣೆ
ಶ್ರೀಹಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ) ---- ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ---- ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ---- ---- ೨ ಆಣೆ
ಶಿವಶಕ್ತಿವಿಲಾಸ ---- ---- ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ---- ೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ---- ---- ೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) ---- ೩ ಆಣೆ
ಬಸವಾದಿಪ್ರಮಥಸ್ತವಪರ್ಷಣ (೫ನೆಯ ಆವೃತ್ತಿ) ---- ೩ ಆಣೆ
ಪಂಚಾಚಾರ್ಯಪ್ರಕಾಶ ---- ---- ೩ ಆಣೆ
ಪಂಚಾಚಾರ ಪ್ರಕಾಶಿಕಾ ---- ---- ೩ ಆಣೆ
ಶ್ರೀಗುರುತತ್ಪ್ರಪದಗಳು (೩ನೆಯ ಆವೃತ್ತಿ) ---- ೩ ಆಣೆ
ಶ್ರೀಪಶಿಪ-ಡಿತಾರಾಧ್ಯರ ಕಾಲನಿರ್ಣಯ ---- ---- ೪ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ) ---- ---- ೪ ಆಣೆ
ಲಿಂಗಧಾರಣವಿಧಿ ---- ---- ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ---- ---- ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ---- ---- ೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ ೪ ಆಣೆ
ವೈದಿಕವಾಙ್ಮಯರಹಸ್ಯ ---- ---- ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ---- ೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ) ---- ೬ ಆಣೆ
ಸನ್ಯಾಸಾಶ್ರಮವಿಮರ್ಶತತ್ಪ್ರತ್ಯಸ್ಥಿರೀಕರಣ (೩ನೆಯ ಆವೃತ್ತಿ) ---- ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾಠ. ಚಿಕ್ಕಸೈಜು) ---- ೮ ಆಣೆ
ತಿಂತ್ರೈಷ್ಟಕರಣಭಾಷಾ (ಸಂಸ್ಕೃತ) ---- ---- ೮ ಆಣೆ
ವೀರಶೈವಮಹಾತ್ಮರು ---- ---- ೮ ಆಣೆ
ಬಸವಧ್ಯಾಂತದಿವಾಕರ (೨ನೆಯ ಆವೃತ್ತಿ) ---- ---- ೮ ಆಣೆ
ಆಗಮಪರಿಜ್ಞಾನ ---- ---- ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ ---- ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ನಕ್ಷತ್ರಮಾಲಿಕಾ ೮ ಆಣೆ
ಕನ್ನಡ ನ್ಯಾಯಶತಕಮ್ ---- ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ---- ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ---- ---- ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ .. ೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .. .. ೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) .. ೧ ರೂ
ವಿವೇಕಮುಕ್ತಾವಳಿ ---- ---- ---- ೧ ರೂ
ವಿಚಾರಸಾರಾವಳಿ .. .. .. ೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ---- ೧ ರೂ
ವೈದಿಕಶಿವಪೂಜಾವಿಧಿ (ವೈದಿಕಶ್ಲೋಕಯುಕ್ತವಾದುದು. ೩ನೆಯ ಆವೃತ್ತಿ) ೧॥ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್ ---- ೧॥ ರೂ.
ಶಿವಾಗಮಸಂಗ್ರಹ (ಪಂಚಸ್ಥಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು) ೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ---- ೨ ರೂ
ವೀರಶೈವರಕ್ಷೆ (೩ನೆಯ ಆವೃತ್ತಿ, ೭೦ ಮಹತ್ವದ ಫೋಟೋಗಳಿರುವುದು ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ---- ೩॥ ರೂ.
A brief life-sketch of Pandit Sri Kashinatha Shastr (English) 6 A
The Philosophical Aspect of Virasaivism (English) .. 8 As.
Speeches by Pandit Shri Kashinatha Shastriji (English) 12 As
ಲಿಂಗಾಚಾರಚಂದ್ರಿಕಾ (ಉರ್ದು) ೩ ಆ.
ವೀರಶೈವರು (ಮರಾಠಿ) .. .. ರೂ. ೧-೮-೦
ಮಹಾಗಣಾಧಿಪತಿಸ್ತವ (ವೀರಶೈವಮಾತ್ರ-ಉರ್ದು) ... ೧ ಆ
ಸಂಧಿಕಿಶೋರಕಾರಿಕಾ (ಉರ್ದು) .. .. .. ೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಲಾತನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ವರತರಶ್ರೀಸಂತಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಷಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೮ ಆ.

ಸಂಪುಟ ೩೮] ಸೋಮವಾರ ಶಾ॥ ೯ನೇ ಆಗಸ್ಟ್ ೧೯೩೫ [ಸಂಚಿಕೆ ೧೪

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ೧೦೮ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀವೀರಗಂಗಾಧರರಾಜೇಂದ್ರ ಶಿವಾಚಾರ್ಯ
ಮಹಾಸ್ವಾಮಿಗಳವರ

ಅಡ್ಡಪಲ್ಲಕ್ಕಿಮಹೋತ್ಸವ

ಗದಗ

ಧಾರವಾಡ ಡಿ॥ ಗದಗ ಪಟ್ಟಣದಲ್ಲಿಯ ಭಕ್ತಾದಿಗಳ ಕೋರಿಕೆಯ ಮೇರೆಗೆ ರಂಭಾಪುರೀ (ಬಾಳೇಹಳ್ಳಿ) ಜಗದ್ಗುರು ಶ್ರೀ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವವು ಸಕಲ ಬಿರುದಾವಳಿಗಳೊಡನೆ ತಾ॥ ೧೨-೮-೧೯೩೫ ನೇ ಗುರುವಾರ ದಿನಸ ವೈಭವದಿಂದ ನಡೆಯುವುದಾಗಿದೆ. ಈ ದಿವ್ಯಮಹೋತ್ಸವಕ್ಕೆ ಸಮಸ್ತ ಸದ್ಭಕ್ತರೂ ಆಗಮಿಸಿ ಗುರುಪುಂಗವರ ದರ್ಶನಾಶೀರ್ವಾದಗಳನ್ನು ಪಡೆದು ಧನ್ಯಾತ್ಮರಾಗಬೇಕೆಂದು ವಿನಂತಿ.

ತಾ॥ ೬—೮—೧೯೩೫ ಭಕ್ತಮಂಡಳಿ, ಗದಗ.

ಶ್ರೀರಂಭಾಪುರಿ ಜಗದ್ಗುರುಗಳವರ ಶುಭಾಗಮನ ಗದಗ

ಭಕ್ತೋದ್ಧಾರಕ್ಕಾಗಿ ಮಹಾರಾಷ್ಟ್ರ ಪ್ರಾಂತದಲ್ಲಿ ಸರ್ಕೀಟು ಮಾಡುತ್ತಿರುವ ರಂಭಾಪುರಿ ಜಗದ್ಗುರು ಶ್ರೀ ವೀರಗಂಗಾಧರರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು, ಸೊಲ್ಲಾಪುರ, ಬಾರ್ಸಿ, ಪರಳಿ, ಪರಾಂಡಾ ಮುಂತಾದ ಕಡೆಗಳಲ್ಲಿ ರಾಜಮರ್ಯಾದೆಯುತವಾದ ಅಡ್ಡಪಲ್ಲಕ್ಕಿ ಮಹೋತ್ಸವವನ್ನೂ ಭಕ್ತಾದಿಗಳ ಆದರಾತಿಥ್ಯವನ್ನೂ ಸ್ವೀಕರಿಸಿಕೊಂಡು ಧರ್ಮೋಪದೇಶಮಾಡಿದಿಗೆ ಪ್ರಯಾಣಕಾರ್ಯವನ್ನು ಮುಕ್ತಾಯಗೊಳಿಸಿ ಶ್ರೀ ಜಗದ್ಗುರು ಪಂಚಾಚಾರ್ಯರು ಆಗಮಿಸಿದ್ದ ಗದಗ ಪಟ್ಟಣಕ್ಕೆ ಇದೇ ಜಯನಾಮ ಸಂವತ್ಸರದ ಶ್ರಾವಣ ಶು॥ ೧ ಶುಕ್ರವಾರ (ತಾ॥ ೩೦ ೭-೩೫) ದಿವಸ ಅಲ್ಲಿಯ ವೀರಶೈವ ಮಹಾಜನಗಳ ಪ್ರಾರ್ಥನೆಯ ಮೇರೆಗೆ ಆಗಮಿಸಿದರು ಶ್ರೀಮಹಾಸನ್ನಿಧಿಯ ಶ್ರಾವಣಮಾಸದ ವಿಶೇಷ ಪೂಜಾನುಷ್ಠಾನಗಳು ಸಂಸ್ಥಾನ ಮಠದ ಪದ್ಧತಿಯಂತೆ ಇಲ್ಲಿಯೇ ನೆರವೇರುತ್ತಿರಲಿನೆ ಶ್ರೀ ಮಾಳೇ ಕೊಪ್ಪದ ರುದ್ರಯ್ಯನವರ ನೂತನವಾದ ಗೃಹದಲ್ಲಿ ಮಹಾಸನ್ನಿಧಿಯು ವಿರಾಜಮಾನವಿದಿಗೆ ಭಕ್ತ ವೃಂದವು ಆಗಮಿಸಿ ದರ್ಶನಪಡಿಗಿಗಳಾಗಿ ಗುರುಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

ಓರ್ವ ಗುರುಭಕ್ತ

ಗೃಹಪ್ರವೇಶೋತ್ಸವ ಮುಳಗುಂದ

ಧಾರವಾಡ ಡಿ॥ ಗದಗ ತಾಲ್ಲೂಕ ಪೈಕಿ ಮುಳಗುಂದ ಗ್ರಾಮವಾಸಿಗಳಾದ ಶ್ರೀ ಬಳ್ಳಾರಿ ಬುದ್ಧಿವಂತಪ್ಪನವರು ತಾವು ಕಟ್ಟಿಸಿದ ನೂತನ ಗೃಹದ ಪ್ರವೇಶೋತ್ಸವವನ್ನು ಇದೇ ಜಯನಾಮ ಸಂವತ್ಸರದ ಶ್ರಾವಣ ಶು॥ ೬ ಬುಧವಾರ (ತಾ॥ ೪-೮-೩೫) ದಿವಸ ಶ್ರೀಗ ಜ॥ ಬ್ರ॥ ಗಂಗಾಧರಶಿವಾಚಾರ್ಯ ಪಟ್ಟಾಧ್ಯಕ್ಷ ಹಿರೇಮಠ ಸಾ॥ ದೊಟ್ಟಗವಾಡ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿಸಿದರು ಅಂದು ಶ್ರೀಜಗದ್ಗುರೋತ್ತುಂಗಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಹಾರುದ್ರಾಭಿಷೇಕ ಆಮ್ಮೋತ್ತರ ಬಿಲ್ವಾರ್ಚನೆ ಮಹಾಮಂಗಳಾರತಿ ನಡೆದಬ್ಬಳಿ ಹೊಸದಾಗಿ ಕಟ್ಟಿಸಿದ ತಮ್ಮ ಮಹಾಶಿಷ್ಯಗಳ ಗದ್ದಿಗೆ ಗಳಿಗೂ ರುದ್ರಾಭಿಷೇಕ ಅಮ್ಮೋತ್ತರ ಬಿಲ್ವಾರ್ಚನೆ ಮಂಗಳಾರತಿ ಮೊದಲಾದ ಕಾರ್ಯಗಳು ವಿಧಿಪೂರ್ವಕ ಜರುಗಿದನಂತರ ನೂತನ ಗೃಹದಲ್ಲಿ ಮಹಾಗಣಾರಾಧನೆಯು ನಡೆದು ಸರ್ವರಿಗೂ ತೃಪ್ತಿಯನ್ನುಂಟುಮಾಡಿತು ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀ ಬುದ್ಧಿವಂತಪ್ಪನವರಿಗೆ ಆಯುರಾರೋಗ್ಯಧನಾದಿಗಳನ್ನಿತ್ತು ಅವರ ಕುಟುಂಬವರ್ಗವನ್ನು ಕಾಪಾಡಲೆಂದು ಬೇಡುತ್ತೇನೆ.

ಓರ್ವ ಉತ್ಸವಭಾಗಿ

ಪಂಚಾಚಾರ್ಯಪ್ರಭಾ

೧೯೫೪ ನೆಯ ಆಗಸ್ಟ್ ತಾ॥ ೯ ನೇ ಸೋಮವಾರ

ಪಂಚಾಕ್ಷರಮಂತ್ರೋತ್ಪತ್ತಿ

ಪಾರ್ವತಿಯ ಪ್ರಾರ್ಥನೆಯಂತೆ ಪರಶಿವನು ಜಗನ್ಮಾತನಾದ ಪಂಚಾಕ್ಷರಮಂತ್ರೋತ್ಪತ್ತಿಪ್ರಕಾರವನ್ನು ಸ್ವರೂಪ ಕಲ್ಯಾಣಕ್ಕಾಗಿ ಹೀಗೆ ವಿವರಿಸಿದನು

ದೇವಿಯೇ, ಕೇಳು ಕಲ್ಪದ ಆದಿಯಲ್ಲಿ ಶಂಭು ಪ್ರಕಾಶನನ್ನು ಸೃಷ್ಟಿಸಲು ಉದ್ದೇಶಿಸಿದನು ಅದಕ್ಕಾಗಿ ಮಾಯೆಯಿಂದ ತಾನೇ ಪಂಚಮಾಪಾತ್ಮಕವಾದ ಒಂದು ಶರೀರವನ್ನು ಧಾರಣಮಾಡಿದನು. ಕೇಜಸ್ಸಿನಿಂದ ಕೂಡಿದ ಬೇರೆ ಬೇರೆ ಬಣ್ಣಗಳ್ಳ ಇದ್ದು ಮುಖಗಳು ಕ್ರಮವಾಗಿ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಮತ್ತು ಊರ್ಧ್ವ ಎಂಬ ಏಳು ಸ್ಥಾನಗಳನ್ನು ಪಡೆದವು ಎಲ್ಲ ಮುಖಗಳು ಮೂರು ಕಣ್ಣುಗಳಿಂದಲೂ ಚಂದ್ರಕಲೆಯಿಂದಲೂ ಕೂಡಿದ್ದವು ತತ್ಪುರುಷ ತತ್ಪುರುಷವೆಂಬ ಹೆಸರಿನಿಂದ ಸೌಮ್ಯವಾಗಿ ಬ್ರಹ್ಮಚಿಂದಸಂತೆ ಕಾಂತಿಯುಕ್ತವಾದ ಮಂದಸಾನಿಂದ ಕೂಡಿದ ತುಂಬಿದಿಂದ "ನ"ಕಾರಸ್ವರೂಪನೂ ವಿಶಾಸ್ತ್ರಸನೂ ಆದ ಸೃಜನ ಪಕಿಯು ಉದ್ಭವಿಸಿದನು ಆ ವಿಂದುಸ್ವರನಿಂದಲೇ ಸ್ಪಿರವಾದ ಸೃಷ್ಟಿಯು ಸೃಷ್ಟನಾಯಿತು.

ಅನಂತರ ಕೂರವೊಡೆಗಳಿಂದಲೂ ಭಯಂಕರವಾದ ಹುಬ್ಬುಗಂಟುಗಳಿಂದಲೂ ಪ್ರಜ್ವಲಿಸುತ್ತಿರುವ ಖಘೋರ ನಾಮಕನಾದ ಇಂದ್ರನೀಲವರ್ಣಯುಕ್ತವೂ ಆದ ಮುಖದಿಂದ "ಮ"ಕಾರ ಸ್ವರೂಪನಾದ ಸುರಾಚಿ ಸಂಜ್ಞಕ ನಾದ ರುದ್ರನು ತ್ರಿಶೂಲಪಾಣಿಯಾಗಿ ಗೌಲಚರ್ಮಾದನು

ಶರದೃತುವಿನ ತಾವರೆಯಂತೆ ಕಾಂತಿಯುತವಾದ ನಾನಾ ದೇವವಿಮಾನಗಳಿಂದ ಸುಂದರವಾದ "ಶಿ"ಕಾರ ಸ್ವರೂಪನಾದ ಸಂಪಾಸ್ಯರೂಪನಾದ ವಿಷ್ಣುವು ಪ್ರಕಟಿಸಿ ನಾದನು. ಆ ವಿಷ್ಣುವಿನಿಂದ ಸೃಷ್ಟಾದ್ಯಧಿಯಿಲ್ಲ ಅಖಂಡ ಜಲರಾಶಿಯು ಸೃಷ್ಟನಾಯಿತು

ಪದ್ಮರಾಗವೈಡೂರ್ಯಗಳಂತೆ ಕಾಂತಿಯುಕ್ತವಾಗಿ ಸಮ್ಯೋಜ್ಞಾತನಾಮಕನಾದ ಮುಖದಿಂದ "ನ"ಕಾರರೂಪನಾದ ಜಪಮಾಡುವವರ ವ್ಯಾಪಾರೂಪಿಯಾದ ನಾಯುವು ಉತ್ಪತ್ತಿಸಂಜ್ಞಕನಾಗಿ ಪ್ರಾದುರ್ಭವಿಸಿದನು.

ಪೂರ್ಣಚಂದ್ರಸಂಕಾಶಂತೆ ಬೆಳಗುವ ಈಶಾನನಾಮಕ ವಾದ ಮುಖದಿಂದ 'ಯ'ಕಾರರೂಪನಾದ ಆಕಾಶವೈನತೆ ಯೆಂಬಸಿದ ಮಹೇಶ್ವರಾಂಶನಾದ ಸದಾಶಿವನು ಪ್ರಕಟ ನಾದನು ಅಂತು ಆದೇ ಕೊನೆಯ ಮುಖದಿಂದ ಸರ್ವಾ ಧ್ವವಾಚಕನಾದ "ಓ"ಕಾರವೂ ಉದ್ಭವನಾಯಿತು.

ಹೀಗೆ ಐದು ನಾದಗಳುಳ್ಳವಾದ ಶಿವನ ಮುಖಗಳಿಂದ ಪಂಚೀಬ್ರಹ್ಮರೂಪರಾದ ಬ್ರಹ್ಮ, ವಿಷ್ಣು, ಮಹೇಶ್ವರ, ಸದಾಶಿವ ಮತ್ತು ಈಶ್ವರರು ಉತ್ಪನ್ನರಾದರು ಸೃಷ್ಟಿ, ಪಾಲನೆ, ಸಂಹಾರ, ತಿರೋಧಾನ ಮತ್ತು ಅನುಗ್ರಹ ರೂಪವಾದ ಕಾರ್ಯಗಳಲ್ಲಿ ನಿರತರಾದರು ಹೀಗೆ ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದ ಪರಮೇಶ್ವರನ ಸ್ವರೂಪವೇ ಪಂಚಾಕ್ಷರಮಂತ್ರವು. ಈ ಪಂಚಬ್ರಹ್ಮಮೂರ್ತಿಗಳೂ ಪೃಥ್ವಿ, ಆಪ್ಪ್ಯ, ತೇಜಸ್ಸು, ವಾಯು, ಆಕಾಶತತ್ವ ರೂಪವಾದ ಪಂಚಭೂತಗಳಿಂದ ಆಯಾ ವರ್ಣಾನು ಗುಣವಾಗಿ ಸೃಷ್ಟಿಸಂಹಾರಗಳನ್ನು ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಮತ್ತು ಈಶಾನ ರೂಪವಾದ ಐದು ಮೂರ್ತಿಗಳೂ ಪಶುಗಳೆನಿಸುವರು. ಇವರುಗಳಿಗೆ ಅಧಿಪತಿಯು ಆ ಮಹೇಶ್ವರನು ಪ್ರಣವ ರಹಿತ ಪಂಚಾಕ್ಷರಿಯು ಅರ್ಥವೇ ಇದು. ಇದರಲ್ಲಿಯೇ ವರ್ಣಕ್ರಮಾನುಸಾರ ಈಶ್ವರರು ಪ್ರಕಟವಾಗುವರು. ಎಲ್ಲ ವರ್ಣಗಳಿಗೂ ಶಿವನೇ ಒಡೆಯನು. ಅಂದರೆ ಓಂಕಾರಸ್ವರೂಪವು ಶಕ್ತಿರೂಪಿಯು ಮಂತ್ರದ ಮಧ್ಯಗತ ವಾದ ಪಂಚಾಕ್ಷರ ಮಂತ್ರ ವಿದ್ಯೆಯು ಇವೇ ಆಗಿವೆ. ಈ ತತ್ವವನ್ನು ತಿಳಿದು ಪರಶಿವನ ಸ್ವರೂಪವನ್ನೇ ಪ್ರತಿ ಬಿಂಬಿಸುವ ಪಂಚಾಕ್ಷರ ಮಹಾಮಂತ್ರವನ್ನು ಜಪ ಮಾಡುತ್ತ ಶಿವಸ್ವರೂಪನನ್ನು ಹೃದಯದಲ್ಲಿ ಧಾರಣ ಮಾಡುವವೇ ಮಾನವನ ಜನನಮರಣರಹಿತ ಮುಕ್ತಿಗೆ ಸಾಧನವು. ಈ ಪಂಚಾಕ್ಷರಮಂತ್ರದ ರಾಜಸ್ವರೂಪನನ್ನು ಸರ್ವರೂ ಗುರುಮುಖದಿಂದ ವಿನಯವಾಗಿ ಗೃಹಿಸಿ ಅಂಗ ನ್ಯಾಸಪೂರ್ವಕವಾಗಿ ಶ್ರದ್ಧಿಯಿಂದ ಸಮಸ್ತ ತತ್ವಸ್ವರೂಪ ನಾದ ಪರಮಾತ್ಮಸ್ವರೂಪವೇ ಈ ಮಂತ್ರರಾಜನೆಂದು ಧ್ಯಾನಿಸಿ ಧಾರಣಮಾಡಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು ಮುಕ್ತಜೀವಿಗಳಾಗಬೇಕೆಂದು ಆಶಿಸುತ್ತೇವೆ

ಪತ್ರವ್ಯವಹಾರ

[ಜಾತ್ಕೀದಾರರು ಅಧ್ಯಾಯ ಪಡುವ ಲೇಖನಗಳಿಗೆ ಪತ್ರಕಾರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಶ್ರಾವಣಮಾಸದ ಪೂಜೋತ್ಸವ ಶಿಗಡಿ

ಬೆಳಗಾಂವ ಜಿಲ್ಲಾ ಬೈಲಹೊಂಗಲ ತಾಲೂಕ ಪೈಕಿ ಶಿಗಡಿ ಗ್ರಾಮದ ಅಧ್ಯಾತ್ಮರದಲ್ಲಿ ಶ್ರೀ ಚರಮೂರ್ತಿ ಸ್ವಾಮಿಗಳವರಿಂದ ಇದೇ ಶ್ರಾವಣದ ಆರಂಭದಿಂದ ಮಾಸಾಂತ್ಯದವರೆಗೆ ಶ್ರೀ ಗದ್ದುಗೇಶ್ವರರಿಗೆ ರುದ್ರಾಭಿಷೇಕ ಸಾಯಂಕಾಲ ಪ್ರವಚನ ಭಜನೆಗಳು ನಡೆಸಲ್ಪಡುತ್ತವೆ ಸರ್ವರೂ ಆಗಮಿಸಿ ಧರ್ಮಲಾಭಗಳಿಂದು ಕೋರುವ

ಒರ್ವ ಕಾರ್ಯಭಾಗಿ ಶಿಗಡಿ.

ಶ್ರಾವಣಮಾಸದ ಪೂಜೋತ್ಸವ ಯಡಗೂರಿಂದ ವ್ಹಾಟೆ

ಸ್ತ್ರಿಯಾ ಸಂಸಾರಶಬ್ದೇ! ಜಗತ್ಪಿತನಲ್ಲಿ ನೂರಾನ ಜೀವಿಯು ಪೆಸ್ಪನೆಂಬ ನದನು ಶಾಸ್ತ್ರ, ಪುರಾಣ, ಇತಿಹಾಸಗಳು ಘೋಷಣೆಯಾಗಿ ಸಾರುತ್ತಿವೆ. ಒಂದು ಗ್ರಾಮ ದಿಂದ ಮತ್ತೊಂದು ಗ್ರಾಮಕ್ಕೆ ನಾವು ಕೆಲಸಚೇಕಾದರೆ ಛಧವಾ ಒಂದು ಊರಿಂದ ಮತ್ತೊಂದು ಊರಿಗೆ ಮಾಲನ್ನು ಸಾಗಿಸಬೇಕಾದರೆ ಎತ್ತಿನ ಗಾಡಿಗಳ ಸಾಧನವು ಬೇಗೆ ಬೇಕೋ ಹಾಗೆ ಈ ಮಾನವ ಜೀವ ನವ್ನೂ ಮುಕ್ತಿಮಂದಿರಕ್ಕೆ ಸಾಗಿಸಬೇಕಾದರೆ ಪೂಜಾ ಸಾಧನವು ಅವಶ್ಯ ಬೇಕೇಬೇಕಾಗುವದು ಪೂಜೆಯ ಫಲದಿಂದ ಕುಬೇರನು, ರಾವಣನು, ಜಯರಾಜನು, ವಿಷ್ಣುವು. ನ್ಯೆಕಂಡುಮಹಾಮುನಿಯು ದಿವ್ಯಫಲಗಳನ್ನು ಪಡೆದರು ಇದರಿಂ ಸಹಸ್ರಾರು ಉದಾಹರಣೆಗಳಿರು ತ್ತವೆ. ಆದ್ದರಿಂದ ಪ್ರತಿಯೊಬ್ಬರೂ ಪೂಜೆಗೂ ಅನುಕೂಲ ಸಮಯವನ್ನೊಂದು ಬಾಸಾರಿಯಿಂದ ಬಂದ ಈ ಶ್ರಾವಣ ಮಾಸವು ಸರ್ವರಿಗೂ ಶ್ರೇಷ್ಠವಾಗಿದೆ. ಈ ತಿಂಗಳಲ್ಲಿ ಜೀವಾಭ ಗಾರರಿಗೂ, ವ್ಯಾಪಾರಿಗಳಿಗೂ, ಸ್ವಾಮಿ ಗಳಿಗೂ, ಸಾರಶಾಲಾ ವಿದ್ಯಾರ್ಥಿಗಳಿಗೂ, ಗುರುಪುಂಗವ ರಿಗೂ ತಕ್ಕ ಸಮಯವಾಗಿದ್ದರಿಂದ ಸರ್ವರೂ ಈಗ ಸ್ವಾಸ್ಥಸಾಗಿರುವ ಈ ತಿಂಗಳಲ್ಲಿ ನಿತ್ಯನೈಮಿತ್ತಿಕಾದಿ ಕರ್ಮಗಳಿಂದಿಗೆ ಪೂಜೋತ್ಸವಾದಿಗಳನ್ನೂ ಕ್ರಮಬದ್ಧ ವಾಗಿಟ್ಟುಕೊಂಡು ಶಿವಸಿದ್ಧಿಗೆ (ಮುಕ್ತಿಮಂದಿರಕ್ಕೆ) ತೆರಳಬೇಕೆಂದು ಹಾರೈಸುತ್ತೇವೆ

ಇದೇ ಶಾಸ್ತ್ರಸಮ್ಮತವಾದ ಮಾರ್ಗದಂತೆ ವೇ॥ ಬ್ರಃ ಶ್ರೀ॥ ಸಿದ್ಧಾಂತಿ, ಜ್ಯೋತಿಷ್ಯಾಚಾರ್ಯ, ಜ್ಯೋತಿ ರ್ಮಾರ್ತಾಂಡ, ವೈದಿಕವಿದ್ಯಾವಿಧಿಗಳೂ, ಯಡಗೋಡ ಪ್ಲಾಂಟೆನ ಪಾಕಶಾಲಾಧ್ಯಾಪಕರೂ, ಯಡಗೋಡ ಪಂಚಾಂಗಕರ್ತರೂ ಆದ ರುದ್ರಾರಾಧ್ಯಶಾಸ್ತ್ರಿಗಳು ಜನನ ನಾಳುಮಕ್ಕೆ ಇನ್ನು ಈಗ ೧೪ ವರ್ಷಗಳಿಂದಲೂ ಈ ಶ್ರಾವಣಮಾಸದಲ್ಲಿ ಶ್ರೀ ರುದ್ರಾಭಿಷೇಕವನ್ನು ನಡೆಯು ಸುತ್ತಾ ಬಂದಿರುವರಲ್ಲದೆ ಆ ತಿಂಗಳಲ್ಲಿ ರೇಣುಕವಿಜಯ ಪುರಾಣ, ಜನಪದಪುರಾಣ, ಶರಣಲೀಲಾಮೃತ, ಸಿದ್ಧಲಿಂಗ ವಿಜಯ, ಪ್ರಭುಲಿಂಗಲೀಲೆ, ಪಡ್ಡಲಪುರಾಣ, ದೇವಿ ಪುರಾಣ ಇತ್ಯಾದಿ ಅನೇಕ ಪುರಾಣಗಳನ್ನೂ ಸಹ ನಡಿಸಿ ತಮ್ಮಿಂದಾಗುವ ಸಮ್ಮೇಧಯನ್ನು ಜನಗಳಿಗೆ ಕೊಡುತ್ತಾ ಬಂದಿದ್ದಾರೆ. ಇದರಂತೆ ಸರ್ವರೂ ಆಶಿಸಿ ಈಶಕ್ಕೆ ಪಾತ್ರರಾಗಬೇಕೆಂದೇ ನಮ್ಮ ವಿನಂತಿಯು.

ಆದರೆ ಶ್ರೀ ರುದ್ರಾರಾಧ್ಯಶಾಸ್ತ್ರಿಗಳು ಆತ್ಮೀಯ ಗುರು ಸೇವೆಯನ್ನು ಮಾಡಿರುವುದಲ್ಲದೆ ಆ ಗುರೂಪದೇಶದಂತೆ ಧರ್ಮಾರ್ಥದ ಎತ್ತೋ ಕಾರ್ಯ ಮಾಡಿರುವರು. ಅದರಲ್ಲೂ ಈಗ ೬-೭ ವರ್ಷಗಳಿಂದ ಜೋತಿಷ್ಯ-ವೈದಿಕ ಪಾಠಶಾಲೆಯೊಂದನ್ನು ವಿರ್ವಹಿಸಿಕೊಂಡು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ವತಃ ಮುಂಜಿಯಲ್ಲಿ ಊಟಕ್ಕೆ ಕೊಟ್ಟು, ಧರ್ಮಾರ್ಥಪಾತಕೇಳುತ್ತಾ ಬಂದಿರುತ್ತಾರೆ ಅನ್ನದಾನ, ವಿದ್ಯಾದಾನಗಳನ್ನೂ ಸಸ ಮಾಡುತ್ತಲಿರುವ ಇವರ ಮಾರ್ಗದಂತೆ ಜಪಜೀವನವು ಅನ್ನದಾನ, ವಿದ್ಯಾದಾನ, ಗುರುಸೇವೆ, ಪೂಜೋತ್ಸವ ಇತ್ಯಾದಿಗಳಲ್ಲಿ ಮನಸ್ಸನ್ನಿಟ್ಟು ಮನಸ್ಸಿನ ಮೈಲಿಗೆಯನ್ನು ಪೀಗಿ ದಯಾಳುವಾದ ಜಗದೀಶ್ವರನ ಕೃಪೆಗೆ ಪಾತ್ರರಾಗ ಬೇಕೆಂದು ಶ್ರಾರ್ಥಿಸುತ್ತೇನೆ.

ನೆಕ್ಕೆರಿ,
ಪಂಡಿತ ವಿಶ್ವಗುರು ವಾಚಸ್ಪತಿಲಯ

ಶ್ರೀ ರೇಣುಕವಿಜಯ ಮಹಾಪುರಾಣ ಪ್ರಾರಂಭ ಗದಗ

ಧಾರವಾಡಜಿಲ್ಲಾ ಗದಗ ಸಿಟಿ ದಿನಾಂಕ ೧೫-೮-೫೪ ರವಿವಾರ ದಿವಸ ಮಾಳೇಕೊಪ್ಪದ ಶ್ರೀ ರುದ್ರಯ್ಯಸ್ವಾಮರ ಗೃಹದಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸೇವಾ ಸಂಘ ಗದಗಬೆಟಗೇರಿಯವರ ನೇತೃತ್ವದಲ್ಲಿ ಶ್ರೀಮದ್ರಂಭಾಪುರೀಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ರೇಣುಕನಿಜಯ ಮಹಾಪುರಾಣ ಪ್ರಾರಂಭ ವನ್ನು ನೆರವೇರಿಸಲಾಗಿದೆ. ಪುರಾಣವನ್ನು ತಿಮ್ಮಾಪುರದ ವೇ॥ ಪಟದದೇವಯ್ಯಸ್ವಾಮಿ, ಹಿರೇಮಠ ಶಾಸ್ತ್ರಿಗಳಿಯವರು ಬಹುಹೃದಯಂಗಮವಾಗಿ ಬೋಧಿಸುತ್ತಿರುವರು. ನಂತರ ಶ್ರೀ ಜಗದ್ಗುರು ಸಾನ್ನಿಧ್ಯದವರ ಧರ್ಮೋಪದೇಶ ವು ನೆರೆದಿರುತ್ತಿರುವುದು ಇಂಥ ಪರಮಪುಣ್ಯ ಪರ್ವ ಕಾಲದ ಪರಮಸೌಭಾಗವನ್ನು ಸರ್ವರೂ ಪಡೆಯು ಬೇಕಾಗಿ ಪ್ರಾರ್ಥನೆ

ಪ್ರತಿದಿನದ ಕಾರ್ಯಕ್ರಮಗಳ ವಿವರವು—

ಪ್ರಾತಃಕಾಲ ೭ ಗಂಟೆಯಿಂದ ೯-೩೦ ರ ವರೆಗೆ ಶ್ರೀಮಜ್ಜಗದ್ಗುರುಗಳವರ ಮಹಾಶಿವಲಿಂಗಕ್ಕೆ ಶ್ರೀ ರುದ್ರಾಭಿಷೇಕವು ಮತ್ತು ಮಹಾಪೂಜೆ ೯-೩೦ ಗಂಟೆ ಯಿಂದ ೧೧-೩೦ ರ ವರೆಗೆ ಶ್ರೀಜಗದ್ಗುರುಗಳವರ್ಯರಮಹಾ ಮಾದಕ್ಕೆ ಸಹಸ್ರವಿಲ್ವಾರ್ಚನೆಯೊಂದಿಗೆ ಪೂಜೆ.

ಮಧ್ಯಾಹ್ನ ೩ ಗಂಟೆಯಿಂದ ೪ ರ ವರೆಗೆ ಭಕ್ತಾದಿ ಗಳಿಗೆ ದರ್ಶನಾಶೀರ್ವಾದಗಳು. ಸಾಯಂಕಾಲ ೭ ಗಂಟೆ ಯಿಂದ ೯ ರ ವರೆಗೆ ಶ್ರೀಮಜ್ಜಗದ್ಗುರು ರೇಣುಕ ತಿವಾ ಚಾರ್ಯರ ಸಮಾಪಾಪುರಾಣಪ್ರವಚನ, ರಾತ್ರಿ ೯ ಗಂಟೆ ಯಿಂದ ೧೦ ರ ವರೆಗೆ ಶ್ರೀಜಗದ್ಗುರುಗಳವರ ಧರ್ಮೋಪ ದೇಶವು, ಈ ಪ್ರಕಾರ ಕಾರ್ಯಕ್ರಮಗಳು ನೆರವೇರುವು ದಲ್ಲದೆ ವಿಶೇಷ ಕಾರ್ಯಕ್ರಮಗಳಿಗೆ ಪ್ರಕಟನೆಗಳನ್ನು ನೋಡಬೇಕಾಗಿ ವಿನಂತಿಯು.

ಮಹಾಚಾರ್ಯ ತತ್ವಪ್ರಕಾಶಕ,
ವೀ. ರು. ಹೊನಮರ

ಶಿವಯೋಗಾನುಷ್ಠಾನಮತ್ತು ಸಿದ್ಧರಾಮೇಶ್ವರ ಪುರಾಣ ಪ್ರಾರಂಭ ಆದೆವಾನಿ

' ತಪ್ಪೋಹಿ ಸೂಲಂ ಸರ್ವಸಾಂ ಸಿದ್ಧೀನಾಂ ಯೆಚ್ಛಗತ್ಯಯೇ " ಎಂಬ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಉಕ್ತಿಯಂತೆ ಸಮಸ್ತ ಸಿದ್ಧಿಗಳಿಗೂ ಆತ್ಮೋದ್ಧಾರಕ್ಕೂ ತಪಸ್ಸೇ ಮೂಲಕಾರಣವಾಗಿರುವುದು. ಪುರಾತರಾದ ಶಿವಯೋಗಿಗಳೂ ಶಿವಶರಣರೂ ತಪಸ್ಸಿನ ಮಹಿಮೆಯನ್ನರಿತು ಆಚರಿಸಿ ಶಿವಾಕ್ಷಾತ್ಕಾರವನ್ನು ಹೊಂದಿ ಜಗತ್ತನ್ನು ಉದ್ಧರಿಸಿರುವರು ಈ ತಪೋನು ಷ್ಠಾನದ ಮಹಿಮೆಯು ಅಸಾಧಾರಣವಾದುದಾಗಿದೆ ಶ್ರೀಮದುಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ಜಂಗಮಕುಲಸಾರ್ವಭೌಮ ಕೈ॥ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಅಷ್ಟೆ ಟಕಳಚಿನಾಸಾಮರ್ಥ್ಯಶಾಲಿಗಳಾದುದು ತಪೋನುಷ್ಠಾ ನದ ಬಲದಿಂದಲೇ ಎಂಬುದು ಜಗತ್ತಿಗೆಲ್ಲ ತಿಳಿದ ವಿಷಯವಾಗಿದೆ. ಇಂತಹ ಶ್ರೇಷ್ಠವಾದ ತಪೋನುಷ್ಠಾನದ ರಹಸ್ಯವನ್ನರಿತ ರಾಯಚೂರು ಜಿ॥ ಸಿಂಧನೂರು ತಾಲ್ಲೂಕು ರೌಡಕುಂದಿ ಹಿರೇಮಠದ ಪರಮತಪೋನಿಧಿ ಗಳೂ ತಿಪ್ಪೋದ್ಧಾರಧುರೀಣರೂ, ಭಾರತೀಯ ಸಿದ್ಧಾಂತ

ಶ್ರೀಕಾ ಸಂಪಾದಕರೂ ಆದ ಶ್ರೀ॥ ಷ॥ ಬ್ರ॥ ಚರಪಟ್ಟಾ
ಧ್ಯಕ್ಷ ಪಂ॥ ತಿರುಳೋಗಿತಿವಾಚಾರ್ಯಸ್ವಾಮಿಗಳವರು
ತಿವರ್ಷದ ಪಡ್ಡತಿಯಂತೆ ತಮ್ಮ ೧೪ ನೇ ವರ್ಷದ
ಯೋಗಾಮುದ್ರಾನ್ವಾನವನ್ನು ಆದವಾಸಿ ನಗರದ
ರೇಶ್ವರ ಸಮಾಜ ಸೇವಾಸಂಘದವರ ಬಿನ್ನಹದ
ೀರಿಗೆ ಕೋಟಿ ಶ್ರೀ ವೀರಭದ್ರದೇವರ ಮಂದಿರದಲ್ಲಿ
ದೇ ಶ್ರಾವಣ ಶು॥ ೫ ಯಿಂದ ಸ್ವಾರಂಭಿಸಿರುವರು
ತಿದಿನ ಪ್ರಾತಃಕಾಲ ೫ ಘೆಂಟೆಯಿಂದ ೧೧ ಘೆಂಟೆಯ
ರೆಗೆ ಇಷ್ಟಲಿಂಗಕ್ಕೆ ಏಕಾದಶ ರುದ್ರಾಭಿಷೇಕ, ಸಹಸ್ರ
ಲ್ಪಾರ್ಚನೆ ಮತ್ತು ಕೋಟಿ ಶ್ರೀ ವೀರಭದ್ರಸ್ವಾಮಿ-ಗೂ
ೀ ರುದ್ರಾಭಿಷೇಕ, ಅಷ್ಟೋತ್ತರಶತಬಿಲ್ವಾರ್ಚನೆ,
ಣಾರಾಧನೆಗಳು ಯಥಾವತ್ತಾಗಿ ಜರುಗುತ್ತಿರುವವು.
ಎಯಂಕಾಲ ೫॥ ಘೆಂಟೆಯಿಂದ ರಾತ್ರಿ ೮ ಘೆಂಟೆ ವರೆಗೂ
ಸಿದ್ಧರಾಮೇಶ್ವರ" ಪುರಾಣ ಪ್ರವಚನವು ಜರುಗು
ದು. ಪ್ರವಚನವನ್ನು ಶ್ರೀ ಸ್ವಾಮಿಗಳವರೇ ಜರುಗಿಸು
ರು ಒಂದೊಂದು ದಿನದ ಮಜಾಪುಜಾ, ಗಣಾ
ಧನೆಗಳನ್ನು ಒಬ್ಬೊಬ್ಬ ಸದ್ಭಕ್ತಮಹಾನ್ನಯರು
ಡೆಯುತ್ತಿರುವರು ಇದಲ್ಲದೆ ಶ್ರೀ ಸ್ವಾಮಿಗಳವರು
ೀರಶೈವ ಧರ್ಮಜಾಗೃತಿಗಾಗಿ ಇನ್ನು ಕೆಲವೆ
ಳಿಗಳಲ್ಲಿ "ಶ್ರೀತ್ರಿಪುರಾಂತ ಮಂಟಪ ಪೂಜಾ"
ಮಾರಂಭವನ್ನು ನೆರವೇರಿಸಿ ಆ ಸಮುದಲ್ಲಿ "ಶ್ರೀ
ಜಗದ್ಗುರು ಪಂಚಾಚಾರ್ಯ ಮಹಾಪಥ" ವೀರಶೈವ
ಸಿದ್ಧಾಂತಿಗಳು ನೆಂದಲಾದವುಗಳನ್ನು ಜರುಗಿಸುವ
ಕ್ಕಂಕಲ್ಪವುಳ್ಳವರಾಗಿರುವರು. ಇವರ ಸಂಕಲ್ಪವ
ರಿತ ಶ್ರೀಮಾನ್ ಡಾನಕೂರ ಅಮೃತಾಪುರದ ಸಣ
ಸದ್ಭಕ್ತಪ್ರಮುಖರಿಯರು ಆ ಕಾಲಕ್ಕೆ ಸ್ವತಃ ೬೩ ಜನ ಸ್ವಾಮಿ
ಗಳಿಗೆ ೬೩ ಗೋವುಗಳನ್ನು ದಾನವಾಗಿ ಕೊಡಲು
ಸ್ಸುಂ ಪ್ರೇರಣೆಯಿಂದ ಒಪ್ಪಿದ್ದಾರೆ ಇದರಂತೆ
ತಿವಾಸಿ ಹಾಲ್ಲಾಳು ಸೆಸಲುಬಂಡೆಯ ಶ್ರೀಮಂತ ರೆಡ್ಡಿ
ತಿವಾನುರೆಡ್ಡಿಗೌಡರು, ಸೋಮಲಾಪುರ ಘಣೇರಪಟ್ಟೆ
ಬಸವನಗೌಡರು, ರೌಡಕುಂದಿ ಪೋ॥ ಪಾ॥ ಸಂಪನ
ಗೌಡರೂ, ಮಾವ್ಲಹಳ್ಳಿ ಮಠದ ವೇ॥ ಬಂಡೆಪ್ಪಸ್ವಾಮಿ
ಗಳೂ, ಶ್ರೀಗಳವರ ಶಿಷ್ಯರಾದ ಕಿಮ್ಮಾವುರದ ವೇ॥
ಅಮರಯ್ಯನವರೂ ಬಳ್ಳಾರಿ ತಾಲ್ಲೂಕು ಬೆಣಕಲ್ಲು
ಗ್ರಾಮದ ಭಕ್ತರೂ ಇನ್ನೂ ಅನೇಕ ಸದ್ಭಕ್ತಮಹೇ
ಶ್ವರರೂಹತ್ತುಮಹಪ್ತನಗಳಂದ ಸೇವಾಸಹಾಯಗಳನ್ನು
ಸಮರ್ಪಿಸಿ ಈ ಮಹಾಕಾರ್ಯವನ್ನು ಪಡೆಸಲು ಸಿದ್ಧ
ರಾಗಿದ್ದಾರೆ ಶ್ರೀ ಸ್ವಾಮಿಗಳವರ ಇಂತಹ ಸಮಾಜ
ಸೇವಾ ರೂಪವಾದ ಕಾರ್ಯದಲ್ಲಿ ಸಮಸ್ತ ಮತೀಯ
ಸದ್ಭಕ್ತಮಹನೀಯರು ಸಹಕರಿಸಿ ಸೇವಾಸಹಾಯಗಳ
ನ್ನಿತ್ತು ಪರಮಿನ ಕೃಪೆಗೆ ಪಾತ್ರರಾಗಬೇಕೆಂದು
ಪ್ರಾರ್ಥಿಸುತ್ತೇನೆ

ಸೆಕ್ರೆಟರಿ
ವೀರಶೈವ ಸಮಾಜ ಸೇವಾಸಂಘ, ಆದವಾನಿ.

ಸದಾಚಾರ ಸ್ತ್ರೀಸಮಾಜದ ಸುವರ್ಣಕಾರ್ಯ
ಸೊಲ್ಲಾಪುರ

ಸೊಲ್ಲಾಪುರ ಸಪ್ತಚಿಣ್ಣದಲ್ಲಿ ಅತ್ಯಾದರ್ಶಮಯವಾದ ಸದಾಚಾರ ಸ್ತ್ರೀಸಮಾಜವು ಪರಮ ತಪೋನಿಧಿಗಳೂ, ಗುರುವರ್ಯ ತಿರೋಮಣಿಗಳೂ ಆದ ತಿನ್ನೈಸ್ಯ ಶ್ರೀಮ
ದುಜ್ಜಯಿನೀ ಸದ್ಧರ್ಮಸಿಂಹಾಸನಾಧಿಷ್ಠಿರ ಶ್ರೀ ೧೦೦೮
ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿ
ಗಳವರ ಕೃಪಾಶಿರ್ವಾದದಿಂದ ಉದಯವಾಗಿದ್ದು
ದರಿಂದ ಅದು ಅಜರಾಮರವೂ, ಅವಿಕಲ್ಪಾಶಯವೂ
ಆದದ್ದೇ ಸರಿ. ಆ ಸಮಾಜದ ಸ್ತ್ರೀಸಮಾಜದವರು
ಇದೇ ತಾ॥ ೧೫-೭-೫೫ ನೇ ದಿವಸ ಶ್ರೀಮದ್ಭಿರಿಂಜಿ
ಸೂರ್ಯಸಿಂಹಾಸನಾಧಿಷ್ಠಿರ ಶ್ರೀ ೧೦೦೮ ಜಗದ್ಗುರು
ವಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿ
ಗಳನ್ನು ಆತ್ಯಾಸಂದದಿಂದ ಬಿನ್ನಹವಿತ್ತು, ಸ್ವಗೃಹಿಸಿ
ದರು. ಅದರಂತೆ ಶುಕ್ರವಾರ ತಾ॥ ೩೦-೭-೫೫ ನೆಯ
ದಿವಸ ಶ್ರೀಮದ್ರುಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು ಪ್ರಸನ್ನವೀರೇಶ್ವರ ವೀರಗಂಗಾ
ಧರ ರಾಜೇಂದ್ರ, ಶಿವಾಚಾರ್ಯಮಹಾಸ್ವಾಮಿಗಳವರೂ
ಶ್ರೀಕ್ಷೇತ್ರ ಉಜ್ಜಯಿನೀಸಿಂಹಾಸನಾಧೀಶ್ವರ ಶ್ರೀ ೧೦೦೮
ಜಗದ್ಗುರು ವಿಶ್ವೈಕ್ಯರಿವಾಚಾರ್ಯಮಹಾಸ್ವಾಮಿಗಳವ
ರಿಗೂ ಆಪೂರ್ವ ಬಿನ್ನಹವಿತ್ತು ಸ್ವಾಗತಿಸಿದರು ಶ್ರೀಮ
ದ್ವೀರಶೈವ ಗುರುಳಿಂಗಜಂಗಮ ಬಹು ವಿಜೃಂಭಣೆಯಿಂದ
ತೀರ್ಥಪ್ರಸಾದ ಕಾರ್ಯಗಳು ನೆರವೇರಿದವು. ಬಳಿಕ
೧೨ ಘೆಂಟೆಯಿಂದ ೩ ಘೆಂಟೆಯವರೆಗೆ ಮಹಾಗಣಾರಾಧ
ನೆಯು ಬಹು ಶ್ರದ್ಧಾಕರವಾಗಿ ಜರುಗಿತು. ಈ ದಿವಸ
ವೆಂತೂ ಇಲ್ಲಿ ಒಂದು ಸಾವಿರಕ್ಕಿಂತ ಮೇಲ್ಪಟ್ಟು, ಕುಲೀ
ನರೂ, ಸುಶೀಲೆಯರೂ ಅಪಂತಕ ಸ್ತ್ರೀಯರು ಕೂಡಿ
ದ್ದರು ಬಳಿಕ ಶ್ರೀಮದ್ವೀರಶೈವಗುರುಕುಲದ ಪ್ರಾಧ್ಯಾ
ಪಕರಾದ ವೇ॥ ಪಂ॥ ನ್ಯಾಯಾರತ್ನಂ ಗಂಗಾಧರಶಾಸ್ತ್ರಿ
ಗಳವರು ಗುರುಕುಲದ ಸಂಕ್ಷಿಪ್ತಯವನ್ನು ಜಗದ್ಗುರು
ಮಹಾಸನ್ನಿಧಿಯಲ್ಲಿ ಅಕ್ಷರಶಃ ಮಂಡಿಸಿದರು ತದನಂತರ
ಶ್ರೀ ಗುರುಜಾಮಿ ಮರಸಟ್ಟಿ ಇನರು ನಮ್ಮ ಸ್ತ್ರೀಸಮಾ
ಜಕ್ಕೆ ಸಮುಪದೇಶವನ್ನು ಆಶೀರ್ವದಿಪಲ್ಲೇಬೇಂದು ಜಗ
ದ್ಗುರುಗಳವರಿಗೆ ನಿವೇದಿಸಿಕೊಂಡ ಬಳಿಕ ಶ್ರೀಕ್ಷೇತ್ರ
ಕಾಶೀ ಜ್ಞಾನಸಿಂಹಾಸನಾಧಿಶ್ವರರು "ಗುರುಭಕ್ತಿ"
ವಿಷಯದ ಬಗ್ಗೆಯೂ ಶ್ರೀಮದ್ರಂಭಾಪುರೀ ವೀರಸಿಂಹಾ
ಸನಾಧೀಶ್ವರರು "ಶ್ರೀ" ವಿಷಯದ ಬಗ್ಗೆಯೂ,
ಜ್ಞಾನೋದಯವಾಗುವಂತೆ ಅಕ್ಷರಿಕೆಯಾಡಿಸಿದರು. ನಂತರ
ಶ್ರೀಮಾನ್ ದುಲಂಗೆ ವಕೀಲ ಇವರು ಉಭಯ ಜಗ
ದ್ಗುರುಗಳವರಿಗೂ ಸಗುಬ್ಬಿ ಪೂಮಾಲೆಗಳನ್ನರ್ಪಿಸಿದರು
ಈ ಎಲ್ಲ ಕಾರ್ಯಗಳಲ್ಲಿ ಅಶ್ಯಂತ ಆಸಕ್ತಿಯಿಂದ ಭಾಗ
ವಹಿಸಿ ತಮ್ಮುಮನೆಯನಗಳಂತೆ ಕಾರ್ಯವಾಡಿದಂಥ
ಶ್ರೀಮತಿ ಗೌರಾಬಾಯಿ ಪಾಟೀಲ, ಶ್ರೀ ಗಂಗಾಬಾಯಿ
ಪಾಟೀಲ ಕುಂ॥ ಸೌ॥ ಗಂಗಾಬಾಯಿ ಗಂಭೀರೆ ಸಿದ್ಧವ್ವ
ಅಪಾಸೆ ತಾನನ್ನ ಸಿಜವ್ಯ ಸಂಕರೀಬಾಯಿ ಚಿಕೇಷಾಡಿ
ಇವರು ಸ್ತುತ್ಯಾರ್ಹರೇ ಸರಿ ಕಡೆಗೆ ಶಾಂತಿಪಾಕದಿಂದ
ಲೂ, ಆಚಾರ್ಯರ ಜಯಕಾರದಿಂದಲೂ ಸಭೆಯು
ಮುಕ್ತಾಯಗೊಂಡಿತು

ನ್ಯಸ್ತಪ್ಪದೆರಿಸಿ, ಸೋಲಾಪುರ

ಅನುಷ್ಠಾನ ಮತ್ತು ಪುರಾಣಪ್ರವಚನ
ಆಮಂತ್ರಣ ಪತ್ರಿಕೆ

ಶಿವಪ್ರೇಮಿಗಳೂ, ಮಾನವ ಹಿತಚಿಂತಕರೂ, ವಿದ್ಯಾ
ನಿಂತರೂ, ತಪಸ್ವಿಗಳೂ ಆದ ಯಲಬುರ್ಗಿ ಧರಣೆಂದರಿಷ
ಹಿರೇಮಠದ ಮತ್ತು ಕಲ್ಯಾಣದ ಪಟ್ಟಾಧ್ಯಕ್ಷ ಶ್ರೀ. ಷ
ಬ್ರ. ಬಸವಲಿಂಗಶಿವಾಚಾರ್ಯಸ್ವಾಮಿಗಳವರು ಗಜೇಂದ್ರ
ಗಡದ ತಮ್ಮ ಶಾಖಾಮಠಶಿವಾಡ ಶ್ರೀ ಗದ್ದಿದ್ಯಾಸ್ವಾಮಿ
ಮಠದಲ್ಲಿ ಜಗತ್ಕಿತಿ ಶಾಂತಿಯು ಸಲುವಾಗಿ ಶಿವ ಮಹಾ
ವ್ರತ (ಅನುಷ್ಠಾನ) ವನ್ನು ಪ್ರತಿನಿಷ್ಠ ಸದ್ಭಕ್ತರುಂತೆ
ಇದೇ ಶಕೆ ೧೮೭೬ ನೆಯ ಜಯನಾಮ ಸಂವತ್ಸರ
ಶ್ರಾವಣ ಶು॥ ೧ (ತಾ॥ ೩೦-೭-೫೪) ರುಕ್ರವಾರದಿಂದ
ಳಗಿ ದಿವಸಗಳ ವರೆಗೆ ಅವಾರವಿಲ್ಲದೆ ಮಾಡುತ್ತಿರುವರು
ಈ ಮಹಾವ್ರತದ ಜೊತೆಗೆ ಪ್ರತಿ ದಿವಸ ಸಾಯಂ
ಕಾಲ ೬-೪೫ ಗಂಟೆಯಿಂದ ಇದೇ ಕಲಿಯುಗದಲ್ಲಿ ಅತಿ
ತಾನಿಂತ ಮಹಿಮೆಗಳನ್ನು ಮಾಡಿ, ಜಗದ್ವಿಖ್ಯಾತರಾಗಿ
ಮೆರೆದ ಕರ್ಮಯೋಗಿ ಸಾರ್ವಭೌಮ ಕಲಬುರಗಿ ಶ್ರೀ
ಶರಣಬಸವೇಶ್ವರ ಪುರಾಣವು ಪೈಥವದಿಂದ ನೆರೆದೀರಿ
ಲ್ಪಡುವದು ರಸಿಕರೂ ಪುರಾಣ ಪ್ರವಚನಪಟುಗಳೂ
ಆದ ವೇ॥ ಶ್ರೀ॥ ಶಿವದೇವಶಾಸ್ತ್ರಿಗಳು ಅಬ್ಬಿಗೇರಿಮಠ
ಸಾ॥ ಹೊಳೆ-ಆಲೂರು ಇವರು ಪುರಾಣವನ್ನು ಹೇಳು
ವರು. ಶಾಂಕಪ್ರಿಯರಾದ ಭಗವನ್ಮಹೇಶ್ವರು ಪೂಜಾನುಷ್ಠಾ
ನೆಕ್ಕೂ ಸುರಾಣ ಪ್ರವಚನಕ್ಕೂ ಆಗಮಿಸಿ ಧನ್ಯರಾಗಿ
ಕರ್ತವ್ಯ ಕಾರ್ಯಕ್ರಮ-ಪ್ರತಿನಿಷ್ಠ ಬೆಳಿಗ್ಗೆ ೪ ಗಂಟೆ
ಯವರೆಗೆ ಅನುಷ್ಠಾನ, ೮ ಗಂಟೆಯವರೆಗೆ ಮಹಾ
ರುದ್ರಾಭಿಷೇಕವು; ಮತ್ತು ಪಾದ ಪೂಜಾದಿಗಳು,
ಮಧ್ಯಾಹ್ನ ಕ್ಕೆ ಪ್ರಸಾದ ವಿನಿಯೋಗವು. ಸಾಯಂಕಾಲ
೬-೩೦ ಕ್ಕೆ ವಿದ್ಯಾಧಿಗಳಿಂದ ವೇದಘೋಷ ಮತ್ತು
ಪ್ರಾರ್ಥನೆ.

ಪಿ. ಸೂ- ಶ್ರೀ ಗದ್ದಿದ್ಯಾಸ್ವಾಮಿ ಪ್ರಾಸಾದಿಕ ಹಿಂದೀ-
ಸಂಸ್ಕೃತ-ವೈದಿಕ-ಜೋತಿಷ್ಯ ಶಿಕ್ಷಣವು ಉಚಿತವಾಗಿ
ಇದೇ ಮಠದಲ್ಲಿ ಕೊಡಿಲಾಗುವದು. ಪ್ರತಿ ಬಟ್ಟ ವಿದ್ಯಾ
ರ್ಥಿಯೂ ಇತರ ಲಾಭ ಪಡೆದುಕೊಳ್ಳಬೇಕು.

ವೀರಶೈವ ಸದ್ಭಕ್ತಮಂಡಳಿ

ಪಾರಮಾರ್ಥಿಕ ವರ್ತಮಾನಗಳು

ಲೇ॥ ಶ್ರೀ ತಿವಕ್ಷಾಕಸ್ವಾಮಿಗಳು ಉಜ್ಜಯಿನೀಮಠ

ಚಿತ್ರದುರ್ಗ
ರುದ್ರಾಕ್ಷಿ

ತಿವನ ತ್ರಿಪುರಸಂಹಾರ ಸಮಯದಿ ಪುಟ್ಟಿದುದು ರುದ್ರಾಕ್ಷಿ "ನಾ ರುದ್ರೆ ರುದ್ರಮಚ್ಚೇತ್" ಎಂಬೋ ಕ್ತಿಯಂತೆ ರುದ್ರನಾಗಿ (ರುದ್ರಾಕ್ಷಿಯನ್ನು ಧರಿಸಿ) ರುದ್ರ ನನ್ನು ಪೂಜಿಸುವದು. ಭಕ್ತಿಯನ್ನು ಬೆಳಿಗಿ ದುರಿತ ಶಮನಗೈಯುವದೇ ರುದ್ರಾಕ್ಷಿ ರುದ್ರಾಕ್ಷಿ ಧರಿಸುವೊಡೆ ರುದ್ರ ಪದವಿ ದೊರೆಯುವುದು, ವಾಯುಶುದ್ಧಿಯಾಯ್ವುದು ಮತ್ತು ಅಶ್ವಮೇಧಯಾಗಫಲವತ್ತು ದೊರೆಯುವುದೆಂದು ಪುರಾಣಶ್ರುತಿಗಳು ಸಾರುತ್ತಿವೆ. ಆದಕಾರಣ ಭವಭಕ್ತರೆ ನ್ನ ದೆ ಮರೆಯದೆ ಧರಿಸಿದರೆ ಭೋಗಮೋಕ್ಷಗಳ ಕೊಡು ನನು ನಮ್ಮ ತಿವಕ್ಷಾಕ ಸಿದ್ಧಲಿಂಗಪ್ರಭು

ತಿವತತ್ವವಲ್ಲಡಿಗ ಮಲಪ್ರಯಮೆಂಬ ತ್ರಿಪುರಿಯ ತ್ರಿಪುರಿವಂ ದಹಿಸಿ ಆತ್ಮಶುದ್ಧಿಗೆ ಕಾರಣನಾಯ್ವರುದ್ರಾಕ್ಷಿ ಬ್ರಹ್ಮಹತ್ಯೋಪಿವಾ ಹಂದಾಲೇ ದುರ್ಮಾಣಿಸ್ಸುಗುರೋಪಿ ವಾ ! ಧಾರಣಾತ್ ರುದ್ರಾಕ್ಷಕಂರೇನ ದೇಹಾಂತೇತು ತಿವಂ ವ್ರಜೇತ್ ॥ ಇಂತು ಆಗಮದ ಹೊರ್ನೆಕ್ತಿ ಸಾರು ತಿದೆ. ವಿಷಮಜ್ವರಾದಿ ಸಾಂಕ್ರಾಮಿಕ ರೋಗಗಳಿಗೆ ಪರಮೌಷಧಿಯಾಗಿಪ್ಪುದು ರುದ್ರಾಕ್ಷಿ ಆದಕಾರಣ ರುದ್ರಾಕ್ಷಿಯು ಮಾನವಜನರ ಮುಕ್ತಿಗೆ ಸಾಧನವಾಯ್ತು ಇಂತಪ್ಪ ರುದ್ರಾಕ್ಷಿಯೇ ಆಭರಣವಾಗಿ ಶೋಭಿಸುತಿರ್ಪನು ನೋಡಾ ನಮ್ಮ ತಿವಕ್ಷಾಕ ಸಿದ್ಧಲಿಂಗಪ್ರಭು.

ಮಂತ್ರ

ಮನದ ಕಲ್ಮಲೆಯ ಹರಿವುದು ಮಂತ್ರ
ಪರತಿವತತ್ವಸ್ವರೂಪಾಗಿಪ್ಪುದು ಮಂತ್ರ
ಪಂಚಮಹಾಪಾತಕನಿರ್ನಾಗುವದುಮಂತ್ರ

ಇಂತಪ್ಪ ತಿವರಹಾಕ್ಷರ ಮಹಾಮಂತ್ರಮಹಿಮೆಯಿಂದ ಸರ್ವಸಿದ್ಧವುರುತನಾಗಿ ಕನ್ನಡ, ಮಹಾರಾಷ್ಟ್ರ ದೇಶ ಗಳಲ್ಲಿ ತಿವಯೋಗಿಯಾಗಿ ಮೆರೆದನು ನೋಡಾ ನಮ್ಮ ತಿವಕ್ಷಾಕ ಸಿದ್ಧಲಿಂಗಸ್ವಭು ಸದ್ಭಕ್ತಸಿಂಹಾಸನಾಧೀಶ್ವರ

ತಿವಪಂಚಾರಕ್ಷನೇ ಸರ್ವವಿದ್ಯೆಯ ಸ್ವರೂಪ ವಾಗಿಪ್ಪುದು. ಸರ್ವತತ್ವಾಸ್ತ್ರಗಳು ವಚಿಬೀಜಪಲ್ಲವ ಮಹಾವೃಕ್ಷದಂತೆ ಅಡಗಿಸಿರವು, ಕರುಣಾಳು ಸನಂದ ಯೋಗಿಯ ಮುಕ್ತಿಪ್ರದಾಯಿನಿಯು ನರಕದಲಿರ್ದ ಅನಂತ ಜೀವಿಗಳು ಮುಕ್ತರಾದರು ನೋಡಾ ಪಂಚ ಜಪಿಸಿದೊಡೆ ಭೋಗಮೋಕ್ಷಂಗಳು ದೊರೆಯುವೆ ? ಇದಕ್ಕೆ ನೀವೇ ಸಾಕ್ಷಿಕಾರಾ ತಿವಕ್ಷಾಕ ಸಿದ್ಧಲಿಂಗಪ್ರಭುವೆ !

ಪುಣ್ಯಾಕ್ಷರಮಂತ್ರಸ್ವರೂಪಿಯೂ ಚಿತ್ಕುಂಡ್ಯಿಯವಾಗಿ ಸರ್ವಸಿದ್ಧಿ ನೆಲೆಗೊಳ್ಳುವುದು ನೋಡಾ ಹಿಂದೊಮ್ಮೆ ತಿವಮಂತ್ರದೇಹಿಯಾದ ಭೃಗುವಿನಂ ಕಚ್ಚಿಲ್ಲೋದ ಪರ್ಸಾಕ್ಕೆ ಮುಕ್ತಿಯಾಯಿತ್ತಾಯ್ತಾ, ಅದೆಂತೊಡೆ— ಸಕ್ಕದುಚ್ಚಾರಮಾತ್ರೇಣ ಸಂಚಾಕ್ಷರ ಮಚಾಮುನೇ ! ಪರ್ಕ್ಷಣಾದುನಿ ಜನಾನಾಂ ಸರ್ವಪಾಪಕ್ಷಯೋಭವೇತ್ ॥ ಇಂತು ರೇಣುಕಗೀತೆ ಸಾರುತ್ತಿದೆ ಆದಕಾರಣ ಭವ ಭಕ್ತರೆಲ್ಲ ಕ್ರಮವರಿತು ಸ್ವರಿಸಿಪೊಡೆ ಭವನೋಗದಿಂ ಕಾಮಾಡುವನು ನೋಡಾ ನಮ್ಮ ತಿವಕ್ಷಾಕ ಸಿದ್ಧಲಿಂಗ ಸ್ವಭು ಯೋಗಿಯು

ಪಾದೋದಕ

ಶ್ರೀಗುರುಜಂಗಮರ ಪಾದವೇ ಪರುಷವಾದಕಾರಣ ಪಾದೋದಕವೇ ಮನದ ತಿರ್ಮಲಕ್ಕೆ ಮೂಲವಾಗಿ ಬೆಂದು ನೋಡಾ ಅನಂತ ಪುಣ್ಯಾರ್ಥತೀರ್ಥದ ಫಲ ಪಾದತೀರ್ಥದಲ್ಲಿಪ್ಪುದುನೋಡಾ, ಇದುಕಾರಣ—

ಅವಿದ್ಯಾ ಮೂಲ ನಾಶಾಯ ಇಷ್ಟಕರ್ಮ ನಿವೃತ್ತಯೇ !
ಜ್ಞಾನೈಶ್ವರ್ಯಸಿದ್ಧಯರ್ಥಂ ಗುರುಪಾದೋದಕಂ ಪಿಬೇತ್ ॥

ಇಂತೆಂದು ರೇಣುಕಗೀತೆ ಸಾರುತಿದೆ ನೋಡಾ ಉದಕವು ಬಿಟ್ಟಿನ ತಾನವು ಹಿಂಗಿಸಿದೊಡೆ ಪಾದೋದಕವು ಭವ ಹಾರವು ಹಿಂಗಿಸುವುದು ನೋಡಾ ಆದಕಾರಣ ತಿವ ಪ್ರಕಾಶ ಸಿದ್ಧಲಿಂಗಪ್ರಭು ಸ್ವರಿಸಿ ಪಾದೋದಕವು ಸೇವಿಸಿ ದವರ್ಗೆ ಮನಕ್ಕಾಂತಿ ದೊರೆವುದು ನೋಡಾ.

ಪ್ರಸಾದ

ದೃಕ್ಕಮಾದಜಗವೆಲ್ಲ ಈಶ್ವರಪ್ರಸಾದವೆನಿಸ್ಪು ಮಾತ್ರ ಪನ ಮನೆನ್ನಿಸಿ ಪ್ರಸಾದ ತೆಗೆ ಪ್ರಸಾದವೇ ಕಾರಣವಾಯಿತ್ತು

ಗುರುವಿನಿಂದ ಬಂದುದು ಶುದ್ಧಪ್ರಸಾದವಾಗಿ ತನುಶುದ್ಧಿಯಪ್ಪುದು ಲಿಂಗಮುಟ್ಟಿ ಬಂದುದು ಸಿದ್ಧಪ್ರಸಾದವಾಗಿ ಮನಶುದ್ಧಿಯಪ್ಪುದು ಜಂಗಮದಿಂದ ಬಂದುದು ಪ್ರಸಿದ್ಧಪ್ರಸಾದವಾಗಿ ಭಾವಶುದ್ಧಿಯಪ್ಪುದು ಇಂತಪ್ಪ ಲಿಂಗಾರ್ಪಿತಚಿತ್ತರೇ ಪ್ರಸಾದಿಗಳಾಗಿ ಸುಖಿಗಳಾದರು ನೋಡಾ ಶಿವಪ್ರಕಾಶ ಸಿದ್ಧಲಿಂಗಪ್ರಭುವೇ!

ಪ್ರಸಾದಿಯಾದೊಡೆ ಗುರುಲಿಂಗಜಂಗಮರು ಹರಿಣಿಂದ ಅಧಿಕರೆಂಬ ಭಾವ ನೆಲಲಿಗೊಂಡಿರಬೇಕು. ಲಿಂಗಕ್ಕಲ್ಲದೆ ಅನ್ಯದೈವಕ್ಕೆಗಡಿರಬೇಕು ಅಂಗನಿಷ್ಠಾವಂತರಿಗಳಿಗೆ ಪ್ರಸಾದಿ ತತ್ವ ಸಿದ್ಧಿಸದು ಅದೆಂತೆಂದೊಡೆ—

ನೈರ್ಮಾಲ್ಯಂ ಮನಸೋ ಲಿಂಗಂ ಪ್ರಸಾದಮಿತಿಕಥ್ಯತೇ।
ತಿವಸ್ಯ ಲಿಂಗೆರೂಪಸ್ಯ ಪ್ರಸಾದೇನಸಿಧ್ಯತಿ ॥ ಇಂತು ಸಿದ್ಧಾಂತಶಿಖಾಮಣಿಯ ವಚನದ ಅಭಿಮತವಾದಕಾರಣ ಲಿಂಗಭೋಗ ಅನರ್ಪಿತ ಲಿಂಗಭೋಗ ಶಿವಾರ್ಪಿತ ಇಂತಪ್ಪ ಶಿವಪ್ರಸಾದಿಯಾದ ನಮ್ಮ ಸದ್ಧರ್ಮಪೀಠಾಧೀಶ ಸಿದ್ಧಲಿಂಗ ಯತಿವರನೆ ಮನೋದ್ವಸ್ಥಿಯಿಂ ಪಡಾರ್ದ ಕೆಡವ ಪ್ರಸಾದವಾಗಿರ್ಪುದನು ಕಂಡು ಅಜ್ಜರಿ ಪಟ್ಟರುಕಣಾ ಭುವಿಭಕ್ತರು

ಆದಕಾರಣ ಪ್ರಸಾದಿಸ್ಥಲ ನಮ್ಮ ಶಿವಪ್ರಕಾಶಸ್ಥಲಂ ಸಿದ್ಧಲಿಂಗಶಿವಯೋಗಿಗೆ ನಂದಿತ್ತು ಕಾಣಾ ಪ್ರಸಾದ ಸೇವನೆಯುಳ್ಳಾತನಿಗೆ ಆನಂದತೃಪ್ತಿ ನೆಲಿಗೊಂಡಿರಬೇಕು ಅನ್ಯಪದಾರ್ಥಕ್ಕಾಶಿಸದಿರಬೇಕು ಉಂಡು ಉಳಿಸದಿರಬೇಕು ಕೊಂಡು ಮರುಳದ ತುಂತುರ್ವಾನಿ ಹಾರದೆ ಲಿಂಗಸೀಕ್ಷಣೆ ತಪ್ಪದಿರಬೇಕು. ಅನ್ನವು ಪರಬ್ರಹ್ಮಸ್ವರೂಪ ಪ್ರಾಣವೆಂದರಿತು ಸೇವಿಸಲು ಆರೋಗ್ಯ ಭಾಗ್ಯವಿದೆ ಕಾಂತಿಯದೆ, ಕಾಂತಿಯ ವಿಶ್ಯಕ್ತವಿದೆ ಆದ ಕಾರಣ ಪ್ರಸಾದಜೀವಿಗಳೇ ಜೀವನ್ಮುಕ್ತರುಕಾಣಾ ಶಿವ ಪ್ರಕಾಶ ಸಿದ್ಧಲಿಂಗಪ್ರಭುವೇ

ಇಂತೀ ಅಷ್ಟಾವರಣಗಳೇ ಮುಮುಕ್ಷುಗಳ ರಕ್ಷಾ ಕವಚಗಳು ಅದೆಂತೆಂದೊಡೆ–ದೇಹರಕ್ಷಣೆಗೆ ಆಹಾರ ವಸ್ತ್ರಗಳೇ ಕಾರಣವೆಂದರೆ ಆತ್ಮರಕ್ಷಣೆಗೆ ಇಂತಪ್ಪ ಅಷ್ಟಾವರಣಗಳೇ ಕಾರಣನೆಂಬುರು ಆಚಾರ್ಯರು. ಆದಕಾರಣ ಪರ್ವತಶ್ರೇಷ್ಠಬ್ರಹ್ಮಗಳಾದಿಯಾಗಿ ಭುವಿಯ ಭಕ್ತಗೆಲ್ಲ ಅಷ್ಟಾವರಣವಿತ್ತಿಯಿಂದ ಮುಕ್ತಿಪದವಿಯಂ ಪಡೆದರು ನೋಡಾ ನಮ್ಮ ಶಿವಪ್ರಕಾಶ ಸಿದ್ಧಲಿಂಗಪ್ರಭುವರನು

ರಾಷ್ಟ್ರಾಧ್ಯಕ್ಷರ ಮೆರವಣಿಗೆ

ಮೈಸೂರಿ ಅಗಮುಖರವ ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರವರ ಸೆರವಣಿಗೆಯು ಈ ದಿವಸ ಪ್ರಾತಃಕಾಲ ೯-೩೦ ಘಂಟೆಗೆ ರಾಜಭಾಪಿಯಲ್ಲಿ ವಿಶೇಷ ವೈಭವದಿಂದ ನೆರವೇರಿತು ಡಾರಿಯಲ್ಲಿ ಲಕ್ಷಾಂತರ ಜನರು ನೆರೆದಿದ್ದು ರಾಷ್ಟ್ರಾಧ್ಯಕ್ಷರಿಗೆ ಶುಭಾಶಯಗಳನ್ನು ಕೋರಿದರು.

ಸ್ವೀಕಾರ

ಧಾರವಾಡ ಡಿ। ರಾಜೆಬೆನ್ನೂರ ಶಹರವಾಸಿಗಳಾದ ಶ್ರೀ ಶೇಖಪ್ಪನವರು ಜಂಬಿಗಿ ಇವರ ಧರ್ಮಪತ್ನಿ ಸೌ|| ಕಾಶಮ್ಮನವರ ಗರ್ಭಾಂಬುಧಿಸ್ತಿ ತಾ|| ೧೦ ೫-೫೪ನೇ ದಿವಸ ಹೆಣ್ಣುಕೂಸು ಜನನವಾಗಿದ್ದು ಆ ಕೂಸಿಗೆ ಲೆಕ್ಕಾದೇವಿ ಉರ್ಫ ತಾರಾಮತಿ ಎಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣೆಗಾಗಿ ತೆಗೆಯಿಸಿದ 1-4-0 ರೂ ಗಳು ಶ್ರೀ ನಿರಪ್ಪ ಹೂವಿನ ಸಾಖಿ ಜಾವೇರಿ ಇವರ ಪ್ಯಾರಾ ಕಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಗದ್ದುರು ಪಂಚಾಚಾರ್ಯರು ನಿಶ್ಕಲಮಂಗಲವನ್ನಾಗೆಯಲೆಂದು ಪಾರ್ಥಿಸುತ್ತೇವೆ

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು

